prajavani.net | prajavani
ಶುಕ್ರವಾರ, ನವೆಂಬರ್ 14, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 314 | ಪುಟ 20
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪೇಪರ್ ಉಡುಪು...
ಕಲಬುರಗಿಯ ಸೇಂಟ್ ಜಾನ್ ಶಾಲೆಯಲ್ಲಿ ಗುರುವಾರ ನಡೆದ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವದಲ್ಲಿ ಗೀಕಾ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿ ರಾಧಿಕಾ ಪೇಪರ್‌ನಿಂದ ತಯಾರಿಸಿದ ಉಡುಪಿನಲ್ಲಿ ಗಮನ ಸೆಳೆದರು



ಕಣದಲ್ಲಿ ರಿಷಭ್ ಪಂತ್
ಕೋಲ್ಕತ್ತದಲ್ಲಿ ಶುಕ್ರವಾರ ಆರಂಭವಾಗಲಿರುವ ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಆಡಲಿರುವ ಭಾರತ ತಂಡದ ರಿಷಭ್ ಪಂತ್ ಗುರುವಾರ ಅಭ್ಯಾಸ ನಡೆಸಿದರು



ಸೆನ್ಸೆಕ್ಸ್ 84,478 | ನಿಫ್ಟಿ 25,879 | $/₹ 88.70 | ಚಿನ್ನ (Std. 10g) ₹1,31,600 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,77,100 (ಬೆಂಗಳೂರು)

ಯಾರಿಗೆ ಅಧಿಕಾರ?: ಇಂದು ನಿರ್ಧಾರ



ಪಟ್ನಾ: ಬಿಹಾರ ವಿಧಾನಸಭೆ ಚುನಾವಣೆಯ ಮತ ಎಣಿಕೆಗೆ ಒಂದೆಡೆ ಕ್ಷಣಗಣನೆ ಶುರುವಾಗಿದೆ. ಮತ್ತೊಂದೆಡೆ, ಚುನಾವಣೆ ಮುಗಿಸಿ ಈವರೆಗೆ ವಿಶ್ರಾಂತಿ ತೆಗೆದುಕೊಂಡಿರುವ ಅಭ್ಯರ್ಥಿಗಳಲ್ಲಿ ಈಗ ಆತಂಕ ಮನೆ ಮಾಡಿದೆ.

ಸುದ್ದಿ 13

ಜಿರಳೆ ಪಕೋಡ, ರಾಣಿ ಗೆದ್ದಲಿನ ಬರ್ಗರ್

ಬೆಂಗಳೂರು: ಜಿರಳೆ ಪಕೋಡ, ಚಿಗಳಿ ಚಟ್ನಿ, ರೇಷ್ಮೆಹುಳು ಕೋಶದ ಸೂಪ್ ಹಾಗೂ ಮಂಚೂರಿ, ರೇಷ್ಮೆಹುಳುವಿನ ಬಾರ್ಬಿಕ್ಯೂ, ಕಬಾಬ್, ಮಿಲ್ವರಂ ಕೇಕ್–ಫ್ರೈಡ್‌ರೈಸ್, ರಾಣಿ ಗೆದ್ದಲಿನ ಬರ್ಗರ್ ಆಹಾ ಹೊಸ ಬಗೆಯ ತಿನಿಸುಗಳು...
ಇಂತಹ ವೈವಿಧ್ಯಮಯ, ನೋಡುಗರಲ್ಲಿ ಬೆರಗು ಹುಟ್ಟಿಸುವ ಆಹಾರ ಪದಾರ್ಥಗಳು ಒಂದೆಡೆ ಕಾಣಸಿಕ್ಕಿದ್ದು ಕೃಷಿಮೇಳದಲ್ಲಿ.

ಸುದ್ದಿ 8

ಕಾರು ಸ್ಫೋಟಿಸಿದಾತ ನಬಿ

50ಕ್ಕೂ ಹೆಚ್ಚು ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಡಾ.ಉಮರ್ ಚಲನವಲನ ಪತ್ತೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಕೆಂಪುಕೋಟೆ ಬಳಿ ಸೋಮವಾರ ಪ್ರಬಲವಾಗಿ ಸ್ಫೋಟ ಗೊಂಡ ಕಾರನ್ನು ಚಲಾಯಿಸುತ್ತಿದ್ದ ವ್ಯಕ್ತಿ ಡಾ. ಉಮರ್ ನಬಿ ಎನ್ನುವುದು ದೃಢಪಟ್ಟಿದೆ. ಹುಂಡೈ ಐ20 ಕಾರಿನಲ್ಲಿ ದೊರೆತ ದೇಹದ ಭಾಗಗಳನ್ನು ಉಮರ್ ತಾಯಿಯ ಡಿಎನ್‌ಎ ಜತೆ ಪರೀಕ್ಷಿಸಿದ ಬಳಿಕ ಅದು ಸ್ಪಷ್ಟವಾಗಿದೆ. ಸ್ಫೋಟದ ವೇಳೆ ಕಾರಿನಲ್ಲಿ ಉಮರ್ ಒಬ್ಬನೇ ಇದ್ದ ಎಂಬುದನ್ನೂ ತನಿಖಾಧಿಕಾರಿಗಳು ದೃಢಪಡಿಸಿದ್ದಾರೆ.

ಇದರ ನಡುವೆಯೇ ದೆಹಲಿ ಮತ್ತು ಸುತ್ತಮುತ್ತಲಿನ 50ಕ್ಕೂ ಹೆಚ್ಚು ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿಗಳನ್ನು ಜಾಲಾಡಿರುವ ತನಿಖಾ ತಂಡದವರು, ಸ್ಫೋಟಕ್ಕೂ ಮುನ್ನ ಉಮರ್ ಚಲನವಲನಗಳನ್ನು ಗುರುತಿಸಿದ್ದಾರೆ. ಅದರಲ್ಲಿ ಹಲವು ಆಸಕ್ತಿಕರ ಮಾಹಿತಿ ಲಭ್ಯವಾಗಿದೆ.

ಸ್ಫೋಟದ ಹಿಂದಿನ ದಿನವಾದ ಭಾನುವಾರ ರಾತ್ರಿ ಫರೀದಾಬಾದ್‌ನಿಂದ ಹೊರಟು, ಸ್ಫೋಟಕಗಳು ತುಂಬಿದ್ದ ಕಾರನ್ನು ಸೋಮವಾರ ಸಂಜೆ ಕೆಂಪುಕೋಟೆ ಬಳಿಯ ಮೆಟ್ರೊ ನಿಲ್ದಾಣದ ಸಮೀಪ ಯಾವುದೇ ಧಾವಂತವಿಲ್ಲದೆ ನಿಧಾನವಾಗಿ ಚಾಲನೆ ಮಾಡಿಕೊಂಡು ಸಾಗಿದ್ದ ದೃಶ್ಯಗಳೂ ಸೆರೆಯಾಗಿವೆ.

ಸಿ.ಸಿ.ಟಿ.ವಿ ಕ್ಯಾಮೆರಾಗಳು, ಟೋಲ್ ಪ್ಲಾಜಾ ದತ್ತಾಂಶ, ಜಿಪಿಎಸ್ ಮತ್ತು ಮೊಬೈಲ್ ಟವರ್‌ಗಳನ್ನು ಪರಿಶೀಲಿಸಿ ಉಮರ್‌ನ ಚಲನವಲನದ ಕಾಲಾನುಕ್ರಮಣಿಕೆಯನ್ನು ದೆಹಲಿ ಪೊಲೀಸರು ವಿವರಿಸಿದ್ದಾರೆ.

ಉಮರ್‌ನ ಕಡೆಯ ದಿನ ಹೀಗಿತ್ತು...: ದೆಹಲಿ–ಮುಂಬೈ ಎಕ್ಸ್‌ಪ್ರೆಸ್‌ವೇ ಮೂಲಕ ಹರಿಯಾಣದಿಂದ ದೆಹಲಿಗೆ ಐ20 ಕಾರಿನಲ್ಲಿ ಉಮರ್ ಪ್ರಯಾಣ ಬೆಳೆಸಿದ್ದಾನೆ. ಭಾನುವಾರ ರಾತ್ರಿ ಎಕ್ಸ್‌ಪ್ರೆಸ್‌ವೇಯಲ್ಲಿ ಹರಿಯಾಣದ ನೂಹ್ ಜಿಲ್ಲೆಯ ಫಿರೋಜ್‌ಪುರ ಜಿರ್ಕಾದರಸ್ತೆ ಬದಿಯ ಢಾಬಾದಲ್ಲಿ ನಿಲ್ಲಿಸಿ ಆಹಾರ ಸೇವಿಸಿದ್ದಾನೆ. ನಂತರ ಅಲ್ಲಿ ಕಾರಿನಲ್ಲಿಯೇ ಇಡೀ ರಾತ್ರಿ ಕಳೆದು, ಮರುದಿನ ಬೆಳಿಗ್ಗೆ ರಾಷ್ಟ್ರ ರಾಜಧಾನಿಯತ್ತ ಸಾಗಿದ್ದಾನೆ.

ಮಾಸ್ಕ್ ಧರಿಸಿದ್ದ ಆತನ ಕಾರಿನ ಹಿಂದಿನ ಸೀಟಿನಲ್ಲಿ ದೊಡ್ಡ ಚೀಲ ಇದ್ದುದು ಕ್ಯಾಮೆರಾದಲ್ಲಿ ಸೆರೆಯಾಗಿದೆ. ಬಹುಶಃ ಅದು ಸ್ಫೋಟಕವಿದ್ದಿರಬಹುದು ಎಂದು ಪೊಲೀಸರು ಅಂದಾಜಿಸಿದ್ದಾರೆ.

ಸೋಮವಾರ ಬೆಳಿಗ್ಗೆ ಆತ ದೆಹಲಿಯತ್ತ ಕಾರು ಚಾಲನೆ ಮಾಡಿ ಹೋಗುತ್ತಿದ್ದ ದೃಶ್ಯ ಎಕ್ಸ್‌ಪ್ರೆಸ್‌ವೇಯ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದೆ. ಈ ರಸ್ತೆಯಲ್ಲಿ ಆತ ಎರಡು ಬಾರಿ ಕಾರು ನಿಲ್ಲಿಸಿದ್ದ. ಒಮ್ಮೆ ನಿಲ್ಲಿಸಿದ್ದಾಗ ಚಹಾ ಕುಡಿದಿದ್ದರೆ, ಇನ್ನೊಮ್ಮೆ ಮೊಬೈಲ್ ಫೋನ್ ಪರಿಶೀಲಿಸಿದ್ದ.

ಬದರ್‌ಪುರ ಗಡಿ ಮೂಲಕ ಬೆಳಿಗ್ಗೆ 8.13 ಗಂಟೆಗೆ ದೆಹಲಿ ಪ್ರವೇಶಿಸಿದ ಆತ, ಅಲ್ಲಿಂದ ಮಧ್ಯಾಹ್ನ 3 ಗಂಟೆಯವರೆಗೆ ರಾಜಧಾನಿಯ ಅನೇಕ ಕಡೆಗಳಲ್ಲಿ ಸುತ್ತಾಡಿದ್ದಾನೆ. ಮಧ್ಯಾಹ್ನ 3.19ಕ್ಕೆ ಕೆಂಪುಕೋಟೆ ಬಳಿಯ ಮಸೀದಿಯ ಹತ್ತಿರ ವಾಹನ ನಿಲುಗಡೆ ಮಾಡಿದ್ದು ಸೆರೆಯಾಗಿದೆ.

9



ಕೆಂಪುಕೋಟೆ ಬಳಿಯ ಪ್ರಬಲ ಸ್ಫೋಟದಲ್ಲಿ ಮೃತಪಟ್ಟವರಿಗೆ ದೆಹಲಿಯ ಸರೋಜಿನಿನಗರ ಮಾರುಕಟ್ಟೆಯಲ್ಲಿ ಗುರುವಾರ ಶ್ರದ್ಧಾಂಜಲಿ ಸಲ್ಲಿಸಲಾಯಿತು
ಪಿಟಿಐ ಚಿತ್ರ

ಸ್ಫೋಟಕ ಖರೀದಿಗೆ ₹25–₹30 ಲಕ್ಷ ಸಂಗ್ರಹ

ಶಂಕಿತ ಉಗ್ರರು ಸ್ಫೋಟಕಗಳನ್ನು ಖರೀದಿಸಲು ₹25 ಲಕ್ಷದಿಂದ ₹30 ಲಕ್ಷವನ್ನು ಸಂಗ್ರಹಿಸಿದ್ದರು ಎಂಬ ಮಾಹಿತಿ ತನಿಖೆಯಿಂದ ಗೊತ್ತಾಗಿದೆ.

ವೈದ್ಯರಾದ ಉಮರ್, ಮುಜಮ್ಮಿಲ್ ಗನಿ, ಆದಿಲ್ ಅಹ್ಮದ್ ರಾಠರ್, ಶಾಹೀನ್ ಸಯೀದ್ ಸ್ಫೋಟಕಗಳನ್ನು ಖರೀದಿಸಲು ಇಷ್ಟು ಹಣ ಹೊಂದಿಸಿದ್ದರು. ಗುರುಗ್ರಾಮ, ನೂಹ್ ಮತ್ತು ಇತರ ಪಟ್ಟಣಗಳಿಂದ ₹3 ಲಕ್ಷ ಪಾವತಿಸಿ ಸುಮಾರು 26 ಕ್ವಿಂಟಲ್ ಎನ್‌ಪಿಕೆ ಗೊಬ್ಬರ ಖರೀದಿಸಿದ್ದರು. ಅದನ್ನು ಕಚ್ಚಾ ಬಾಂಬ್‌ಗಳ (ಐಇಡಿ) ತಯಾರಿಕೆಗೆ ಬಳಸುತ್ತಿದ್ದರು ಎಂಬುದು ಗೊತ್ತಾಗಿದೆ ಎಂದು ತನಿಖಾಧಿಕಾರಿಗಳು ಗುರುವಾರ ಹೇಳಿದ್ದಾರೆ.

ಕಿಡಿಗೇಡಿಗಳ ಕೃತ್ಯ, ಕಬ್ಬಿಗೆ ಬೆಂಕಿ, ಕಲ್ಲು ತೂರಾಟ

ಕಬ್ಬು ಜ್ವಾಲೆ: 50 ಟ್ರ್ಯಾಕ್ಟರ್ ಭಸ್ಮ

ಪ್ರಜಾವಾಣಿ ವಾರ್ತೆ

ಮಹಾಲಿಂಗಪುರ (ಬಾಗಲಕೋಟೆ): ರಬಕವಿ–ಬನಹಟ್ಟಿ ತಾಲ್ಲೂಕಿನ ಸಮೀರವಾಡಿಯ ಗೋದಾವರಿ ಬಯೋ ರಿಫೈನರಿ ಕಾರ್ಖಾನೆ ಕೇನ್‌ಯಾರ್ಡ್‌ನಲ್ಲಿ ನಿಂತಿದ್ದ 50ಕ್ಕೂ ಹೆಚ್ಚು ಕಬ್ಬಿನ ಟ್ರ್ಯಾಕ್ಟರ್‌ಗಳಿಗೆ ಕಿಡಿಗೇಡಿಗಳು ಗುರುವಾರ ಸಂಜೆ ಬೆಂಕಿ ಹಚ್ಚಿದರು. ಇದರ ಪರಿಣಾಮ ರಾತ್ರಿಯವರೆಗೆ ಆತಂಕದ ವಾತಾವರಣ ನಿರ್ಮಾಣವಾಯಿತು.

ಕಬ್ಬು ಸಹಿತ ಕೆಲ ಟ್ರ್ಯಾಕ್ಟರ್‌ಗಳು ಬೆಂಕಿಗೆ ಆಹುತಿಯಾದವು. ಕಾರ್ಖಾನೆ ಬಳಿ ನಡೆದ ಕಲ್ಲು ತೂರಾಟದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಹಾಂತೇಶ್ವರ ಜಿದ್ದಿ, ರೈತ ವಿಠ್ಠಲ ಹೊಸಮನಿ ಎಂಬುವರು ಸೇರಿ ಹಲವರಿಗೆ ಗಾಯಗಳಾದವು. ಅವರನ್ನು ತಕ್ಷಣವೇ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಯಿತು.


ಗೋದಾವರಿ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ತುಂಬಿದ ಟ್ರ್ಯಾಕ್ಟರ್‌ಗಳಿಗೆ ಬೆಂಕಿ ಹಚ್ಚಿದರು

ಘಟನೆ ಏನು?: ಕಾರ್ಖಾನೆಯಲ್ಲಿ ಗುರುವಾರ ಬೆಳಿಗ್ಗೆ ಕೇನ್ ಕ್ಯಾರಿಯರ್ ಪೂಜೆ ನಡೆದ ವಿಷಯ ಗೊತ್ತಾದ ತಕ್ಷಣವೇ ಆಕ್ರೋಶಗೊಂಡ ರೈತರು ಸೇರಿ ಕೆಲವರು ಕಾರ್ಖಾನೆಗೆ ಮುತ್ತಿಗೆ ಹಾಕಲು ಮುಧೋಳದಿಂದ ವಾಹನಗಳಲ್ಲಿ ಹೊರಟರು. ಸಂಗಾನಟ್ಟಿ ಕ್ರಾಸ್ ಬಳಿ ಎದುರಾದ ಎರಡು ಟ್ರ್ಯಾಕ್ಟರ್‌ಗಳಿಗೆ ಕೆಲ ಕಿಡಿಗೇಡಿಗಳು ಬೆಂಕಿ ಹಚ್ಚಿದರು.

ಕಾರ್ಖಾನೆಯ ಕೇನ್ ಯಾರ್ಡ್‌ನಲ್ಲಿ ಕಬ್ಬು ಸಹಿತ 50ಕ್ಕೂ ಹೆಚ್ಚು ಟ್ರ್ಯಾಕ್ಟರ್‌ಗಳಿರುವುದನ್ನು ಕಂಡು ಸಿಟ್ಟಿಗೆದ್ದು, ಅವುಗಳತ್ತ ಕೆಲವರು ನುಗ್ಗಿದರು. ಅವುಗಳಿಗೆ ಬೆಂಕಿ ಹಚ್ಚಿ, ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯಕ್ಕೆ ‘ಸುಪ್ರೀಂ’ ಜಯ

ಪ್ರಜಾವಾಣಿ ವಾರ್ತೆ



ನವದೆಹಲಿ: ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಸಮತೋಲನ ಜಲಾಶಯ ನಿರ್ಮಿಸುವ ಕರ್ನಾಟಕ ಸರ್ಕಾರದ ಯೋಜನೆ ವಿರುದ್ಧ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಗುರುವಾರ ವಜಾಗೊಳಿಸಿದೆ. ಇದರಿಂದ, ತಮಿಳುನಾಡಿಗೆ ಭಾರಿ ಹಿನ್ನಡೆಯಾಗಿದೆ.

ಪ್ರಕರಣದ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ, ನ್ಯಾಯಮೂರ್ತಿಗಳಾದ ಕೆ. ವಿನೋದ್ ಚಂದ್ರನ್ ಹಾಗೂ ಎನ್.ವಿ. ಅಂಜಾರಿಯಾ ಪೀಠವು, ‘ಮೇಕೆದಾಟು ಅಣೆಕಟ್ಟೆ ನಿರ್ಮಾಣಕ್ಕೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಮಾತ್ರ ಕೇಂದ್ರ ಜಲ ಆಯೋಗ (ಸಿಡಬ್ಲ್ಯುಸಿ) ಅನುಮತಿ ನೀಡಿದೆ. ತಮಿಳುನಾಡಿನ ಆಕ್ಷೇಪಣೆ ಗಳನ್ನು ತಜ್ಞರು ಪರಿಶೀಲಿಸಿದ ಬಳಿಕವೇ ಈ ಪ್ರಕ್ರಿಯೆ ನಡೆದಿದೆ. ಈ ಹಂತದಲ್ಲಿ ಇದನ್ನು ಪ್ರಶ್ನಿಸಿ ತಮಿಳುನಾಡು ಅರ್ಜಿ ಸಲ್ಲಿಸಿರುವುದು ಅವಧಿಪೂರ್ವ (ಪ್ರಿಮೆಚೂರ್)’ ಎಂದು ಅಭಿಪ್ರಾಯಪಟ್ಟಿದೆ.

‘ತಮಿಳುನಾಡಿನ ಆಕ್ಷೇಪಣೆಗಳನ್ನು ಹಾಗೂ ತಜ್ಞ ಸಂಸ್ಥೆಗಳು, ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯುಆರ್‌ಸಿ) ಮತ್ತು ಕಾವೇರಿ ನೀರು ನಿರ್ವಹಣ ಪ್ರಾಧಿಕಾರಗಳ (ಸಿಡಬ್ಲ್ಯುಎಂಎ) ಅಭಿಪ್ರಾಯಗಳನ್ನು ಪರಿಗಣಿಸಿದ ನಂತರವೇ ಆಯೋಗವು ಯೋಜನೆಗೆ ಅನುಮೋದನೆ ನೀಡಲಿದೆ’ ಎಂದು ಪೀಠ ತಿಳಿಸಿದೆ.

‘ನ್ಯಾಯಾಲಯ ಮತ್ತು ಪ್ರಾಧಿಕಾರಗಳ ನಿರ್ದೇಶನಗಳನ್ನು ಅನುಸರಿಸಿ ಕರ್ನಾಟಕ ರಾಜ್ಯವು ಕಾವೇರಿ ನೀರನ್ನು ಹರಿಸಲು ಬದ್ಧವಾಗಿರಬೇಕು. ಒಂದು ವೇಳೆ, ಈ ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸಲು ಕರ್ನಾಟಕ ವಿಫಲವಾದರೆ, ನ್ಯಾಯಾಂಗ ನಿಂದನೆ ಎಸಗಿದ ಅಪಾಯ ಎದುರಿಸಲಿದೆ’ ಎಂದು ಪೀಠ ಎಚ್ಚರಿಸಿದೆ. ಆದಾಗ್ಯೂ, ‘ನ್ಯಾಯಾಲಯದ ಎಲ್ಲ ನಿರ್ದೇಶನಗಳನ್ನು ಪಾಲಿಸಲಾಗಿದೆ. ತಮಿಳುನಾಡು ಎತ್ತಿರುವ ಅನೇಕ ಪ್ರಶ್ನೆಗಳು ಅತಿಯಾದುದು’ ಎಂದು ಕರ್ನಾಟಕ ವಾದಿಸಿದೆ.

ಏನಿದು ಮೇಕೆದಾಟು ಯೋಜನೆ

- 67 ಟಿಎಂಸಿ ಅಡಿ ಕಾವೇರಿ ನೀರು ಸಂಗ್ರಹಿಸಲು ಸಮತೋಲನ ಜಲಾಶಯ ನಿರ್ಮಾಣ
- ಕುಡಿಯುವ ನೀರು ಹಾಗೂ 400 ಮೆಗಾವಾಟ್ ವಿದ್ಯುತ್ ಉತ್ಪಾದನೆ ಗುರಿ
- ಯೋಜನೆಗಾಗಿ 4,716 ಹೆಕ್ಟೇರ್ ಅರಣ್ಯ ಹಾಗೂ 280 ಹೆಕ್ಟೇರ್ ಕಂದಾಯ ಭೂಮಿ ಮುಳುಗಡೆ
- ಯೋಜನೆಯ ಪರಿಷ್ಕೃತ ಅಂದಾಜು ವೆಚ್ಚ: ₹14,500 ಕೋಟಿ

> ಈ ಯೋಜನೆಯಿಂದ ಕರ್ನಾಟಕಕ್ಕಿಂತ ತಮಿಳುನಾಡಿಗೆ ಹೆಚ್ಚು ಉಪಯೋಗ. ಕಷ್ಟ ಕಾಲದಲ್ಲಿ ತಮಿಳುನಾಡಿನ ಪಾಲಿನ ನೀರು ಬಿಡಲು ಈ ಯೋಜನೆ ನೆರವಾಗಲಿದೆ. ಹೀಗಾಗಿ ಈ ತೀರ್ಪು ತಮಿಳುನಾಡಿಗೂ ಸಂದ ಜಯ
> **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

> ಅಡಚಣೆಗಳನ್ನು ನಿವಾರಿಸಿಕೊಂಡು ಮುನ್ನಡೆಯಲು ಸಿದ್ಧತೆ ಮಾಡಿಕೊಳ್ಳಲಾಗುವುದು. ಇದಕ್ಕಾಗಿ ಹಲವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಅವು ಏನೆಂಬುದನ್ನು ಬಹಿರಂಗ ಪಡಿಸಲು ಸಾಧ್ಯವಿಲ್ಲ
> **ಎಚ್.ಕೆ.ಪಾಟೀಲ,** ಕಾನೂನು ಸಚಿವ

ಚಿನಕುರುಳಿ ಪ್ರಕಾಶ್ ಶೆಟ್ಟಿ



ನಗರಗಳಲ್ಲಿ ಐಟಿ ಬೆಳವಣಿಗೆಗೆ ಒತ್ತು • ಮಾಹಿತಿ ತಂತ್ರಜ್ಞಾನ ನೀತಿಗೆ ಅಸ್ತು

ಸಾಫ್ಟ್‌ವೇರ್ ರಫ್ತು: ಭಾರಿ ಏರಿಕೆ ಗುರಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕರ್ನಾಟಕದಿಂದ ಸಾಫ್ಟ್‌ವೇರ್ ರಫ್ತನ್ನು 2030 ವೇಳೆಗೆ ₹4.09 ಲಕ್ಷ ಕೋಟಿಯಿಂದ ₹11.5 ಲಕ್ಷ ಕೋಟಿಗೆ ಹೆಚ್ಚಿಸುವ ಗುರಿ ಹೊಂದಿದ ‘ಕರ್ನಾಟಕ ಮಾಹಿತಿ ತಂತ್ರಜ್ಞಾನ ನೀತಿ 2025–2030’ಕ್ಕೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಬೆಂಗಳೂರಿನಾಚೆಗೆ ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ತುಮಕೂರು, ಕಲಬುರಗಿ ಮತ್ತು ಶಿವಮೊಗ್ಗದಂತಹ ನಗರಗಳಲ್ಲಿ ಕೃತಕ ಬುದ್ಧಿಮತ್ತೆ ಹಾಗೂ ಇತರ ನೂತನ ತಂತ್ರಜ್ಞಾನ ಗಳ ಮೇಲೆ ಹೂಡಿಕೆಗೆ ಆದ್ಯತೆ ನೀಡುವ ಬಗ್ಗೆಯೂ ನೀತಿ ಪ್ರಸ್ತಾಪಿಸಿದೆ.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿ, ‘ರಾಜ್ಯದ ಆದಾಯ ಮೌಲ್ಯ ವರ್ಧನೆಗೆ ಐಟಿ ವಲಯದ ಕೊಡುಗೆಯನ್ನು ಶೇ 26ರಿಂದ ಶೇ 36ಕ್ಕೆ ಹೆಚ್ಚಿಸಲು ಗುರಿ ನಿಗದಿ ಮಾಡಲಾಗಿದೆ’ ಎಂದರು.

4

ನೀತಿಯ ಮುಖ್ಯಾಂಶಗಳು

- ಕೃತಕ ಬುದ್ಧಿಮತ್ತೆ, ಬ್ಲಾಕ್‌ಚೈನ್, ಕ್ವಾಂಟಮ್ ಕಂಪ್ಯೂಟಿಂಗ್, ಹಸಿರು ಐಟಿ ಮತ್ತು ಮುಂದುವರಿದ ಸೈಬರ್ ಭದ್ರತೆಗೆ ತಂತ್ರಜ್ಞಾನಕ್ಕೆ ಉತ್ತೇಜನ
- ಡಿಜಿಟಲ್ ಸಂಪರ್ಕ, ಹಸಿರು ಆವರಣಗಳು ಮತ್ತು ಗ್ರಾಮೀಣ–ನಗರ ಏಕೀಕರಣವನ್ನು ಉತ್ತೇಜಿಸಲು ಮೂಲಸೌಕರ್ಯ ಅಭಿವೃದ್ಧಿ

4

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ

ಕೃಷಿ ಮೇಳಕ್ಕೆ ರೈತರು, ವಿದ್ಯಾರ್ಥಿಗಳ ದಂಡು

ಗಮನ ಸೆಳೆದ ಫಲಪುಷ್ಪ ಪ್ರದರ್ಶನ
ಒಂದೇ ಸೂರಿನಡಿ ಬಗೆ ಬಗೆಯ ಆಲಂಕಾರಿಕ ಮೀನುಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳಕ್ಕೆ ಮೊದಲ ದಿನವಾದ ಗುರುವಾರ ರೈತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿದ್ದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ರೈತರಿಗಾಗಿ ಈ ಬಾರಿ ಧಾನ್ಯ ಜೋಳ (ಸಿಎನ್‌ಜಿಎಸ್‌-1), ಸೂರ್ಯಕಾಂತಿ (ಕೆಬಿಎಸ್‌ಎಚ್‌-88) ಹರಳು (ಬಿಸಿಎಚ್‌-162), ಕಪ್ಪು ಅರಿಶಿಣ (ಸಿಎಚ್‌ಎನ್‌ಬಿಟಿ-1) ಹಾಗೂ ಅರಿಶಿಣ (ಐಐಎಸ್‌ಆರ್‌ ಪ್ರತಿಭಾ) ಎಂಬ ಐದು ಹೊಸ ತಳಿಗಳನ್ನು ಅಭಿವೃದ್ಧಿಪಡಿಸಿದ್ದು, ಈ ಪ್ರಾತ್ಯಕ್ಷಿಕೆ ತಾಕುಗಳಿಗೆ ರೈತರು, ವಿದ್ಯಾರ್ಥಿಗಳು ಭೇಟಿ ವಿಜ್ಞಾನಿಗಳಿಂದ ಮಾಹಿತಿ ಪಡೆದುಕೊಂಡರು.

ಮೇಳಕ್ಕೆ ವಿವಿಧ ಜಿಲ್ಲೆಗಳಿಂದ ಬಂದಿದ್ದ ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ಜಿಕೆವಿಕೆ ಆವರಣದಲ್ಲಿ ಬೆಳೆದಿರುವ ಆಕರ್ಷಕ ಸೂರ್ಯಕಾಂತಿಯ ತಾಕುಗಳಲ್ಲಿ ನಿಂತುಕೊಂಡು ಸೆಲ್ಫಿಗೆ ಪೋಸ್ ನೀಡುತ್ತಿದ್ದರೆ, ಇತ್ತ ರೈತರು ಕೃಷಿಯಲ್ಲಿನ ಹೊಸ ತಂತ್ರಜ್ಞಾನದ ಹುಡುಕಾಟದಲ್ಲಿ ನಿರತರಾಗಿದ್ದರು.

ಒಂದೇ ಸೂರಿನಡಿ ಆಲಂಕಾರಿಕ ಮೀನುಗಳ ಪ್ರದರ್ಶನ ಮತ್ತು ಮಾರಾಟ, ಹತ್ತಾರು ತಳಿಗಳ ಹಸು, ದನಗಳು. ಕುರಿ, ಮೇಕೆ ಹಾಗೂ ಕೋಳಿಗಳನ್ನು ನೋಡಲು ಶಾಲಾ-ಕಾಲೇಜಿನ ಮಕ್ಕಳು ಸೇರಿದಂತೆ ಸಾರ್ವಜನಿಕರು ಮುಗಿಬಿದ್ದಿದ್ದರು.

ಫಲಪುಷ್ಪ ಪ್ರದರ್ಶನದಲ್ಲಿ ಬಗೆಬಗೆಯ ಹೂವುಗಳಿಂದ ರೂಪಿಸಿರುವ ಆನೆ, ಕಡವೆ, ಮೀನು, ಟಗರು, ಟ್ರ್ಯಾಕ್ಟರ್ ಆಕರ್ಷಕವಾಗಿವೆ. ಕರ್ನಾಟಕ ಬಾವುಟದ ಹೂವಿನ ಅಲಂಕಾರವು ಗಮನ ಸೆಳೆಯಿತು. ತೋಟಗಾರಿಕೆ ಬೆಳೆಗಳ ಮಾಹಿತಿಯೂ ಈ ವಿಭಾಗದಲ್ಲಿದೆ.

ಜರ್ಮನ್ ಗ್ರೇ ಜೈಂಟ್ ಅಂಗೋರ್ ತಳಿಯ ಮೊಲವನ್ನು ವಿದ್ಯಾರ್ಥಿಗಳು, ಮಕ್ಕಳು ಕುತೂಹಲದಿಂದ ವೀಕ್ಷಿಸಿದರು.

‘ಈ ತಳಿಯ ಮೊಲಗಳು ಜರ್ಮನಿ ದೇಶದ ಶೀತವಲಯದ ವಾತಾವರಣದಲ್ಲಿ ಮಾತ್ರ ಕಂಡು ಬರುತ್ತವೆ. ಇದನ್ನು ಸಾಕಾಣಿಕೆ ಮಾಡಬೇಕಾದರೆ ಶೀತವಲಯದ ವಾತಾವರಣ ನಿರ್ಮಿಸಬೇಕು. ಇದಕ್ಕಾಗಿ ಎ.ಸಿ ಹಾಗೂ ಫ್ಯಾನ್ ಇರಬೇಕು. ಆಹಾರ ಸೇವನೆ ಕಡಿಮೆ ಮಾಡುವುದರಿಂದ ತೂಕವೂ ಕಡಿಮೆ ಇದೆ. ಜರ್ಮನಿಯಿಂದ ಭಾರತಕ್ಕೆ ತೆಗೆದುಕೊಂಡು ಬರಲು ₹15 ಸಾವಿರ ವೆಚ್ಚ ಮಾಡಿದ್ದೇನೆ. ₹16 ಸಾವಿರದಿಂದ ₹18 ಸಾವಿರ ಬೆಲೆ ಬಂದರೆ ಮಾರಾಟ ಮಾಡುತ್ತೇನೆ’ ಎಂದು ರೈತ ಚಂದನ್ ತಿಳಿಸಿದರು.

ಅಂಕಿ ಅಂಶಗಳು

8.51 ಲಕ್ಷ
ಕೃಷಿ ಮೇಳಕ್ಕೆ ಭೇಟಿ ನೀಡಿದ ಜನರು

11,086
ರಿಯಾಯಿತಿ ದರದ ಭೋಜನ ಸವಿದವರು

₹62 ಲಕ್ಷ
ಕೃಷಿ ಮೇಳದಲ್ಲಿ ನಡೆದಿರುವ ವಹಿವಾಟು



ಜರ್ಮನ್ ಗ್ರೇ ಜೈಂಟ್ ಅಂಗೋರ್ ತಳಿಯ ಮೊಲ



ಕೃಷಿ ಮೇಳದ ಉದ್ಘಾಟನಾ ಸಮಾರಂಭದಲ್ಲಿ ಪ್ರಗತಿಪರ ರೈತರಾದ ಎಲ್‌.ವಿ.ಶಿವರಾಜು, ಪದ್ಮಿನಿ ಅವರಿಗೆ ಕೆನರಾ ಬ್ಯಾಂಕ್ ಪ್ರಶಸ್ತಿ, ಎಂ.ಎನ್‌.ರವಿಶಂಕರ್ ಅವರಿಗೆ ಎಚ್‌.ಡಿ.ದೇವೇಗೌಡ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶೋಭಾ ಕರಂದ್ಲಾಜೆ, ಎನ್‌. ಚಲುವರಾಯಸ್ವಾಮಿ, ಎಸ್‌. ಸೆಲ್ವಕುಮಾರ್‌, ಎಸ್‌.ವಿ.ಸುರೇಶ್ ಉಪಸ್ಥಿತರಿದ್ದರು

ಮೇಳ ಉದ್ಘಾಟಿಸಿದ ಚಲುವರಾಯಸ್ವಾಮಿ

ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಜಿಕೆವಿಕೆ ಆವರಣದಲ್ಲಿ ಆಯೋಜಿಸಿರುವ ನಾಲ್ಕು ದಿನಗಳ ಕೃಷಿ ಮೇಳವನ್ನು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಗುರುವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ‘ಲ್ಯಾಬ್ ಟು ಲ್ಯಾಂಡ್ ಘೋಷ ವಾಕ್ಯದಡಿಯಲ್ಲಿ ವಿಜ್ಞಾನಿಗಳ ಶ್ರಮ ಮತ್ತು ರೈತರ ಅನುಭವ ಒಟ್ಟಿಗೆ ಸೇರಿದಾಗ ಕೃಷಿ ಕ್ರಾಂತಿಯಾಗಲಿದೆ. ಇಂತಹ ವೈಶಿಷ್ಟ್ಯಗಳಿಗೆ ಈ ಕೃಷಿ ಮೇಳ ಸಾಕ್ಷಿಯಾಗಿದೆ. ಹವಾಮಾನ ಬದಲಾವಣೆ, ನೀರಿನ ಕೊರತೆ ದೊಡ್ಡ ಸವಾಲುಗಳಾಗಿದ್ದು, ಇವುಗಳನ್ನು ನಾವು ವೈಜ್ಞಾನಿಕವಾಗಿ ಎದುರಿಸಲು ಸಜ್ಜಾಗಬೇಕು’ ಎಂದು ಕರೆ ನೀಡಿದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಕೃಷಿ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ್, ಕುಲಸಚಿವ ನಾರಾಯಣಸ್ವಾಮಿ, ಆಡಳಿತ ಮಂಡಳಿ ಸದಸ್ಯರಾದ ಟಿ.ಕೆ. ಪ್ರಭಾಕರ ಶೆಟ್ಟಿ, ಎಚ್.ಎಲ್. ಹರೀಶ್, ಬಿ.ಎಸ್. ಉಲ್ಲಾಸ್, ವೈ.ಎನ್. ಶಿವಲಿಂಗಯ್ಯ ದಿನೇಶ್ ಹಾಗೂ ಎಂ. ಚಂದ್ರೇಗೌಡ ಹಾಜರಿದ್ದರು.

ಸುದ್ದಿ 2 ನಿಮಿಷ

ಸೈಲ್ ಜಾಮೀನು ಅವಧಿ ವಿಸ್ತರಣೆ

ಬೆಂಗಳೂರು: ‘ಬೇಲೇಕೇರಿ ಬಂದರಿನಿಂದ ಅಕ್ರಮ ಅದಿರು ಸಾಗಣೆ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿರುವ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಅವರ ಆರೋಗ್ಯ ಮೌಲ್ಯಮಾಪನ ವರದಿ ಸಲ್ಲಿಸಿ’ ಎಂದು ಹೈಕೋರ್ಟ್, ಬೆಂಗಳೂರಿನ ವಾಯುಸೇನಾ ಕಮಾಂಡ್ ಆಸ್ಪತ್ರೆಗೆ ನಿರ್ದೇಶಿಸಿದೆ.

ತಮ್ಮ ವಿರುದ್ಧದ ಜಾಮೀನುರಹಿತ ಬಂಧನ ವಾರಂಟ್ ಜಾರಿ ಮತ್ತು ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಮಧ್ಯಂತರ ವೈದ್ಯಕೀಯ ಜಾಮೀನು ಮಂಜೂರು ಮಾಡಿದ್ದನ್ನು ರದ್ದುಪಡಿಸಿರುವ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶ ಪ್ರಶ್ನಿಸಿ ಸತೀಶ್ ಸೈಲ್ ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಈ ಅರ್ಜಿಯ ವಿಚಾರಣೆ ನಡೆಸಿತು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ‘ಸತೀಶ್ ಸೈಲ್ ಅವರು ಇದೇ 15ರ ಬೆಳಿಗ್ಗೆ 11.30ಕ್ಕೆ ಬೆಂಗಳೂರಿನ ವಾಯುಸೇನಾ ಕಮಾಂಡ್ ಆಸ್ಪತ್ರೆಯ ಜಠರ-ಕರುಳಿನ ತಜ್ಞ ವೈದ್ಯರ (ಗ್ಯಾಸ್ಟ್ರೋಎಂಟೆರೊಲಾಜಿಸ್ಟ್) ಮುಂದೆ ಹಾಜರಾಗಬೇಕು. ಈ ವೇಳೆ ಸೈಲ್ ತಮ್ಮ ಆರೋಗ್ಯ ಸಂಬಂಧಿತ ವರದಿಗಳನ್ನು ವೈದ್ಯರಿಗೆ ಒದಗಿಸಬೇಕು. ಇವುಗಳನ್ನು ಪರಿಶೀಲಿಸಿ, ಅವರನ್ನು ಆರೋಗ್ಯ ತಪಾಸಣೆಗೆ ಒಳಪಡಿಸಿ ಕಮಾಂಡ್ ಆಸ್ಪತ್ರೆ ಮೌಲ್ಯಮಾಪನಾ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು’ ಎಂದು ನ್ಯಾಯಪೀಠ ತಾಕೀತು ಮಾಡಿದೆ.

‘ಒಂದೊಮ್ಮೆ ಕಮಾಂಡ್ ಆಸ್ಪತ್ರೆಯಲ್ಲಿ ಜಠರ ಕರುಳಿನ ತಜ್ಞ ವೈದ್ಯರು ಇಲ್ಲವೆಂದಾದರೆ ಬೇರೆ ಆಸ್ಪತ್ರೆಯಲ್ಲಿ ಆರೋಗ್ಯ ತಪಾಸಣೆಗೆ ಒಳಗಾಗಲು ಸೈಲ್ ಅವರಿಗೆ ಕಮಾಂಡ್ ಆಸ್ಪತ್ರೆ ಸೂಚಿಸಬಹುದಾಗಿದೆ’ ಎಂದಿದೆ.

‘ವಿದೇಶಿಯರಿಗೂ ಕನ್ನಡ ಭಾಷೆಯ ಮೇಲಿದೆ ಪ್ರೀತಿ’



ಬೆಂಗಳೂರು: ‘ವಿದೇಶಿಯರು ಕೂಡ ಕನ್ನಡ ಭಾಷೆಯನ್ನು ಪ್ರೀತಿಯಿಂದ ಪೂಜಿಸುತ್ತಿದ್ದಾರೆ. ಈ ನೆಲದ ಮೇಲೆ ವಾಸಿಸುವ ಪ್ರತಿಯೊಬ್ಬರೂ ಕನ್ನಡವನ್ನು ಮಾತನಾಡುವ ಮತ್ತು ಗೌರವಿಸುವ ಮೂಲಕ ಈ ಭಾಷೆಯನ್ನು ಪೂಜಿಸುವ ಕೆಲಸವಾಗಬೇಕು’ ಎಂದು ಸಾಹಿತಿ ಚಂದ್ರಶೇಖರ ಕಂಬಾರ ಹೇಳಿದರು.

ನಾಗದೇವನಹಳ್ಳಿಯ ಜಿ.ತಿಮ್ಮಯ್ಯ ಬಡಾವಣೆಯಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ ಮತ್ತು ದಿವಂಗತ ಚಿತ್ರನಟ ಶಂಕರ್‌ನಾಗ್ ಅವರ ಜನ್ಮದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಸಿ.ಎಂ. ಮಾರೇಗೌಡ, ‘ಬಾಲ್ಯದಲ್ಲಿಯೇ ಮಕ್ಕಳಿಗೆ ಕನ್ನಡ ಭಾಷೆ, ನೆಲ, ಜಲ ಮತ್ತು ನಾಡಿನ ಇತಿಹಾಸವನ್ನು ತಿಳಿಸುವ ಕೆಲಸವಾಗಬೇಕು. ಈ ನೆಲದಲ್ಲಿ ಅನ್ನ, ನೀರು, ಉದ್ಯೋಗ ಕಂಡುಕೊಂಡು ಜೀವನ ನಡೆಸುವ ಅನ್ಯ ಭಾಷಿಕರು, ಕಡ್ಡಾಯವಾಗಿ ಕನ್ನಡ ಕಲಿಯಲು ಮುಂದಾಗಬೇಕು’ ಎಂದರು.

ಶಂಕರ್‌ನಾಗ್ ವಿನಾಯಕ ಗೆಳೆಯರ ಬಳಗದ ಅಧ್ಯಕ್ಷ ಎನ್.ಸಿ. ಕುಮಾರ್, ‘ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಮಾನ್ಯತೆ ದೊರಕಿ ಹಲವು ವರ್ಷಗಳು ಕಳೆದಿದ್ದರೂ ಈವರೆಗೂ ಭಾಷಾ ಅಧ್ಯಯನ ಕುರಿತ ಕೆಲಸಗಳನ್ನು ಕೈಗೊಂಡಿಲ್ಲ. ಈ ನಾಡಿನ ಪ್ರತಿಯೊಬ್ಬರೂ ನಾನು ಕನ್ನಡಿಗ ಎಂದು ಭಾಷೆಯನ್ನು ಉಳಿಸಿ ಬೆಳೆಸಬೇಕು’ ಎಂದರು.

ಕೆಐಎಬಿ: ವಾರದಲ್ಲಿ ₹13 ಕೋಟಿ ಮೌಲ್ಯದ 32 ಕೆ.ಜಿ ಗಾಂಜಾ ವಶ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನ.5 ರಿಂದ 12ರವರೆಗೆ ಒಂದು ವಾರದಲ್ಲಿ ಕಸ್ಟಮ್ಸ್ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಒಟ್ಟು 31.63 ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದೆ. ಮಾರುಕಟ್ಟೆಯಲ್ಲಿ ಇದರ ಮೌಲ್ಯ ₹13.22 ಕೋಟಿ ಎಂದು ಅಂದಾಜಿಸಲಾಗಿದೆ.

ಗಾಂಜಾ ಕಳ್ಳಸಾಗಣೆ ಮಾಡುತ್ತಿದ್ದ ಪ್ರಯಾಣಿಕರ ಮೇಲೆ ಪ್ರಕರಣ ದಾಖಲು ಮಾಡಿದ್ದು, ಹಲವು ಪ್ರಯಾಣಿಕರನ್ನು ಬಂಧಿಸಲಾಗಿದೆ. ಮಾದಕ ವಸ್ತು ನಿಷೇಧ ಅಭಿಯಾನದ ಅಡಿ ವಿಚಾರಣೆ ನಡೆಸುತ್ತಿದ್ದಾರೆ.

ಎರಡು ವಾರದಲ್ಲಿ ಗಾಂಜಾ ಕಳ್ಳಸಾಗಣೆಯ ಐದು ಪ್ರಕರಣದಲ್ಲಿ ಸಿಕ್ಕಿ ಬಿದ್ದ ಪ್ರಯಾಣಿಕರೆಲ್ಲರೂ ಬ್ಯಾಂಕಾಂಕ್‌ನಿಂದ ಬಂದವರೇ ಆಗಿದ್ದಾರೆ.

‘ಸ್ಪೋರ್ಟ್ಸ್ ಫೆಸ್ಟ್’ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಯಲಹಂಕ: ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುವ ಜನರ ನಡುವೆ ಸೌಹಾರ್ದ ಸಂಬಂಧವನ್ನು ಗಟ್ಟಿಗೊಳಿಸುವ ಉದ್ದೇಶದಿಂದ ನ. 15 ಹಾಗೂ 16ರಂದು ಬ್ಯಾಟರಾಯನಪುರ ಕ್ಷೇತ್ರದಲ್ಲಿ 3ನೇ ವಾರ್ಷಿಕ ‘ಇಂಟರ್ ಅಪಾರ್ಟ್‌ಮೆಂಟ್ ಸ್ಪೋರ್ಟ್ಸ್ ಫೆಸ್ಟ್-2025’ ಆಯೋಜಿಸಲಾಗಿದೆ ಎಂದು ಸಂಘಟಕಿ ಮೀನಾಕ್ಷಿ ಕೃಷ್ಣಬೈರೇಗೌಡ ತಿಳಿಸಿದರು.

‘ಬ್ಯಾಟರಾಯನಪುರ ಕ್ಷೇತ್ರದ ಜನರ ಆರೋಗ್ಯ ಮತ್ತು ದೈಹಿಕ ಸಾಮರ್ಥ್ಯವನ್ನು ಗಮನದಲ್ಲಿರಿಸಿಕೊಂಡು ನಾಲ್ಕು ಒಳಾಂಗಣ ಕ್ರೀಡಾಂಗಣಗಳನ್ನು ಸರ್ಕಾರ ನಿರ್ಮಿಸಿದೆ. ಮುಂಬರುವ ದಿನಗಳಲ್ಲಿ ಜಕ್ಕೂರು ಬಳಿ ಕ್ರೀಡಾಂಗಣ ನಿರ್ಮಾಣವಾಗಲಿದೆ. ಈ ಬಗ್ಗೆ ನಾಗರಿಕರಿಗೆ ಮಾಹಿತಿನೀಡಲು ಹಾಗೂ ಈ ಎಲ್ಲ ಸೌಲಭ್ಯಗಳನ್ನು ಸರಿಯಾಗಿ ಬಳಸುವ ಉದ್ದೇಶದಿಂದ ಈ ಕ್ರೀಡಾ ಉತ್ಸವ ಹಮ್ಮಿಕೊಳ್ಳಲಾಗಿದೆ. ‘ಪ್ರಜಾವಾಣಿ’, ಡೆಕ್ಕನ್ ಹೆರಾಲ್ಡ್’ ಮಾಧ್ಯಮ ಸಹಯೋಗ ನೀಡಿವೆ’ ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.



ಮೀನಾಕ್ಷಿ ಕೃಷ್ಣ ಬೈರೇಗೌಡ

‘ಬೆಂಗಳೂರು ಉತ್ತರ ಭಾಗದಲ್ಲಿ ಹಲವು ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುತ್ತಿರುವ ಜನರು ಸಮಾಜದ ಎಲ್ಲರೊಂದಿಗೆ ಬೆರೆಯುವಂತಾಗಬೇಕು. ಈ ದಿಸೆಯಲ್ಲಿ 8 ಪ್ರದೇಶಗಳಲ್ಲಿ ಕ್ರೀಡಾಕೂಟ ನಡೆಯಲಿದೆ. ಕ್ರಿಕೆಟ್, ವಾಲಿಬಾಲ್, ಫುಟ್‌ಬಾಲ್, ಚೆಸ್, ಕೇರಂ, ಟೇಬಲ್ ಟೆನಿಸ್, ಹಗ್ಗ-ಜಗ್ಗಾಟ, ಬ್ಯಾಡ್ಮಿಂಟನ್ ಸೇರಿ 14 ವಿವಿಧ ಕ್ರೀಡೆಗಳನ್ನು ಆಯೋಜಿಸಲಾಗಿದೆ. ಜಿಮ್ನಾಸ್ಟಿಕ್ ಹಾಗೂ ಪಿಕಲ್ ಬಾಲ್ ಸ್ಪರ್ಧೆ ಮಾಡಿರುವುದು ಈ ಬಾರಿಯ ವಿಶೇಷ’ ಎಂದು ಹೇಳಿದರು.

‘ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಕೆಬಿಜಿ ಸ್ವಯಂ ಸೇವಕರ ಸಂಘದ ಸದಸ್ಯರು ಈ ಕ್ರೀಡಾ ಉತ್ಸವಕ್ಕೆ ಸಹಕಾರ ನೀಡುತ್ತಿದ್ದಾರೆ’ ಎಂದರು.

‘ಕಳೆದ ಬಾರಿ 1,500 ಜನರು ಭಾಗವಹಿಸಿದ್ದರೆ, ಈ ಬಾರಿ ಈಗಾಗಲೇ ಮೂರು ಸಾವಿರಕ್ಕೂ ಅಧಿಕ ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ವಯೋಮಿತಿಗೆ ಅನುಗುಣವಾಗಿ ಸ್ಪರ್ಧೆಗಳನ್ನು ನಡೆಸಲಾಗುವುದು. ನ.16ರಂದು ಸಂಜೆ 4ಕ್ಕೆ ವಿದ್ಯಾರಣ್ಯಪುರದ ಒಳಾಂಗಣ ಕ್ರೀಡಾಂಗಣದಲ್ಲಿ ಬಹುಮಾನ ವಿತರಣಾ ಸಮಾರಂಭ ನಡೆಯಲಿದೆ’ ಎಂದು ವಿವರಿಸಿದರು.

ಪುರುಷರು ಮತ್ತು ಮಹಿಳೆಯರಿಗೆ ಸಮಾನವಾಗಿ ಟ್ರೋಫಿ, ನಗದು ಹಾಗೂ ಪ್ರಮಾಣಪತ್ರ ವಿತರಿಸಲಾಗುವುದು. ಇಬ್ಬರು ಅದೃಷ್ಟಶಾಲಿ ವಿಜೇತರಿಗೆ ಉಚಿತವಾಗಿ ಥಾಯ್ಲೆಂಡ್ ಪ್ರವಾಸಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದು ಅವರು ಮಾಹಿತಿ ನೀಡಿದರು.

‘2028ರಲ್ಲೂ ಸಿದ್ದರಾಮಯ್ಯ-ಡಿಕೆಶಿ ನೇತೃತ್ವದಲ್ಲಿ ಚುನಾವಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿಯೇ 2028ರಲ್ಲೂ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ. ನವೆಂಬರ್ ಕ್ರಾಂತಿ ಎನ್ನುವುದೇ ಸುಳ್ಳು’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ‘ನವೆಂಬರ್‌ಗೆ ಕ್ರಾಂತಿಯಾಗುತ್ತದೆ. ಮುಖ್ಯಮಂತ್ರಿ ಬದಲಾಗುತ್ತಾರೆ ಎನ್ನುವುದೆಲ್ಲ ಮಾಧ್ಯಮಗಳಿಗೆ ಬಿಜೆಪಿ ನೀಡುತ್ತಿರುವ ತಪ್ಪು ಮಾಹಿತಿ’ ಎಂದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮಾತನಾಡಿ, ‘ದೆಹಲಿಗೆ ಹೋಗಿದ್ದು ಸಾಮಾನ್ಯ ಭೇಟಿ. ಪಕ್ಷದ ರಾಜ್ಯ ಉಸ್ತುವಾರಿ ಸುರ್ಜೇವಾಲಾ ಅವರನ್ನು ಭೇಟಿ ಮಾಡಿದ್ದೆ. ಯಾವುದೇ ರಾಜಕೀಯ ವಿಷಯ ಪ್ರಸ್ತಾಪ ಮಾಡಿಲ್ಲ. ಅವಕಾಶ ಬಂದಾಗ ಚರ್ಚೆ ಮಾಡುತ್ತೇನೆ’ ಎಂದರು.

ಯುವ ಕಾಂಗ್ರೆಸ್ ಪ್ರತಿಭಟನೆ ನಾಳೆ

ಪ್ರಜಾವಾಣಿ ವಾರ್ತೆ

ಮತ ಕಳವು

ಬೆಂಗಳೂರು: 'ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗ ಮತ ಕಳವು ನಡೆಸುತ್ತಿವೆ' ಎಂದು ಆರೋಪಿಸಿ ಯುವ ಕಾಂಗ್ರೆಸ್ ಸಮಿತಿಯು (ಕೆಪಿವೈಸಿಸಿ) ಫ್ರೀಡಂ ಪಾರ್ಕ್‌ನಲ್ಲಿ ಇದೇ 15ರಂದು ಬೆಳಿಗ್ಗೆ 11 ಗಂಟೆಗೆ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ.

'ಪ್ರತಿಭಟನೆ ನಡೆಸಿದ ಬಳಿಕ ಮುಖ್ಯ ಚುನಾವಣಾ ಅಧಿಕಾರಿ ಕಚೇರಿಯವರೆಗೆ ಮೆರವಣಿಗೆ ಮೂಲಕ ತೆರಳಿ ಆಯೋಗಕ್ಕೆ ಮನವಿ ಸಲ್ಲಿಸಲಾಗುವುದು' ಎಂದು ಪಕ್ಷ ತಿಳಿಸಿದೆ. 'ಪ್ರತಿಭಟನೆಯ ನೇತೃತ್ವವನ್ನು ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಉದಯ್ ಭಾನು ಚಿಬ್ ಮತ್ತು ಉಸ್ತುವಾರಿ ಮನೀಶ್ ಶರ್ಮಾ ವಹಿಸಲಿದ್ದಾರೆ' ಎಂದಿದೆ.

ನಗರದಲ್ಲಿ ಇಂದು

'ಧೀ ನಯಪಾದ' ಮಧುಮೇಹ ಪಾದದ ಆರೈಕೆ ಹಾಗೂ ಅಂಗ ಸಂರಕ್ಷಣೆ ಕೇಂದ್ರ ಉದ್ಘಾಟನೆ: ಅತಿಥಿಗಳು: ಭಾಸ್ಕರ್ ರಾವ್, ಆರ್.ಎಂ. ಸುಧಾಕರ್, ಮೋಹನ್ ನಲ್ಲೂರ್, ರವಿಚಂದ್ರನ್, ವರಲಕ್ಷ್ಮಿ, ಉಪಸ್ಥಿತಿ: ಡಾ. ಚಂದ್ರಶೇಖರ್ ಚಿಕ್ಕಮುನಿಯಪ್ಪ, ಆಯೋಜನೆ ಹಾಗೂ ಸ್ಥಳ: ಧೀ ಆಸ್ಪತ್ರೆ, ಕನಕಪುರ ರಸ್ತೆ, ಬೆಳಿಗ್ಗೆ 9.30

'ಐಸಿಟಿಎಚ್‌ಎಸ್' ವೈದ್ಯಕೀಯ ವಿಜ್ಞಾನದಲ್ಲಿ ತಂತ್ರಜ್ಞಾನ ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿ: ದಿನೇಶ್ ಗುಂಡೂರಾವ್, ಡಾ. ಭಗವಾನ್ ಬಿ.ಸಿ., ಡಾ.ವಿ. ಕಲೈಸೆಲ್ವನ್, ಭಾಷಣ: ಡಾ. ವೇದಪ್ರಕಾಶ್ ಮಿಶ್ರ, ಉಪಸ್ಥಿತಿ: ಗಾಳಿಸ್ವಾಮಿ, ಆಯೋಜನೆ ಹಾಗೂ ಸ್ಥಳ: ದಯಾನಂದ ಸಾಗರ್ ವಿಶ್ವವಿದ್ಯಾಲಯ, ಬೆಳಿಗ್ಗೆ 9.30

ಮಕ್ಕಳ ದಿನಾಚರಣೆ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಬಸವರಾಜ ಹೊರಟ್ಟಿ, ಡಿ.ಕೆ. ಶಿವಕುಮಾರ್, ಯು.ಟಿ. ಖಾದರ್, ಅಧ್ಯಕ್ಷತೆ: ಎಸ್. ಮಧು ಬಂಗಾರಪ್ಪ, ಅತಿಥಿಗಳು: ಎನ್.ಎಸ್. ಬೋಸರಾಜು, ಆರ್. ಅಶೋಕ್, ಛಲವಾದಿ ನಾರಾಯಣಸ್ವಾಮಿ, ರಿಜ್ವಾನ್ ಅರ್ಷದ್, ಆಯೋಜನೆ: ಶಾಲಾ ಶಿಕ್ಷಣ ಮತ್ತು ಶಾಕ್ಷರತಾ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಸಭಾಂಗಣ, ವಿಧಾನಸೌಧ, ಬೆಳಿಗ್ಗೆ 10

ಶಾಲಾ ಅಂತರರಾಷ್ಟ್ರೀಯ ಸಿನಿಮೋತ್ಸವ: ಅತಿಥಿಗಳು: ಹರಿನಾರಾಯಣ ಶರ್ಮ, ನಿಕೋಲಾಯ್ ಡ್ಯಾನ್, ಅಲೆಕ್ಸಾಂಡರ್ ಶ್ಕೊಲೆಂಕೊ, ಆಯೋಜನೆ: ಎಸ್‌ಸಿಐಎಫ್‌ಎಫ್, ಸ್ಥಳ: ಬೆಥನಿ ಪ್ರೌಢಶಾಲೆ, ಕೋರಮಂಗಲ, ಬೆಳಿಗ್ಗೆ 10

72ನೇ ಅಖಿಲ ಭಾರತ ಸಹಕಾರ ಸಪ್ತಾಹ: ಉದ್ಘಾಟನೆ ಹಾಗೂ ಸಹಕಾರ ರತ್ನ ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಆಯೋಜನೆ ಹಾಗೂ ಸ್ಥಳ: ಗಾಯತ್ರಿ ವಿಹಾರ, ಅರಮನೆ ಮೈದಾನ. ಬೆಳಿಗ್ಗೆ 11

'ಪ್ರಿಂಟ್ ಆ್ಯಂಡ್ ಪ್ಯಾಕ್‌ಟೆಕ್' ಎಕ್ಸ್‌ಪೊ ಉದ್ಘಾಟನೆ: ಅತಿಥಿಗಳು: ಎಂ.ಬಿ. ಪಾಟೀಲ, ಸಂತೋಷ್ ಲಾಡ್, ರಾಮಲಿಂಗಾರೆಡ್ಡಿ, ದೇವರಾಜ್ ಕೆ., ಉಮಾ ರೆಡ್ಡಿ, ಆಯೋಜನೆ: ಟ್ರೈಯೂನ್ ಎಕ್ಸಿಬಿಟರ್ಸ್, ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 11.30

ಕರ್ನಾಟಕ ರಾಜ್ಯೋತ್ಸವ, ಪ್ರಶಸ್ತಿ ಪ್ರದಾನ ಮತ್ತು ಮಕ್ಕಳ ದಿನಾಚರಣೆ: ಧ್ವಜಾರೋಹಣ: ಆರ್. ಅರ್ಚನಾ, ಅಧ್ಯಕ್ಷತೆ: ಎಂ. ನರಸಿಂಹನ್, ಕನ್ನಡ ಸೌರಭ ಪ್ರಶಸ್ತಿ ಪುರಸ್ಕೃತರು: ಎಂ. ಖಾಸೀಮ್ ಮಲ್ಲಿಗೆ ಮಡುವು, ಬಹುಮಾನ ವಿತರಣೆ: ಪಿ.ಜಿ. ಮಹೇಶ, ಆಯೋಜನೆ ಹಾಗೂ ಸ್ಥಳ: ವಿನಾಯಕ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆ, ಶ್ರೀನಿವಾಸನಗರ, ಮಧ್ಯಾಹ್ನ 1.30

'ಕೆಲಸದ ಸ್ಥಳದಲ್ಲಿ ಮಹಿಳೆಯರಿಗಾಗಿ' ನಾಲ್ಕನೇ ಸಿಐಐ ವಾರ್ಷಿಕ ಸಮ್ಮೇಳನ: ಉದ್ಘಾಟನೆ: ಲಕ್ಷ್ಮೀ ಹೆಬ್ಬಾಳ್ಕರ, ಆಯೋಜನೆ: ಸಿಐಐ, ಸ್ಥಳ: ರಾಯಲ್ ಆರ್ಕಿಡ್, ಯಲಹಂಕ, ಮಧ್ಯಾಹ್ನ 2.30

ಕರ್ನಾಟಕ ರಾಜ್ಯೋತ್ಸವ ಸಂಭ್ರಮಾಚರಣೆ ಹಾಗೂ 'ಕರ್ನಾಟಕ ಹೆಮ್ಮೆಯ' ಪ್ರಶಸ್ತಿ ಪ್ರದಾನ: ಅತಿಥಿ: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಭಾಷಣ: ಶಾಲಿನಿ ನಾಲ್ವಾಡ್, ಅಧ್ಯಕ್ಷತೆ: ಉಮಾ ರೆಡ್ಡಿ, ಪ್ರಶಸ್ತಿ ಪುರಸ್ಕೃತರು: ಸಿ. ಸೋಮಶೇಖರ್, ಡಾ. ಪ್ರತಿಮಾ ಮೂರ್ತಿ, ಸಂಗೀತಾ ಕಟ್ಟಿ, ಗುರುರಾಜ್ ಹೊಸಕೋಟೆ, ಮೋಹನ್ ಶಂಕರ್, ಡಿ. ಮುನಿರಾಜು, ಧರ್ಮೇಂದ್ರ ಕುಮಾರ್, ಮಹೇಂದ್ರ ಮುನ್ನೋತ್, ಎಂ. ರಾಮಮೂರ್ತಿ, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ), ಕೆ.ಜಿ. ರಸ್ತೆ, ಮಧ್ಯಾಹ್ನ 3.30

101ನೇ ಆರ್ಗ್ಯಾನಿಕ್ ಸಂತೆ: ಉದ್ಘಾಟನೆ: ರೇವತಿ ಕಾಮತ್, ಅತಿಥಿಗಳು: ಸಂಗೀತಾ ಕಟ್ಟಿ, ರಿಷಿ, ರಮ್ಯಾ ವಸಿಷ್ಠ, ಆಯೋಜನೆ ಹಾಗೂ ಸ್ಥಳ: ದಿ ಗ್ರೀನ್ ಪಾಥ್, ಮಲ್ಲೇಶ್ವರ, ಸಂಜೆ 4


ಡಿ.ಕೆ. ಶಿವಕುಮಾರ್ ಅವರು ರಚಿಸಿರುವ 'ನೀರಿನ ಹೆಜ್ಜೆ' ಪುಸ್ತಕ ಬಿಡುಗಡೆ: ಸಿದ್ದರಾಮಯ್ಯ, ಅತಿಥಿಗಳು: ಎಚ್.ಕೆ. ಪಾಟೀಲ, ಎಂ.ಬಿ. ಪಾಟೀಲ, ಎನ್.ಎಸ್. ಬೋಸರಾಜು, ಮೋಹನ್ ವಿ. ಕಾತರಕಿ, ಆಯೋಜನೆ: ಜಲಸಂಪನ್ಮೂಲ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಸಂಜೆ 4

'ಸಂತವಾಣಿ'– ಚಲನಚಿತ್ರಗಳು, ಪುಸ್ತಕಗಳು, ಉಪನ್ಯಾಸಗಳು, ಸಂಗೀತ, ನೃತ್ಯ, ನಾಟಕ ಮತ್ತು ವಿಚಾರಗೋಷ್ಠಿಗಳು: 'ಮೀರಾ' ಚಲನಚಿತ್ರ ಪ್ರದರ್ಶನ, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 4

ಕೆ.ವಿ.ನಾರಾಯಣಸ್ವಾಮಿ ಅವರ 102ನೇ ಜನ್ಮದಿನೋತ್ಸವದ ಪ್ರಯುಕ್ತ ಶಾಸ್ತ್ರೀಯ ಸಂಗೀತೋತ್ಸವ: ಗಾಯನ: ಬೆಂಗಳೂರು ಸಹೋದರರು, ಟಿ.ಎಸ್. ಪಟ್ಟಾಭಿರಾಮ ಪಂಡಿತ್, ಪಿಟೀಲು: ಮತ್ತೂರು ಶ್ರೀನಿಧಿ, ಚಾರುಲತಾ ರಾಮಾನುಜಂ, ಮೃದಂಗ: ಬಿ.ಆರ್. ಶ್ರೀನಿವಾಸ್, ಬೆಂಗಳೂರು ಪ್ರವೀಣ್, ಘಟ: ಓಂಕಾರ್ ರಾವ್, ಸುರೇಶ್ ವೈದ್ಯನಾಥನ್, ಆಯೋಜನೆ: ರಾಮನಾರಾಯಣ ಗುರುಕುಲಂ, ಸ್ಥಳ: ಯದುಗಿರಿ ಯತಿರಾಜ ಮಠ, ಮಲ್ಲೇಶ್ವರ, ಸಂಜೆ 5


'ಕಲಾಸತ್ಪಥ' ಸಾಂಸ್ಕೃತಿಕ ಸಂಜೆ: ಅಧ್ಯಕ್ಷತೆ: ಗೊ.ರು. ಚನ್ನಬಸಪ್ಪ, ಉದ್ಘಾಟನೆ: ಜಿ. ಪರಮೇಶ್ವರ, ಅತಿಥಿಗಳು: ಶಿವರಾಜ ತಂಗಡಗಿ, ಸಿ. ಸೋಮಶೇಖರ್, ಡಿ. ಸುರೇಂದ್ರ ಕುಮಾರ್, ಆರತಿ ಕೃಷ್ಣ, ಶಶಿಧರ್ ಅಡಪ, ಆಯೋಜನೆ: ಶಿವಲೀಲಾ ಕಲ್ಚರಲ್ ಮತ್ತು ಚಾರಿಟಬಲ್ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 5.30

'ಹಿಂದೂಸ್ತಾನ ಫೈಲ್ಸ್' ಕಲಾ ಪ್ರದರ್ಶನಕ್ಕೆ ಚಾಲನೆ: ಭಾರತದ ಇತಿಹಾಸ ಮತ್ತು ಪರಂಪರೆ ಪ್ರತಿಬಿಂಬಿಸುವ ಕಲಾಕೃತಿಗಳ ಪ್ರದರ್ಶನ, ಆಯೋಜನೆ: ವಿರಾಸತ್ ಆರ್ಟ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪ ರಸ್ತೆ, ಸಂಜೆ 5.30



ವೀರಲೋಕ ಪುಸ್ತಕ ಸಂತೆ: ಬೆಳಿಗ್ಗೆ 10ಕ್ಕೆ ನಾಲ್ಕು ಪುಸ್ತಕಗಳ ಬಿಡುಗಡೆ ಸಮಾರಂಭ, ಅತಿಥಿಗಳು: ಸಿ.ಕೆ. ರಾಮಮೂರ್ತಿ, ಟಿ.ಎನ್. ಸೀತಾರಾಮ್, ನಾರಾಯಣಗೌಡ, ಬಿ. ಸೋಮಶೇಖರ್, ಕೆ.ವಿ. ಪ್ರಭಾಕರ್, ಸಂಜೆ 5ಕ್ಕೆ ಉದ್ಘಾಟನಾ ಸಮಾರಂಭ, ಅತಿಥಿಗಳು: ಸಿದ್ದರಾಮಯ್ಯ, ವಿ.ಎಸ್. ಉಗ್ರಪ್ಪ, ರಾಮಲಿಂಗಾರೆಡ್ಡಿ, ಸಿ.ಕೆ. ರಾಮಮೂರ್ತಿ, ಎಂ.ಸಿ. ಸುಧಾಕರ್, ಮಧು ಬಂಗಾರಪ್ಪ, ಆಯೋಜನೆ: ವೀರಲೋಕ ಪುಸ್ತಕ, ಸ್ಥಳ: ಚಂದ್ರಗುಪ್ತ ಮೌರ್ಯ ಮೈದಾನ (ಶಾಲಿನಿ ಗ್ರೌಂಡ್) ಜಯನಗರ

ಪುಸ್ತಕ ಪ್ರದರ್ಶನ ಮತ್ತು ಭಾರಿ ರಿಯಾಯಿತಿ ಮಾರಾಟ ಉದ್ಘಾಟನೆ ಸಮಾರಂಭ: ಉದ್ಘಾಟನೆ: ಎಂ. ನಂಜುಂಡಸ್ವಾಮಿ, ಅಧ್ಯಕ್ಷತೆ: ಬಸವರಾಜ ಕಲ್ಗುಡಿ, ಕವನ ವಾಚನ: ಜ್ಞಾನಚಂದ್ ಮರ್ಮಜ್ಞಾ, ಸುಬ್ಬು ಹೊಲೆಯಾರ್, ಟಿ.ಪಿ. ವಿನೋದ್, ಸುಜಾತಾ ಎಸ್., ಅಂಬಿಕಾ ಅನಂತ್, ಶಾಯಿಸ್ತಾ ಯೂಸುಫ್, ಆಯೋಜನೆ: ಕೇಂದ್ರ ಸಾಹಿತ್ಯ ಅಕಾಡೆಮಿ, ಸ್ಥಳ: ಸಾಹಿತ್ಯ ಅಕಾಡೆಮಿ, ಕಲಾಗ್ರಾಮದ ಎದುರು, ಮಲ್ಲತ್ತಹಳ್ಳಿ, ಬೆಳಿಗ್ಗೆ 11


ವಿರೇಂದ್ರ ಹೆಗ್ಗಡೆ

'ಪಯಣ' ಡಿ. ವಿರೇಂದ್ರ ಹೆಗ್ಗಡೆ ಅವರ ಸಂಗ್ರಹದ ಕಾರುಗಳ ಪ್ರದರ್ಶನ: ಅಪರೂಪದ ಆಟೋಮೊಬೈಲ್ ತಂತ್ರಜ್ಞಾನ ಪ್ರದರ್ಶನ, ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 11ರಿಂದ


ಬಿ.ಟಿ. ಲಲಿತಾ ನಾಯಕ್

'ನಾಡೋಜ ಬರಗೂರು ಪ್ರಶಸ್ತಿ' ಪ್ರದಾನ: ಐ.ಎಂ. ವಿಠಲಮೂರ್ತಿ, ಅತಿಥಿ: ಸಲೀಂ ಅಹಮ್ಮದ್, ಪ್ರಶಸ್ತಿ ಪುರಸ್ಕೃತರು: ಬಿ.ಟಿ. ಲಲಿತಾ ನಾಯಕ್, ಶಿವರುದ್ರಯ್ಯ, ಉಪಸ್ಥಿತಿ: ನಾಗೇಂದ್ರ ಕುಮಾರ್, ಆಯೋಜನೆ: ನಾಡೋಜ ಡಾ. ಬರಗೂರು ಪ್ರತಿಷ್ಠಾನ, ಸ್ಥಳ: ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಸಂಜೆ 5

ನೃಪವೈಭವ: ಅಧ್ಯಕ್ಷತೆ: ಫಜೀಹಾ ಸುಲ್ತಾನ, ಅತಿಥಿಗಳು: ಪ್ರಕಾಶ್ ಕೆ. ನಾಡಿಗ್, ಡಾರ್ಲಿಂಗ್ ಕೃಷ್ಣ, ನಯನ ಶರತ್, ಆಯೋಜನೆ ಹಾಗೂ ಸ್ಥಳ: ನೃಪತುಂಗ ವಿಶ್ವವಿದ್ಯಾಲಯ, ನೃಪತುಂಗ ರಸ್ತೆ, ಬೆಳಿಗ್ಗೆ 10.30

‘ಗುಂಡಿ ಮುಚ್ಚುವ ಬದಲು ಸುರಂಗ ರಸ್ತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರಿನ ರಸ್ತೆಗಳ ಗುಂಡಿಗಳನ್ನು ಮುಚ್ಚುವುದಕ್ಕೇ ರಾಜ್ಯ ಸರ್ಕಾರದ ಬಳಿ ಹಣವಿಲ್ಲ. ಆದರೂ ಹತ್ತಾರು ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ಸುರಂಗ ರಸ್ತೆ ನಿರ್ಮಿಸಲು ಮುಂದಾಗಿದೆ. ಇದು ಭಂಡತನದ ನಿರ್ಧಾರ’ ಎಂದು ಬಿಜೆಪಿ ಸಂಸದ ಪಿ.ಸಿ.ಮೋಹನ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ‘ಈ ಸುರಂಗ ರಸ್ತೆಯಿಂದ ಯಾರಿಗೂ ಅನುಕೂಲ ಇಲ್ಲ. ಅನನುಕೂಲವೇ ಹೆಚ್ಚು, ಸಂಚಾರ ದಟ್ಟಣೆ ಇಲ್ಲದೇ ಇರುವ ಸ್ಥಳಗಳಲ್ಲೂ, ದಟ್ಟಣೆ ಹೆಚ್ಚಾಗಲು ಈ ಸುರಂಗ ರಸ್ತೆ ಕಾರಣವಾಗಲಿದೆ’ ಎಂದರು.

‘ಸಿಲ್ಕ್ ಬೋರ್ಡ್ ಬಳಿ ಸುರಂಗ ಆರಂಭವಾಗುತ್ತದೆ ಎಂದು ಹೇಳುತ್ತಿದ್ದಾರೆ. ಆದರೆ ವಾಸ್ತವದಲ್ಲಿ ಸಿಲ್ಕ್ ಬೋರ್ಡ್‌ನಿಂದ 1 ಕಿ.ಮೀ.ದೂರದಲ್ಲಿ ಸುರಂಗ ಆರಂಭವಾಗಲಿದೆ. ಮಡಿವಾಳದ ಸೆಂಟ್ ಜಾನ್ಸ್ ಆಸ್ಪತ್ರೆ ಬಳಿ ಪ್ರವೇಶ ಮತ್ತು ನಿರ್ಗಮನ ರ‍್ಯಾಂಪ್ ನಿರ್ಮಿಸಲಾಗುತ್ತಿದೆ. ಇದರಿಂದ ಸಿಲ್ಕ್ ಬೋರ್ಡ್ ವೃತ್ತದ ಬಳಿ ಸಂಚಾರ ದಟ್ಟಣೆ ವಿಪರೀತ ಹೆಚ್ಚಾಗಲಿದೆ’ ಎಂದು ವಿವರಿಸಿದರು.

‘ಕೆ.ಆರ್.ವೃತ್ತ, ಲಾಲ್‌ಬಾಗ್, ರೇಸ್‌ಕೋರ್ಸ್, ಮೇಖ್ರಿ ವೃತ್ತಗಳ ಬಳಿ ನಿರ್ಗಮನ ಮತ್ತು ಪ್ರವೇಶ ರ‍್ಯಾಂಪ್ ನಿರ್ಮಿಸುತ್ತಿದ್ದಾರೆ. ಈ ವೃತ್ತಗಳ ಬಳಿ ಈಗಾಗಲೇ ವಿಪರೀತ ಎನಿಸುವಷ್ಟು ಸಂಚಾರ ದಟ್ಟಣೆ ಇದೆ’ ಎಂದು ಕಳವಳ ವ್ಯಕ್ತಪಡಿಸಿದರು.

ರಸ್ತೆ ಕಸ ಗುಡಿಸಲು ₹613 ಕೋಟಿ

7 ವರ್ಷ ಬಾಡಿಗೆ ಯಂತ್ರಗಳ ಮೂಲಕ ಸ್ವಚ್ಛತೆಗೆ ಸಚಿವ ಸಂಪುಟ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಾರ್ವಜನಿಕ ಆರೋಗ್ಯ, ರಸ್ತೆ ಸ್ವಚ್ಛತೆ, ವಾಯು ಗುಣಮಟ್ಟ ಸುಧಾರಣೆಗೆ ಯಂತ್ರಗಳ ಮೂಲಕ ಕಸ ಗುಡಿಸುವುದಕ್ಕೆ ಬಾಡಿಗೆ ಆಧಾರದಲ್ಲಿ ವಾಹನಗಳನ್ನು ಪಡೆದುಕೊಳ್ಳಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಸಮ್ಮತಿಸಿತು.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದರು.

ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿರುವ ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳ ಕಸ ಗುಡಿಸಲು ಪ್ರತ್ಯೇಕವಾಗಿ ವಾಹನಗಳನ್ನು ಬಾಡಿಗೆ ಆಧಾರದಲ್ಲಿ ಏಳು ವರ್ಷದವರೆಗೆ ಪಡೆದುಕೊಳ್ಳಬಹುದು. ಇದಕ್ಕೆ ಆಯಾ ನಗರ ಪಾಲಿಕೆಗಳೇ ವೆಚ್ಚ ಭರಿಸಬೇಕಾಗುತ್ತದೆ. ಒಟ್ಟು ₹613.25 ಕೋಟಿ ಮೊತ್ತಕ್ಕೆ (ಜಿಎಸ್‌ಟಿ ಒಳಗೊಂಡು) ಅನುಮೋದನೆ ನೀಡಲಾಗಿದೆ ಎಂದರು.

ಹವಾಮಾನದಲ್ಲಿನ ಗಣನೀಯ ಬದಲಾವಣೆಗಳು ಮತ್ತು ನಗರದ ಅಗತ್ಯಗಳನ್ನು ಆಧರಿಸಿ ಸಲ್ಲಿಸಲಾಗಿದ್ದ ಪ್ರಸ್ತಾವಕ್ಕೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಐದು ನಗರ ಪಾಲಿಕೆಗಳಿಗೆ ಪ್ರತ್ಯೇಕ ಐದು ಪ್ಯಾಕೇಜ್‌ಗಳಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಟೆಂಡರ್ ಆಹ್ವಾನಿಸಬೇಕು ಎಂಬುದಾಗಿ ಸೂಚಿಸಿದೆ ಎಂದು ಹೇಳಿದರು.

ನಗರ ಪಾಲಿಕೆಗಳ ವ್ಯಾಪ್ತಿಯ ರಸ್ತೆಗಳ ಸ್ವಚ್ಛತೆಯನ್ನು ಕಾಪಾಡುವ ಮೂಲಕ ನಗರ ಪ್ರದೇಶದ ಗಾಳಿಯ ಗುಣಮಟ್ಟ ಸೂಚ್ಯಂಕವನ್ನು ಮಿತಿಯಲ್ಲಿರಿಸಿಕೊಳ್ಳುವ ಜವಾಬ್ದಾರಿ ಹೊಂದಿರುತ್ತದೆ. ರಾಷ್ಟ್ರೀಯ ಸ್ವಚ್ಛ ಗಾಳಿ ಕಾರ್ಯಕ್ರಮದಡಿ ಬೆಂಗಳೂರಿನ ಗಾಳಿಯ ಗುಣಮಟ್ಟವನ್ನು ಕಾಲಕಾಲಕ್ಕೆ ಪರಿಶೀಲಿಸಲಾಗುತ್ತಿದೆ. ಯಂತ್ರಗಳ ಮೂಲಕ ರಸ್ತೆ ಗುಡಿಸುವ ಯೋಜನೆಯಿಂದ ಸಾರ್ವಜನಿಕ ಸಂಚಾರ ಸುಧಾರಣೆಯಾಗಿ, ನಾಗರಿಕರ ಆರೋಗ್ಯ, ಪರಿಸರ, ರಸ್ತೆ ಸ್ವಚ್ಛತೆ, ವಾಯುಗುಣಮಟ್ಟ ಸುಧಾರಣೆಗೆ ಪರಿಹಾರವನ್ನು ಅತ್ಯಂತ ಪರಿಣಾಮಕಾರಿಯಾಗಿ ಕಂಡು ಕೊಳ್ಳಬಹುದು ಎಂದು ತಿಳಿಸಿದರು.

ಜಿಬಿಎ ಕಾಯ್ದೆ ತಿದ್ದುಪಡಿ: ಸರ್ಕಾರದ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರನ್ನು ಜಿಬಿಎ ಸದಸ್ಯರನ್ನಾಗಿ ಸೇರಿಸಲು ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ-2024ಕ್ಕೆ ತಿದ್ದುಪಡಿ ತರಬೇಕು. ಈ ಮಸೂದೆಯನ್ನು ಮುಂದಿನ ಅಧಿವೇಶನದಲ್ಲಿ ಮಂಡಿಸಲಾಗುತ್ತದೆ ಎಂದು ಪಾಟೀಲ ತಿಳಿಸಿದರು.

ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್ತಿನ ಸದಸ್ಯರನ್ನು ಜಿಬಿಎಗೆ ಸದಸ್ಯರನ್ನಾಗಿ ಸುವ ಬಗ್ಗೆ ಹೆಚ್ಚಿನ ಸ್ಪಷ್ಟತೆಯನ್ನೂ ಈ ತಿದ್ದುಪಡಿ ಒಳಗೊಳ್ಳಲಿದೆ. ಜಿಬಿಎ ಕಾರ್ಯಕಾರಿ ಸಮಿತಿಗೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರನ್ನೂ ಸೇರಿಸಲಾಗುವುದು ಎಂದರು.

ಯಾವ ನಗರದಲ್ಲಿ ಎಷ್ಟು ವೆಚ್ಚ?

ನಗರ	ಪ್ರತಿ ಕಿ.ಮೀ ರಸ್ತೆಗೆ ವಾಹನ ಬಾಡಿಗೆ
ಪಟ್ನಾ	₹1,432
ಮೊಹಾಲಿ	₹1,220
ಭುವನೇಶ್ವರ	₹946.12
ಪುಣೆ	₹1,180



ಯಂತ್ರಗಳ ಮೂಲಕ ಕಸ ಗುಡಿಸುವ ರಸ್ತೆಗಳ ವಿವರ

ನಗರ ಪಾಲಿಕೆ	ರಸ್ತೆಗಳ ಉದ್ದ (ಕಿ.ಮೀ)	ಕಸಗುಡಿಸುವ ರಸ್ತೆ ಉದ್ದ	ಕಸಗುಡಿಸುವ ಯಂತ್ರಗಳು	ಪ್ರತಿ ಕಿ.ಮೀಗೆ ಬಾಡಿಗೆ ವೆಚ್ಚ
ಕೇಂದ್ರ	298	832	10	₹894.53
ಪೂರ್ವ	310	870	11	
ಪಶ್ಚಿಮ	390	1090	14	
ಉತ್ತರ	370	1034	13	
ದಕ್ಷಿಣ	320	894	11	
ಒಟ್ಟು	1,688	4,720	59	

ತಾಂತ್ರಿಕ ಸಮಿತಿಯ ಆಕ್ಷೇಪ

‘ಯಂತ್ರಗಳ ಮೂಲಕ ರಸ್ತೆ ಕಸ ಗುಡಿಸುವ ಯೋಜನೆಯಲ್ಲಿ ಪ್ರಸ್ತಾವಿತ ಯಂತ್ರಗಳ ಬಾಡಿಗೆ ದರಗಳನ್ನು ಕೇವಲ ಎರಡು ಸಂಸ್ಥೆಗಳಿಂದ ಅನೌಪಚಾರಿಕವಾಗಿ ಪಡೆದು, ತುಲನೆ ಮಾಡಿ ನಿಗದಿ ಮಾಡಿರುವುದು ಅವಾಸ್ತವಿಕ’ ಎಂದು ತಜ್ಞರ ತಾಂತ್ರಿಕ ವರದಿಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ (ಕೆಯುಡಬ್ಲ್ಯುಎಸ್‌ಡಿಬಿ) ವ್ಯವಸ್ಥಾಪಕ ನಿರ್ದೇಶಕ ಸೆಲ್ವಮಣಿ ಅವರ ಅಧ್ಯಕ್ಷತೆಯಲ್ಲಿ ಈ ತಜ್ಞರ ಸಮಿತಿಯಲ್ಲಿ, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದ (ಕೆಯುಐಡಿಎಫ್‌ಸಿ) ಮುಖ್ಯ ಎಂಜಿನಿಯರ್ ಜೆ.ಆರ್. ಸಂದೀಪ್ ಹಾಗೂ ಲೋಕೋಪಯೋಗಿ ಇಲಾಖೆಯ ಬೆಂಗಳೂರು ದಕ್ಷಿಣ (ಸಿಆರ್‌ಡಿಬಿ) ಮುಖ್ಯ ಎಂಜಿನಿಯರ್ ಮಂಜಪ್ಪ ಅವರು ಸದಸ್ಯರಾಗಿದ್ದರು.

‘ಇತರ ಯಾವುದೇ ನಗರಗಳಲ್ಲಿ ಈ ಮಾದರಿ ಅಳವಡಿಸಿಕೊಂಡಿರುವ ಬಗ್ಗೆ ಮಾಹಿತಿ ಲಭ್ಯವಿಲ್ಲ. ಅಂತಹ ಮಾದರಿಗಳನ್ನು ತುಲನೆ ಮಾಡಿ, ಅವುಗಳಲ್ಲಿ ಅತ್ಯುತ್ತಮ ಮಾದರಿಗಳನ್ನು ಅನುಸರಿಸಲು ಕ್ರಮ ಕೈಗೊಳ್ಳಬೇಕು. ಹಾಗಾಗಿ ಪ್ರತಿ ಯಂತ್ರಗಳ ಮೇಲೆ ನಿಗಾವಹಿಸಿ ಕಾರ್ಯ ನಿರ್ವಹಿಸುವುದು ಕಾರ್ಯಸಾಧುವಲ್ಲ. 46 ಯಂತ್ರಗಳಿಗೆ ಒಂದೇ ಬಾರಿಗೆ ಮೂಲ ಬಂಡವಾಳವನ್ನು ಭರಿಸಲು ಸಾಧ್ಯವಾಗದಿದ್ದಲ್ಲಿ ಮಾತ್ರ ಎರಡನೇ ಆಯ್ಕೆಯಾದ ‘ಬಾಡಿಗೆ ಮಾದರಿ’ಯನ್ನು ಕೊನೆಯದಾಗಿ ಪರಿಗಣಿಸಬಹುದು’ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಅದಾನಿ, ದಿಲಿಪ್, ಆರ್‌ವಿಎನ್‌ಎಲ್ ಆಸಕ್ತಿ

● ನವೀನ್ ಮಿನೇಜಸ್

ಬೆಂಗಳೂರು: ಹೆಬ್ಬಾಳ ಜಂಕ್ಷನ್‌ನಿಂದ ಸಿಲ್ಕ್ ಬೋರ್ಡ್‌ವರೆಗಿನ ಸುರಂಗ ರಸ್ತೆ ಯೋಜನೆಯ ಟೆಂಡರ್‌ನಲ್ಲಿ ಪ್ರಮುಖ ಮೂಲಸೌಕರ್ಯ ಕಂಪನಿಗಳಾದ ಅದಾನಿ ಗ್ರೂಪ್, ದಿಲಿಪ್ ಬಿಲ್ಡ್‌ಕಾನ್, ವಿಶ್ವ ಸಮುದ್ರ ಎಂಜಿನಿಯರಿಂಗ್, ರೈಲ್ ವಿಕಾಸ್ ನಿಗಮ್ ಲಿಮಿಟೆಡ್ (ಆರ್‌ವಿಎನ್‌ಎಲ್) ಬಿಡ್ ಸಲ್ಲಿಸಿವೆ.

16.74 ಕಿ.ಮೀ ಉದ್ದದ ₹17,800 ಕೋಟಿ ವೆಚ್ಚದ ಸುರಂಗ ರಸ್ತೆಗೆ ಬಿಜೆಪಿ ನಾಯಕರ ವಿರೋಧದ ನಡುವೆಯೂ ಅಗ್ರ ಸಾಲಿನಲ್ಲಿರುವ ಸಂಸ್ಥೆಗಳು ಆಸಕ್ತಿ ತೋರಿವೆ.

ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ನಿಯಮಿತ (ಬಿ–ಸ್ಮೈಲ್) ನಾಲ್ಕು ಬಾರಿ ಟೆಂಡರ್ ಅವಧಿಯನ್ನು ವಿಸ್ತರಿಸಿತ್ತು. ನಾಲ್ಕು ಸಂಸ್ಥೆಗಳು ನವೆಂಬರ್ 11ರ ಗಡುವಿನ ಒಳಗೆ ಬಿಡ್ ಸಲ್ಲಿಸಿವೆ ಎಂದು ಅಧಿಕಾರಿಗಳು ತಿಳಿಸಿದರು.

ಹಿಮಾಲಯದಲ್ಲಿ 200 ಕಿ.ಮೀ ಸುರಂಗ ರಸ್ತೆಯನ್ನು ನಿರ್ಮಿಸಿ ಅನುಭವ ಹೊಂದಿರುವ ಸರ್ಕಾರಿ ಸ್ವಾಮ್ಯದ ಆರ್‌ವಿಎನ್‌ಎಲ್, ಬೃಹತ್ ಹೆದ್ದಾರಿ ಯೋಜನೆಗಳನ್ನು ನಿರ್ವಹಿಸಿರುವ ಅದಾನಿ ಗ್ರೂಪ್ ಮತ್ತು ರಸ್ತೆ ನಿರ್ಮಾಣ ವಲಯದಲ್ಲಿ ದೀರ್ಘ ಕಾಲದಿಂದ ಹೆಸರುವಾಸಿಯಾಗಿರುವ ದಿಲಿಪ್ ಬಿಲ್ಡ್‌ಕಾನ್ ಬಿಡ್ ಸಲ್ಲಿಸಿವೆ.

ಬಿಡ್ ಪ್ರಕ್ರಿಯೆಯಲ್ಲಿ ಕಂಪನಿಗಳು ಗಂಭೀರವಾಗಿ ಭಾಗವಹಿಸಿದ್ದು, ₹44 ಕೋಟಿ ಬ್ಯಾಂಕ್ ಖಾತರಿಯನ್ನೂ ನೀಡಿವೆ. ಹೆಬ್ಬಾಳದಿಂದ ಶೇಷಾದ್ರಿ ರಸ್ತೆ, ಶೇಷಾದ್ರಿ ರಸ್ತೆಯಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್‌ವರೆಗೆ ಎರಡು ಪ್ಯಾಕೇಜ್‌ಗಳಲ್ಲಿ ಬಿ–ಸ್ಮೈಲ್ ಜುಲೈನಲ್ಲಿ ಟೆಂಡರ್ ಆಹ್ವಾನಿಸಿತ್ತು.

ಸುರಂಗ ರಸ್ತೆ ಸಾರ್ವಜನಿಕ–ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯದ್ದಾಗಿದ್ದು, ಸರ್ಕಾರ ಶೇ 40ರಷ್ಟು ಹಣವನ್ನು ಒದಗಿಸುತ್ತದೆ. ಉಳಿದ ಸುಮಾರು ₹10 ಸಾವಿರ ಕೋಟಿಯನ್ನು ಗುತ್ತಿಗೆ ಪಡೆದ ಕಂಪನಿ ಭರಿಸುತ್ತದೆ. 30 ವರ್ಷದ ಅವಧಿಗೆ ಶುಲ್ಕ ಸಂಗ್ರಹಿಸುವ ಷರತ್ತು ಇದ್ದು, ಅದನ್ನು ಇನ್ನೂ 10 ವರ್ಷ ವಿಸ್ತರಿಸಲು ಅವಕಾಶವಿದೆ. ಆರು ಎಕರೆ ಪ್ರದೇಶದಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸಬಹುದಾಗಿದೆ.



ಆಹ್ವಾನ ಫೌಂಡೇಷನ್ ‘ಲಕ್ಷ್ಯ’ ಯೋಜನೆಯಡಿ ಪ್ರತಿಭಾವಂತ ಮಕ್ಕಳಿಗೆ ಆರ್ಥಿಕ ನೆರವು ನೀಡಿತು

‘ಲಕ್ಷ್ಯ’ ಯೋಜನೆಗೆ ಚಾಲನೆ

ಬೆಂಗಳೂರು: ಯುವಪ್ರತಿಭೆಗಳ ಕನಸು ನನಸುಗೊಳಿಸಲು ಬೇಕಾದ ಮಾರ್ಗದರ್ಶನ ಮತ್ತು ಸಂಪನ್ಮೂಲ ಒದಗಿಸಲು ಆಹ್ವಾನ ಫೌಂಡೇಷನ್ ‘ಲಕ್ಷ್ಯ’ ಎಂಬ ಹೊಸ ಯೋಜನೆಯನ್ನು ಗುರುವಾರ ಆರಂಭಿಸಿದೆ.

ಈ ಕಾರ್ಯಕ್ರಮದ ಮೂಲಕ ವರ್ಷಕ್ಕೆ 300ಕ್ಕೂ ಹೆಚ್ಚು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲು ಉದ್ದೇಶಿಸಿದೆ. ಆರ್ಥಿಕ ಅಸಮಾನತೆ ಮತ್ತು ಗುಣಮಟ್ಟದ ಶಿಕ್ಷಣದ ಅಭಾವದಿಂದಾಗಿ ಅನೇಕ ಪ್ರತಿಭಾವಂತ ಮಕ್ಕಳಿಗೆ ನೈಜ ಸಾಮರ್ಥ್ಯವನ್ನು ತೋರಿಸಲು ಸಾಧ್ಯವಾಗುವುದಿಲ್ಲ. ಅವರ ಕನಸುಗಳಿಗೆ ಅವರ ಪರಿಸ್ಥಿತಿಯೇ ಅಡ್ಡಿಯಾಗುತ್ತಿದೆ. ಇದನ್ನು ಹೋಗಲಾಡಿಸಲು ‘ಲಕ್ಷ್ಯ’ ಜನ್ಮ ತಾಳಿದೆ ಎಂದು ಫೌಂಡೇಷನ್‌ನವರು ಮಾಹಿತಿ ನೀಡಿದ್ದಾರೆ.

ಆಹ್ವಾನ ಫೌಂಡೇಷನ್ ಸಂಸ್ಥಾಪಕ ಬೃಜ್‌ಕಿಶೋರ್ ಪ್ರಧಾನ್ ಮಾತನಾಡಿ, ‘ಪ್ರತಿಯೊಬ್ಬರಿಗೂ ಸರಿಯಾದ ಮಾರ್ಗದರ್ಶನ, ಸಂಪನ್ಮೂಲ ಮತ್ತು ಬೆಂಬಲ ಒದಗಿಸಲು ಬದ್ಧರಾಗಿದ್ದೇವೆ’ ಎಂದು ತಿಳಿಸಿದರು. ಶಾಸಕ ಉದಯ ಗರುಡಾಚಾರ್, ಪೊಲೀಸ್ ಮಹಾನಿರ್ದೇಶಕ ಪ್ರಣವ್ ಮೊಹಾಂತಿ, ನಟ ಸುಚೇಂದ್ರ ಪ್ರಸಾದ್, ಡಿಸಿಪಿ ಮಂಜುನಾಥ್ ಬಾಬು, ಶಾಸ್ತ್ರಿ ಆಯುರ್ಧಾಮ ಆಸ್ಪತ್ರೆಯ ಮುಖ್ಯ ಸಲಹೆಗಾರ ಸಿ.ಎ. ಕಿಶೋರ್ ಭಾಗವಹಿಸಿದ್ದರು.

ಚಿತ್ರನಟನ ಹೆಸರು ಹೇಳಿ ವಂಚನೆ

ಐವರ ವಿರುದ್ಧ ಸೋಲದೇವನಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್ಐಆರ್

ಪ್ರಜಾವಾಣಿ ವಾರ್ತೆ

ಪೀಣ್ಯದಾಸರಹಳ್ಳಿ: ಚಿತ್ರನಟರೊಬ್ಬರ ಹೆಸರು ಹೇಳಿಕೊಂಡು ನಿವೇಶನ ಕೊಡಿಸುವುದಾಗಿ ನಂಬಿಸಿ ವಂಚಿಸಿದ್ದ ಆರೋಪದಡಿ ಐವರ ವಿರುದ್ಧ ಸೋಲದೇವನ-ಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ನರಸಿಂಹ

ಸುಕನ್ಯಾ, ನರಸಿಂಹ, ರಾಮಣ್ಣ, ಉಮಾ, ಮಂಜುಳಾ ಎಂಬುವವರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ಹೇಳಿದರು.

'ಲಕ್ಷ್ಮಿ ಪ್ರಸಾದ್ ಫೈನಾನ್ಸ್ ಹೆಸರಿನಲ್ಲಿ ಲೇವಾದೇವಿ ವ್ಯವಹಾರ ನಡೆಸುತ್ತಿರುವ ನರಸಿಂಹ ಎಂಬಾತ ಕನ್ನಡ ಚಿತ್ರನಟರೊಬ್ಬರ ಜತೆಗೆ ತೆಗೆಸಿಕೊಂಡಿರುವ ಹಲವು ಫೋಟೊಗಳನ್ನು ದುರುಪಯೋಗ ಪಡಿಸಿಕೊಂಡಿದ್ದಾನೆ. ನಟ ತನಗೆ ತುಂಬಾ ಆಪ್ತರಾಗಿದ್ದಾರೆ ಎಂದು ಗ್ರಾಹಕರನ್ನು ನಂಬಿಸಿ, ನಿವೇಶನ ಕೊಡಿಸುವುದಾಗಿ ಪ್ರಚಾರ ನಡೆಸಿ ಹಣ ಪಡೆದಿದ್ದಾನೆ' ಎಂಬ ಆರೋಪವಿದೆ.

'ಗಂಗಮ್ಮ ಎಂಬುವವರ ಬಳಿ ನಿವೇಶನ ಕೊಡಿಸುವುದಾಗಿ ₹28 ಲಕ್ಷ ಪಡೆದು ವಂಚನೆ ಮಾಡಿರುವ ಬಗ್ಗೆ ದೂರು ದಾಖಲಾಗಿದೆ. ಪೌರಕಾರ್ಮಿಕರ ಬಳಿಯೂ ನರಸಿಂಹ ಹಣ ಪಡೆದು ನಿವೇಶನ ಕೊಡದೆ ವಂಚನೆ ಮಾಡಿದ್ದಾನೆ. ಸುಕನ್ಯಾ ಹಾಗೂ ನರಸಿಂಹ ದೊಡ್ಡಬಳ್ಳಾಪುರದಲ್ಲಿ ಲೇಔಟ್ ನಿರ್ಮಾಣ ಮಾಡಲಾಗಿದೆ ಎಂದು ತೋರಿಸಿದ್ದರು. ನಂತರ, ಹಂತ ಹಂತವಾಗಿ ಹಣ ಪಡೆದು ನಿವೇಶನ ಕೊಡದೇ ಸತಾಯಿಸಿದ್ದ. ಹಣ ವಾಪಸ್ ಕೊಡು ಎಂದು ಕೇಳಿದರೆ, ಹಣ ಮರಳಿಸದೇ ನರಸಿಂಹ ಧಮ್ಕಿ ಹಾಕಿದ್ದ' ಎಂದು ಹಣ ನೀಡಿದವರು ದೂರಿದ್ದಾರೆ.


ಪ್ರಕರಣ ದಾಖಲಿಸಿಕೊಳ್ಳಲು ವಿಳಂಬ ಮಾಡಿದ್ದನ್ನು ಖಂಡಿಸಿ ಹಣ ನೀಡಿದವರು ಸೋಲದೇವನಹಳ್ಳಿ ಠಾಣೆಯ ಎದುರು ಪ್ರತಿಭಟನೆ ನಡೆಸಿದರು

ಪೊಲೀಸ್ ಠಾಣೆಯ ಮುಂದೆ ಪ್ರತಿಭಟನೆ

ಪ್ರಕರಣ ದಾಖಲಿಸಿಕೊಳ್ಳಲು ವಿಳಂಬ ಮಾಡಿದ್ದನ್ನು ಖಂಡಿಸಿ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಸೋಲದೇವನಹಳ್ಳಿ ಪೊಲೀಸ್ ಠಾಣೆಯ ಎದುರು ಪ್ರತಿಭಟನೆ ನಡೆಸಲಾಯಿತು. ಬಳಿಕ ಸೋಲದೇವನಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡರು. 'ನರಸಿಂಹ ಎಂಬಾತ ಮನೆಯ ಎದುರಲ್ಲಿ ವಾಸವಿದ್ದ. ಲೇಔಟ್ ನಿರ್ಮಾಣ ಮಾಡಿದ್ದೇವೆ. ಕಡಿಮೆ ಬೆಲೆಗೆ ನಿವೇಶನ ಕೊಡುತ್ತೇನೆ ಎಂದು ನಂಬಿಸಿ ಹಣ ಪಡೆದು ಈಗ ಮೋಸ ಮಾಡಿದ್ದಾನೆ. ನಟನ ಜನ್ಮದಿನಾಚರಣೆಗೆ ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿದ್ದ. ನನ್ನಂತೆಯೇ ಇನ್ನೂ ಹಲವರಿಗೆ ನಂಬಿಸಿ ಮೋಸ ಮಾಡಿದ್ದಾನೆ. ಹಣ ಕೇಳಿದರೆ ಬೆದರಿಕೆ ಹಾಕಿದ್ದಾನೆ' ಎಂದು ಮಂಗಳಾ ದೂರಿದರು.

ಗಾಂಜಾ ಮಾರಾಟ: ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶವಂತಪುರ ಹಾಗೂ ಆರ್.ಟಿ ನಗರ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ, ಎರಡು ಕೆ.ಜಿ ಗಾಂಜಾ ಜಪ್ತಿ ಮಾಡಿದ್ದು ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

ಯಶವಂತಪುರ ಕೇಂದ್ರೀಯ ವಿದ್ಯಾಲಯದ ಎದುರು ವ್ಯಕ್ತಿಯೊಬ್ಬ ನಿಷೇಧಿತ ವಸ್ತು ಮಾರಾಟ ಮಾಡುತ್ತಿರುವ ಬಗ್ಗೆ ಬಾತ್ಮೀದಾರರಿಂದ ಮಾಹಿತಿ ಬಂದಿತ್ತು. ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದ್ದು, ₹1.20 ಲಕ್ಷ ಮೌಲ್ಯದ ಗಾಂಜಾ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಚಾಮುಂಡಿನಗರದಲ್ಲಿ ಆರ್‌ಟಿ ನಗರ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ, ಗಾಂಜಾ ಮಾರಾಟ ಮಾಡುತ್ತಿದ್ದ ಮೂವರನ್ನು ಬಂಧಿಸಿದ್ದಾರೆ. ಆರೋಪಿಗಳಿಂದ ₹40 ಸಾವಿರ ಮೌಲ್ಯದ ಗಾಂಜಾ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಹೊರರಾಜ್ಯದ ಡ್ರಗ್ಸ್ ಪೆಡ್ಲರ್‌ಗಳಿಂದ ಕಡಿಮೆ ಬೆಲೆಗೆ ಮಾದಕ ವಸ್ತು ಖರೀದಿಸಿ ನಗರದಲ್ಲಿ ಮಾರಾಟ ಮಾಡುತ್ತಿದ್ದರು. ಕೂಲಿ ಕಾರ್ಮಿಕರು, ವಿದ್ಯಾರ್ಥಿಗಳು, ಟೆಕಿಗಳಿಗೆ ಗಾಂಜಾ ಮಾರಾಟ ಮಾಡುತ್ತಿರುವುದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

ತನಿಖೆಗೆ ಸಹಕಾರ: ಸತ್ವ ಗ್ರೂಪ್

ಬೆಂಗಳೂರು: ಆವಲಹಳ್ಳಿ ಪೊಲೀಸ್ ಠಾಣೆಯಲ್ಲಿ ಅ.22ರಂದು ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಗೆ ಸಹಕಾರ ನೀಡಲಾಗುವುದು ಎಂದು ಸತ್ವ ಗ್ರೂಪ್ ತಿಳಿಸಿದೆ. 'ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಗಳ ಎದುರು ನೈಜ ಸಂಗತಿಯನ್ನು ತಿಳಿಸುತ್ತೇವೆ. ಅಶ್ವಿನ್ ಸಂಚೆಟಿ ಹಾಗೂ ಸತ್ವ ಗ್ರೂಪ್ ವಿರುದ್ಧ ದೂರುದಾರರು ಮಾಡಿರುವ ಆರೋಪಗಳಿಗೂ, ವಾಸ್ತವ ಸ್ಥಿತಿಗೂ ವ್ಯತ್ಯಾಸವಿದೆ. ನಮ್ಮ ಬಳಿ ದಾಖಲೆಗಳಿವೆ. ಸತ್ವ ಗ್ರೂಪ್‌ನ ಯಾವುದೇ ಸದಸ್ಯರು ಕಾನೂನುಬಾಹಿರ ಚಟುವಟಿಕೆಯಲ್ಲಿ ಭಾಗಿಯಾಗಿಲ್ಲ' ಎಂದು ಪ್ರಕಟಣೆ ತಿಳಿಸಿದೆ.

ಟ್ರಾವೆಲ್ಸ್ ಕಂಪನಿ ಮಾಲೀಕ ಆತ್ಮಹತ್ಯೆ

ಬೆಂಗಳೂರು: ಚೀಟಿ ವ್ಯವಹಾರದಲ್ಲಿ ನಷ್ಟಕ್ಕೆ ಒಳಗಾದ ಟ್ರಾವೆಲ್ಸ್ ಕಂಪನಿ ಮಾಲೀಕ, ಕೋದಂಡರಾಮಪುರದ ನಿವಾಸಿ ವೆಂಕಟೇಶ್(51) ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸ್ಥಳೀಯರು ಬುಧವಾರ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದಿದ್ದ ಪೊಲೀಸರು, ಕಚೇರಿಯ ಬಾಗಿಲು ತೆರೆದು ನೋಡಿದಾಗ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ.

ವೆಂಕಟೇಶ್ ಅವರು ಬಿಜೆಪಿ ಕಾರ್ಯಕರ್ತರಾಗಿದ್ದರು. ವಿನಾಯಕ ವೃತ್ತದಲ್ಲಿ ಟ್ರಾವೆಲ್ಸ್ ಕಂಪನಿ ಸಹ ನಡೆಸುತ್ತಿದ್ದರು.

ಕಾರು ಗುದ್ದಿಸಿ ದಂಪತಿ ಕೊಲೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರಿನಿಂದ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆಸಿ ದಂಪತಿಯ ಕೊಲೆಗೆ ಯತ್ನಿಸಿದ್ದ ಆರೋಪಿಯನ್ನು ಸದಾಶಿವನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.


ಸುಕೃತ್

ಕೊಡಿಗೇಹಳ್ಳಿ ಬಾಲಾಜಿ ಲೇಔಟ್‌ನ ಸುಕೃತ್ (23) ಬಂಧಿತ.

ಘಟನೆಯಲ್ಲಿ ವಿದ್ಯಾರಣ್ಯಪುರ ನಿವಾಸಿಗಳಾದ ಎ.ವಿನೇತ್ ಹಾಗೂ ಅಂಕಿತಾ ಪಾಟೀಲ್ ದಂಪತಿ ಗಂಭೀರವಾಗಿ ಗಾಯಗೊಂಡಿದ್ದರು. ಅಕ್ಟೋಬರ್ 26ರಂದು ದ್ವಿಚಕ್ರ ವಾಹನದಲ್ಲಿ ತಮ್ಮ ಮಗನೊಂದಿಗೆ ದಂಪತಿ ಇಂದಿರಾನಗರಕ್ಕೆ ತೆರಳಲು ಸದಾಶಿವನಗರ ಜಂಕ್ಷನ್ ಕಡೆಗೆ ತೆರಳುತ್ತಿದ್ದರು. ಅಲ್ಲಿ ವೇಗವಾಗಿ ಬಂದ ಕಾರು, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿತ್ತು. ಜಂಕ್ಷನ್‌ನಲ್ಲಿ ಅಳವಡಿಸಿದ್ದ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿಯನ್ನು ಸದಾಶಿವನಗರ ಸಂಚಾರ ಠಾಣೆಯ ಪೊಲೀಸರು ಪರಿಶೀಲನೆ ನಡೆಸಿದಾಗ ಕಾರು ಚಾಲಕ ಉದ್ದೇಶಪೂರ್ವಕವಾಗಿ ಕೃತ್ಯ ಎಸಗಿರುವುದು ಸಾಬೀತಾಗಿತ್ತು. ಬಳಿಕ, ಪ್ರಕರಣವನ್ನು ಸದಾಶಿವನಗರದ ಕಾನೂನು ಸುವ್ಯವಸ್ಥೆ ಠಾಣೆಗೆ ವರ್ಗಾವಣೆ ಮಾಡಿದ್ದರು. ಕೊಲೆ ಯತ್ನ ಪ್ರಕರಣ ದಾಖಲು ಮಾಡಿಕೊಂಡು ತಿಂಡ್ಲುವಿನ ಬಾಲಾಜಿ ನಗರದಲ್ಲಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು. ಆರೋಪಿ ಕೃತ್ಯಕ್ಕೆ ಬಳಸಿದ ಕಾರು ವಶಕ್ಕೆ ಪಡೆದುಕೊಳ್ಳಲಾಗಿದೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು (**'ಕಕ್ಷಿದಾರರು'**) ಕೆಳಗಿನ **'ಷೆಡ್ಯೂಲ್'**ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ ಸಮಗ್ರವಾಗಿ **'ಷೆಡ್ಯೂಲ್ ಪ್ರಾಪರ್ಟೀ'** ಎನ್ನಲಾಗುವ ಸ್ಥಿರಾಸ್ತಿ ಸಂಬಂಧಿಸಿದಂತೆ, **ಟಾಟಾ ಕನ್ಸೂಮರ್ ಪ್ರಾಡಕ್ಟ್ಸ್ ಲಿಮಿಟೆಡ್**, ನೋಂದಾಯಿತ ಕಚೇರಿ ವಿಳಾಸ ನಂ. 1, ಬಿಷಪ್ ಲೆಫ್ರಾಯ್ ರೋಡ್, ಕೋಲ್ಕತಾ, 700020 ಮತ್ತು ಕಾರ್ಪೊರೇಟ್ ಕಚೇರಿ ವಿಳಾಸ ನಂ. 11/13, ಬೊಟಾವಾಲಾ ಬಿಲ್ಡಿಂಗ್, 1ನೇ ಮಹಡಿ, ಆಫೀಸ್ ನಂ. 2–6, ಹಾರ್ನಿಮನ್ ಸರ್ಕಲ್ ಫೋರ್ಟ್, ಮುಂಬೈ, 400001 (**'ಮಾಲೀಕರು'**) ಇವರೊಂದಿಗೆ ಖರೀದಿ ವ್ಯವಹಾರ ನಡೆಸಲು ಉದ್ದೇಶಿಸಿರುತ್ತಾರೆ. ಸದರಿ ಮಾಲೀಕರು, ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗೆ ತಾವೇ ಸಂಪೂರ್ಣ ಮಾಲೀಕರಾಗಿದ್ದೇವೆ, ಜೊತೆಗೆ ಅದರ ಮೇಲೆ ಅನಿರ್ಬಂಧಿತ ಹಕ್ಕುಗಳನ್ನು ಹೊಂದಿದ್ದೇವೆ ಎಂದು ನಮ್ಮ ಕಕ್ಷಿದಾರರಲ್ಲಿ ಪ್ರತಿಪಾದಿಸಿರುತ್ತಾರೆ.

ಆದ್ದರಿಂದ, ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ, ಮಾಲೀಕರನ್ನು ಹೊರತುಪಡಿಸಿ ಇನ್ಯಾವುದೇ ವ್ಯಕ್ತಿಗಳಿಗೆ ಯಾವುದೇ ಹಕ್ಕು, ಅಧಿಕಾರ, ಚಾರ್ಜ್, ಲೀನ್, ಕ್ಲೇಮ್ ಅಥವಾ ಇನ್ಯಾವುದೇ ಹಿತಾಸಕ್ತಿಗಳಿದ್ದಲ್ಲಿ, ಅಂತಹವರು ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿತ ತಮ್ಮ ಕ್ಲೇಮ್‌ಗಳನ್ನು ಅಥವಾ ಮೇಲ್ಕಂಡ ವ್ಯವಹಾರಕ್ಕೆ ಸಂಬಂಧಿತ ಆಕ್ಷೇಪಣೆಗಳನ್ನು, ಕೆಳಗಿನ ಸಹಿದಾರರಿಗೆ ತಿಳಿಸಬೇಕೆಂದು ಕರೆ ನೀಡಲಾಗಿದೆ. ತಮ್ಮ ಆಕ್ಷೇಪಣೆಗಳನ್ನು ಅಥವಾ ಕ್ಲೇಮ್‌ಗಳನ್ನು ಕಡ್ಡಾಯವಾಗಿ ಲಿಖಿತ ರೂಪದಲ್ಲಿ, ದಾಖಲಾತಿ ಪುರಾವೆಗಳ ಸಮೇತ, ಸದರಿ ಪ್ರಕಟಣೆಯ ದಿನಾಂಕದಿಂದ **15 (ಹದಿನೈದು)** ದಿನಗಳೊಳಗೆ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಸಲ್ಲಿಸುವುದು. ನಿಗದಿತ 15 (ಹದಿನೈದು) ದಿನಗಳ ಅವಧಿಯೊಳಗೆ ಯಾವುದೇ ಕ್ಲೇಮ್‌ಗಳಾಗಲಿ ಅಥವಾ ಆಕ್ಷೇಪಣೆಗಳಾಗಲಿ ಸಲ್ಲಿಕೆಯಾಗದಿದ್ದಲ್ಲಿ, ಸದರಿ ಷೆಡ್ಯೂಲ್ ಪ್ರಾಪರ್ಟಿ ಮೇಲೆ ಉಲ್ಲೇಖಿತ ಮಾಲೀಕರನ್ನು ಹೊರತುಪಡಿಸಿ, ಇನ್ಯಾವುದೇ ಅನ್ಯರ ಹಕ್ಕು, ಅಧಿಕಾರ, ಚಾರ್ಜ್, ಲೀನ್, ಕ್ಲೇಮ್ ಅಥವಾ ಹಿತಾಸಕ್ತಿಗಳು ಇರುವುದಿಲ್ಲವೆಂದು ಪರಿಗಣಿಸಲಾಗುತ್ತದೆ. ಮುಂದುವರಿದಂತೆ, ಒಂದು ವೇಳೆ 15 (ಹದಿನೈದು) ದಿನಗಳ ಅವಧಿಯೊಳಗೆ ಸಲ್ಲಿಕೆಯಾಗದಿರುವ ಯಾವುದೇ ಕ್ಲೇಮ್ ಅಥವಾ ಆರೋಪಿತ ಹಿತಾಸಕ್ತಿಗಳು ಎದುರಾದಲ್ಲಿ, ಅಂತಹವುಗಳನ್ನು ವಿವೇಚನಾತ್ಮಕವಾಗಿ ಕೈಬಿಡಲಾಗುತ್ತದೆ ಹಾಗೂ ಅವುಗಳನ್ನು ಎಲ್ಲಾ ಉದ್ದೇಶಗಳಲ್ಲೂ ಕಡೆಗಣಿಸಲಾಗುತ್ತದೆ ಮತ್ತು ಅವುಗಳು ನಮ್ಮ ಕಕ್ಷಿದಾರರ ಮೇಲೆ ಯಾವುದೇ ನಿರ್ಬಂಧಗಳನ್ನು ರೂಪಿಸಲಾರವು ಹಾಗೂ ನಮ್ಮ ಕಕ್ಷಿದಾರರು, ಸದರಿ ಷೆಡ್ಯೂಲ್ ಪ್ರಾಪರ್ಟಿಯ ಸಂಬಂಧಿತ ವ್ಯವಹಾರವನ್ನು ಪೂರ್ಣಗೊಳಿಸಿಕೊಳ್ಳಲು ಸ್ವತಂತ್ರರಾಗುತ್ತಾರೆ.

ಷೆಡ್ಯೂಲ್

(ಷೆಡ್ಯೂಲ್ ಪ್ರಾಪರ್ಟಿ ವಿವರ)

ರೈಲ್ವೆ ಪ್ಯಾರಲೆಲ್ ರಸ್ತೆ, ಕುಮಾರ ಪಾರ್ಕ್ ವೆಸ್ಟ್, ಬೆಂಗಳೂರು, 560020 ವಿಳಾಸದಲ್ಲಿರುವ, ಮುನಿಸಿಪಲ್ ನಂ. 57, ಇ–ಪಿಐಡಿ ನಂ. 4083975326 (ಹಳೆಯ ಸೈಟ್ ನಂ. 1, ಬ್ಲಾಕ್ 1, ಕುಮಾರ ಪಾರ್ಕ್ ವೆಸ್ಟ್ ಎಕ್ಸ್‌ಟೆನ್ಷನ್) ಹೊಂದಿರುವ, 1061.97 ಚದರ ಮೀಟರ್/11431 ಚದರ ಅಡಿ ವಿಸ್ತೀರ್ಣದಲ್ಲಿ, ತಳಮಹಡಿ, ನೆಲಮಹಡಿ, ಮೆಝನೈನ್ ಫ್ಲೋರ್, ಮೊದಲ ಮಹಡಿ, ಎರಡನೇ ಮಹಡಿ, ಮೂರನೇ ಮಹಡಿ ಮತ್ತು ಟೆರೇಸ್ ಫ್ಲೋರ್‌ಗಳುಳ್ಳ, ಸುಮಾರು 2,339.59 ಚದರ ಮೀಟರ್ ವಿಸ್ತೀರ್ಣದ ನಿರ್ಮಿತ ಪ್ರದೇಶವುಳ್ಳ ವಾಣಿಜ್ಯ ಕಟ್ಟಡ ಸ್ಥಿರಾಸ್ತಿಯ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:

ಪೂರ್ವಕ್ಕೆ : ರೈಲ್ವೆ ಪ್ಯಾರಲೆಲ್ ರಸ್ತೆ;
ಪಶ್ಚಿಮಕ್ಕೆ : ಖಾಸಗಿ ಸ್ವತ್ತು;
ಉತ್ತರಕೆ : ಮುನಿಸಿಪಲ್ ನಂ. 58 ಹೊಂದಿರುವ ಸ್ವತ್ತು; ಮತ್ತು
ದಕ್ಷಿಣಕ್ಕೆ : ಎಕ್ಸ್‌ಪ್ಲೋರಾ ಮಾರ್ಬಲ್ಸ್‌ಗೆ ಸಂಪರ್ಕ ರಸ್ತೆ.

ದಿನಾಂಕ: 14.11.2025
ಸ್ಥಳ: ಬೆಂಗಳೂರು.

ಶ್ರೀಮತಿ. ಬ್ರಿಜಿತಾ ಪ್ರಕಾಶ್
ಪಾಲುದಾರರು
ಜೆ. ಸಾಗರ್ ಅಸೋಸಿಯೇಟ್ಸ್
ವಕೀಲರು ಮತ್ತು ಸಾಲಿಸಿಟರ್ಸ್
18ನೇ ಮಹಡಿ, ಎಸ್‌ಕೆವಿ 909, ನಂ. 9/1, ರೆಸಿಡೆನ್ಸಿ ರಸ್ತೆ, ರಿಚ್ಮಂಡ್ ವೃತ್ತ, ಬೆಂಗಳೂರು, 560 025.
ಫೋನ್: 080–4350 3600/080–4350 3676
ಇಮೇಲ್: brijita.prakash@jsalaw.com

PRESTIGE ESTATES PROJECTS LIMITED

CIN: L07010KA1997PLC022322
Regd. Office: Prestige Falcon Tower, No.19, Brunton Road, Bangalore-560 025
Email: investors@prestigeconstructions.com Website: www.prestigeconstructions.com
Phone - + 91 8025591080

UNAUDITED STANDALONE AND CONSOLIDATED FINANCIAL RESULTS FOR THE QUARTER AND HALF YEAR ENDED SEPTEMBER 30, 2025

The unaudited Standalone and Consolidated Financial Results of Prestige Estates Projects Limited ("the Company") along with the Limited Review Reports of the Statutory Auditors of the Company for the quarter and half year ended September 30, 2025 have been reviewed by the Audit Committee and approved by Board of Directors of the Company at their Meeting held on November 12, 2025, in terms of Regulation 33 of SEBI (Listing Obligations and Disclosure Requirements) Regulations, 2015.

The aforementioned financial results along with the Limited Review Reports of the Statutory Auditors thereon are available on the website of BSE Limited (BSE) (www.bseindia.com) and National Stock Exchange of India Limited (NSE) (www.nseindia.com) and on the Company's website at https://prestigecorporatesite.s3.ap-south-1.amazonaws.com/investors/financial-performance/fy-2025-2026/Q2-Results-25-26.pdf The same can also be accessed by scanning the QR Code provided below:

Place: Bengaluru
Date: November 12, 2025

By order of the Board of
Prestige Estates Projects Limited
Sd/-
Irfan Razack
Chairman and Managing Director
DIN: 00209022

SANSERA ENGINEERING LIMITED

SANSERA ideas@work

CIN: L34103KA1981PLC004542
Registered Address: Plant-7, No.143/A, Jigani Link Road, Bommasandra Industrial Area, Bengaluru - 560105
Phone: 080 27839081/82/83; **Fax:** 080 27839309; **Email:** rajesh.modi@sansera.in; **Website:** www.sansera.in

UNAUDITED FINANCIAL RESULTS FOR THE QUARTER ENDED SEPTEMBER 30, 2025

The Board of Directors at the meeting held on November 12, 2025, approved the unaudited financial results of the Company for the quarter ended September 30, 2025.

The results and the Limited Review Report with unmodified opinion issued by the Statutory Auditors of the Company have been posted on the Company's website: www.sansera.in and can be accessed by scanning the below QR code.

Place:Bengaluru
Date: November 12, 2025

On Behalf of the Board
S Sekhar Vasan
Chairman & Managing Director

***Note:** The above information is in accordance with Regulation 33 read with Regulation 47(1) of the SEBI (Listing Obligations and Disclosure Requirements) Regulations 2015.*

ಯೂನಿಮೆಕ್ ಏರೋಸ್ಪೇಸ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಲಿಮಿಟೆಡ್

(ಹಿಂದೆ ಯೂನಿಮೆಕ್ ಏರೋಸ್ಪೇಸ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಪ್ರೈವೇಟ್ ಲಿಮಿಟೆಡ್)
538, 539, 542 & 543, ಪೀಣ್ಯ 4ನೇ ಹಂತದ ಕೈಗಾರಿಕಾ ಪ್ರದೇಶದ 7ನೇ ಮುಖ್ಯ ರಸ್ತೆ,
ಯಶವಂತಪುರ ಹೋಬಳಿ, ಬೆಂಗಳೂರು, ಬೆಂಗಳೂರು ಉತ್ತರ ತಾಲ್ಲೂಕು, ಕರ್ನಾಟಕ, ಭಾರತ, 560058
ISO 9001-2015 & AS 9100 Rev D ಪ್ರಮಾಣೀಕರಿಸಲಾಗಿದೆ
GSTIN: 29AABCU9719Q1ZC CIN: L30305KA2016PLC095712
companysecretary@unimechaerospace.com ದೂರವಾಣಿ: 080-42046782,
www.unimechaerospace.com

ಸೆಪ್ಟೆಂಬರ್ 30, 2025 ಕ್ಕೆ ಕೊನೆಗೊಂಡ ತ್ರೈಮಾಸಿಕ ಕ್ರೋಢೀಕೃತ ಲೆಕ್ಕಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶಗಳ ವಿವರ

(ರೂ. ಲಕ್ಷಗಳಲ್ಲಿ)

ವಿವರಗಳು	3 ತಿಂಗಳುಗಳಿಗೆ ಕೊನೆಗೊಂಡ	ಅರ್ಧ ವಾರ್ಷಿಕಕ್ಕೆ ಕೊನೆಗೊಂಡ	ಹಿಂದಿನ ವರ್ಷಕ್ಕೆ ಕೊನೆಗೊಂಡ	ಹಿಂದಿನ ವರ್ಷಕ್ಕೆ ಕೊನೆಗೊಂಡ 3ತಿಂಗಳುಗಳಿಗೆ ಅನುಗುಣವಾಗಿ
	30.09.2025	30.09.2025	31.03.2025	30.09.2024
	(ಪರಿಶೋಧಿತವಲ್ಲದ)	(ಪರಿಶೋಧಿತವಲ್ಲದ)	(ಪರಿಶೋಧಿತ)	(ಪರಿಶೋಧಿತವಲ್ಲದ)
ಒಟ್ಟು ಆದಾಯ	7,184.77	14627.43	26769.25	6652.90
ಅವಧಿಯ ನಿವ್ವಳ ಲಾಭ/ನಷ್ಟ (ತೆರಿಗೆಯ ಮೊದಲು)	2067.76	4487.76	10189.54	2481.51
ಅವಧಿಯ ನಿವ್ವಳ ಲಾಭ/ನಷ್ಟ ತೆರಿಗೆಯ ನಂತರ	1567.09	3479.52	8345.66	1805.16
ಒಟ್ಟಾರೆ ವ್ಯಾಪಕ ಅವಧಿಯ ಆದಾಯ [ಅವಧಿಯ ಲಾಭ (ತೆರಿಗೆಯ ನಂತರ) ಮತ್ತು ಇತರ ವ್ಯಾಪಕ ಆದಾಯ (ತೆರಿಗೆಯ ನಂತರ)ಗಳನ್ನು ಒಳಗೊಂಡಿರುವ]	1595.33	3484.66	8253.79	1800.86
ಈಕ್ವಿಟಿ ಷೇರು ಬಂಡವಾಳ	2542.84	2542.84	2542.84	2383.61
ಪ್ರತಿ ಷೇರಿಗೆ ಗಳಿಕೆ (ಪ್ರತಿ ರೂ. 5/-)				
1. ಮೂಲ:	3.08	6.84	17.59	3.96
2 .ದುರ್ಬಲ:	3.08	6.83	17.59	3.96
ಟಿಪ್ಪಣಿಗಳು:				
1. ಪ್ರಮುಖ ಪ್ರತ್ಯೇಕ ವಿವರಗಳು				
ಒಟ್ಟು ಆದಾಯ	2538.33	4825.39	6394.26	1909.86
ಲಾಭ ತೆರಿಗೆಯ ಮೊದಲು	880.34	2060.92	2632.02	908.07
ಲಾಭ ತೆರಿಗೆಯ ನಂತರ	593.74	1479.94	1908.16	534.77
ಒಟ್ಟಾರೆ ವ್ಯಾಪಕ ಅವಧಿಯ ಆದಾಯ [ಅವಧಿಯ ಲಾಭ (ತೆರಿಗೆಯ ನಂತರ) ಮತ್ತು ಇತರ ವ್ಯಾಪಕ ಆದಾಯ (ತೆರಿಗೆಯ ನಂತರ)ಗಳನ್ನು ಒಳಗೊಂಡಿರುವ]	603.95	1486.09	1893.49	537.69

2. ಮೇಲಿನವು ಸೆಪ್ಟೆಂಬರ್ 30, 2025 ಕ್ಕೆ ಕೊನೆಗೊಂಡ ಅವಧಿಗೆ ಲೆಕ್ಕಪರಿಶೋಧನೆಯಾಗದ ಹಣಕಾಸು ಫಲಿತಾಂಶಗಳ ವಿವರವಾದ ಸ್ವರೂಪದ ಸಾರವಾಗಿದ್ದು, SEBI (LODR) ನಿಯಮಗಳು, 2015ರ ನಿಯಮ 33ರ ಅಡಿಯಲ್ಲಿ ಸ್ಟಾಕ್ ಎಕ್ಸ್ಚೇಂಜ್‌ಗೆ ಸಲ್ಲಿಸಲಾಗಿದೆ. ತ್ರೈಮಾಸಿಕ ಹಣಕಾಸು ಫಲಿತಾಂಶಗಳ ಸಂಪೂರ್ಣ ಸ್ವರೂಪವು BSE ಮತ್ತು NSE ವೆಬ್‌ಸೈಟ್ ಮತ್ತು ಕಂಪನಿಯ ವೆಬ್‌ಸೈಟ್ www.unimechaerospace.com ನಲ್ಲಿ ಲಭ್ಯವಿದೆ.
3. ಕಂಪನಿಯ ಲೆಕ್ಕಪರಿಶೋಧನೆಯಾಗದ ಹಣಕಾಸು ಫಲಿತಾಂಶಗಳನ್ನು ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 133ರ ಅಡಿಯಲ್ಲಿ ಸೂಚಿಸಲಾದ ಭಾರತೀಯ ಲೆಕ್ಕಪತ್ರ ಮಾನದಂಡಗಳು ("Ind AS") ಮತ್ತು 2015ರ ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ನಿಯಮಗಳೊಂದಿಗೆ ತಿದ್ದುಪಡಿ ಮಾಡಿದಂತೆ ಓದಲಾಗಿದೆ.
4. ಮೇಲಿನ ಹಣಕಾಸು ಫಲಿತಾಂಶಗಳನ್ನು ಆಡಿಟ್ ಸಮಿತಿಯು ಶಿಫಾರಸು ಮಾಡಿದೆ ಮತ್ತು ನವೆಂಬರ್ 12, 2025 ರಂದು ನಡೆದ ಆಯಾ ಸಭೆಗಳಲ್ಲಿ ನಿರ್ದೇಶಕರ ಮಂಡಳಿಯು ಅನುಮೋದಿಸಿದೆ.
5. ಕೆಳಗಿನ QR ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕವೂ ಸಂಪೂರ್ಣ ಫಲಿತಾಂಶಗಳನ್ನು ಪ್ರವೇಶಿಸಬಹುದು:

ಸ್ಥಳ : ಬೆಂಗಳೂರು
ದಿನಾಂಕ : ನವೆಂಬರ್ 13, 2025

ನಿರ್ದೇಶಕರ ಪರ ಮತ್ತು ಮಂಡಳಿಯ ಪರವಾಗಿ
ಯುನಿಮೆಕ್ ಏರೋಸ್ಪೇಸ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಲಿಮಿಟೆಡ್
ಅನಿಲ್ ಕುಮಾರ್ ಪಿ
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು

AXISCADES Technologies Limited

CIN : L72200KA1990PLC084435
Regd. Office : Block C, Second Floor, Kirloskar Business Park, Bengaluru - 560024, Karnataka, India
Website: www.axiscades.com | Email: info@axiscades.com | Tel : +91 80 4193 9000 | Fax : +91 80 4193 9099

Statement of Unaudited Consolidated Financial Results for the Quarter and Half Year Ended September 30, 2025

(₹ in Lacs)

Particulars	Quarter Ended			Half Year Ended		Year Ended
	30 Sept. 2025 (Unaudited)	30 June 2025 (Unaudited)	30 Sept. 2024 (Unaudited)	30 Sept. 2025 (Unaudited)	30 Sept. 2024 (Unaudited)	31 March 2025 Audited
Total income	30,500.34	25,430.04	26,903.12	55,930.38	50,281.03	1,05,157.27
EBITDA*	4,708.54	3,406.17	3,290.08	8,114.71	6,394.71	14,244.49
Finance Costs	655.35	731.71	856.91	1,387.06	1,663.70	3,229.70
Depreciation and Amortisation expense	1,021.01	936.01	993.57	1,957.02	1,921.70	3,959.88
Net Profit for the period (before tax, Exceptional and /or Extraordinary items)	3,626.63	2,797.92	1,909.84	6,424.55	4,331.86	9,139.81
Share in net loss of associate	(0.45)	(0.08)	(0.35)	(0.53)	(1.09)	(2.37)
Exceptional items, net	-	-	(34.39)	-	(34.39)	(385.87)
Net Profit / (Loss) for the period before tax (after Exceptional and / or Extraordinary items)	3,626.18	2,797.84	1,875.10	6,424.02	4,296.38	8,751.57
Net Profit / (Loss) for the period after tax (after Exceptional and / or Extraordinary items)	2,312.79	2,086.00	1,225.10	4,398.79	2,902.33	7,528.40
Total Comprehensive Income for the period [Comprising Profit / (Loss) for the period (after tax) and Other Comprehensive Income (after tax)]	2,245.50	1,849.44	1,232.70	4,094.94	2,877.81	7,202.80
Equity Share Capital	2,126.41	2,126.41	2,113.49	2,126.41	2,113.49	2,126.41
Reserves (Excluding Revaluation Reserve) as shown in the Audited Balance Sheet of the previous year	-	-	-	-	-	62,779.30
Earnings Per Share (of Rs. 5/- each) (For continuing and discontinued operations) -						
1. Basic:	5.42	4.88	2.93	10.30	7.00	17.76
2. Diluted:	5.36	4.85	2.86	10.21	6.67	17.22

1. In terms of Regulation 33 of the SEBI (Listing Obligations and Disclosure Requirements) Regulations 2015, the aforesaid Statement of unaudited consolidated financial results for the quarter and half year ended September 30, 2025 of AXISCADES Technologies Limited (the "Holding Company" or the "Company"), its subsidiaries (the Holding Company and its subsidiaries together hereinafter referred to as "the Group") and its associate has been reviewed by the Audit Committee and approved by the Board of Directors at their meeting held on November 12, 2025. The aforesaid unaudited consolidated financial results for the quarter and half year ended September 30, 2025 have been reviewed by statutory auditors of the Company.
2. The unaudited consolidated financial results have been prepared in accordance with the recognition and measurement principles laid down in the applicable Indian Accounting Standards ("Ind AS") as prescribed under Section 133 of the Companies Act, 2013, as amended, read with relevant rules issued thereunder and in terms of Regulation 33 of the SEBI (Listing Obligations and Disclosure Requirements) Regulations, 2015, as amended from time to time.
3. The previous period / year figures have been regrouped / rearranged wherever necessary to conform with the current period presentation.
4. Additional information on Standalone Financial Results is as follows:

(₹ in Lacs)

Particulars	Quarter Ended			Half Year Ended		Year Ended
	30 Sept. 2025 (Unaudited)	30 June 2025 (Unaudited)	30 Sept. 2024 (Unaudited)	30 Sept. 2025 (Unaudited)	30 Sept. 2024 (Unaudited)	31 March 2025 Audited
Total revenue (including other income)	10,804.47	10,896.59	9,889.94	21,701.06	20,523.37	41,210.99
EBITDA*	937.36	1,315.44	1,421.70	2,252.80	3,653.54	6,697.53
Profit before tax	205.35	725.32	356.47	930.67	2,286.44	3,117.52
Profit after tax	34.57	655.83	253.64	690.40	1,778.77	4,059.41
Total comprehensive income	(198.18)	278.37	215.93	80.19	1,734.76	3,813.24

* Excluding other income.

5. The above unaudited financial results of the Group are available on the Company's website (www.axiscades.com) and also on the website of BSE (www.bseindia.com) and NSE (www.nseindia.com), where the shares of the Company are listed.

Place : Bengaluru
Dated : 12.11.2025


For **AXISCADES Technologies Limited**
Sd/-
Dr. Sampath Ravinarayanan
Founder Chairman and Managing Director

ಬಾಹ್ಯಾಕಾಶ: ‘ನಂ 1’ಗೆ ಜಿಗಿತದತ್ತ ನಡೆ

ಕರ್ನಾಟಕ ಬಾಹ್ಯಾಕಾಶ ತಂತ್ರಜ್ಞಾನ ನೀತಿ 2025–2030’ ನೀತಿಗೆ ಸಂಪುಟ ಸಭೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ವ್ಯವಸ್ಥೆಯನ್ನು ಬಳಸಿಕೊಂಡು ಕರ್ನಾಟಕವನ್ನು ಬಾಹ್ಯಾಕಾಶ ತಂತ್ರಜ್ಞಾನದ ಜಾಗತಿಕ ತಾಣವಾಗಿ ಪರಿವರ್ತಿಸುವ ಉದ್ದೇಶದ ‘ಕರ್ನಾಟಕ ಬಾಹ್ಯಾಕಾಶ ತಂತ್ರಜ್ಞಾನ ನೀತಿ 2025–2030’ಕ್ಕೂ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.



ಎಚ್‌.ಕೆ. ಪಾಟೀಲ

ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು ಈ ಕುರಿತ ವಿವರ ನೀಡಿದರು.

ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರದಲ್ಲಿ ರಾಷ್ಟ್ರೀಯ ಮಾರುಕಟ್ಟೆ ಪಾಲಿನ ಶೇ 50 ಅನ್ನು ಹೊಂದುವ ಮೂಲಕ ಕರ್ನಾಟಕವನ್ನು ಭಾರತದಲ್ಲಿ ನಂಬರ್ 1 ತಾಣವಾಗಿ ಉಳಿಸಿಕೊಳ್ಳುವುದು ಮತ್ತು ಜಾಗತಿಕ ಮಾರುಕಟ್ಟೆ ಪಾಲಿನ ಶೇ 5 ಅನ್ನು ಹೊಂದುವ ಮೂಲಕ ಕರ್ನಾಟಕವನ್ನು ಬಾಹ್ಯಾಕಾಶ ತಂತ್ರಜ್ಞಾನದ ಜಾಗತಿಕ ತಾಣವಾಗಿಸುವುದು ಸರ್ಕಾರದ ಉದ್ದೇಶ ಎಂದರು.

ಜಾಗತಿಕ ಮತ್ತು ದೇಶೀಯ ಬಾಹ್ಯಾಕಾಶ ವಲಯದಿಂದ ಉದ್ಯೋಗ ಪಡೆಯಬಹುದಾದ ಹೆಚ್ಚು ಕೌಶಲಪೂರ್ಣ ಕಾರ್ಯಪಡೆ ರೂಪಿಸುವುದು, ಕರ್ನಾಟಕದಲ್ಲಿ ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ ಕೈಗಾರಿಕೆಗಳ ಒಟ್ಟುಗೂಡುವಿಕೆಗೆ ಪ್ರೇರಕ ಶಕ್ತಿಯಾಗಿ ಕಾರ್ಯ ನಿರ್ವಹಿಸಲು 50 ಸಾವಿರ ಯುವ ವೃತ್ತಿಪರರು, ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಕೌಶಲ ಅಭಿವೃದ್ಧಿಗೆ ಪ್ರೋತ್ಸಾಹ ನೀಡಲಾಗುವುದು ಎಂದರು.

ಡಿ 8 ರಿಂದ ಬೆಳಗಾವಿ ಅಧಿವೇಶನ

ವಿಧಾನಮಂಡಲದ ಚಳಿಗಾಲದ ಅಧಿವೇಶನ ಡಿಸೆಂಬರ್ 8 ರಿಂದ 19 ರವರೆಗೆ ಬೆಳಗಾವಿಯಲ್ಲಿ ನಡೆಯಲಿದೆ.

ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಒಟ್ಟು 10 ದಿನ ಅಧಿವೇಶನ ನಡೆಯಲಿದೆ ಎಂದು ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಡಿಸೆಂಬರ್ 13ರ ಎರಡನೇ ಶನಿವಾರ ಹಾಗೂ 14ರ ಭಾನುವಾರ ಸರ್ಕಾರಿ ರಜಾದಿನವಾಗಿದ್ದು, ಅಂದು ಕಲಾಪ ಇರುವುದಿಲ್ಲ.

ಸಂಪುಟದ ಪ್ರಮುಖ ನಿರ್ಣಯಗಳು

- ಜಿಲ್ಲಾ ನ್ಯಾಯಾಂಗ ಮತ್ತು ಹೈಕೋರ್ಟ್‌ಗೆ 36 ಕೋರ್ಟ್‌ ಮ್ಯಾನೇಜರ್‌ಗಳ ನೇಮಕಕ್ಕೆ ಈಗ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಕೋರ್ಟ್‌ ಮ್ಯಾನೇಜರ್‌ಗಳ ಸೇವೆ ಕ್ರಮಬದ್ಧಗೊಳಿಸಲು ಕರಡು ನಿಯಮ ಪ್ರಕಟಿಸಲು ಒಪ್ಪಿಗೆ
- ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ನಿಗಾ, ನಿಯಂತ್ರಣ ಮತ್ತು ಮೇಲ್ವಿಚಾರಣೆಗಾಗಿ ರಾಜ್ಯದ 12,003 ದೋಣಿಗಳಿಗೆ ₹43.69 ಕೋಟಿ ವೆಚ್ಚದಲ್ಲಿ ಇಸ್ರೊದ ವಾಣಿಜ್ಯ ಸಂಸ್ಥೆ ಎನ್‌ಎಸ್‌ಐಎಲ್‌ನಿಂದ ದ್ವಿಮುಖ ಸಂಪರ್ಕ ಸಾಧನ ಖರೀದಿಸಲು ಒಪ್ಪಿಗೆ. ಇದಕ್ಕೆ ಕೇಂದ್ರ ಪಾಲು ₹26.21 ಕೋಟಿ. ರಾಜ್ಯ ₹17.48 ಕೋಟಿ ನೀಡಲಿದೆ
- ಬೀದರ್ ಜಿಲ್ಲೆಯ ಭಾಲ್ಕಿ ನಗರಸಭೆಯಾಗಿ ಹಾಗೂ ಕಮಲ ನಗರ ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೆ
- ಮೈಸೂರಿನಲ್ಲಿ ಸರ್ಕಾರಿ ಅತಿಥಿಗೃಹ ನೌಕರರ ವಸತಿ ಗೃಹಗಳ ಆವರಣದಲ್ಲಿ ₹15 ಕೋಟಿ ವೆಚ್ಚದಲ್ಲಿ ಶಾಸಕರು ಮತ್ತು ಸಂಸದರ ಭವನ ನಿರ್ಮಾಣಕ್ಕೆ ಒಪ್ಪಿಗೆ
- ಹಾಸನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳ ಖರೀದಿಗೆ ₹27.92 ಕೋಟಿ ಹಾಗೂ ಕಟ್ಟಡದ ನೆಲ ಮತ್ತು ಮೊದಲ ಮಹಡಿಗೆ ಅವಶ್ಯವಿರುವ ಸೌಕರ್ಯಗಳನ್ನು ಅಳವಡಿಸುವ ಕಾಮಗಾರಿಗೆ ₹21 ಕೋಟಿ ನೀಡಲು ಒಪ್ಪಿಗೆ
- ಲೀಪ್ ಕಾರ್ಯಕ್ರಮದಡಿ ರಕ್ಷಣಾ ತಂತ್ರಜ್ಞಾನ ಮತ್ತು ಕೈಗಾರಿಕೆಗಳಿಗೆ ಉತ್ಕೃಷ್ಟತಾ ಕೇಂದ್ರ ಸ್ಥಾಪಿಸಲು ₹18 ಕೋಟಿ. ಧಾರ್ತಿ ಪ್ರತಿಷ್ಠಾನ, ಐಐಟಿ–ಧಾರವಾಡ ಪಾಲುದಾರಿಕೆ ವಹಿಸಲಿವೆ
- ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿತ್ಯವೂ ಸಂಗ್ರಹವಾಗುವ 150 ಟನ್ ಹಸಿ ತ್ಯಾಜ್ಯವನ್ನು ಕಂಪ್ರೆಸ್ಡ್ ಬಯೊ ಗ್ಯಾಸ್ ಘಟಕದ ಮೂಲಕ ಸಂಸ್ಕರಿಸಲು ಭಾರತೀಯ ಅನಿಲ ಪ್ರಾಧಿಕಾರಕ್ಕೆ ತುರುಮುರಿ ತ್ಯಾಜ್ಯ ನಿರ್ವಹಣಾ ಪ್ರದೇಶದಲ್ಲಿ 10 ಎಕರೆ ಜಾಗ

ವರದಿ ಸಲ್ಲಿಕೆಗೆ ಸಿ.ಎಂ ಸೂಚನೆ

ಸಚಿವ ಸಂಪುಟದ ಮೂರು ಉಪಸಮಿತಿಗಳು ಆರು ತಿಂಗಳ ಅವಧಿ ಮೀರಿದ್ದರೂ ವರದಿ ಸಲ್ಲಿಸಿಲ್ಲ. ಆದಷ್ಟು ಬೇಗ ವರದಿ ಸಲ್ಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟ ಸಭೆಯಲ್ಲಿ ಸೂಚಿಸಿದರು.

ಸಮಿತಿಗಳು ಯಾವುವು: ಕೋವಿಡ್ ಸಂದರ್ಭದಲ್ಲಿ ಖರೀದಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಮೈಕಲ್ ಡಿ ಕುನ್ಹಾ ನೇತೃತ್ವದ ಆಯೋಗ ಸಲ್ಲಿಸಿರುವ ವರದಿಯ ಶಿಫಾರಸುಗಳ ಪರಾಮರ್ಶೆಗಾಗಿ ರಚಿಸಿದ್ದ ಸಮಿತಿ, ರಾಜ್ಯದ ವಿಶ್ವವಿದ್ಯಾಲಯಗಳ ಆರ್ಥಿಕ ಸ್ಥಿತಿಗತಿ ಕುರಿತು ಪರಾಮರ್ಶಿಸಿ ಶಿಫಾರಸು ಮಾಡಲು ರಚಿಸಿದ್ದ ಸಮಿತಿ ಹಾಗೂ ಬೆಂಗಳೂರು–ಮೈಸೂರು ಮೂಲಸೌಕರ್ಯ ಕಾರಿಡಾರ್(ನೈಸ್ ಯೋಜನೆ) ಅನುಷ್ಠಾನದ ಕುರಿತು ಈವರೆಗೆ ಆಗಿರುವ ಪ್ರಗತಿ ಮತ್ತು ಮುಂದೆ ಕೈಗೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ಪರಾಮರ್ಶೆ ನಡೆಸಬೇಕಾದ ಉಪಸಮಿತಿ.

ಚಿಟಿಕೆ ಸುದ್ದಿ

ದೆಹಲಿ ಸ್ಫೋಟ ಶಂಕಿತ ವಿಚಾರಣೆ

ತುಮಕೂರು: ಉಗ್ರ ಸಂಘಟನೆಯೊಂದಿಗೆ ನಂಟು ಹೊಂದಿದ್ದ ಶಂಕೆಯ ಮೇಲೆ ನಗರದ ವ್ಯಕ್ತಿಯನ್ನು ಪೊಲೀಸರು ಗುರುವಾರ ಠಾಣೆಯಲ್ಲಿ ವಿಚಾರಣೆ ನಡೆಸಿದ್ದಾರೆ.

ದೆಹಲಿ ಬಾಂಬ್ ಸ್ಫೋಟದ ಹಿನ್ನೆಲೆಯಲ್ಲಿ ಪೊಲೀಸರು ಪಿ.ಎಚ್.ಕಾಲೊನಿ ನಿವಾಸಿ ಮುಜಾಯುದ್ದೀನ್ ಎಂಬಾತನನ್ನು ತಿಲಕ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ವಿಚಾರಣೆ ನಡೆಸಿದರು. ಬಾಂಬ್ ಸ್ಫೋಟಕ್ಕೂ, ಈತನಿಗೂ ಯಾವುದೇ ಸಂಬಂಧ ಇಲ್ಲದ ಕಾರಣ ವಿಚಾರಣೆ ನಂತರ ಬಿಟ್ಟು ಕಳುಹಿಸಿದ್ದಾರೆ.

ಕಲಿಫತ್ ಉಗ್ರ ಸಂಘಟನೆಯೊಂದಿಗೆ ಗುರುತಿಸಿಕೊಂಡಿದ್ದ ಮುಜಾಯುದ್ದೀನ್, ನಗರದಲ್ಲಿ ಸಭೆ ನಡೆಸಲು ಸಂಘಟನೆಗೆ ಅವಕಾಶ ಮಾಡಿಕೊಟ್ಟಿದ್ದ. ಈ ಬಗ್ಗೆ ವಿಚಾರಣೆ ನಡೆಸಿದ್ದ ಎನ್‌ಐಎ ತಂಡ ಆತನನ್ನು ಬಂಧಿಸಿ ತಿಹಾರ್ ಜೈಲಿಗೆ ಕಳುಹಿಸಿತ್ತು. ಆರು ತಿಂಗಳು ಶಿಕ್ಷೆ ಅನುಭವಿಸಿ ಹೊರ ಬಂದಿದ್ದ.

ಟಿ.ಲಕ್ಷ್ಮೀಪತಿಗೆ ‘ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ’

ಬೆಂಗಳೂರು: ಕರ್ನಾಟಕ ಜಾನಪದ ಪರಿಷತ್ತು ನೀಡುವ ‘ನಾಡೋಜ ಎಚ್.ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ’ಗೆ ತಮಿಳುನಾಡಿನ ಜಾನಪದ ಕಲಾವಿದ ಟಿ.ಲಕ್ಷ್ಮೀಪತಿ ಆಯ್ಕೆಯಾಗಿದ್ದಾರೆ.



ಟಿ. ಲಕ್ಷ್ಮೀಪತಿ

ಈ ಪ್ರಶಸ್ತಿಯು ₹1 ಲಕ್ಷ ನಗದು ಮತ್ತು ಫಲಕ ಒಳಗೊಂಡಿದೆ. ಸಾಹಿತಿ ಹಾಗೂ ಜಾನಪದ ಲೋಕದ ನಿರ್ಮಾತೃ ಎಚ್. ಎಲ್. ನಾಗೇಗೌಡ ಅವರ ಸ್ಮರಣಾರ್ಥ ಈ ಪ್ರಶಸ್ತಿ ನೀಡಲಾಗುತ್ತಿದೆ. ಜಾನಪದ ಕ್ಷೇತ್ರದಲ್ಲಿ ಅಪ್ರತಿಮ ಸೇವೆ ಸಲ್ಲಿಸಿದ ವ್ಯಕ್ತಿಯೊಬ್ಬರಿಗೆ ಪ್ರತಿ ವರ್ಷ ಈ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಟಿ. ಲಕ್ಷ್ಮೀಪತಿ ಅವರು ತೆರುಕೂತು ಕಲೆಯ ಕಲಾವಿದರಾಗಿದ್ದಾರೆ. ಈ ಕಲೆಯು ತಮಿಳುನಾಡಿನ ಪಾರಂಪರಿಕ ಪ್ರದರ್ಶಕ ಕಲೆಗಳಲ್ಲಿ ಒಂದಾಗಿದೆ. ಲಕ್ಷ್ಮೀಪತಿ ಅವರು ಈ ಕಲೆಯಲ್ಲಿ ಕರ್ನಾಟಕ ಸಂಗೀತದ ರಾಗಗಳನ್ನು ಸೇರಿಸಿ ಈ ಕಲೆಯ ಮಟ್ಟವನ್ನು ಹೆಚ್ಚಿಸಿ, ಆಧುನಿಕ ವೇದಿಕೆ ಕಲ್ಪಿಸುವ ಮೂಲಕ ಕಲೆಯನ್ನು ಜೀವಂತವಾಗಿಸಿದ್ದಾರೆ.

ಇದೇ 17ರಂದು ಬೆಳಿಗ್ಗೆ 10.30ಕ್ಕೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಪರಿಷತ್ತಿನ ಅಧ್ಯಕ್ಷ ಹಿ.ಚಿ. ಬೋರಲಿಂಗಯ್ಯ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ನಾಲ್ಕು ರೈಲುನಿಲ್ದಾಣಗಳಿಗೆ ಸಂತರ ಹೆಸರು: ಎಂ.ಬಿ. ಪಾಟೀಲ ಪತ್ರ

ಬೆಂಗಳೂರು: ವಿಜಯಪುರ, ಬೆಳಗಾವಿ, ಬೀದರ್ ಮತ್ತು ದಾವಣಗೆರೆ ಜಿಲ್ಲೆಯ ಸೂರಗೊಂಡನಕೊಪ್ಪ ರೈಲುನಿಲ್ದಾಣಗಳಿಗೆ ಸಂತರ ಹೆಸರಿಡಬೇಕು ಎಂದು ಕೋರಿ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಕೇಂದ್ರ ಗೃಹ ಸಚಿವಾಲಯಕ್ಕೆ ಪತ್ರ ಬರೆದಿದ್ದಾರೆ.

‘ನಾಲ್ಕು ನಿಲ್ದಾಣಗಳ ಸ್ಥಳೀಯ ಸಾಂಸ್ಕೃತಿಕ, ಧಾರ್ಮಿಕ ಮಹತ್ವಕ್ಕೆ ಪೂರಕವಾಗಿ ಹೆಸರು ಇಡಲು ನಿರ್ಧರಿಸಲಾಗಿದೆ. ವಿಜಯಪುರ ರೈಲು ನಿಲ್ದಾಣಕ್ಕೆ ಜ್ಞಾನಯೋಗಿ ಶ್ರೀಸಿದ್ಧೇಶ್ವರ ಸ್ವಾಮೀಜಿ, ಬೆಳಗಾವಿ ನಿಲ್ದಾಣಕ್ಕೆ ಶ್ರೀಬಸವ ಮಹಾಸ್ವಾಮೀಜಿ, ಬೀದರ್ ನಿಲ್ದಾಣಕ್ಕೆ ಚನ್ನಬಸವ ಪಟ್ಟದೇವರು ಹಾಗೂ ಬಂಜಾರ ಸಮುದಾಯದ ಧಾರ್ಮಿಕ ಕೇಂದ್ರವಾದ ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ಸೂರಗೊಂಡನಕೊಪ್ಪ ನಿಲ್ದಾಣಕ್ಕೆ ಭಾಯಗಡ ರೈಲುನಿಲ್ದಾಣ ಎಂದು ಹೊಸ ಹೆಸರುಗಳನ್ನು ಆಯ್ಕೆ ಮಾಡಲಾಗಿದೆ’ ಎಂದು ಪತ್ರದಲ್ಲಿ ವಿವರಿಸಿದ್ದಾರೆ.



‘ಎಲ್ಲ ನಾಲ್ಕು ಸಂತರ ಕೊಡುಗೆ ಅನನ್ಯವಾಗಿದೆ, ಮೌಲಿಕವಾಗಿದೆ. ಹಾಗಾಗಿ, ಹೆಸರುಗಳನ್ನು ನಾಮಕರಣ ಮಾಡಲು ಅನುಮತಿ ನೀಡಬೇಕು. ಮರು ನಾಮಕರಣದ ಅಧಿಸೂಚನೆಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಬೇಕು’ ಎಂದು ಸಚಿವ ಪಾಟೀಲ ಕೋರಿದ್ದಾರೆ.

ನಕಲಿ ವೈದ್ಯರ ವಿರುದ್ಧ ಕ್ರಮಕ್ಕೆ ಸೂಚನೆ

ಬೆಂಗಳೂರು: ನಕಲಿ ವೈದ್ಯರು ಹಾಗೂ ಅಂತಹ ವೈದ್ಯರನ್ನು ನೇಮಿಸಿಕೊಳ್ಳುವ ವೈದ್ಯಕೀಯ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಆರೋಗ್ಯ ಇಲಾಖೆ ಸೂಚಿಸಿದೆ.

ಕರ್ನಾಟಕ ವೈದ್ಯಕೀಯ ನೋಂದಣಿ ಕಾಯ್ದೆ 1961ರ ಪ್ರಕಾರ ನೋಂದಣಿಯಾಗದಿರುವುದು ಸೇರಿ ವಿವಿಧ ನಿಯಮಗಳನ್ನು ಉಲ್ಲಂಘಿಸಿ, ಕಾರ್ಯನಿರ್ವಹಿಸುತ್ತಿರುವವರ ಮೇಲೆ ಕ್ರಮ ಜರುಗಿಸಬೇಕಿದೆ. ಕಾನೂನಿನಡಿ ದಂಡ ಹಾಗೂ ಜೈಲು ಶಿಕ್ಷೆ ವಿಧಿಸಲು ಅವಕಾಶವಿದೆ. ಮರುಕಳಿಸುವ ತಪ್ಪುಗಳಿಗೆ ಕಾನೂನಿನಡಿ ₹5 ಲಕ್ಷ ದಂಡ ಹಾಗೂ ಮೂರು ವರ್ಷ ಜೈಲು ಶಿಕ್ಷೆ ವಿಧಿಸಲಾಗುತ್ತದೆ. ಜಿಲ್ಲಾಧಿಕಾರಿ ನೇತೃತ್ವದ ವಿಶೇಷ ಕಾರ್ಯಪಡೆಯು ನಕಲಿ ವೈದ್ಯರು ಹಾಗೂ ಅಂತಹ ವೈದ್ಯರನ್ನು ನೇಮಿಸಿಕೊಳ್ಳುವ ಸಂಸ್ಥೆ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ಮೇಕೆದಾಟು: ಕೇಂದ್ರಕ್ಕೆ ಸಂಸದರ ನಿಯೋಗ

ಯೋಜನೆಗೆ ಅನುಪತಿ ಪಡೆಯಲು ಪ್ರಧಾನಿ ಭೇಟಿ: ಸಚಿವ ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ ಮೇಕೆದಾಟು ಯೋಜನೆಗೆ ಅಗತ್ಯವಾದ ಅನುಮತಿ ಪಡೆಯಲು ಪ್ರಧಾನ ಮಂತ್ರಿ ಹಾಗೂ ಜಲ ಶಕ್ತಿ ಸಚಿವರ ಭೇಟಿಗೆ ರಾಜ್ಯದ ಸಂಸದರ ನಿಯೋಗವನ್ನು ದೆಹಲಿಗೆ ಕರೆದೊಯ್ಯಲು ಪ್ರಯತ್ನಿಸುತ್ತೇನೆ’ ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.



ಡಿ.ಕೆ. ಶಿವಕುಮಾರ್

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ಕಾವೇರಿ ನೀರಿನ ಬಳಕೆಗಾಗಿ ‘ನಮ್ಮ ನೀರು, ನಮ್ಮ ಹಕ್ಕು’ ಎಂದು ಮೇಕೆದಾಟಿನಿಂದ ಹೆಜ್ಜೆ ಹಾಕಿ ನಾವು ಹೋರಾಟ ಮಾಡಿದೆವು. ತಮಿಳುನಾಡಿನವರು ಈ ಯೋಜನೆ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಈ ಪ್ರಕರಣ ಬೇಗ ತೀರ್ಮಾನವಾಗಬೇಕು ಎಂದು ನಾವು ಕಾನೂನು ಒತ್ತಡ ಹಾಕಿದ್ದೆವು’ ಎಂದರು.

‘ನಮ್ಮ ನೆಲದಲ್ಲಿ, ನಮ್ಮ ಹಣದಲ್ಲಿ ಈ ಯೋಜನೆ ಮಾಡಲಾಗುತ್ತಿದೆ. ನೀರಿನ ಕೊರತೆ ಉಂಟಾದಾಗ ತಮಿಳುನಾಡಿಗೆ ನೀರು ಹರಿಸಲು ಈ ಸಮತೋಲಿತ ಅಣೆಕಟ್ಟು ನೆರವಾಗಲಿದೆ. ಯೋಜನೆಗೆ ಸಂಬಂಧಿಸಿದ ಎಲ್ಲ ತೀರ್ಮಾನಗಳನ್ನು ಕೇಂದ್ರ ಜಲ ಆಯೋಗ (ಸಿಡಬ್ಲ್ಯುಸಿ) ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯುಎಂಎ) ಕೈಗೊಳ್ಳಬೇಕು ಎಂದು ನ್ಯಾಯಾಲಯ ಸೂಚಿಸಿದೆ. ಹೀಗಾಗಿ, ಈ ವಿಚಾರವಾಗಿ ಮತ್ತೆ ನ್ಯಾಯಾಲಯದ ಮುಂದೆ ಹೋಗುವ ಪ್ರಶ್ನೆ ಉದ್ಭವಿಸುವುದಿಲ್ಲ’ ಎಂದರು.

‘ನಾವು ಈಗಾಗಲೇ ಮೇಕೆದಾಟು ಕಚೇರಿಯನ್ನು ಹಾರೋಬೆಲೆಯಲ್ಲಿ ಆರಂಭಿಸಿದ್ದೇವೆ. ಈ ಯೋಜನೆಗೆ ಅಗತ್ಯವಿರುವ ಅರಣ್ಯ ಭೂಮಿಗೆ ಪರ್ಯಾಯವಾಗಿ ಕಂದಾಯ ಭೂಮಿ ನೀಡಲು ಸ್ಥಳ ಗುರುತಿಸಲಾಗಿದೆ. ಸಂಬಂಧಿಸಿದ ಇಲಾಖೆಗಳಿಂದ ಈ ಯೋಜನೆಗೆ ಅಗತ್ಯವಾದ ಅನುಮತಿಯನ್ನು ಕಾನೂನು ಚೌಕಟ್ಟಿನಲ್ಲಿ ಪಡೆಯಲಾಗುವುದು’ ಎಂದರು.

ಬೇರೆ ಆಯ್ಕೆ ಇಲ್ಲ: ‘ಈ ಯೋಜನೆಗೆ ಸಿಡಬ್ಲ್ಯುಸಿ ಸಹಕಾರ ನೀಡುವುದೇ’ ಎಂಬ ಪ್ರಶ್ನೆಗೆ, ‘ಈ ಯೋಜನೆಗೆ ಅನುಮತಿ ನೀಡದೇ ಬೇರೆ ಆಯ್ಕೆ ಸಿಡಬ್ಲ್ಯುಸಿ ಮುಂದೆ ಇಲ್ಲ. ಅವರು ನ್ಯಾಯ ಒದಗಿಸಿಕೊಡಲೇಬೇಕು’ ಎಂದರು.

ಮುಂದಿನ ಹೆಜ್ಜೆಗೆ ಹಸಿರು ನಿಶಾನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಯೋಜನೆ ಕಾರ್ಯಗತಗೊಳಿಸುವತ್ತ ಮುಂದಿನ ಹೆಜ್ಜೆ ಇಡಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಹಸಿರು ನಿಶಾನೆ ತೋರಿದೆ.

‘ಸುಪ್ರೀಂಕೋರ್ಟ್‌ನಲ್ಲಿ ತಮಿಳುನಾಡು ಸರ್ಕಾರದ ಅರ್ಜಿ ವಜಾಗೊಂಡ ಬೆನ್ನಲ್ಲೇ ಸಂಪುಟ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಸಲಾಯಿತು. ನಮ್ಮ ಪಾದಯಾತ್ರೆ, ಕಾನೂನು ಮತ್ತು ರಾಜಕೀಯ ಹೋರಾಟಕ್ಕೆ ಜಯ ಸಿಕ್ಕಿತು ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು’ ಎಂದು ಕಾನೂನು ಸಚಿವ ಎಚ್‌.ಕೆ.ಪಾಟೀಲ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಮೇಕೆದಾಟು ಯೋಜನೆಗಾಗಿ ರಾಜಕೀಯ ಹೋರಾಟ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಅಭಿನಂದಿಸಲಾಯಿತು’ ಎಂದು ಹೇಳಿದರು.

‘ಕಾಗೆ ಹೇಳಿಕೆ ಅಸಮಂಜಸ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉತ್ತರಕರ್ನಾಟಕ ಪ್ರತ್ಯೇಕ ರಾಜ್ಯ ಆಗಬೇಕು ಎಂದು ಶಾಸಕ ರಾಜು ಕಾಗೆ ನೀಡಿರುವ ಹೇಳಿಕೆ ಅಸಮಂಜಸ. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆದಿಲ್ಲ’ ಎಂದು ಕಾನೂನು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

‘ಕಾಗೆ ಅವರಿಗೆ ಅಸಮಾಧಾನ ಇರಬಹುದು. ಆದರೆ ನಮ್ಮ ಸರ್ಕಾರ ಪ್ರಾದೇಶಿಕ ಅಸಮತೋಲನ ನಿವಾರಿಸಲು ಎಲ್ಲ ರೀತಿಯ ಪ್ರಯತ್ನ ನಡೆಸುತ್ತಿದೆ’ ಎಂದು ಅವರು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೆಲವು ವಾರಗಳ ಹಿಂದಷ್ಟೇ ಕೃಷ್ಣಾ ಮೇಲ್ದಂಡೆ ಮೂರನೇ ಹಂತ ಯೋಜನೆಗೆ ₹50 ಸಾವಿರ ಕೋಟಿ ಕೊಡುವುದಾಗಿ ಭರವಸೆ ನೀಡಿದ್ದಾರೆ. ಇದು ಮುಖ್ಯಮಂತ್ರಿಯವರಿಗೆ ನಮ್ಮ ಭಾಗದ ಕುರಿತು ಇರುವ ಕಾಳಜಿಯನ್ನು ತೋರಿಸುತ್ತದೆ’ ಎಂದರು.

ಲೇಖಕಿಯರ ಸಂಘ: ನಾಳೆಯಿಂದ ನಾಮಪತ್ರ ಸಲ್ಲಿಕೆ ಆರಂಭ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯುತ್ತಿದ್ದು, ಇದೇ 15ರಿಂದ 24ರವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶ ನೀಡಲಾಗಿದೆ.

ಡಿಸೆಂಬರ್ 14 ರಂದು ಚುನಾವಣೆ ನಡೆಯಲಿದೆ. ಇದೇ 25ರಂದು ಮಧ್ಯಾಹ್ನ 4 ಗಂಟೆಗೆ ನಾಮಪತ್ರಗಳ ಪರಿಶೀಲನೆ ನಡೆಸಿ, ಪ್ರಾಥಮಿಕ ಪಟ್ಟಿ ಪ್ರಕಟಿಸಲಾಗುತ್ತದೆ. ನಾಮಪತ್ರಗಳನ್ನು ಹಿಂಪಡೆಯಲು 28ರ ಮಧ್ಯಾಹ್ನ 12ರಿಂದ ಸಂಜೆ 4 ಗಂಟೆವರೆಗೆ ಅವಕಾಶ ನೀಡಲಾಗಿದೆ. ಅಭ್ಯರ್ಥಿಗಳ ಅಂತಿಮ ಪಟ್ಟಿಯು 29ರಂದು ಸಂಜೆ 4 ಗಂಟೆಗೆ ಪ್ರಕಟಿಸಲಾಗುತ್ತದೆ. ಡಿ.14ರಂದು ಬೆಳಿಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ಮತದಾನಕ್ಕೆ ಅವಕಾಶ ನೀಡಲಾಗಿದೆ ಎಂದು ಚುನಾವಣಾಧಿಕಾರಿ ಪ್ರತಿಭಾ ಆರ್. ತಿಳಿಸಿದ್ದಾರೆ.

ಬೆಂಗಳೂರಿನ ಶಂಕರಪುರದಲ್ಲಿರುವ ಅಶೋಕ ಶಿಶುವಿಹಾರದಲ್ಲಿ ಮತದಾನ ನಡೆಯಲಿದೆ. ಅದೇ ದಿನ ಸಂಜೆ ಫಲಿತಾಂಶ ಘೋಷಿಸಲಾಗುವುದು ಎಂದು ಹೇಳಿದ್ದಾರೆ.

ಸಂಘದ ಮತದಾರರ ಪಟ್ಟಿಯಲ್ಲಿರುವ ವಿಳಾಸಗಳಿಗೆ ಚುನಾವಣಾ ಮಾಹಿತಿಗಳನ್ನು ಅಂಚೆ ಮೂಲಕ ಕಳುಹಿಸಲಾಗುತ್ತದೆ. ವಿಳಾಸ ಬದಲಾದವರು ಅಥವಾ ಬದಲಾಯಿಸುವವರು ಇದೇ 19ರ ಒಳಗೆ ಮೊ.ಸಂಖ್ಯೆ 9945294865ಕ್ಕೆ ಸಂಪರ್ಕಿಸಬೇಕು ಎಂದು ತಿಳಿಸಿದ್ದಾರೆ.

ಸಾಫ್ಟ್‌ವೇರ್ ರಫ್ತು ಗುರಿ...

ಒಂದನೇ ಪುಟದಿಂದ...

ಜಾಗತಿಕ ತಂತ್ರಜ್ಞಾನ ಮಾರುಕಟ್ಟೆಗಳಲ್ಲಿ ಕರ್ನಾಟಕದ ನಾಯಕತ್ವ ಬಲಪಡಿಸುವುದು ಮತ್ತು ಕರ್ನಾಟಕದ ಬ್ರ್ಯಾಂಡ್ ಅನ್ನು ಕೃತಕ ಬುದ್ಧಿಮತ್ತೆಯ ಸ್ಥಳೀಯ ತಾಣವಾಗಿ (ಎಐ–ನೇಟಿವ್) ಉನ್ನತೀಕರಿಸಲು ಅಗತ್ಯ ಯೋಜನೆ ರೂಪಿಸಲಾಗುವುದು ಎಂದು ಸಚಿವ ಎಚ್‌.ಕೆ.ಪಾಟೀಲ ವಿವರಿಸಿದರು.

ನೀತಿಯ ಮುಖ್ಯಾಂಶಗಳು

ಒಂದನೇ ಪುಟದಿಂದ...

- ಸೈಬರ್ ಸುರಕ್ಷತೆ, ವಿಪತ್ತು ನಿರ್ವಹಣೆ ಮತ್ತು ವಿದ್ಯುತ್ ಭದ್ರತೆ ಮೂಲಕ ಬಲಿಷ್ಠ ಐಟಿ ಕಾರ್ಯಾಚರಣೆಗಳನ್ನು ಖಾತ್ರಿಪಡಿಸಲಾಗುವುದು
- ನಿಯಮಗಳನ್ನು ಸರಳಗೊಳಿಸಿ, ತಡೆ ರಹಿತ, ಪಾರದರ್ಶಕ ಮತ್ತು ಏಕಗವಾಕ್ಷಿ ಆಡಳಿತ ಸಕ್ರಿಯಗೊಳಿಸಲಾಗುವುದು
- ಕ್ವೋವರ್ಸ್ ಅಂದರೆ ಸಂಯೋಜಿತ ತಂತ್ರಜ್ಞಾನ ಆವರಣಗಳ ಸ್ಥಾಪನೆ ಮತ್ತು ಮುಂಬರುವ ಜಾಗತಿಕ ನಾವೀನ್ಯತಾ ಜಿಲ್ಲೆಗಳಲ್ಲಿ (ಜಿಐಡಿಗಳು) ಇವುಗಳ ಸ್ಥಾಪನೆ ಆಗಲಿದೆ.
- ರಾಜ್ಯವ್ಯಾಪಿ ಡಿಜಿಟಲ್ ಹಬ್ ಗ್ರಿಡ್ (ಎಸ್‌ಡಿಎಚ್‌ಜಿ), ಐಟಿ ಪಾರ್ಕ್‌ಗಳು, ಶ್ರೇಷ್ಠತೆಯ ಕೇಂದ್ರಗಳು, ನಾವೀನ್ಯತೆ ಕೇಂದ್ರಗಳು, ಸಂಶೋಧನೆ ಮತ್ತು ಅಭಿವೃದ್ಧಿ ಸೌಲಭ್ಯಗಳನ್ನು ಏಕೀಕರಿಸಲಾಗುವುದು.
- 1,000 ಮಧ್ಯಮ–ವೃತ್ತಿ ಜೀವನದ ಮಹಿಳಾ ತಂತ್ರಜ್ಞಾನ ವೃತ್ತಿಪರರಿಗೆ ತರಬೇತಿ ನೀಡಲು ಮೀಸಲಾದ ಮಹಿಳಾ ಗ್ಲೋಬಲ್ ಟೆಕ್ ಮಿಷನ್ಸ್ ಫೆಲೋಶಿಪ್ ಆರಂಭಿಸಲಾಗುವುದು
- ಬೆಂಗಳೂರಿನ ಹೊರಗೆ ಇರುವ ಕಂಪನಿಗಳಿಗೆ 16 ಬಗೆಯ ಪ್ರೋತ್ಸಾಹ

‘ಕಾಂಗ್ರೆಸ್‌ನಿಂದ ಕೀಳು ರಾಜಕೀಯ’

ಶಿವಮೊಗ್ಗ: ‘ನವದೆಹಲಿಯ ಕೆಂಪು ಕೋಟೆಯ ಬಳಿ ಸಂಭವಿಸಿದ ಕಾರ್ ಸ್ಫೋಟ ಘಟನೆಯು ಭಯೋತ್ಪಾದಕರ ದಾಳಿ ಎಂಬುದು ನಿಚ್ಚಳವಾಗಿದೆ. ಆದರೆ, ಕೀಳುಮಟ್ಟದ ರಾಜಕೀಯ ಮಾಡುತ್ತಲೇ ಬಂದಿರುವ ಕಾಂಗ್ರೆಸ್ ಮುಖಂಡರು ಈಗಲೂ ಅದನ್ನೇ ಮುಂದುವರಿಸಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

’ಈ ಘಟನೆಯಿಂದ ದೇಶವೇ ತಲ್ಲಣಗೊಂಡಿದೆ. ಇಂಥ ವೇಳೆ ಕಾಂಗ್ರೆಸ್ ನಾಯಕರು ಒಗ್ಗಟ್ಟಿನ ಬಲ ಪ್ರದರ್ಶಿಸದೆ, ಉಗ್ರರಿಗೆ ಹಾಸಿಗೆ ಹಾಸಿಕೊಟ್ಟಂತೆ ವ್ಯತಿರಿಕ್ತ ಮಾತುಗಳನ್ನಾಡುತ್ತಿದ್ದಾರೆ’ ಎಂದು ಗುರುವಾರ ಸುದ್ದಿಗಾರರೆದುರು ಆಕ್ರೋಶ ವ್ಯಕ್ತಪಡಿಸಿದರು.

‘ಸ್ಫೋಟಕ್ಕೂ ಬಿಹಾರ ಚುನಾವಣೆಗೂ ಏನು ಸಂಬಂಧ? ಕಾಂಗ್ರೆಸ್ ನಾಯಕರು ಸೂಕ್ಷ್ಮತೆ ಯಿಂದ ವರ್ತಿಸಲಿ. ಉಗ್ರರಿಗೆ ಇಂಬು ನೀಡುವಂತೆ ಬೇಜವಾಬ್ದಾರಿ ಹೇಳಿಕೆ ನೀಡುವುದನ್ನು ಬಿಡಬೇಕು’ ಎಂದರು.

ದೇವರ ದರ್ಶನ

ಪ್ರಜಾವಾಣಿ ಚಿತ್ರ:



ಕೇರಳದ ತಿರುವಾಂಕೂರು ರಾಜ ಮನೆತನದ ರಾಜಕುಮಾರ ಆದಿತ್ಯವರ್ಮ (ಎಡದಿಂದ ಮೂರನೇಯವರು) ಅವರು ಉಡುಪಿಯ ಶ್ರೀಕೃಷ್ಣಮಠಕ್ಕೆ ಗುರುವಾರ ಭೇಟಿ ನೀಡಿ ಶ್ರೀಕೃಷ್ಣ ಮುಖ್ಯಪ್ರಾಣ ದೇವರ ದರ್ಶನ ಪಡೆದರು

‘ವೈಯಕ್ತಿಕ ತೇಜೋವಧೆ ಸಹಿಸಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗೃಹ ಸಚಿವ ಜಿ. ಪರಮೇಶ್ವರ ಅವರನ್ನು ಜಾತಿ ಉಲ್ಲೇಖಿಸಿ ಅವಹೇಳನ ಮಾಡಿದ ಬಿಜೆಪಿ ಯುವ ಮೋರ್ಚಾ ನಾಯಕನ ನಡೆಯನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ’ ಎಂದು ಮಾಜಿ ಸಚಿವ ಎಚ್. ಆಂಜನೇಯ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಆಡಳಿತದಲ್ಲಿ ವೈಫಲ್ಯ ಉಂಟಾಗಿದ್ದರೆ ಪರಮೇಶ್ವರ ಅವರನ್ನು ಟೀಕೆ ಮಾಡಲಿ. ಅದನ್ನು ಬಿಟ್ಟು ಕುಟುಂಬವನ್ನು ಎಳೆದು ತಂದು ವೈಯಕ್ತಿಕ ತೇಜೋವಧೆ ಮಾಡುವುದು ಸರಿಯಲ್ಲ’ ಎಂದರು.

‘ಇಂತಹ ಟೀಕೆಯನ್ನು ಸಮರ್ಥನೆ ಮಾಡಿಕೊಳ್ಳುತ್ತಿರುವ ಬಿಜೆಪಿಯವರದ್ದು ಹೀನ ಮನಃಸ್ಥಿತಿ. ಇದೇ ಅವರ ಸಂಸ್ಕೃತಿ. ಈ ಬಿಜೆಪಿಯವರು ಏನು ಮಾಡಿದರೂ ಸಮರ್ಥನೆ ಮಾಡಿಕೊಳ್ಳುತ್ತಾರೆ. ಇದನ್ನು ಮಾಡುವುದಕ್ಕೂ ಮಾನ ಮರ್ಯಾದೆ ಇರಬೇಕು. ಇದೇ ವರ್ತನೆ ಮುಂದುವರೆದರೆ, ಇಡೀ ಸಮುದಾಯ ಸಂಸದೀಯ ಪದಗಳಲ್ಲೇ ಪ್ರತಿಭಟಿಸಲಿದೆ’ ಎಂದು ಎಚ್ಚರಿಕೆ ನೀಡಿದರು.

ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಇದ್ದರು.

ಮಾನವ– ವನ್ಯಪ್ರಾಣಿ ಸಂಘರ್ಷ ತಪ್ಪಿಸಲು ಸಿಬ್ಬಂದಿ, ಅನುದಾನ: ಸಿ.ಎಂ

ಸಂಘರ್ಷ ತಡೆ: 8 ಅಂಶಗಳ ಯೋಜನೆಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾನವ- ವನ್ಯಪ್ರಾಣಿ ಸಂಘರ್ಷ ತಪ್ಪಿಸಲು ಡ್ರೋನ್ ಕ್ಯಾಮರಾಗಳ ನಿಗಾ ಹೆಚ್ಚಿಸಬೇಕು. ಕೃಪಾಕರ ಸೇನಾನಿ-ಸಂಜಯ್ ಗುಬ್ಬಿ ಸೇರಿದಂತೆ ತಜ್ಞರ ಜೊತೆ ಚರ್ಚಿಸಿ ವೈಜ್ಞಾನಿಕ ಮಾರ್ಗಗಳನ್ನು ರೂಪಿಸಬೇಕು’ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ರಾಜ್ಯ ಮಟ್ಟದ ಸಮಗ್ರ ಮಾನವ-ವನ್ಯಜೀವಿ ಸಂಘರ್ಷ ನಿರ್ವಹಣಾ ಕಾರ್ಯತಂತ್ರಗಳನ್ನು ರೂಪಿಸಲು ಹಾಗೂ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಚರ್ಚಿಸಲು ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಗುರುವಾರ ಸಭೆ ನಡೆಯಿತು.

‘ವಯಸ್ಸಾದ ಕಾರಣಕ್ಕೆ, ಯುವ ಹುಲಿಗಳ ದಾಳಿಯಿಂದ ಗಾಯಗೊಂಡ ಹಾಗೂ ಇತರೆ ಕಾರಣಗಳಿಂದ ಅರಣ್ಯ ಪ್ರದೇಶದಿಂದ ಹೊರಗೆ ಸಂಚರಿಸುತ್ತಿರುವ 15-20 ಹುಲಿಗಳನ್ನು ಡ್ರೋನ್ ಕ್ಯಾಮರಾ ನೆರವಿನಿಂದ ತಕ್ಷಣ ಹಿಡಿಯಲು ಕ್ರಮ ತೆಗೆದುಕೊಳ್ಳಬೇಕು. ಅದಕ್ಕೆ ಅಗತ್ಯವಾದ ಸಿಬ್ಬಂದಿ, ಅನುದಾನ ಸೇರಿ ಎಲ್ಲ ನೆರವು ನೀಡಲಾಗುವುದು’ ಎಂದು ಅವರು ಭರವಸೆ ನೀಡಿದರು.

‘ಈಗಾಗಲೇ ಎಂಟು ಕುಮ್ಕಿ ಆನೆಗಳನ್ನು ಕಾರ್ಯಾಚರಣೆಗೆ ಬಳಸಲಾಗುತ್ತಿದ್ದು ಅಗತ್ಯಕ್ಕೆ ತಕ್ಕಂತೆ ಸಿಬ್ಬಂದಿ ಮತ್ತು ಸ್ಕ್ವಾಡ್‌ಗಳ ಸಂಖ್ಯೆಯನ್ನು ಸಂಘರ್ಷ ಪೀಡಿತ ಅರಣ್ಯ ಪ್ರದೇಶದಲ್ಲಿ ಬಳಸಬೇಕು’ ಎಂದೂ ಅವರು ಸೂಚನೆ ನೀಡಿದರು.

ಚಾಮರಾಜನಗರ, ಕೊಡಗು, ಹಾಸನ, ಮೈಸೂರು ಹಾಗೂ ರಾಮನಗರ ಜಿಲ್ಲೆಯಲ್ಲಿ ಅತಿ ಹೆಚ್ಚು ಮಾನವ ಪ್ರಾಣ ಹಾನಿ ಪ್ರಕರಣಗಳು ಸಂಭವಿಸಿವೆ. ಕಳೆದ ಮೂರು ವರ್ಷಗಳಿಗೆ ಹೋಲಿಸಿದರೆ 2024-25ರಲ್ಲಿ ಇಂತಹ ಪ್ರಕರಣ ಶೇ 30ರಷ್ಟು ಕಡಿಮೆಯಾಗಿದೆ. ವನ್ಯಜೀವಿಗಳು ಆಹಾರ ಹುಡುಕಿಕೊಂಡು ಕಾಡಿನಿಂದ ಹೊರಗೆ ಬರುವುದನ್ನು ನಿಗ್ರಹಿಸಬೇಕು. ಬೇಸಿಗೆ ಕಾಲದಲ್ಲಿ ವನ್ಯಜೀವಿಗಳಿಗೆ ಅರಣ್ಯದೊಳಗೆ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಅರಣ್ಯದಲ್ಲಿ ವ್ಯಾಪಕವಾಗಿ ಹರಡುವ ಲಂಟಾನ ಕಳೆ ತೆಗೆಯಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು’ ಎಂದು ಮುಖ್ಯಮಂತ್ರಿ ಹೇಳಿದರು.

ಎಂಟು ಅಂಶಗಳು ಯಾವುವು?

- ಮಾನವ– ವನ್ಯಜೀವಿ ಸಂಘರ್ಷದ ಜಾಗ ಗುರುತಿಸಿ, ಯಾವ ಸ್ವರೂಪದ ಸಂಘರ್ಷವೆಂದು ಪಟ್ಟಿ ಮಾಡಬೇಕು
- ಸಂಘರ್ಷದ ತೀವ್ರತೆಯ ಆಧಾರದಲ್ಲಿ ಅಧಿಕಾರಿ, ಸಿಬ್ಬಂದಿಗಳನ್ನು ನಿಯೋಜಿಸಬೇಕು
- ಅರಣ್ಯದ ಅಂಚಿನ ಗ್ರಾಮಗಳಲ್ಲಿ ಗಸ್ತು ಹೆಚ್ಚಳ, ರಿಜಿಸ್ಟರ್ ನಿರ್ವಹಣೆ
- ಮಾನವ ವನ್ಯ ಜೀವಿ ಸಂಘರ್ಷ ಇರುವ ಗ್ರಾಮದಲ್ಲಿ ಹಿರಿಯ ಅಧಿಕಾರಿಗಳು ನಿಯಮಿತವಾಗಿ ವಾಸ್ತವ್ಯ ಮಾಡಬೇಕು
- ಅರಣ್ಯದಂಚಿನ ಸ್ಥಳೀಯರನ್ನು ಗುರುತಿಸಿ ‘ಅರಣ್ಯ ಮಿತ್ರ’ ಎಂದು ಪರಿಗಣಿಸಿ ಗಸ್ತು, ವನ್ಯಜೀವಿ, ಸೆರೆ, ಕಾರ್ಯಾಚರಣೆಗೆ ಬಳಸಿಕೊಳ್ಳಬೇಕು
- ವನ್ಯಜೀವಿಗಳು ಸಂಚರಿಸುವ ಕಾರ್ಯತಂತ್ರ ಸ್ಥಳಗಳಲ್ಲಿ 24X7 ವಾಹನ ಮತ್ತು ಅರಣ್ಯ ಸಿಬ್ಬಂದಿ ಲಭ್ಯವಾಗುವಂತೆ ಮಾಡಬೇಕು
- ವನ್ಯಜೀವಿ ಸೆರೆ, ವನ್ಯಜೀವಿ ದಾಳಿ ಮಾಡಿದಾಗ ಏನು ಮಾಡಬೇಕೆಂಬ ಬಗ್ಗೆ ಮಾಹಿತಿ ನೀಡಲು ಅಣಕು ಪ್ರದರ್ಶನ ಏರ್ಪಡಿಸಬೇಕು
- ಜಿಲ್ಲಾ ಮಟ್ಟದಲ್ಲಿ ಸಮನ್ವಯ, ಸಹಯೋಗ ಸಮಿತಿ, ತಾಲ್ಲೂಕು ಮಟ್ಟದಲ್ಲಿ ಉಪಸಮಿತಿ ರಚಿಸಬೇಕು

ವನ್ಯಪ್ರಾಣಿ ಹಾವಳಿ 200 ಜೀವಹಾನಿ

ಕರ್ನಾಟಕದಲ್ಲಿ 6,395 ಆನೆಗಳಿದ್ದು, ಆನೆಗಳ ಸಂಖ್ಯೆಯಲ್ಲಿ ರಾಜ್ಯವು ದೇಶದಲ್ಲಿ ಮೊದಲ ಸ್ಥಾನದಲ್ಲಿದೆ. 563 ಹುಲಿಗಳಿದ್ದು, ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ. 1,879 ಚಿರತೆಗಳಿದ್ದು ದೇಶದಲ್ಲಿ ಮೂರನೇ ಸ್ಥಾನದಲ್ಲಿದೆ. ರಾಜ್ಯದಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ 2022-23ರಲ್ಲಿ 57, 2023-24ರಲ್ಲಿ 65, 2024-25ರಲ್ಲಿ 46, 2025-26ರಲ್ಲಿ 32 ಮಾನವ ಜೀವಹಾನಿ ಸಂಭವಿಸಿದೆ.

ಮಹಿಳೆ ಕೈಗೆ ಪರಚಿದ ಗಾಯ – ಹವಾನಿಯಂತ್ರಿತ ವ್ಯವಸ್ಥೆ ಇಲ್ಲದ ಬಸ್ ಸಫಾರಿ ಸ್ಥಗಿತ

ಬನ್ನೇರುಘಟ್ಟ ಸಫಾರಿ ವಾಹನದ ಮೇಲೆ ಚಿರತೆ ದಾಳಿ

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಗುರುವಾರ ಮಧ್ಯಾಹ್ನ ಸಫಾರಿ ವಾಹನದ ಮೇಲೆ ಚಿರತೆಯೊಂದು ದಾಳಿ ನಡೆಸಿದ್ದು, ವಾಹನದಲ್ಲಿ ಕುಳಿತಿದ್ದ ಮಹಿಳೆಯೊಬ್ಬರು ಗಾಯಗೊಂಡಿದ್ದಾರೆ.

ವಾಹನದಲ್ಲಿ ಕಿಟಕಿ ಪಕ್ಕ ಕುಳಿತಿದ್ದ ಚೆನ್ನೈನ ವಹೀದಾ ಬಾನು(50) ಕೈಗೆ ಚಿರತೆ ಪರಚಿದ ಗಾಯವಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವಹೀದಾ ಬಾನು, ಪತಿ ಮತ್ತು ಮಗನೊಂದಿಗೆ ಬನ್ನೇರುಘಟ್ಟ ಸಫಾರಿ ವೀಕ್ಷಣೆಗೆ ಬಂದಿದ್ದರು. ಸಫಾರಿ ವಾಹನದ ಕಿಟಕಿ ತೆರೆದು ಚಿರತೆಗಳನ್ನು ನೋಡುವಾಗ ವಾಹನದ ಮುಂದೆ ರಸ್ತೆಯಲ್ಲಿ ಕುಳಿತಿದ್ದ ಚಿರತೆಯೊಂದು ಏಕಾಏಕಿ ದಾಳಿ ನಡೆಸಿದೆ.

ವಾಹನದ ಕಿಟಕಿಗೆ ಅಳವಡಿಸಿದ್ದ ಕಬ್ಬಿಣದ ಜಾಲರಿ ನಡುವಿನ ಜಾಗದಿಂದ ಕಾಲು ಮತ್ತು ಮೂತಿ ತೂರಿಸಿದೆ. ಕಾಲುಗಳಿಂದ ಮಹಿಳೆಯ ಕೈಗಳನ್ನು ಹಿಡಿದು, ಬಾಯಿ ಹಾಕಿದೆ. ತಕ್ಷಣ ಅಕ್ಕಪಕ್ಕದವರು ಮಹಿಳೆಯ ಕೈ ಹಿಡಿದು ಎಳೆದು ಕೊಂಡಿದ್ದಾರೆ. ಮಹಿಳೆ ಧರಿಸಿದ್ದ ಸೆಲ್ವಾರ್ ಕಮೀಜ್ ತೋಳಿನ ಬಟ್ಟೆ ಚಿರತೆ ಬಾಯಿಯಲ್ಲಿ ಉಳಿದಿದೆ. ಕೆಲ ಹೊತ್ತು ಬಟ್ಟೆಯನ್ನೇ ಬಾಯಿಂದ ನೆಕ್ಕುತ್ತ ನಿಂತಿತ್ತು.

ಮಹಿಳೆ ಕೈಗೆ ಚಿರತೆ ಪರಚಿದ ಗಾಯಗಳಾಗಿದ್ದು, ಜಿಗಣಿಯ ಖಾಸಗಿ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ನೀಡಲಾಗಿದೆ. ಈ ಘಟನೆ ಬೆನ್ನಲ್ಲೇ ಹವಾನಿಯಂತ್ರಿತ ವ್ಯವಸ್ಥೆ ಇಲ್ಲದ ಬಸ್ ಸಫಾರಿಯನ್ನು ಅನಿರ್ದಿಷ್ಟಾವಧಿಗೆ ಸ್ಥಗಿತಗೊಳಿಸಲಾಗಿದೆ.

ಸಫಾರಿ ವಾಹನದ ಮೇಲೆ ಚಿರತೆ ದಾಳಿ ನಡೆಸಿರುವುದು ದುರದೃಷ್ಟಕರ. ಚಿರತೆ ಆಕಸ್ಮಿಕವಾಗಿ ಬಸ್ ಮೇಲೆ ಹತ್ತಲು ಪ್ರಯತ್ನಿಸಿದಾಗ ವಹೀದಾ ಬಾನು ಅವರ ಕೈಗೆ ಗಾಯವಾಗಿದೆ. ಅವರನ್ನು ತಕ್ಷಣ ಹತ್ತಿರದ ಆಸ್ಪತ್ರೆಗೆ ಕರೆದೊಯ್ದು, ಅಲ್ಲಿ ಪ್ರಥಮ ಚಿಕಿತ್ಸೆ ನೀಡಲಾಗಿದೆ. ಸಣ್ಣಪುಟ್ಟ ಗಾಯ ಹೊರತುಪಡಿಸಿ ಅವರು ಆರೋಗ್ಯವಾಗಿದ್ದಾರೆ ಎಂದು ಬನ್ನೇರುಘಟ್ಟ ಜೈವಿಕ ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ ತಿಳಿಸಿದ್ದಾರೆ.



ದಾಳಿ ನಡೆಸಲು ಜಿಗಿದ ಚಿರತೆ

ಹಿಂದಿನ ಚಿರತೆ ದಾಳಿಯಿಂದ ಎಚ್ಚೆತ್ತು ಎಲ್ಲಾ ಸಫಾರಿ ವಾಹನಗಳ ಚಾಲಕರಿಗೆ ಎಚ್ಚರಿಕೆ ನೀಡಲಾಗಿತ್ತು. ಚಿರತೆ ಸಫಾರಿಯೊಳಗೆ ಸುರಕ್ಷತಾ ಕ್ರಮ ತೆಗೆದುಕೊಳ್ಳುವಂತೆ ಸೂಚನೆ ನೀಡಲಾಗಿತ್ತು. ಈ ಬಗ್ಗೆ ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ಈ ಸಮಯದಲ್ಲಿ ಬಸ್‌ಗಳ ಸುರಕ್ಷತೆ ಹಾಗೂ ಸಂದರ್ಶಕರಿಗೆ ಉಂಟಾದ ಅನನುಕೂಲತೆಗೆ ವಿಷಾದಿಸುವುದಾಗಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲಕನ ಮೇಲೆಯೂ ನಡೆದಿತ್ತು ದಾಳಿ: ಆಗಸ್ಟ್ 15 ರಂದು ಸಫಾರಿ ವೀಕ್ಷಣೆಗೆ ಬಂದಿದ್ದ ಬೀದರ್‌ನ 12 ವರ್ಷದ ಬಾಲಕನ ಮೇಲೆ ಚಿರತೆ ದಾಳಿ ನಡೆಸಿತ್ತು. ಈ ಘಟನೆ ನಂತರ ಬನ್ನೇರುಘಟ್ಟ ಉದ್ಯಾನದ ಸಫಾರಿ ವಾಹನಗಳಿಗೆ ಮುನ್ನೆಚ್ಚರಿಕೆ ಕ್ರಮವಾಗಿ ಜಾಲರಿಗಳನ್ನು ಅಳವಡಿಸಲಾಗಿತ್ತು.

ಮಧ್ಯಾಹ್ನ ನಡೆದದ್ದೇನು?

ಸಫಾರಿ ವಾಹನ ಹೋಗುವ ಉದ್ಯಾನದ ರಸ್ತೆಯಲ್ಲಿ ಒಂದು ಹಾಗೂ ಪಕ್ಕದ ಹುಲ್ಲುಗಾವಲಿನ ಮರದ ನೆರಳಿನಲ್ಲಿ ಮೂರ್‍ನಾಲ್ಕು ಚಿರತೆಗಳು ವಿಶ್ರಾಂತಿ ಪಡೆಯುತ್ತಿದ್ದವು.

ಸಫಾರಿ ವಾಹನ ಚಾಲಕ ಅಲ್ಲಿಯೇ ಹೋಗಿ ವಾಹನ ನಿಲ್ಲಿಸಿ ಚಿರತೆ ತೋರಿಸಿದ್ದ. ವಾಹನದಲ್ಲಿದ್ದ ಪ್ರವಾಸಿಗರು ಮೊಬೈಲ್ ಕ್ಯಾಮೆರಾಗಳಲ್ಲಿ ಚಿರತೆಗಳ ವಿಡಿಯೊ ಹಾಗೂ ಚಿತ್ರ ಸೆರೆ ಹಿಡಿಯಲು ಮುಂದಾದರು.

ಮರದ ನೆರಳಿನಲ್ಲಿ ಮಲಗಿದ್ದ ಮೂರು ಚಿರತೆಗಳು ಸಫಾರಿ ವಾಹನದ ಬಗ್ಗೆ ಲಕ್ಷ್ಯವಹಿಸದೇ ತಮ್ಮಷ್ಟಕ್ಕೆ ತಾವು ಇದ್ದವು. ಆದರೆ, ವಾಹನದ ಮುಂದೆ ರಸ್ತೆಯಲ್ಲಿ ಕುಳಿತಿದ್ದ ಚಿರತೆ ನಿಧಾನವಾಗಿ ಎದ್ದು ವಾಹನ ಬಾಗಿಲು ಬಳಿ ಬಂದಿದೆ. ನಂತರ ವಾಹನದ ಪಕ್ಕಕ್ಕೆ ಚಲಿಸಿ ಕಿಟಕಿ ಪಕ್ಕ ಕುಳಿತಿದ್ದ ಮಹಿಳೆಯ ಕೈಗೆ ಬಾಯಿ ಹಾಕಿದೆ.

ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಎಲ್ಲಾ ಸಫಾರಿ ವಾಹನಗಳ ಗಾಜಿನ ಕಿಟಕಿ, ಚಾಲಕನ ಮುಂಭಾಗದ ಗಾಜಿನ ಮೇಲೆ ಕಬ್ಬಿಣದ ಜಾಲರಿಗಳನ್ನು ಅಳವಡಿಸಲಾಗಿದೆ. ಕಿಟಕಿ ಮತ್ತು ಕಬ್ಬಿಣದ ಜಾಲರಿ ನಡುವೆ ಒಬ್ಬರು ಕೈ ತೂರಿಸಬಹುದಾದಷ್ಟು ಜಾಗ ಇದೆ. ಈ ಜಾಗದಿಂದಲೇ ಚಿರತೆ ತನ್ನ ಕಾಲು, ಮುಖವನ್ನು ತೂರಿಸಿ ಮಹಿಳೆಯ ಕೈಯನ್ನು ಹಿಡಿದುಕೊಂಡಿದೆ.

International Year of Cooperatives 2025
Cooperatives Build a Better World


NABARD KSCHF

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳ ನಿ., ಬೆಂಗಳೂರು

ನಂ. 03, ಎಸ್. ಕರಿಯಪ್ಪ ರಸ್ತೆ, ಬಸವನಗುಡಿ, ಬೆಂಗಳೂರು-560004.



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

72 ನೇ ಅಖಿಲ ಭಾರತ ಸಹಕಾರ ಸಪ್ತಾಹ-2025

ಹಾಗೂ

ಸಹಕಾರ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ

ಸಪ್ತಾಹ ಧ್ಯೇಯ:
"ಆತ್ಮನಿರ್ಭರ ಭಾರತ ಸಾಧನೆಗೆ ವಾಹಕಗಳಾಗಿ ಸಹಕಾರ ಸಂಸ್ಥೆಗಳು"

ದಿನದ ವಿಷಯ:
ಕಾರ್ಯದಕ್ಷತೆ, ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸಲು ಡಿಜಿಟಲೀಕರಣವನ್ನು ಪ್ರೋತ್ಸಾಹಿಸುವುದು.



ಅಧ್ಯಕ್ಷತೆ:
ಶ್ರೀ ಜಿ.ಟಿ. ದೇವೇಗೌಡ
ಮಾನ್ಯ ಶಾಸಕರು ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ.

ದಿನಾಂಕ: 14-11-2025, ಶುಕ್ರವಾರ | **ಸಮಯ:** ಬೆಳಿಗ್ಗೆ 11.00 ಗಂಟೆಗೆ
ಸ್ಥಳ: ಗಾಯತ್ರಿ ವಿಹಾರ, ಗೇಟ್ ನಂ. 4, ಬೆಂಗಳೂರು ಅರಮನೆ ಮೈದಾನ, ಬಳ್ಳಾರಿ ರಸ್ತೆ, ಬೆಂಗಳೂರು.

ಶುಭ ಕೋರುವವರು:


ವಸತಿ ಮಹಾಮಂಡಲದ ಪದಾಧಿಕಾರಿಗಳು ಹಾಗೂ ನಿರ್ದೇಶಕರುಗಳು



ಶ್ರೀ ಎಸ್. ಟಿ. ಸೋಮಶೇಖರ್
ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳ ನಿ.
ನಿರ್ದೇಶಕರು, ರಾಷ್ಟ್ರೀಯ ಸಹಕಾರ ವಸತಿ ಮಹಾಮಂಡಳ ನಿ., ನವದೆಹಲಿ



ಗದಿಗೆಪ್ಪ ಗೌಡ ಪ. ಪಾಟೀಲ
ಉಪಾಧ್ಯಕ್ಷರು, ಕ.ರಾ.ಸ.ವ. ಮಹಾಮಂಡಲ ನಿ.,



ಬಿ.ಸಿ. ಶಿವಲಿಂಗೇಗೌಡ
ಖಜಾಂಚಿ
ಕ.ರಾ.ಸ.ವ ಮಹಾಮಂಡಲ ನಿ.



ಉಮಾಕಾಂತ
ನಿರ್ದೇಶಕರು, ಬೀದರ್ ಜಿಲ್ಲೆ



ಸಂತೋಷ ಸೋಮಪ್ಪ ಮೇಲ್ನಗೇರಿ
ನಿರ್ದೇಶಕರು, ಬಾಗಲಕೋಟೆ ಜಿಲ್ಲೆ



ಎಂ. ಸದಾನಂದ
ನಿರ್ದೇಶಕರು, ಸಾಲಪಡೆಯದ ಕ್ಷೇತ್ರ



ಸೋಮಶೇಖರ್ ಗೋನಾಯಕ್
ನಿರ್ದೇಶಕರು, ಕಲ್ಬುರ್ಗಿ ಜಿಲ್ಲೆ



ಮಹಂತೇಶ್ ಎಸ್. ಪಾಟೀಲ
ನಿರ್ದೇಶಕರು, ಬೆಳಗಾವಿ ಜಿಲ್ಲೆ



ಬಾಲಚಂದ್ರ ನಾಗಪ್ಪ ಮುಂಜಾನೆ
ನಿರ್ದೇಶಕರು, ವಿಜಯಪುರ ಜಿಲ್ಲೆ



ಎಂ. ಸುರೇಶ್ (ಸತೀಶ್)
ನಿರ್ದೇಶಕರು, ಹಾಸನ ಜಿಲ್ಲೆ



ಡಾ. ಎಂ.ಬಿ. ಮಂಜೇಗೌಡ
ನಿರ್ದೇಶಕರು, ಮೈಸೂರು ಜಿಲ್ಲೆ



ಎನ್. ಆರ್. ನಿರಂಜನ್
ನಿರ್ದೇಶಕರು, ಚಿಕ್ಕಬಳ್ಳಾಪುರ ಜಿಲ್ಲೆ



ಹೆಚ್. ವಿ. ರಾಜೀವ್
ನಿರ್ದೇಶಕರು, ಮೈಸೂರು ಜಿಲ್ಲೆ



ಶಿವರಾಮಗೌಡ
ನಿರ್ದೇಶಕರು, ಕೊಪ್ಪಳ ಜಿಲ್ಲೆ



ಆದಿಭಾಸ್ಕರಯ್ಯ ಶೆಟ್ಟಿ
ನಿರ್ದೇಶಕರು, ಚಿತ್ರದುರ್ಗ ಜಿಲ್ಲೆ



ಎಸ್. ಮಹಬೂಬ್
ನಿರ್ದೇಶಕರು, ಬೆಂ. ನಗರ ಜಿಲ್ಲೆ



ಎಸ್. ಬಿ. ಎಂ. ಮಂಜು
ನಿರ್ದೇಶಕರು, ಮೈಸೂರು ಜಿಲ್ಲೆ



ನಾರಾಯಣ ಹೆಚ್.ಎಂ.
ನಿರ್ದೇಶಕರು, ಚಿಕ್ಕಮಗಳೂರು ಜಿಲ್ಲೆ



ತ್ಯಾಗರಾಜ
ನಿರ್ದೇಶಕರು, ರಾಮನಗರ ಜಿಲ್ಲೆ



ಡಾ. ಅನಿಲ್ ಕುಮಾರ್
ನಿರ್ದೇಶಕರು, ಬೆಂ. ನಗರ ಜಿಲ್ಲೆ



ಶ್ರೀಮತಿ ರೀಟಾ
ನಿರ್ದೇಶಕರು, ತುಮಕೂರು ಜಿಲ್ಲೆ



ಎಸ್. ವಿಜಯಕುಮಾರ್ ಪಾಟೀಲ್
ನಿರ್ದೇಶಕರು



ಚೊಕ್ಕಬಸವನಗೌಡ
ನಿರ್ದೇಶಕರು




ದೊಡ್ಡನಾಗಯ್ಯ
ನಿರ್ದೇಶಕರು



ಶ್ರೀಮತಿ ಸುಮಾ ಜನಾರ್ಧನ್
ನಿರ್ದೇಶಕರು



ಬಿ. ಶಿವರಾಮ್
ನಿರ್ದೇಶಕರು



ವೈ. ಹೆಚ್. ಗೋಪಾಲಕೃಷ್ಣ
ವ್ಯವಸ್ಥಾಪಕ ನಿರ್ದೇಶಕರು

ಸಕಲ ಸಹಕಾರ ಬಾಂಧವರಿಗೆ ಹಾರ್ದಿಕ ಶುಭಾಶಯಗಳು

ಸಿನಿಮಾ ರಂಜನೆ

ಅನೀಶ್ ತೇಜೇಶ್ವರ್ ನಾಯಕನಾಗಿ ನಟಿಸಿ, ನಿರ್ದೇಶಿಸಿರುವ ಲವ್ ಒಟಿಪಿ ಚಿತ್ರ ಇಂದು (ನ.14) ತೆರೆ ಕಾಣುತ್ತಿದೆ. ಚಿತ್ರದಲ್ಲಿನ ಪಾತ್ರ ಹಾಗೂ ತಮ್ಮ ಸಿನಿಪಯಣ ಕುರಿತು ಅವರು ಮಾತನಾಡಿದ್ದಾರೆ.

‘ಯಶಸ್ಸು ಗಳಿಸುವ ನಿರೀಕ್ಷೆಯಲ್ಲಿದ್ದೇನೆ’


ಅನೀಶ್ ತೇಜೇಶ್ವರ್

• ವಿನಾಯಕ ಕೆ.ಎಸ್.

• ಚಿತ್ರದಲ್ಲಿನ ನಿಮ್ಮ ಪಾತ್ರ...

ಅಕ್ಷಯ್ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಕ್ರಿಕೆಟರ್ ಆಗಬೇಕೆಂಬ ಗುರಿ ಹೊಂದಿರುವ ಪಾತ್ರ. ಅಪ್ಪ ಎಂದರೆ ತೀರ ಭಯ. ಅಪ್ಪನ ಹೆಸರು ಕೇಳಿದರೆ ಮೂತ್ರ ಮಾಡಿಕೊಳ್ಳುವ ಸ್ವಭಾವದ ಹುಡುಗ. ಆದರೂ ಇಬ್ಬರು ಹುಡುಗಿಯರ ಹಿಂದೆ ಇರುತ್ತಾನೆ. ಅಪ್ಪನಿಗೆ ಲವ್ ಅಂದ್ರೆ ಆಗುವುದೇ ಇಲ್ಲ. ಮಗನಿಗೆ ಪ್ರೇಮದ ಹಂಬಲ. ಆಗ ಏನೆಲ್ಲ ಘಟನೆಗಳು ನಡೆಯುತ್ತವೆ ಎಂಬುದನ್ನು ಹಾಸ್ಯಮಯ ದಾಟಿಯಲ್ಲಿ ಹೇಳಿದ್ದೇನೆ. ರಾಮ್‌ಕಾಮ್ ಜಾನರ್‌ನ ಸಿನಿಮಾ.

• ತ್ರಿಕೋನ ಪ್ರೇಮಕಥೆಯೆ?

ಹಾಸ್ಯಮಯ ಪ್ರೇಮಕಥೆ. ಆದರೆ ಇಬ್ಬರು ನಾಯಕಿಯರು ಓರ್ವ ನಾಯಕ ಎಂಬ ರೀತಿ ಹೇಳಿಲ್ಲ. ಆ ರೀತಿ ಕಥೆಯ ಸಿನಿಮಾ ಮಾಡಿದರೆ ಜನ ನೋಡುವುದಿಲ್ಲ, ಒಂದೇ ದಿನಕ್ಕೆ ಚಿತ್ರಮಂದಿರಗಳಿಂದ ಎತ್ತಂಗಡಿ ಆಗುತ್ತದೆ ಎಂಬುದು ಚೆನ್ನಾಗಿ ಗೊತ್ತಿದೆ. ಹೀಗಾಗಿ ಚಿತ್ರಕಥೆಯನ್ನು ಬೇರೆ ರೀತಿ ತೆಗೆದುಕೊಂಡು ಹೋಗಿರುವೆ.

• ನಿರ್ದೇಶಕ ಮತ್ತು ನಟನಾಗಿ ಏನೆಲ್ಲ ಸವಾಲುಗಳಿತ್ತು?

ನಟನೆಗಿಂತ ನಿರ್ದೇಶನದಲ್ಲಿ ಸವಾಲು, ಒತ್ತಡ ಇತ್ತು. ಈಗಲೂ ಅದೇ ಒತ್ತಡ ಇದೆ. ಸಾಧನೆ ಮಾಡಲು ಹೊರಟಾಗ ಇದೆಲ್ಲ ಸಹಜ. ಆದರೆ ಒಂದು ಉತ್ತಮ ಚಿತ್ರ ಮಾಡಿದ ತೃಪ್ತಿಯಿದೆ.

• ನಟನೆಯ ಜತೆ ನಿರ್ದೇಶನದ ಆಯ್ಕೆ ಯಾಕೆ?

ಈ ಹಿಂದೆ ನಟನೆ ಜತೆಗೆ ನಿರ್ಮಾಣ ಮಾಡಿದ್ದೆ. ಆದರೆ ನಿರ್ಮಾಪಕ ಯಾಕೆ ಆದೆ ಎಂಬುದನ್ನು ಯಾರೂ ಕೇಳಿಲ್ಲ. ನಿರ್ದೇಶನಕ್ಕೆ ಇಳಿದಾಗ ಯಾಕೆ ಎಂಬ ಪ್ರಶ್ನೆ ತುಂಬ ಬಂತು. ನಿರ್ಮಾಪಕ ಆದಾಗಲೂ ಸಿನಿಮಾಕ್ಕೆ ನ್ಯಾಯ ಒದಗಿಸಿದ್ದೆ. ಸರಿಯಾಗಿ ಪ್ರಚಾರ ಮಾಡಿ ಸಿನಿಮಾವನ್ನು ದಡ ಮುಟ್ಟಿಸಿದ್ದೆ. ನಿರ್ದೇಶಕನಾಗಿ ಕೂಡ ನನ್ನ ಸಿನಿಮಾದಲ್ಲಿ ಪ್ರೇಕ್ಷಕರಿಗೆ ಮನರಂಜನೆ ನೀಡುವೆ ಎಂಬ ಭರವಸೆ ಇದೆ. ನಿರ್ದೇಶನ ಮಾಡುತ್ತೇನೆ ಎಂದು ಸುಮ್ಮನೆ ಮಾಡಿಲ್ಲ. ಈ ಕಥೆ ನಿರ್ದೇಶನ ವರ್ಕೌಟ್ ಆಗುತ್ತದೆ ಎಂಬ ಕಾರಣಕ್ಕೆ ಮಾಡಿರುವೆ. ಕಥೆ, ಚಿತ್ರಕಥೆ, ಸಂಭಾಷಣೆ ಎಲ್ಲವೂ ನನ್ನದೇ.

• ತೆಲುಗಿನಲ್ಲಿಯೂ ಈ ಚಿತ್ರ ಮಾಡಿರುವ ಕಾರಣವೇನು?

ಇಂಥದ್ದೆ ಕಾರಣ ಎಂದಿಲ್ಲ. 2010ರಲ್ಲಿಯೇ ತೆಲುಗಿನಲ್ಲಿ ನನ್ನ ಸಿನಿಮಾವೊಂದು ಅರ್ಧಕ್ಕೆ ನಿಂತಿತ್ತು. ಯಾವ ಕೆಲಸವನ್ನು ಅರ್ಧದಲ್ಲಿ ಬಿಟ್ಟುಹೋಗುವ ಸ್ವಭಾವ ನನ್ನದಲ್ಲ. ಅದನ್ನು ಪೂರ್ತಿ ಮಾಡುವ ಬಯಕೆ ಇತ್ತು. ಈ ಸಿನಿಮಾ ಮೂಲಕವಾದರೂ ಅದನ್ನು ಪೂರ್ತಿಗೊಳಿಸೋಣ, ಅಲ್ಲಿಯೂ ನಾಯಕನಾಗಿ ನೆಲೆಯೂರೋಣ ಎಂಬ ಬಯಕೆಯಷ್ಟೆ. ತೆಲುಗು ಸ್ಫೂರ್ತಿ ಪಡೆದ ಕಥೆಯೇನಲ್ಲ, ಎರಡೂ ರಾಜ್ಯಗಳಿಗೂ ಕನೆಕ್ಟ್ ಆಗುವ ಕಥೆ.

• ಈತನಕದ ಸಿನಿಪಯಣ ಹೇಗಿತ್ತು?

ಇಲ್ಲಿತನಕದ ಸಿನಿಪಯಣ ನೂರರಷ್ಟು ಎಕ್ಸೈಟ್ ಆಗಿದೆ. ಏಳು, ಬೀಳುಗಳು ಸಹಜ. ಅವುಗಳಾಚೆಗೆ ಖುಷಿಯಿದೆ. ಈ ಚಿತ್ರದಿಂದ ಮ್ಯಾಜಿಕ್ ಆಗುತ್ತದೆ ಎಂದು ನಂಬಿರುವೆ.

• ನಿಮ್ಮ ಹದಿನೈದು ವರ್ಷಗಳ ಈ ಪಯಣದಲ್ಲಿ ನಿರೀಕ್ಷಿತ ಯಶಸ್ಸು ಸಿಕ್ಕಿದೆಯಾ?

ಖಂಡಿತ ಸಿಕ್ಕಿಲ್ಲ. ಅದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಪ್ರಯತ್ನ ಇದೆ. ಪ್ರಯತ್ನಕ್ಕೆ ಒಂದು ದಿನ ಫಲ ಸಿಗುತ್ತದೆ ಎಂದು ನಂಬಿರುವೆ. ಸ್ವಲ್ಪ ತಡವಾಗಬಹುದು. 15 ವರ್ಷಗಳ ಸಿನಿಪಯಣದ ಅನುಭವ ಅದ್ಭುತ. ಜೀವನದಲ್ಲಿ ವೈಫಲ್ಯ ಮತ್ತು ಯಶಸ್ಸು ಎರಡು ಇರುತ್ತದೆ. ನಾನು ಈಗಾಗಲೇ ವೈಫಲ್ಯವನ್ನು ಸಾಧಿಸಿ ಬಿಟ್ಟಿದ್ದೇನೆ! ಬಾಕಿ ಇರುವುದು ಯಶಸ್ಸು. ಅದನ್ನು ತಲುಪುತ್ತೇನೆ ಎಂಬ ನಂಬಿಕೆ ಇದೆ. ಆ ನಿಟ್ಟಿನಲ್ಲಿ ಯತ್ನ ನಿರಂತರ. ಪ್ರಯತ್ನ ಪಡದೆ ಇರುವವರು ತುಂಬ ಜನ ಇದ್ದಾರೆ. ಆದರೆ ನಾನು ನಿರಂತರವಾಗಿ ಪ್ರಯತ್ನ ಮಾಡುತ್ತಿರುವೆ.

• ನಿಮ್ಮ ಮುಂದಿನ ಸಿನಿಮಾಗಳು...

ಸದ್ಯಕ್ಕೆ ಈ ಸಿನಿಮಾ ಮಾತ್ರ. ಇದರ ಬಿಡುಗಡೆ ನಂತರ ಮುಂದಿನ ಸಿನಿಮಾಗಳ ಬಗ್ಗೆ ಯೋಚಿಸುವೆ. ಯಾವುದೇ ಕಥೆ ಒಪ್ಪಿಕೊಂಡಿಲ್ಲ.

• ಚಿತ್ರರಂಗದಲ್ಲಿ ನಿಮ್ಮ ಮುಂದಿನ ಗುರಿಗಳೇನು?

ನಟ, ನಿರ್ದೇಶಕ, ನಿರ್ಮಾಪಕ ಎಲ್ಲವೂ ಆಗಿರುವೆ. ಸಿನಿಮಾವಷ್ಟೇ ನನ್ನ ಗುರಿ. ನನ್ನ ಸಿನಿಮಾ ಬಂದಾಗ ಜನ ಮುಗಿಬಿದ್ದರೆ ಅದಕ್ಕಿಂತ ಸಂತೋಷ ಇನ್ನೊಂದಿಲ್ಲ. ನಮ್ಮಲ್ಲೇ ಏನೋ ಕೊರತೆ ಇರುತ್ತೆ. ಅದರಿಂದ ಜನ ನನ್ನ ಸಿನಿಮಾಗಳಿಗೆ ಮುಗಿಬೀಳುತ್ತಿಲ್ಲ. ಬಹುಶಃ ದೇವರು ಎಲ್ಲ ಗುಣಪಾಠಗಳನ್ನು ಕಲಿಸಿದ ಬಳಿಕ ಆ ಕೊರತೆಯನ್ನು ಅರ್ಥ ಮಾಡಿಸುತ್ತಾನೆ ಅಂದುಕೊಳ್ಳುವೆ. ಗೆಲುವಿನ ಪ್ರಯತ್ನವಂತೂ ಜಾರಿಯಲ್ಲಿರುತ್ತದೆ.


ಹೃತಿಕಾ ಶ್ರೀನಿವಾಸ್

ಹೃತಿಕಾಗೆ ಭಿನ್ನ ಪಾತ್ರಗಳ ಹಂಬಲ

ಹೃತಿಕಾ ಶ್ರೀನಿವಾಸ್ ನಾಯಕಿಯಾಗಿ ನಟಿಸಿರುವ ‘ಉಡಾಳ’ ಚಿತ್ರ ಇಂದು ತೆರೆ ಕಾಣುತ್ತಿದೆ. ಅಪ್ಪಟ ಉತ್ತರ ಕರ್ನಾಟಕದ ಸೊಗಡಿನ ಈ ಚಿತ್ರದಲ್ಲಿನ ತಮ್ಮ ರಗಡ್ ಪಾತ್ರ ಕುರಿತು ಅವರು ಮಾತನಾಡಿದ್ದಾರೆ.

‘ಚಿತ್ರದ ಹೆಸರೇ ಹೇಳುವಂತೆ ಇದು ‘ಉಡಾಳ’ರ ಕಥೆ. ಇಲ್ಲಿ ಬರುವ ಎಲ್ಲ ಪಾತ್ರಗಳೂ ಅದೇ ರೀತಿ ಇವೆ. ಯಾರೂ ಗಂಭೀರವಾಗಿರುವುದಿಲ್ಲ. ಕಾಲೇಜು ಹುಡುಗರ ಕಥೆ. ನಾನು ಪಿಂಕಿ ಪಾಟೀಲ್ ಆಗಿ ಕಾಣಿಸಿಕೊಂಡಿದ್ದೇನೆ. ಕಾಲೇಜು ಹುಡುಗಿ. ಚಿತ್ರದ ನಾಯಕ ಪಕ್ಯ ಜತೆ ಪ್ರೇಮ ಕಥೆ ಸಾಗುತ್ತದೆ. ನಾಯಕನ ಊರು ವಿಜಯಪುರ. ನಾನು ಹುಬ್ಬಳ್ಳಿ ಹುಡುಗಿ. ನಮ್ಮಿಬ್ಬರ ಪ್ರೇಮಕಥೆಯ ಜತೆ ಒಂದಷ್ಟು ಕಾಲೇಜು ಸನ್ನಿವೇಶಗಳಿವೆ’ ಎಂದು ಮಾತು ಪ್ರಾರಂಭಿಸಿದರು ಹೃತಿಕಾ.

ನಾಯಕಿಯಾಗಿ ಅವರಿಗಿದು ನಾಲ್ಕನೆ ಸಿನಿಮಾ. ‘ಅಪರೂಪ’ ಚಿತ್ರದ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟರು. ‘ಆರಾಮ್ ಅರವಿಂದ್‌ಸ್ವಾಮಿ’ ಚಿತ್ರದ ಮೂಲಕ ಗುರುತಿಸಿಕೊಂಡರು. ‘ಔಟ್ ಆಫ್ ಸಿಲಬಸ್’ ಸಿನಿಮಾದಲ್ಲಿಯೂ ನಾಯಕಿಯಾಗಿ ಕಾಣಿಸಿಕೊಂಡರು. ತೆಲುಗಿನಲ್ಲಿ ಎರಡು ಸಿನಿಮಾಗಳಲ್ಲಿ ನಟಿಸಿದ್ದಾರೆ.

‘ನಮ್ಮ ಕುಟುಂಬ ಚಿತ್ರರಂಗದೊಂದಿಗೆ ನಂಟು ಹೊಂದಿದೆ. ನಮ್ಮ ಅತ್ತೆ ಕೂಡ ನಟಿ. ಅವರನ್ನು ನೋಡಿ ನಾನು ನಟಿಯಾಗಬೇಕೆಂದು ಬಂದೆ. ಹುಟ್ಟಿ ಬೆಳೆದಿದ್ದು ಬೆಂಗಳೂರಿನಲ್ಲಿ. ಹೀಗಾಗಿ ಉತ್ತರ ಕರ್ನಾಟಕ ಭಾಷೆ ಸಿನಿಮಾ ಮಾಡಿದ್ದು ನನಗೆ ಒಂದು ರೀತಿ ಸರ್ಪ್ರೈಸ್. ಆಡಿಷನ್‌ನಲ್ಲಿ ನನಗೆ ಉತ್ತರ ಕರ್ನಾಟಕದ ಪದಗಳು ಅರ್ಥವಾಗಿರಲಿಲ್ಲ. ಆದರೆ ನಿರ್ದೇಶಕ ಅಮೋಲ್ ಪಾಟೀಲ್ ಧೈರ್ಯ ತುಂಬಿ ಪಾತ್ರ ನೀಡಿದರು. ಅಲ್ಲಿನ ಭಾಷೆಯ ತರಬೇತಿ ಕೊಡಿಸಿದರು. ನಟನೆ ಜತೆ ನನ್ನ ಪಾತ್ರದ ಡಬ್ಬಿಂಗ್ ಕೂಡ ಮಾಡಿದ್ದೇನೆ. ಅವರು ತರಬೇತಿಯಲ್ಲಿ ಪ್ರತಿ ಪದದ ಅರ್ಥವನ್ನು ತಿಳಿಸಿದರು. ನಾಯಕ ಪೃಥ್ವಿ ಅವರದ್ದು ದಾವಣಗೆರೆ. ಹೀಗಾಗಿ ಅವರಿಗೂ ವಿಜಯಪುರ ಭಾಗದ ಭಾಷೆಯ ತರಬೇತಿ ನೀಡಿದರು’ ಎಂದು ಚಿತ್ರೀಕರಣದ ಅನುಭವ ಹಂಚಿಕೊಂಡರು.

‘ನಮ್ ಗಣಿ ಬಿಕಾಂ ಪಾಸ್–2’ ಚಿತ್ರದಲ್ಲಿ ನಟಿಸಿರುವೆ. ‘ಜಾಕಿ–42’ ಚಿತ್ರದಲ್ಲಿಯೂ ಕಾಣಿಸಿಕೊಂಡಿರುವೆ. ಇವುಗಳಲ್ಲದೇ ಎರಡು ತೆಲುಗು ಸಿನಿಮಾಗಳಲ್ಲಿ ನಟಿಸಿರುವೆ. ‘ಉಡಾಳ’ ಸಿನಿಮಾದಲ್ಲಿ ನಟಿಸುತ್ತೇನೋ ಇಲ್ಲವೋ ಎಂಬ ಅನುಮಾನ ಇತ್ತು. ಆದರೆ ನಿರ್ದೇಶಕ ಅಮೋಲ್ ಪಾಟೀಲ್ ಬರೆದ ಚಿತ್ರಕಥೆ ಕೇಳಿ ಈ ಸಿನಿಮಾ ಮಾಡಲೇಬೇಕೆಂದು ನಿರ್ಧರಿಸಿದೆ. ಈ ಚಿತ್ರದ ಪಾತ್ರ ಒಂದು ರೀತಿ ನನ್ನ ಕನಸಿನ ಪಾತ್ರ. ಭವಿಷ್ಯದಲ್ಲಿ ಪಿಂಕಿ ಪಾಟೀಲ್ ರೀತಿಯ ವಿಭಿನ್ನ ಪಾತ್ರಗಳನ್ನು ಮಾಡುವ ಹಂಬಲವಿದೆ’ ಎನ್ನುತ್ತಾರೆ ಅವರು.

‘ಚಿತ್ರರಂಗದಲ್ಲಿ ಏರಿಳಿತಗಳು ಸಹಜ. ಅನುಭವಗಳಿಂದ ತುಂಬ ಪಾಠ ಕಲಿತಿದ್ದೇನೆ. ಈಗ ಪ್ರೇಕ್ಷಕರ ದೃಷ್ಟಿಕೋನದಿಂದ ಕಥೆ ಕೇಳಿ ಪಾತ್ರಗಳನ್ನು ಒಪ್ಪಿಕೊಳ್ಳುತ್ತೇನೆ. ಸಾಮಾನ್ಯರಿಗೆ ಇಷ್ಟವಾಗುವ ಪಾತ್ರಗಳನ್ನು ಮಾಡಬೇಕು. ಚಿತ್ರರಂಗದಲ್ಲಿ ಇನ್ನೂ ತುಂಬ ಕಲಿಯಲು ಇದೆ ಎನ್ನಿಸುತ್ತದೆ. ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇನೆ’ ಎಂದು ಮಾತಿಗೆ ವಿರಾಮವಿತ್ತರು.

ಹೊರಬಂತು ಮಾರ್ನಮಿ ಟ್ರೇಲರ್

ನಟಿ ಚೈತ್ರಾ ಜೆ ಆಚಾರ್ ಪ್ರಮುಖ ಪಾತ್ರದಲ್ಲಿ ನಟಿಸಿರುವ ‘ಮಾರ್ನಮಿ’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ಸುದೀಪ್ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ರಿಶಿತ್ ಶೆಟ್ಟಿ ನಿರ್ದೇಶನದ ಚಿತ್ರ ನ.28ರಂದು ತೆರೆಗೆ ಬರಲಿದೆ.

‘ಟ್ರೇಲರ್ ಅದ್ಭುತವಾಗಿದೆ. ಈ ರೀತಿ ಕಥೆಯನ್ನು ಇಷ್ಟು ಸೊಗಸಾಗಿ ತೆರೆಯ ಮೇಲೆ ತರಲು ಪರಿಶ್ರಮ, ಶ್ರದ್ಧೆ, ಆಸಕ್ತಿ ಬೇಕು. ಆ ವಿಷಯದಲ್ಲಿ ಈ ತಂಡ ಗೆದ್ದಿದೆ. ನಿರ್ದೇಶಕರು ತುಂಬಾ ಶ್ರಮ ಹಾಕಿದ್ದಾರೆ. ಅವರದ್ದೇ ಊರಿನ ಕಥೆಯನ್ನು ಸೊಗಸಾಗಿ ಹೆಣೆದಿದ್ದಾರೆ. ಚರಣ್ ರಾಜ್ ಸಂಗೀತ ಚೆನ್ನಾಗಿದೆ. ಈ ಚಿತ್ರ ದೊಡ್ಡ ರೀತಿ ಯಶಸ್ಸು ಕಾಣಲಿ’ ಎಂದರು ಸುದೀಪ್.

‘ನಿರ್ದೇಶಕನಾಗಬೇಕು ಎಂಬ ನನ್ನ ಕನಸು ಈ ಚಿತ್ರದ ಮೂಲಕ ನನಸಾಗಿದೆ. ಸುದೀಪ್ ಅವರಂಥ ನಟ ನಮ್ಮ ಚಿತ್ರದ ಟ್ರೇಲರ್ ಬಿಡುಗಡೆ ಮಾಡಿದ್ದು, ಟ್ರೇಲರ್‌ಗೆ ಧ್ವನಿ ನೀಡಿದ್ದು ಕನಸೋ, ನನಸೋ ಗೊತ್ತಾಗುತ್ತಿಲ್ಲ. ಕರಾವಳಿ ಭಾಗದಲ್ಲಿ ನಡೆಯುವ ದಸರಾ ಹಿನ್ನೆಲೆಯ ಕಥೆಯಲ್ಲಿ ಒಂದು ವಿಭಿನ್ನ ಪ್ರೇಮ ಕಥೆ ಇದೆ. ಜತೆಗೆ ಆ್ಯಕ್ಷನ್, ಎಮೋಷನ್, ಹುಲಿ ಕುಣಿತ ಎಲ್ಲವೂ ಇವೆ. ಚಿತ್ರಮಂದಿರದಲ್ಲಿಯೇ ಚಿತ್ರವನ್ನು ನೋಡಿ ನಮ್ಮ ತಂಡವನ್ನು ಹರಸಿ’ ಎಂದರು ನಿರ್ದೇಶಕ.

ರಿತ್ವಿಕ್ ಮಠದ್ ಚಿತ್ರದ ನಾಯಕ. ಸುಮನ್ ತಲ್ವಾರ್, ಪ್ರಕಾಶ್ ತೂಮ್ಮಿನಾಡು, ಸೋನು ಗೌಡ, ಜ್ಯೋತೀಶ್ ಶೆಟ್ಟಿ, ರೋಚಿತ್, ಸ್ವರಾಜ್ ಶೆಟ್ಟಿ, ಮೈಮ್ ರಾಮದಾಸ್ ಹಾಗೂ ಚೈತ್ರಾ ಶೆಟ್ಟಿ ಮುಂತಾದವರು ನಟಿಸಿದ್ದಾರೆ.

ಚರಣ್ ರಾಜ್ ಸಂಗೀತ, ಶಿವಸೇನ ಛಾಯಾಚಿತ್ರಗ್ರಹಣ, ಪ್ರತೀಕ್ ಶೆಟ್ಟಿ ಸಂಕಲನವಿದೆ. ಗುನಾಢ್ಯ ಬ್ಯಾನರ್ ಅಡಿಯಲ್ಲಿ ಶಿಲ್ಪಾ ನಿಶಾಂತ್ ಹಾಗೂ ನಿಶಾಂತ್ ಬಂಡವಾಳ ಹೂಡಿದ್ದಾರೆ.


ಚೈತ್ರಾ ಜೆ ಆಚಾರ್

ಡಿ.25ಕ್ಕೆ ‘ಮಾರ್ಕ್’ ಬಿಡುಗಡೆ ಖಚಿತ

ಕಿಚ್ಚ ಸುದೀಪ್ ನಟನೆಯ ‘ಮಾರ್ಕ್’ ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದೆ. ಈ ಹಿಂದೆ ಘೋಷಿಸಿದಂತೆ ಚಿತ್ರವು ಡಿಸೆಂಬರ್ 25ಕ್ಕೆ ತೆರೆಗೆ ಬರುವುದು ಖಚಿತ ಎಂದು ಚಿತ್ರತಂಡ ಹೇಳಿದೆ. ವಿಜಯ್ ಕಾರ್ತಿಕೇಯ ನಿರ್ದೇಶನದ ಚಿತ್ರವಿದು. ಸುದೀಪ್‌ಗೆ ಇವರು ಈ ಹಿಂದೆ ‘ಮ್ಯಾಕ್ಸ್’ ಚಿತ್ರ ನಿರ್ದೇಶಿಸಿದ್ದರು.

‘ಮ್ಯಾಕ್ಸ್’ ರೀತಿಯೇ ಈ ಬಾರಿ ಕೂಡ ಪೊಲೀಸ್ ಅಧಿಕಾರಿ ಪಾತ್ರದಲ್ಲಿ ಸುದೀಪ್ ಅವರು ಕಾಣಿಸಿಕೊಳ್ಳುತ್ತಿದ್ದಾರೆ. ಮಾಸ್, ಆ್ಯಕ್ಷನ್ ಕಥೆ ಹೊಂದಿರುವ ಚಿತ್ರ. ಚಿತ್ರೀಕರಣ ಮುಗಿದು ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಪ್ರಾರಂಭಗೊಂಡಿವೆ. ಕ್ರಿಸ್ಮಸ್ ಹಬ್ಬದ ಪ್ರಯುಕ್ತ ಡಿಸೆಂಬರ್ 25ರಂದು ಸಿನಿಮಾ ತೆರೆಗೆ ಬರಲಿದೆ’ ಎಂದು ಚಿತ್ರತಂಡ ತಿಳಿಸಿದೆ.

ಚಿತ್ರಕ್ಕೆ ಶೇಖರ್‌ಚಂದ್ರ ಅವರು ಛಾಯಾಚಿತ್ರಗ್ರಹಣ, ಅಜನೀಶ್ ಬಿ. ಲೋಕನಾಥ್ ಸಂಗೀತವಿದೆ. ಈ ಸಿನಿಮಾದಲ್ಲಿ ಅಜಯ್ ಮಾರ್ಕಂಡೆ ಎಂಬ ಪಾತ್ರವನ್ನು ಸುದೀಪ್ ಮಾಡಿದ್ದಾರೆ. ‘ಸತ್ಯಜ್ಯೋತಿ ಫಿಲ್ಮ್ಸ್’ ಹಾಗೂ ‘ಕಿಚ್ಚ ಕ್ರಿಯೇಷನ್ಸ್’ ಬ್ಯಾನರ್‌ಗಳು ಜತೆಯಾಗಿ ‘ಮಾರ್ಕ್’ ಚಿತ್ರವನ್ನು ನಿರ್ಮಿಸಿವೆ.


ಸುದೀಪ್

ಈ ವಾರ ತೆರೆಯಲ್ಲಿ ಏಳು ಸಿನಿಮಾಗಳು


ಆಶಿಕಾ ರಂಗನಾಥ್

ಗತವೈಭವ

ಸಿಂಪಲ್ ಸುನಿ ನಿರ್ದೇಶನದ ಚಿತ್ರವಿದು. ಯುವ ನಟ ದುಷ್ಯಂತ್‌ಗೆ ಆಶಿಕಾ ರಂಗನಾಥ್ ನಾಯಕಿಯಾಗಿದ್ದಾರೆ. ನಟ ಸುದೀಪ್ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿ ಹಾರೈಸಿದ್ದರು.

‘ಈ ಚಿತ್ರ ಬಿಡುಗಡೆಯಾದ ಬಳಿಕ ಮೌತ್ ಪಬ್ಲಿಸಿಟಿ ತೆಗೆದುಕೊಂಡು ಪ್ರೇಕ್ಷಕರನ್ನು ಆಕರ್ಷಿಸುತ್ತದೆ ಎಂಬ ನಂಬಿಕೆ ಇದೆ. ಚಿತ್ರಕ್ಕೆ ಹಾಕಿರುವ ಶ್ರಮ ದೊಡ್ಡದಿದೆ. ಆದರೆ ಸ್ಟಾರ್ ವ್ಯಾಲ್ಯೂ ಕಮ್ಮಿ ಇತ್ತು. ಚಿತ್ರರಂಗದ ಗಣ್ಯರಾದ ಶಿವಣ್ಣ, ಸುದೀಪ್ ನಮ್ಮ ಬೆಂಬಲಕ್ಕೆ ನಿಂತಿದ್ದಾರೆ. ಹೀಗಾಗಿ ಚಿತ್ರ ಉತ್ತಮ ಪ್ರಾರಂಭ ಪಡೆಯುತ್ತದೆ ಎಂಬ ನಂಬಿಕೆಯಿದೆ’ ಎಂದಿದ್ದಾರೆ ಸುನಿ.

ಸುಧಾ ಬೆಳವಾಡಿ, ಕಿಶನ್ ಬಿಳಗಲಿ, ಕೃಷ್ಣ ಹೆಬ್ಬಾಳೆ, ಕೃಷ್ಣ ಜೋರಾಪುರ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಈ ಚಿತ್ರಕ್ಕೆ ಜೂಡಾ ಸ್ಯಾಂಡಿ ಸಂಗೀತ ನೀಡಿದ್ದು, ವಿಲಿಯಂ ಡೇವಿಡ್ ಛಾಯಾಚಿತ್ರಗ್ರಹಣವಿದೆ. ದೀಪಕ್ ಹಾಗೂ ಸಿಂಪಲ್ ಸುನಿ ಚಿತ್ರ ನಿರ್ಮಾಣ ಮಾಡಿದ್ದಾರೆ.

ಉಡಾಳ

ಯೋಗರಾಜ್ ಭಟ್ಟರ ಗರಡಿಯಲ್ಲಿ ಪಳಗಿದ ಅಮೋಲ್ ಪಾಟೀಲ್ ನಿರ್ದೇಶನದ ಚಿತ್ರವಿದು. ರವಿ ಶಾಮನೂರು ಹಾಗೂ ಯೋಗರಾಜ್ ಭಟ್ ನಿರ್ಮಾಣವಿದೆ. ‘ಪದವಿಪೂರ್ವ’ ಖ್ಯಾತಿಯ ಪೃಥ್ವಿ ಶಾಮನೂರಿಗೆ ಹೃತಿಕಾ ಶ್ರೀನಿವಾಸ್ ಜೋಡಿಯಾಗಿದ್ದಾರೆ.

‘ನಗಿಸುವುದು ಅಷ್ಟು ಸುಲಭವಲ್ಲ. ಆದರೆ ನಿರ್ದೇಶಕ ಅಮೋಲ್ ಪಾಟೀಲ್, ನಾಯಕ ಪೃಥ್ವಿ ಶಾಮನೂರು ಸೇರಿದಂತೆ 20 ಜನ ಕಲಾವಿದರ ತಂಡವನ್ನಿಟ್ಟುಕೊಂಡು ಈ ಚಿತ್ರದ ಮೂಲಕ ನಗುವಿನ ರಸದೌತಣವನ್ನೇ ಬಡಿಸಿದ್ದಾರೆ’ ಎಂದಿದ್ದಾರೆ ಯೋಗರಾಜ್ ಭಟ್.

‘ಉತ್ತರ ಕರ್ನಾಟಕದ ಸೊಗಡನ್ನು ಊಟದಲ್ಲಿ ಉಪ್ಪಿನಕಾಯಿ ರೀತಿ ಕೆಲವು ಚಿತ್ರಗಳಲ್ಲಿ ಬಳಸಿಕೊಳ್ಳಲಾಗಿತ್ತು. ಆದರೆ ನಮ್ಮ ಚಿತ್ರ ಉತ್ತರ ಕರ್ನಾಟಕದ ಫುಲ್ ಮೀಲ್ಸ್. ಇಡೀ ಕಥೆ ವಿಜಯಪುರದಲ್ಲೇ ನಡೆಯುತ್ತದೆ’ ಎಂದು ನಿರ್ದೇಶಕರು ತಿಳಿಸಿದ್ದಾರೆ.

ಚೇತನ್ ಡ್ಯಾವಿ ಸಂಗೀತ, ಶಿವಶಂಕರ ಛಾಯಾಚಿತ್ರಗ್ರಹಣ, ಮಧು ತುಂಬಕೆರೆ ಸಂಕಲನವಿದೆ. ಬಲ ರಾಜವಾಡಿ, ಗೋವಿಂದೇಗೌಡ ಮುಂತಾದವರು ಚಿತ್ರದಲ್ಲಿದ್ದಾರೆ.



kite ಬ್ರದರ್ಸ್

ವಿರೇನ್ ಸಾಗರ್ ಬಗಾಡೆ ನಿರ್ದೇಶನದ ಚಿತ್ರವಿದು. ಭಜರಂಗ ಸಿನಿಮಾ ಲಾಂಛನದಲ್ಲಿ ಮಂಜುನಾಥ್ ಬಿ.ಎಸ್, ರಜನಿಕಾಂತ್ ರಾವ್ ಹಾಗೂ ಮಂಜುನಾಥ್ ಬಗಾಡೆ ಬಂಡವಾಳ ಹೂಡಿದ್ದಾರೆ.

‘ಮಕ್ಕಳ ಚಿತ್ರವಾದರೂ, ಎಲ್ಲಾ ವಯಸ್ಸಿನವರು ನೋಡಬೇಕಾದ ಉತ್ತಮ ಸಂದೇಶವಿರುವ ಚಿತ್ರ. ಹಳೆಯ ಸರ್ಕಾರಿ ಶಾಲೆಗಳನ್ನು ಸರ್ಕಾರವೇ ದುರಸ್ತಿ ಮಾಡಿಸಲಿ ಎಂದು ಸಮಾಜ ಕಾಯಬಾರದು. ಆ ಶಾಲೆಯಲ್ಲಿ ಕಲಿತವರು ಸಶಕ್ತರಾದ ಬಳಿಕ ಶಾಲೆಯ ಬೆಂಬಲಕ್ಕೆ ನಿಲ್ಲಬೇಕು ಎಂಬ ಸದಾಶಯ ಚಿತ್ರದಲ್ಲಿದೆ. ಚಿತ್ರದಲ್ಲಿ ಸಹೋದರರಿಬ್ಬರು ಗಾಳಿಪಟ ಉತ್ಸವದಲ್ಲಿ ಭಾಗವಹಿಸಿ ತಮ್ಮೂರಿನ ಶಾಲೆಯನ್ನು ದುರಸ್ತಿ ಮಾಡುತ್ತಾರೆ’ ಎಂದು ನಿರ್ದೇಶಕರು ತಿಳಿಸಿದ್ದಾರೆ.

ಪ್ರಣಿಲ್ ನಾಡಗೀರ್, ಸಮರ್ಥ ಆಶಿ, ವಿನೋದ್ ಬಗಾಡೆ, ಅನಂತ ದೇಶಪಾಂಡೆ, ಪ್ರಭು ಹಂಚಿನಾಳ, ಶ್ರೇಯಾ ಹರಿಹರ ಮುಂತಾದವರು ಅಭಿನಯಿಸಿದ್ದಾರೆ. ಅನೀಶ್ ಚೆರಿಯನ್ ಸಂಗೀತ, ಅಶೋಕ್ ಕಶ್ಯಪ್ ಛಾಯಾಚಿತ್ರಗ್ರಹಣವಿದೆ.


ಐಶ್ವರ್ಯ ದಿನೇಶ್

ಪ್ರೇಮಂ ಮಧುರಂ ಪ್ರೇಮಂ ಅಮರಂ

ಬಹುತೇಕ ಹೊಸಬರಿಂದಲೇ ಕೂಡಿರುವ ಚಿತ್ರವಿದು. ಗಾಂಧಿ ಎ.ಬಿ ಸಿನಿಮಾಕ್ಕೆ ಕಥೆ ಬರೆದು ನಿರ್ದೇಶಿಸಿರುವುದರ ಜತೆಗೆ ನಾಯಕನಾಗಿ ಅಭಿನಯಿಸಿದ್ದಾರೆ. ರೂಬಿ ಕ್ರಿಯೇಶನ್ಸ್ ಅಡಿಯಲ್ಲಿ ಅರಗೊಂಡ ಶೇಖರ್‌ರೆಡ್ಡಿ ನಿರ್ಮಾಣ ಮಾಡಿದ್ದಾರೆ.

‘ಸಿನಿಮಾವು ಪ್ರಸಕ್ತ ಯುವಜನತೆಗೆ ಕನೆಕ್ಟ್ ಆಗುವ ಸನ್ನಿವೇಶಗಳನ್ನು ಹೊಂದಿದೆ. ಪ್ರತಿಯೊಬ್ಬರ ಬದುಕಲ್ಲಿ ಪ್ರೀತಿ, ಯಶಸ್ಸು ಇರುತ್ತದೆ. ಜತೆಗೆ ಸೋಲು ಕೂಡ. ಶಾಲೆ, ಕಾಲೇಜು ದಿನಗಳಲ್ಲಿ ನಮಗಾದ ಒಂದಷ್ಟು ಅನುಭವಗಳನ್ನೇ ಚಿತ್ರಕಥೆಯಾಗಿಸಿದ್ದೇವೆ’ ಎಂದು ನಿರ್ದೇಶಕರು ತಿಳಿಸಿದ್ದಾರೆ.

ಐಶ್ವರ್ಯ ದಿನೇಶ್, ಅನುಷಾ ಜೈನ್ ನಾಯಕಿಯರು. ಸಿಹಿಕಹಿ ಚಂದ್ರು, ರಾಜೇಶ್ವರಿ, ಲಪಂಗ್ ರಾಜ, ಅನೂಪ್ ಅಗಸ್ತ್ಯ ಮುಂತಾದವರು ನಟಿಸಿದ್ದಾರೆ. ಮೂರು ಹಾಡುಗಳಿಗೆ ವಿಶಾಲ್ ಆಲಾಪ ಸಂಗೀತ ಸಂಯೋಜಿಸಿದ್ದಾರೆ. ಮಂಜುನಾಥ ಹೆಗಡೆ ಛಾಯಾಚಿತ್ರಗ್ರಹಣ, ಸಂಜೀವ್ ಜಾಗೀರ್‌ದಾರ್ ಸಂಕಲನವಿದೆ. ತುಳುವಿನಿಂದ ಕನ್ನಡಕ್ಕೆ ಡಬ್ ಆಗಿರುವ ರೂಪೇಶ್ ಶೆಟ್ಟಿ ನಟನೆಯ ‘ಜೈ’ ಚಿತ್ರ ಕೂಡ ಇಂದೇ ತೆರೆ ಕಾಣುತ್ತಿದೆ. ‘ಲವ್ ಒಟಿಪಿ’, ‘ಹಿಕೋರ’ ಸೇರಿದಂತೆ ಒಟ್ಟು ಏಳು ಸಿನಿಮಾಗಳು ಈ ವಾರ ತೆರೆಯಲ್ಲಿವೆ.

‘ಮಧ್ಯವರ್ತಿಗಳ ಮೊರೆ: ಘನತೆಗೆ ಧಕ್ಕೆ’

ಸಾರಿಗೆ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವ ಅಸಮಾಧಾನ


ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾರಿಗೆ ಇಲಾಖೆಯ 31 ಸೇವೆಗಳನ್ನು ಆನ್‌ಲೈನ್ ಮಾಡಿದ್ದರೂ ಆ ಬಗ್ಗೆ ಅರಿವಿಲ್ಲದ ಸಾರ್ವಜನಿಕರು ತಮ್ಮ ಕೆಲಸಗಳಿಗೆ ಮಧ್ಯವರ್ತಿಗಳು, ಏಜೆಂಟ್‌ಗಳನ್ನು ಸಂಪರ್ಕಿಸುತ್ತಿದ್ದಾರೆ. ಇದು ಇಲಾಖೆಯ ಘನತೆಗೆ ಧಕ್ಕೆ ತರುತ್ತಿದೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಬೇಸರ ವ್ಯಕ್ತಪಡಿಸಿದರು.

ಗುರುವಾರ ನಡೆದ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇಲಾಖೆಯ ಪ್ರಗತಿಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಆನ್‌ಲೈನ್ ಸೇವೆಗಳ ಮಾಹಿತಿಯನ್ನು ಕಚೇರಿಗಳ ನೋಟಿಸ್ ಬೋರ್ಡ್‌ಗಳಲ್ಲಿ ಹಾಕಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು. ಏಜೆಂಟ್‌ಗಳನ್ನು ಸಂಪರ್ಕಿಸಬೇಡಿ ಎಂದು ಫಲಕ ಪ್ರದರ್ಶಿಸಬೇಕು. ‘ಸಹಾಯ ಮೇಜು’ ಸ್ಥಾಪಿಸಿ ಸರದಿಯಲ್ಲಿ ಸಿಬ್ಬಂದಿಯನ್ನು ನಿಯೋಜಿಸಿ ಸಾರ್ವಜನಿಕರಿಗೆ ಮಾಹಿತಿ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಅನಧಿಕೃತ ವ್ಯಕ್ತಿಗಳು ಮತ್ತು ಏಜೆಂಟ್‌ಗಳು ಕಚೇರಿಯ ಒಳಗೆ ಬಾರದಂತೆ ತಡೆಗಟ್ಟಬೇಕು. ತಪ್ಪಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳು, ಸಿಬ್ಬಂದಿಯ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಎಚ್ಚರಿಕೆ ನೀಡಿದರು.


ರಾಮಲಿಂಗಾ ರೆಡ್ಡಿ

ಹೊಸ ನೋಂದಣಿ ಅರ್ಜಿಗಳು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಬಾಕಿಯಾಗಿರುವುದು ಕಂಡುಬಂದಿದೆ. ಕೂಡಲೇ ವಿಲೇವಾರಿ ಮಾಡಬೇಕು. ತಾಂತ್ರಿಕ ದೋಷಗಳನ್ನು ಸರಿಪಡಿಸಿಕೊಂಡು ನ.30ರ ಒಳಗೆ ಶೇ 100ರಷ್ಟು ವಿಲೇ ಮಾಡಬೇಕು ಎಂದು ಸೂಚನೆ ನೀಡಿದರು.

ವಾಹನಗಳ ನೋಂದಣಿ ಪ್ರಮಾಣಪತ್ರ ಮತ್ತು ಚಾಲನಾ ದೃಢೀಕರಣ ಸ್ಮಾರ್ಟ್‌ಕಾರ್ಡ್‌ಗಳನ್ನು ಸಕಾಲದಲ್ಲಿ ವಿತರಿಸಬೇಕು. ನಂಬರ್ ಪ್ಲೇಟ್ ಅಥವಾ ವಾಹನಗಳ ಮೇಲೆ ಬೇರೆ ಬೇರೆ ಚಿಹ್ನೆ, ಲಾಂಛನ, ಪದನಾಮಗಳನ್ನು ನಮೂದಿಸಿದ್ದರೆ ಅಂಥ ವಾಹನಗಳ ಮಾಲೀಕರ ಮೇಲೆ ಕ್ರಮ ಕೈಗೊಳ್ಳಬೇಕು. ಕರ್ನಾಟಕದಲ್ಲಿ ನೋಂದಣಿ ಮಾಡಿಕೊಳ್ಳದೇ ತೆರಿಗೆ ವಂಚಿಸುತ್ತಿರುವ ವಾಹನಗಳನ್ನು ವಶಪಡಿಸಿಕೊಳ್ಳಬೇಕು ಎಂದು ಹೇಳಿದರು.

ಸಾರಿಗೆ ಆಯುಕ್ತ ಎ.ಎಂ. ಯೋಗೀಶ್, ಹೆಚ್ಚುವರಿ ಆಯುಕ್ತರಾದ ಸಿ. ಮಲ್ಲಿಕಾರ್ಜುನ, ಬಿ.ಪಿ. ಉಮಾಶಂಕರ್, ಎಂ.ಪಿ. ಓಂಕಾರೇಶ್ವರಿ, ವಿವಿಧ ವಿಭಾಗಗಳ ಜಂಟಿ ಆಯುಕ್ತರು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಉಪಸ್ಥಿತರಿದ್ದರು.

₹ 7,451 ಕೋಟಿ ರಾಜಸ್ವ ಸಂಗ್ರಹ

2025–26ನೇ ಸಾಲಿನಲ್ಲಿ ₹ 14,457.73 ಕೋಟಿ ರಾಜಸ್ವ ಸಂಗ್ರಹಿಸುವ ಗುರಿಯನ್ನು ರಾಜ್ಯ ಸರ್ಕಾರವು ಸಾರಿಗೆ ಇಲಾಖೆಗೆ ನಿಗದಿಪಡಿಸಿದ್ದು, ಏಳು ತಿಂಗಳಲ್ಲಿ ₹ 7,451.45 ಕೋಟಿ ಸಂಗ್ರಹವಾಗಿದೆ ಎಂದು ಸಾರಿಗೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಕಳೆದ ವರ್ಷ ಅಕ್ಟೋಬರ್ ಅಂತ್ಯಕ್ಕೆ ಹೋಲಿಸಿದರೆ ಈ ಬಾರಿ ಅಕ್ಟೋಬರ್ ಅಂತ್ಯಕ್ಕೆ ₹ 505 ಕೋಟಿ ಅಧಿಕ ಮೊತ್ತದ ರಾಜಸ್ವ ಸಂಗ್ರಹವಾಗಿದೆ. 2026ರ ಮಾರ್ಚ್ ಅಂತ್ಯದ ಒಳಗೆ ನಿಗದಿಪಡಿಸಿರುವ ಗುರಿ ಸಾಧಿಸಲಾಗುವುದು ಎಂದು ಅವರು ವಿವರಿಸಿದರು.

‘ಮನುಸ್ಮೃತಿ ನೀತಿಗೆ ಸಂಚು’

ಪ್ರಜಾವಾಣಿ ವಾರ್ತೆ

ಹಾಸನ: ‘ಶ್ರಮ ಶಕ್ತಿ ನೀತಿಯು ಸಂವಿಧಾನಾತ್ಮಕ ಹಕ್ಕುಗಳನ್ನು ನಾಶ ಮಾಡುವ, ಮನುಸ್ಮೃತಿ ಆಧಾರಿತ ನೀತಿಗಳನ್ನು ಜಾರಿಗೊಳಿಸುವ ಸಂಚು’ ಎಂದು ಸಿಐಟಿಯು ರಾಷ್ಟ್ರೀಯ ಅಧ್ಯಕ್ಷೆ ಡಾ.ಹೇಮಲತಾ ಪ್ರತಿಪಾದಿಸಿದರು.

ನಗರದಲ್ಲಿ ಗುರುವಾರ ಆರಂಭವಾದ 3 ದಿನಗಳ ಸಿಐಟಿಯು 16ನೇ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿ, ‘ಈ ನೀತಿಯಲ್ಲಿ ಮಹಿಳಾ ಶೋಷಣೆ, ದೀನ ದಲಿತರ ಶೋಷಣೆ ಅಡಗಿದೆ. ಇದು ದುಡಿಯುವ ಜನರ ಮೇಲೆ ಆರ್‌ಎಸ್‌ಎಸ್ ನೀತಿಗಳನ್ನು ಹೇರುವ ಪ್ರಯತ್ನ’ ಎಂದು ಅಭಿಪ್ರಾಯಪಟ್ಟರು.

‘ಕಾರ್ಮಿಕರು ಶತಮಾನಗಳಿಂದ ಹೋರಾಟದ ಮೂಲಕ ಪಡೆದ ಹಕ್ಕುಗಳನ್ನ ಕಾನೂನು ತಿದ್ದುಪಡಿ ಮೂಲಕ ನಾಶ ಮಾಡಲಾಗುತ್ತಿದೆ. ಕಾರ್ಮಿಕ ಇಲಾಖೆ ಕಾರ್ಮಿಕರನ್ನು ರಕ್ಷಿಸುವ ಬದಲು, ಮಾಲೀಕರ ಪರವಾಗಿ ವಕಾಲತ್ತು ವಹಿಸುವ ಸಂಪರ್ಕ ಸಾಧನವಾಗುತ್ತಿದೆ’ ಎಂದು ದೂರಿದರು.

‘ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿ, ಶ್ರಮ ಶಕ್ತಿ ನೀತಿಗಳ ವಿರುದ್ಧ ಹೋರಾಟ ತೀವ್ರಗೊಳಿಸಬೇಕಾಗಿದೆ’ ಎಂದರು.



ಹಾಸನದಲ್ಲಿ ಗುರುವಾರ ಆರಂಭವಾದ ಸಿಐಟಿಯು ರಾಜ್ಯ ಸಮ್ಮೇಳನದಲ್ಲಿ ರಾಷ್ಟ್ರೀಯ ಅಧ್ಯಕ್ಷೆ ಕೆ. ಹೇಮಲತಾ ಮಾತನಾಡಿದರು

ಸಿಐಟಿಯು ರಾಜ್ಯ ಘಟಕದ ಅಧ್ಯಕ್ಷೆ ಎಸ್. ವರಲಕ್ಷ್ಮಿ, ರಾಷ್ಟ್ರೀಯ ಕಾರ್ಯದರ್ಶಿ ಕೆ.ಎನ್. ಉಮೇಶ್, ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ರಾಜ್ಯ ಘಟಕದ ಉಪಾಧ್ಯಕ್ಷ ವಿ.ಜೆ.ಕೆ ನಾಯರ್, ಸಿಐಟಿಯು ಜಿಲ್ಲಾ ಘಟಕದ ಅಧ್ಯಕ್ಷ ಧರ್ಮೇಶ್ ವೇದಿಕೆಯಲ್ಲಿದ್ದರು.

ಚಿಟಿಕೆ ಸುದ್ದಿ

‘ದೇಶ ರಕ್ಷಣೆ ಮೋದಿ ಮೇಲೆ ವಿಶ್ವಾಸ’



ಗವಿಯಪ್ಪ

ಹೊಸಪೇಟೆ (ವಿಜಯನಗರ): 'ಕೆಂಪುಕೋಟೆ ಬಳಿ ಬಾಂಬ್ ಸ್ಫೋಟದಂತಹ ಘಟನೆ ನಡೆಯಬಾರದಿತ್ತು. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ಪರಿಸ್ಥಿತಿ ನಿಭಾಯಿಸುವರು ಎಂಬ ವಿಶ್ವಾಸವಿದೆ ಎಂದು ಕಾಂಗ್ರೆಸ್ ಶಾಸಕ ಎಚ್.ಆರ್.ಗವಿಯಪ್ಪ ಗುರುವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಕೌಶಲ ಅಭಿವೃದ್ಧಿ ತರಬೇತಿ

ಬೆಂಗಳೂರು: ವಿಜಯನಗರದಲ್ಲಿರುವ ಪುಷ್ಪಗಂಗಾ ಎಂಟರ್‌ಪ್ರೈಸಸ್ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಉಚಿತ ವೃತ್ತಿಪರ ಹಾಗೂ ಕೌಶಲ ಅಭಿವೃದ್ಧಿ ತರಬೇತಿ ಹಮ್ಮಿಕೊಂಡಿದೆ. ಟ್ಯಾಲಿ ಇಆರ್‌ಪಿ ಜತೆಗೆ ಜಿಎಸ್‌ಟಿ, ಲೆಕ್ಕಶಾಸ್ತ್ರ, ಡಿಜಿಟಲ್ ಮಾರ್ಕೆಟಿಂಗ್, ಸೈಬರ್ ಸೆಕ್ಯುರಿಟಿ, ಕ್ಲೌಡ್ ಕಂಪ್ಯೂಟಿಂಗ್, ಕೃತಕ ಬುದ್ಧಿಮತ್ತೆ, ಫೋಟೊಶಾಪ್, ಗ್ರಾಫಿಕ್ ಡಿಸೈನ್ ಕುರಿತು 30 ಗಂಟೆಗಳ ಉಚಿತ ತರಬೇತಿ ನೀಡಲಾಗುತ್ತದೆ. ತರಬೇತಿ ಮುಗಿದ ನಂತರ ಉದ್ಯೋಗ ಮೇಳ ಆಯೋಜಿಸಲಾಗುವುದು ಎಂದು ಪುಷ್ಪಗಂಗಾ ಎಂಟರ್‌ಪ್ರೈಸಸ್ ನಿರ್ದೇಶಕ ಎನ್.ಜಿ. ಪುನೀತ್ ತಿಳಿಸಿದ್ದಾರೆ. ಮಾಹಿತಿಗೆ: 9902853806

ವಿಶೇಷ ರೈಲು: ₹171.47 ಕೋಟಿ ಆದಾಯ

ಹುಬ್ಬಳ್ಳಿ: ನೈರುತ್ಯ ರೈಲ್ವೆಯು ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ 355 ವಿಶೇಷ ರೈಲುಗಳ ಕಾರ್ಯಾಚರಣೆ ಮೂಲಕ ಒಟ್ಟು ₹171.47 ಕೋಟಿ ಆದಾಯ ಗಳಿಸಿದೆ.

ಕಳೆದ ಹಣಕಾಸು ವರ್ಷದ ಇದೇ ಅವಧಿಯಲ್ಲಿ 351 ವಿಶೇಷ ರೈಲುಗಳ ಕಾರ್ಯಾಚರಣೆ ಮೂಲಕ ₹138.83 ಕೋಟಿ ಆದಾಯ ಗಳಿಸಿತ್ತು. ಈ ಬಾರಿ ₹32.64 ಕೋಟಿ (ಶೇ 23ರಷ್ಟು) ಹೆಚ್ಚುವರಿ ಆದಾಯ ದೊರೆತಿದೆ.

ಜಿರಳೆ ಪಕೋಡ, ಗೆದ್ದಲು ಬರ್ಗರ್

ಬೆಂಗಳೂರು ಕೃಷಿ ವಿವಿ: ಮೇಳದಲ್ಲಿ ಗಮನ ಸೆಳೆದ ಹೊಸ ಬಗೆಯ ತಿನಿಸು, ಕೀಟ ವಿಸ್ಮಯ

● ಖಲೀಲಅಹ್ಮದ ಶೇಖ



ಜಿರಳೆ ಪಕೋಡ



ರೇಷ್ಮೆ ಹುಳುವಿನ ಸೂಪ್



ಮೀಲ್ವರಂ ಕೇಕ್



ಮೀಲ್ವರಂ ಪಿಜ್ಜಾ



ರೇಷ್ಮೆ ಹುಳುವಿನ ಕಬಾಬ್

ಬೆಂಗಳೂರು: ಜಿರಳೆ ಪಕೋಡ, ಚಿಗಳಿ ಚಟ್ನಿ, ರೇಷ್ಮೆ ಹುಳು ಕೋಶದ ಸೂಪ್ ಹಾಗೂ ಮಂಚೂರಿ, ರೇಷ್ಮೆ ಹುಳುವಿನ ಬಾರ್ಬಿಕ್ಯೂ, ಕಬಾಬ್, ಮೀಲ್ವರಂ ಕೇಕ್–ಫ್ರೈಡ್ ರೈಸ್, ರಾಣಿ ಗೆದ್ದಲಿನ ಬರ್ಗರ್ ಆಹಾ ಹೊಸ ಬಗೆಯ ತಿನಿಸುಗಳು...

ಇಂತಹ ವೈವಿಧ್ಯಮಯ, ನೋಡುಗರಲ್ಲಿ ಬೆರಗು ಹುಟ್ಟಿಸುವ ಆಹಾರ ಪದಾರ್ಥಗಳು ಒಂದೆಡೆ ಕಾಣಸಿಕ್ಕಿದ್ದು ಕೃಷಿಮೇಳದಲ್ಲಿ.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಮೇಳದಲ್ಲಿ ಕೀಟಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ತಯಾರಿಸಿದ್ದ ಇಂತಹ ತಿನಿಸುಗಳು ಎಲ್ಲರ ಗಮನ ಸೆಳೆದವು.

ಕಣಜದ ಮಸಾಲಾ, ಮಿಡತೆ ಫ್ರೈ ಹಾಗೂ ಕಬಾಬ್ ಸೇರಿದಂತೆ ನಾನಾ ರೀತಿಯ ಕೀಟಗಳ ತಿನಿಸುಗಳು, ಬೇಕರಿ ಪದಾರ್ಥಗಳು, ಫಾಸ್ಟ್‌ಫುಡ್‌ಗಳೂ ಪ್ರದರ್ಶನದಲ್ಲಿವೆ. ಈ ಆಹಾರ ಪದಾರ್ಥಗಳ ಮಹತ್ವ, ಇದರಲ್ಲಿರುವ ಪೌಷ್ಟಿಕಾಂಶಗಳ ಬಗ್ಗೆ ವಿದ್ಯಾರ್ಥಿಗಳು ಸಾರ್ವಜನಿಕರಿಗೆ ಮಾಹಿತಿ ನೀಡಿದರು.

ರೈತರಿಗೆ, ಜನ ಸಾಮಾನ್ಯರಿಗೆ, ವಿಜ್ಞಾನಿಗಳಿಗೆ, ಪರಿಸರ ಪ್ರಿಯರಿಗೆ, ಕೀಟಗಳೊಂದಿಗೆ ನಂಟು ಹೊಂದಿರುವ ಹವ್ಯಾಸಿಗಳಿಗೆ ಹಾಗೂ ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ಒದಗಿಸಲು ಕೀಟ ವಿಸ್ಮಯ ಪ್ರದರ್ಶನವನ್ನು ಆಯೋಜಿಸಲಾಗಿದೆ ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ತಿಳಿಸಿದರು.

‘ಈ ಪ್ರದರ್ಶನದಲ್ಲಿ ಕೀಟಗಳ ಬಗ್ಗೆ ಇದುವರೆಗೂ ತಿಳಿದಿರುವ, ತಿಳಿಯದೆ ಇರುವ ವೈಜ್ಞಾನಿಕ ಸಂಗತಿಗಳನ್ನು ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ಪ್ರದರ್ಶಿಸಲಾಗಿದೆ. ಜೀವವೈವಿಧ್ಯತೆಗೆ ಹೆಸರಾದ ನಮ್ಮ ದೇಶದ ವಿವಿಧ ಭಾಗಗಳಲ್ಲಿ ಸ್ಥಳೀಯವಾಗಿ ಹಾಗೂ ಬೇರೆ ದೇಶಗಳಲ್ಲಿ ಕಂಡುಬರುವ ಜೀವಂತ ಹಾಗೂ ಸಂರಕ್ಷಿಸಿರುವ ಸಾವಿರಾರು ಕೀಟಗಳನ್ನು ಒಂದೇ ವೇದಿಕೆಯಲ್ಲಿ ನೋಡುವ ಅವಕಾಶ ಒದಗಿಸಲಾಗಿದೆ’ ಎಂದರು.

‘ಸೃಷ್ಟಿಯಲ್ಲಿ ಕೀಟಗಳ ಉಗಮ, ಕೀಟಗಳಲ್ಲಿರುವ ವೈವಿಧ್ಯತೆ, ಕೀಟಗಳ ವಿಭಿನ್ನವಾದ ಹಾಗೂ ವಿಸ್ಮಯಕಾರಿ ಜೀವನ ಚಕ್ರವನ್ನು ಇಲ್ಲಿ ತೋರಿಸಲಾಗಿದೆ. ನಮ್ಮ ದೇಶದಲ್ಲಿ ಕಂಡುಬರುವ ವಿವಿಧ ಬಗೆಯ ಪರಾಗಸ್ಪರ್ಶ ಕೀಟಗಳು, ಬೆಳೆಗಳನ್ನು ನಾಶಮಾಡುವ, ಮನುಷ್ಯರಿಗೆ ಮತ್ತು ಜಾನುವಾರುಗಳಿಗೆ ರೋಗಗಳನ್ನು ಹರಡುವ ಕೀಟಗಳು, ಮರಣ ಹೊಂದಿದ ಸಮಯವನ್ನು ನಿಖರವಾಗಿ ತಿಳಿಸಿ ಪತ್ತೇದಾರಿ ಕೆಲಸವನ್ನು ಸುಲಭವಾಗಿಸುವ ಕೀಟಗಳು, ಸಂಘ ಜೀವನ ನಡೆಸುವ ಕೀಟಗಳು, ಆಕರ್ಷಕ ಚಿಟ್ಟೆಗಳು, ಬಹುರೂಪಿ ದುಂಬಿಗಳು, ಬೆರಗುಗೊಳಿಸುವ ಜೀರುಂಡೆಗಳು, ಸೂಜಿ ಮೊನೆಯಷ್ಟು ಕಿರಿದಾದ ಹಾಗೂ ಅಂಗೈಯಷ್ಟು ಅಗಲದ ದೈತ್ಯ ಕೀಟಗಳೊಂದಿಗೆ ಅಪರೂಪದ ಕೀಟ ಸಂಕುಲಗಳ ಆಗರವನ್ನು ಇಲ್ಲಿ ವೀಕ್ಷಿಸುವುದರ ಜೊತೆಗೆ ತಜ್ಞರೊಂದಿಗೆ ಸಂವಾದ ನಡೆಸಬಹುದು’ ಎಂದು ತಿಳಿಸಿದರು.

ಬಡಿಗೆ ಹಿಡಿದು ರೈತರ ಕಾವಲು

ಬಾಗಲಕೋಟೆ: ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಹಿಪ್ಪರಗಿಯ ಸಾಯಿಪ್ರಿಯಾ ಸಕ್ಕರೆ ಕಾರ್ಖಾನೆಯಲ್ಲಿ ರೈತರು ಕಬ್ಬಿನ ಟ್ರ್ಯಾಕ್ಟರ್‌ಗಳ ಕಾವಲಿಗೆ ಗುರುವಾರ ರಾತ್ರಿ ಬಡಿಗೆ ಹಿಡಿದು ನಿಂತಿದ್ದಾರೆ.

ಗೋದಾವರಿ ಸಕ್ಕರೆ ಕಾರ್ಖಾನೆ ಯಲ್ಲಿ ಆದ ಪರಿಸ್ಥಿತಿ ಇಲ್ಲಿಯೂ ಬರಬಾರದು ಎಂದು ತಡೆಯಲು ಸಜ್ಜಾಗಿದ್ದಾಗಿ' ರೈತರೊಬ್ಬರು ತಿಳಿಸಿದರು.

‘ರಾಜ್ಯ ಸರ್ಕಾರ ಸೂಚಿಸಿದ ದರವನ್ನು ನೀಡಲು ಜಿಲ್ಲೆಯ ವಿವಿಧ ಸಕ್ಕರೆ ಕಾರ್ಖಾನೆಗಳು ಮುಂದೆ ಬಂದಿವೆ. ರೈತರಿಗಾಗಿ ಹೋರಾಟ ಮಾಡುವವರು ಯಾರಾದರೂ ಟ್ರ್ಯಾಕ್ಟರ್‌ಗಳಿಗೆ ಬೆಂಕಿ ಹಚ್ಚುತ್ತಾರೆಯೇ? ಸರ್ಕಾರ ನಿಗದಿಪಡಿಸಿದ ದರ ಒಪ್ಪಿಗೆಯಾಗದಿದ್ದರೆ, ಸರ್ಕಾರದೊಂದಿಗೆ ಮಾತುಕತೆ ನಡೆಸಿ ಬಗೆಹರಿಸಿಕೊಳ್ಳಿ’ ಎಂದರು.

ಕಬ್ಬು ಬೆಳೆಗಾರರ ಸಭೆ ವಿಫಲ

ಬೀದರ್: ಕಬ್ಬಿನ ಬೆಲೆ ನಿಗದಿ ಸಂಬಂಧ ಜಿಲ್ಲಾಡಳಿತವು ನಗರದಲ್ಲಿ ಗುರುವಾರ ಕರೆದಿದ್ದ ಕಬ್ಬು ಬೆಳೆಗಾರರ ಸಭೆ ಯಾವುದೇ ನಿರ್ಧಾರಕ್ಕೆ ಬರಲಾರದೇ ಕೊನೆಗೊಂಡಿತು.

ಮುಖ್ಯಮಂತ್ರಿ ಘೋಷಿಸಿರುವ ಹೆಚ್ಚುವರಿ ₹50 ಸೇರಿದಂತೆ ಪ್ರತಿ ಟನ್ ಕಬ್ಬಿಗೆ ₹2,900 ಕೊಡಲಾಗುವುದು ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಸಭೆಯಲ್ಲಿ ಹೇಳಿದರು. ಆದರೆ, ಕಬ್ಬು ಬೆಳೆಗಾರರು ಈ ಬೆಲೆಗೆ ಒಪ್ಪಲಿಲ್ಲ. ಪ್ರತಿ ಟನ್‌ಗೆ ಕನಿಷ್ಠ ₹3,100 ಕೊಡಬೇಕು. ಇಲ್ಲವಾದಲ್ಲಿ ಪುನಃ ಹೋರಾಟ ನಡೆಸಲಾಗುವುದು ಎಂದು ಹೇಳಿ ಸಭೆಯಿಂದ ಹೊರಬಂದರು.

ಸಂಗೀತ ಕಛೇರಿ...



ಸಾಮ ಫೌಂಡೇಷನ್ ನಗರದಲ್ಲಿ ಹಮ್ಮಿಕೊಂಡಿದ್ದ ಮಾಸಿಕ ಸಂಗೀತ ಕಛೇರಿಯಲ್ಲಿ ವೈದೇಹಿ ಅವರು ಗಾಯನ ಪ್ರಸ್ತುತಪಡಿಸಿದರು. ಅವರಿಗೆ ಶ್ರೀವಿದ್ಯಾ ದಾವಲೂರಿ ಹಾಗೂ ಬಿ.ಜೆ. ಶ್ರೀನಿವಾಸ್ ಅವರು ಸಾಥ್ ನೀಡಿದರು

ಸುದ್ದಿ 2 ನಿಮಿಷ

ಪಕ್ಷದ ಕೆಲಸವಿಲ್ಲ, ಕಚೇರಿಗೆ ಏಕೆ ಹೋಗಲಿ: ಜಿ.ಟಿ.ದೇವೇಗೌಡ

ಬೆಂಗಳೂರು: ‘ಪಕ್ಷದ ಸಮಿತಿಯಿಂದ ನನ್ನನ್ನು ಕೈಬಿಡಲಾಗಿದೆ. ಯಾವ ಸಮಿತಿಯಲ್ಲೂ ನಾನಿಲ್ಲ. ಹೀಗಾಗಿ ನಾನು ಪಕ್ಷದ ಕಚೇರಿಗೆ ಹೋಗುವುದಿಲ್ಲ, ಕ್ಷೇತ್ರದಲ್ಲೇ ಇದ್ದು ಜನರ ಕೆಲಸ ಮಾಡುತ್ತೇನೆ’ ಎಂದು ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಅವರು ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕನಾಗುವ ಆಸೆ ನನಗೇನೂ ಇರಲಿಲ್ಲ. ಆಸೆ ತೋರಿಸಿ, ಏನನ್ನೂ ಹೇಳದೆ ನನ್ನ ಹೆಸರನ್ನು ಕೈಬಿಡಲಾಗಿತ್ತು. ಇದರಿಂದ ಬೇಸರವಾಯಿತು’ ಎಂದರು.

‘ಎಚ್.ಡಿ. ಕುಮಾರಸ್ವಾಮಿ ಕೇಂದ್ರ ಸಚಿವರಾದ ಬಳಿಕ ಪಾಂಡವಪುರದಲ್ಲಿ ಪಕ್ಷದ ಕಾರ್ಯಕ್ರಮ ಆಯೋಜಿಸಲಾಗಿತ್ತು. ವೇದಿಕೆಯಲ್ಲಿ ನಿಖಿಲ್ ಕುಮಾರಸ್ವಾಮಿ ಅವರು, ‘ನೀವೇ ಶಾಸಕಾಂಗ ಪಕ್ಷದ ನಾಯಕ’ ಎಂದು ಸೂಚ್ಯವಾಗಿ ಹೇಳಿದ್ದರು. ಎದುರಾಳಿ ಕಾಂಗ್ರೆಸ್ ಪಾಳಯದಲ್ಲೂ ಈ ಮಾತು ಚಾಲ್ತಿಯಲ್ಲಿತ್ತು’ ಎಂದು ವಿವರಿಸಿದರು. ‘ಹೊಸ ಕಚೇರಿಯನ್ನೂ ಆರಂಭಿಸಿದ್ದೆ. ಆದರೆ, ಯಾವ ಕಾರಣವನ್ನೂ ನೀಡದೆ ಬೇರೆಯವರನ್ನು ಶಾಸಕಾಂಗ ಪಕ್ಷದ ನಾಯಕನಾಗಿ ಘೋಷಿಸಿದರು. ಇದರಿಂದ ನನಗೆ ತುಂಬಾ ನೋವಾಯಿತು’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



‘ನಾನು ಕುಮಾರಸ್ವಾಮಿ, ಸಿದ್ದರಾಮಯ್ಯ ಅವರನ್ನೂ ಹೊಗಳಿದ್ದೇನೆ. ತೆಗಳುವಾಗ ತೆಗಳಬೇಕು, ಹೊಗಳುವಾಗ ಹೊಗಳಬೇಕು. ಸಿದ್ದರಾಮಯ್ಯ ಅವರ ಜೊತೆ 25 ವರ್ಷ ಕೆಲಸ ಮಾಡಿದ್ದೆ. ಅವರ ವಿರುದ್ಧ ಹೋರಾಡುವ ಹೊಣೆಯನ್ನು ಪಕ್ಷ ನೀಡಿದಾಗ, ಹೋರಾಡಿದೆ. ಆಗಿನ ನನ್ನ ನಿಷ್ಠೆ ಪಕ್ಷದ ನಾಯಕರಿಗೆ ಕಾಣಲಿಲ್ಲವೇ’ ಎಂದು ಪ್ರಶ್ನಿಸಿದರು.

ಸಂಧಾನ: ಧರಣಿ ಕೈಬಿಟ್ಟ ರೈತರು

ಹಾವೇರಿ: ಪ್ರತಿ ಟನ್ ಕಬ್ಬಿಗೆ ಬೆಲೆ ನಿಗದಿಪಡಿಸುವುದಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ಮೂರು ಕಾರ್ಖಾನೆಗಳ ಮಾಲೀಕರು ಮತ್ತು ಕಬ್ಬು ಬೆಳೆಗಾರರ ನಡುವೆ ಬುಧವಾರ ತಡರಾತ್ರಿವರೆಗೆ ನಡೆದ ಸಂಧಾನ ಸಭೆ ಸಫಲವಾಗಿದೆ. ಮೂರು ದಿನಗಳಿಂದ ನಡೆಸುತ್ತಿದ್ದ ಧರಣಿಯನ್ನು ಕಬ್ಬು ಬೆಳೆಗಾರರು ಹಿಂಪಡೆದಿದ್ದಾರೆ.

ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ಅವರ ಸಮ್ಮುಖದಲ್ಲಿ ನಡೆದ ಸಂಧಾನ ಸಭೆಯಲ್ಲಿ ಪಾಲ್ಗೊಂಡ ಶಿಗ್ಗಾವಿ ತಾಲ್ಲೂಕಿನ ಕೋಣನಕೇರಿಯ ವಿಐಎನ್‌ಪಿ ಕಂಪನಿ ಮಾಲೀಕ ವಿವೇಕ್ ಹೆಬ್ಬಾರ, ‘ಪ್ರತಿ ಟನ್ ಕಬ್ಬಿಗೆ ₹2,850 (ಕಟಾವು–ಸಾಗಣೆ ವೆಚ್ಚ ಬಿಟ್ಟು) ನೀಡುತ್ತೇವೆ’ ಎಂದರು.

ಹಾವೇರಿ ತಾಲ್ಲೂಕಿನ ಜಿ.ಎಂ. ಶುಗರ್ ಕಂಪನಿಯ ಮಾಲೀಕರಾದ ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಪರವಾಗಿ ಸಭೆಯಲ್ಲಿ ಪಾಲ್ಗೊಂಡ ಬಸವರಾಜ್, ‘ಪ್ರತಿ ಟನ್ ಕಬ್ಬಿಗೆ ₹ 2,775 (ಕಟಾವು ಹಾಗೂ ಸಾಗಣೆ ವೆಚ್ಚ ಬಿಟ್ಟು) ನೀಡಲಾಗುವುದು. 20 ಕಿ.ಮೀ. ಒಳಗೆ ಹಾಗೂ 20 ಕಿ.ಮೀ. ದೂರದ ಜಮೀನಿನಲ್ಲಿರುವ ಕಬ್ಬಿಗೆ ದೂರದ ಆಧಾರದಲ್ಲಿ ಬೆಲೆ ಇರಲಿದೆ’ ಎಂದರು.

16ಕ್ಕೆ ಆರ್‌ಎಸ್‌ಎಸ್ ಪಥಸಂಚಲನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘವು (ಆರ್‌ಎಸ್‌ಎಸ್) ಇದೇ 16ರಂದು ಪಥಸಂಚಲನ ನಡೆಸುವುದಕ್ಕೆ ಹೈಕೋರ್ಟ್ ಅನುಮತಿ ನೀಡಿದೆ.

‘ಪಥಸಂಚಲನಕ್ಕೆ ಅನುಮತಿ ಕೋರಿರುವ ಮನವಿ ಪರಿಗಣಿಸಲು ಜಿಲ್ಲಾಡಳಿತಕ್ಕೆ ನಿರ್ದೇಶಿಸಬೇಕು’ ಎಂದು ಆರ್‌ಎಸ್‌ಎಸ್ ಕಲಬುರಗಿ ಜಿಲ್ಲಾ ಸಂಚಾಲಕ ಅಶೋಕ್ ಪಾಟೀಲ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜಿ.ಎಸ್.ಕಮಲ್ ಅವರಿದ್ದ ಏಕಸದಸ್ಯ ನ್ಯಾಯಪೀಠ (ಕಲಬುರಗಿ) ಈ ಕುರಿತಂತೆ ಶುಕ್ರವಾರ ಆದೇಶಿಸಿದೆ.

‘ಪಥಸಂಚಲನದಲ್ಲಿ 300 ಮಂದಿ ಗಣವೇಷಧಾರಿ ಸ್ವಯಂಸೇವಕರು ಹಾಗೂ 50 ಮಂದಿ ಘೋಷ್ ವಾದಕರು ಭಾಗವಹಿಸಲು ಅನುಮತಿ ನೀಡಲಾಗುತ್ತಿದೆ’ ಎಂದು ತಿಳಿಸಿದ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿದೆ.

ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಹಾಗೂ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ವಾದ ಮಂಡಿಸಿದ್ದರು.

‘ಸಂವಿಧಾನದ ಶಕ್ತಿ ಅರ್ಥವಾಗಿದೆ’

ಚಿತ್ತಾಪುರ

ಬೆಂಗಳೂರು: ‘ಸಂವಿಧಾನ, ಕಾನೂನುಗಳು ನಮಗೆ ಅನ್ವಯಿಸುವುದಿಲ್ಲ ಎಂಬಂತೆ ನಡೆದುಕೊಳ್ಳುತ್ತಿದ್ದ ಆರ್‌ಎಸ್‌ಎಸ್‌ಗೆ ಈಗ ಸಂವಿಧಾನದ ಶಕ್ತಿ ಅರ್ಥವಾಗಿದೆ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಚಿತ್ತಾಪುರದಲ್ಲಿ ಪಥ ಸಂಚಲನಕ್ಕೆ ಅನುಮತಿ ನೀಡಿರುವ ಕುರಿತು ತಮ್ಮ ‘ಎಕ್ಸ್’ ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಅವರು, ‘ಯಾವುದೇ ಸಂಘಗಳು, ವ್ಯಕ್ತಿಗಳು ಸಂವಿಧಾನವನ್ನು ಅರ್ಥೈಸಿಕೊಂಡು ನೀತಿ, ನಿಯಮಗಳಿಗೆ ಬದ್ಧರಾಗಿ ನಡೆಯಬೇಕು. ಸರ್ಕಾರ ಮತ್ತು ಕಲಬುರಗಿ ಜಿಲ್ಲಾಡಳಿತ ರೂಪಿಸಿರುವ ಮಾನದಂಡಗಳನ್ನು ಒಪ್ಪಿ, ನಿಯಮಗಳಿಗೆ ಅನುಸಾರವಾಗಿ ಆರ್‌ಎಸ್‌ಎಸ್ ಪಥಸಂಚಲನ ನಡೆಸಬೇಕು. ಇದರ ಹೊರತಾಗಿ ಯಾವುದೇ ಅತಿ ಬುದ್ಧಿವಂತಿಕೆಗೂ ಅವಕಾಶವಿಲ್ಲ’ ಎಂದಿದ್ದಾರೆ.

‘ಯಾವ ಸಂಘಗಳೇ ಆಗಲಿ ಸಂವಿಧಾನದ ಮುಂದೆ ಯಾರೂ ದೊಡ್ಡವರಲ್ಲ. ಯಾರೂ ನಿಯಮಗಳಿಗೆ ಅತೀತರಲ್ಲ. ಸಂವಿಧಾನಕ್ಕೆ ತಲೆಬಾಗಿದರೆ ಮಾತ್ರ ಬದುಕು ಸುಂದರ. ಸಂವಿಧಾನಕ್ಕೆ ಸವಾಲು ಹಾಕಿದರೆ ಬದುಕು ದುಸ್ತರ. ಆರ್‌ಎಸ್‌ಎಸ್ ಎಂಬ ಸಂಘಟನೆಗೆ ಈ ಸತ್ಯದ ಅರಿವಾಗಿದೆ’ ಎಂದೂ ಹೇಳಿದ್ದಾರೆ.

‘ಪಥ ಸಂಚಲನದಲ್ಲಿ 300 ಜನರು ಮಾತ್ರ ಭಾಗವಹಿಸಬೇಕು. ಸರ್ಕಾರ ನಿಗದಿಪಡಿಸಿದ ಸ್ಥಳಗಳಲ್ಲಿ ಮಾತ್ರ ಅವಕಾಶ. ಚಿತ್ತಾಪುರದ ಹೊರಗಿನವರು ಭಾಗವಹಿಸಲು ಅವಕಾಶ ಇಲ್ಲ. ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ಮಾಡಿಕೊಡಬಾರದೆಂಬ ನಿಯಮಗಳ ಮೂಲಕ ಸರ್ಕಾರ ತೋರಿದ ಉದಾರತೆ, ಕಲಬುರಗಿ ಜಿಲ್ಲಾಡಳಿತ ತೋರಿದ ಸಹನೆಯನ್ನು ಆರ್‌ಎಸ್‌ಎಸ್ ಗೌರವಿಸಬೇಕು’ ಎಂದಿದ್ದಾರೆ.

ಬಿ.ಎಸ್. ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣ

ಸಮನ್ಸ್ ರದ್ದತಿಗೆ ಹೈಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೋಕ್ಸೊ ಪ್ರಕರಣದಲ್ಲಿ ಸಿಲುಕಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಕೋರ್ಟ್‌ಗೆ ಕರೆಯಿಸಿ, ವಿಚಾರಣೆ ನಡೆಸುವ ನ್ಯಾಯಿಕ ಪ್ರಕ್ರಿಯೆಗಾಗಿ ಜಾರಿಗೊಳಿಸಲಾಗಿದ್ದ ಸಮನ್ಸ್ ರದ್ದುಪಡಿಸಲು ಹೈಕೋರ್ಟ್ ಸ್ಪಷ್ಟವಾಗಿ ನಿರಾಕರಿಸಿದೆ.

‘ಪೋಕ್ಸೊ ಅಪರಾಧಕ್ಕೆ ಸಂಬಂಧಿಸಿದಂತೆ ನಮ್ಮ ವಿರುದ್ಧದ ಆರೋಪಗಳನ್ನು ಪರಿಗಣಿಸಿ ಬೆಂಗಳೂರಿನ ಎಫ್‌ಟಿಎಸ್ ವಿಶೇಷ ಕೋರ್ಟ್–I ಹೊರಡಿಸಿರುವ ಸಮನ್ಸ್ ಜಾರಿ ಆದೇಶವನ್ನು ರದ್ದುಗೊಳಿಸಬೇಕು’ ಎಂದು ಕೋರಿ ಯಡಿಯೂರಪ್ಪ, ವೈ.ಎಂ.ಅರುಣ, ಎಂ.ರುದ್ರೇಶ ಹಾಗೂ ಜಿ.ಮರಿಸ್ವಾಮಿ ಸಲ್ಲಿಸಿದ್ದ ಎರಡು ಪ್ರತ್ಯೇಕ ರಿಟ್ ಅರ್ಜಿಗಳನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಆದೇಶ ಹೊರಡಿಸಿದೆ.

ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಆದ ಪದಾಂಕಿತ ಹಿರಿಯ ವಕೀಲ ರವಿವರ್ಮ ಕುಮಾರ್ ಹಾಗೂ ಅಶೋಕ್ ಎನ್.ನಾಯಕ್ ಅವರ ವಾದವನ್ನು ಮನ್ನಿಸಿರುವ ನ್ಯಾಯಪೀಠ, ‘ಯಡಿಯೂರಪ್ಪ ಹಾಜರಿ ಅಗತ್ಯವಿಲ್ಲ ಎಂದಾದರೆ ಅವರನ್ನು ವಿಚಾರಣೆಗೆ ಹಾಜರಾಗುವಂತೆ ಒತ್ತಾಯಿಸಬಾರದು. ವಿನಾಯತಿ ಮನವಿಯನ್ನು ಪುರಸ್ಕರಿಸಬೇಕು. ಈ ನ್ಯಾಯಪೀಠ ಮತ್ತು ಸಕ್ಷಮ ನ್ಯಾಯಾಲಯದ ಆದೇಶಗಳಲ್ಲಿ ಉಲ್ಲೇಖಿಸಲಾದ ಅಂಶಗಳ ಪ್ರಭಾವಕ್ಕೆ ಒಳಗಾಗದೇ ತನ್ನ ಮುಂದಿರುವ ಸಾಕ್ಷ್ಯಾಧಾರ ಆಧರಿಸಿ ಪ್ರಕರಣವನ್ನು ನಿರ್ಧರಿಸಬೇಕು’ ಎಂದು ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಿದೆ.

ಪ್ರಕರಣವೇನು?: ‘ನನ್ನ ಮಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ನನಗೆ ನ್ಯಾಯ ಕೊಡಿಸಿ’ ಎಂದು ಬೇಡಿ ಆರ್‌ಎಂವಿ ಎರಡನೇ ಹಂತದಲ್ಲಿನ ಡಾಲರ್ಸ್ ಕಾಲೊನಿಯಲ್ಲಿರುವ ಯಡಿಯೂರಪ್ಪ ಅವರ ‘ಧವಳಗಿರಿ’ ನಿವಾಸಕ್ಕೆ ತಾಯಿಯೊಬ್ಬರು (ಈಗ ಬದುಕಿಲ್ಲ) ಬಂದಿದ್ದರು.

‘ಈ ಸಂದರ್ಭದಲ್ಲಿ ಯಡಿಯೂರಪ್ಪ ಅವರು ನನ್ನ 14 ವರ್ಷದ ಮಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆಯೋ ಇಲ್ಲವೋ ಎಂಬುದನ್ನು ಚೆಕ್ ಮಾಡುವುದಾಗಿ ತಿಳಿಸಿ ಆಕೆಯನ್ನು ತಮ್ಮ ಕೋಣೆಯೊಳಗೆ ಕರೆದುಕೊಂಡು ಹೋಗಿ ಕಾಮಪೀಡಿತ ದುರ್ವರ್ತನೆ ತೋರಿದ್ದಾರೆ. 2024ರ ಫೆಬ್ರುವರಿ 2ರಂದು ಬೆಳಗ್ಗೆ 11ರಿಂದ 11.30ರ ನಡುವೆ ಈ ಘಟನೆ ನಡೆದಿದೆ’ ಎಂದು ಆರೋಪಿಸಿ ಬಾಲಕಿಯ ತಾಯಿ ಸದಾಶಿವನಗರದ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಇದನ್ನು ಆಧರಿಸಿ, ಪೊಲೀಸರು ‘ಕಾನೂನಿನ ಚೌಕಟ್ಟಿನಲ್ಲಿ ಇದು ಅಪರಾಧ ಎನಿಸಿದೆ’ ಎಂದು ಭಾರತೀಯ ದಂಡ ಸಂಹಿತೆ–1860ರ ಕಲಂ 354 ಎ, 204, 214 ಹಾಗೂ 37 ಮತ್ತು ಪೋಕ್ಸೊ–2012ರ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ) ಕಲಂ 8ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿ ವಿಚಾರಣಾ ನ್ಯಾಯಾಲಯಕ್ಕೆ ರವಾನಿಸಿದ್ದರು.

ಇದರ ಅನುಸಾರ ‘ಅಪರಾಧ ಜರುಗಿದೆ ಮತ್ತು ಪೊಲೀಸರು ಕ್ರಮ ಜರುಗಿಸಬಹುದಾಗಿದೆ’ ಎಂದು ಪರಿಗಣಿಸಿದ್ದ ವಿಶೇಷ ನ್ಯಾಯಾಲಯ, 2025ರ ಫೆಬ್ರುವರಿ 28ರಂದು ಯಡಿಯೂರಪ್ಪ ಮತ್ತು ಇತರರಿಗೆ ಸಮನ್ಸ್ ಜಾರಿಗೊಳಿಸಿ ಆದೇಶಿಸಿತ್ತು.

2026ರಲ್ಲಿ 20 ಸಾರ್ವತ್ರಿಕ ರಜೆ, 21 ಪರಿಮಿತ ರಜೆಗಳು

ಬೆಂಗಳೂರು: 2026ರ ಸಾರ್ವತ್ರಿಕ ರಜಾ ದಿನಗಳು ಮತ್ತು ಪರಿಮಿತ ರಜಾ ದಿನಗಳ ಪಟ್ಟಿಗೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಮುಂದಿನ ವರ್ಷದಲ್ಲಿ 20 ಸಾರ್ವತ್ರಿಕ ಮತ್ತು 21 ಪರಿಮಿತ ರಜಾ ದಿನಗಳು ಇರಲಿವೆ.

ಸಾರ್ವತ್ರಿಕ ರಜೆಗಳು

ದಿನಾಂಕ	ರಜೆ
ಜ.15	ಮಕರ ಸಂಕ್ರಾಂತಿ
ಜ.26	ಗಣರಾಜ್ಯೋತ್ಸವ
ಮಾ.19	ಯುಗಾದಿ
ಮಾ.21	ಖುತುಬ್–ಎ–ರಂಜಾನ್
ಮಾ.31	ಮಹಾವೀರ ಜಯಂತಿ
ಏ.3	ಗುಡ್ ಫ್ರೈಡೇ
ಏ.14	ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ
ಏ.20	ಬಸವ ಜಯಂತಿ, ಅಕ್ಷಯ ತೃತೀಯ
ಮೇ 1	ಕಾರ್ಮಿಕ ದಿನಾಚರಣೆ
ಮೇ 28	ಬಕ್ರೀದ್
ಜೂ.26	ಮೊಹರಂ ಕಡೆ ದಿನ
ಆ.15	ಸ್ವಾತಂತ್ರ್ಯ ದಿನಾಚರಣೆ
ಆ.26	ಈದ್–ಮಿಲಾದ್
ಸೆ.14	ವರಸಿದ್ಧಿ ವಿನಾಯಕ ವ್ರತ
ಅ.2	ಗಾಂಧಿ ಜಯಂತಿ
ಅ.20	ಮಹಾನವಮಿ, ಆಯುಧಪೂಜೆ
ಅ.21	ವಿಜಯದಶಮಿ
ನ.10	ಬಲಿಪಾಡ್ಯಮಿ, ದೀಪಾವಳಿ
ನ.27	ಕನಕದಾಸ ಜಯಂತಿ
ಡಿ.25	ಕ್ರಿಸ್‌ಮಸ್

● ಮಹಾ ಶಿವರಾತ್ರಿ (ಫೆಬ್ರುವರಿ 15), ಮಹರ್ಷಿ ವಾಲ್ಮೀಕಿ ಜಯಂತಿ (ಅಕ್ಟೋಬರ್ 25), ಕನ್ನಡ ರಾಜ್ಯೋತ್ಸವ (ನವೆಂಬರ್ 1) ಮತ್ತು ನರಕ ಚತುರ್ದಶಿ (ನವೆಂಬರ್ 8) ಭಾನುವಾರ ಬಂದಿವೆ. ಮಹಾಲಯ ಅಮವಾಸ್ಯೆಯು (ಅಕ್ಟೋಬರ್ 10) ಎರಡನೇ ಶನಿವಾರ ಬಂದಿದೆ. ಈ ಎಲ್ಲ ರಜೆಗಳನ್ನು ಈ ಪಟ್ಟಿಯಲ್ಲಿ ತೋರಿಸಿಲ್ಲ.

● ಸೆಪ್ಟೆಂಬರ್ 3 ಗುರುವಾರ ಕೈಲ್ ಮಹೂರ್ತ, ಅಕ್ಟೋಬರ್ 18ರ ತುಲಾ ಸಂಕ್ರಮಣ ಮತ್ತು ನವೆಂಬರ್ 26ರ ಗುರುವಾರ ಹುತ್ತರಿ ಹಬ್ಬವನ್ನು ಆಚರಿಸಲು ಕೊಡಗು ಜಿಲ್ಲೆಗೆ ಮಾತ್ರ ಅನ್ವಯವಾಗುವಂತೆ ಸ್ಥಳೀಯ ಸಾರ್ವತ್ರಿಕ ರಜೆಗಳನ್ನು ಘೋಷಿಸಲಾಗಿದೆ.

ಪರಿಮಿತ ರಜೆಗಳು

ದಿನಾಂಕ	ರಜೆ
ಜ.1	ಹೊಸ ವರ್ಷಾರಂಭ
ಜ.27	ಮಧ್ವ ನವಮಿ
ಫೆ.4	ಶಬ್–ಎ–ಬರಾತ್
ಮಾ.2	ಹೋಳಿ ಹಬ್ಬ
ಮಾ.17	ಶಬ್–ಎ–ಖದರ್
ಮಾ.20	ಜಮತ್–ಉಲ್–ವಿದಾ
ಮಾ.23	ದೇವರ ದಾಸೀಮಯ್ಯ ಜಯಂತಿ
ಮಾ.27	ರಾಮ ನವಮಿ
ಏ.4	ಹೋಲಿ ಸ್ಯಾಟರ್‌ಡೇ
ಏ.21	ಶಂಕರಾಚಾರ್ಯ ಜಯಂತಿ
ಏ.22	ರಾಮಾನುಜಾಚಾರ್ಯ ಜಯಂತಿ
ಆ.21	ವರಮಹಾಲಕ್ಷ್ಮಿ ವ್ರತ
ಆ.27	ಯಜುರ್ ಉಪಾಕರ್ಮ
ಆ.28	ನಾರಾಯಣಗುರು ಜಯಂತಿ, ರಕ್ಷಾ ಬಂಧನ
ಸೆ.4	ಕೃಷ್ಣ ಜನ್ಮಾಷ್ಟಮಿ
ಸೆ.8	ಕನ್ಯಾ ಮರಿಯಂ ಜಯಂತಿ
ಸೆ.17	ವಿಶ್ವಕರ್ಮ ಜಯಂತಿ
ಸೆ.25	ಅನಂತ ಪದ್ಮನಾಭ ವ್ರತ
ನ.24	ಗುರುನಾನಕ್ ಜಯಂತಿ
ನ.26	ಹುತ್ತರಿ ಹಬ್ಬ
ಡಿ.24	ಕ್ರಿಸ್‌ಮಸ್ ಈವ್

● ತುಲಾ ಸಂಕ್ರಮಣವು (ಅ.18) ಭಾನುವಾರ, ಸೌರಮಾನ ಯುಗಾದಿ (ಏ.14) ಅಂಬೇಡ್ಕರ್ ಜಯಂತಿ, ಬುದ್ಧ ಪೌರ್ಣಿಮೆಯು (ಮೇ.1) ಕಾರ್ಮಿಕರ ದಿನ, ಋಗ್ ಉಪಾಕರ್ಮ ಮತ್ತು ಓಣಂ (ಆ.26) ಈದ್–ಮಿಲಾದ್, ಸ್ವರ್ಣಗೌರಿ ವ್ರತವು (ಜು.19) ವರಸಿದ್ಧಿ ವಿನಾಯಕ ವ್ರತದ ದಿನಗಳಂದು ಬಂದಿದ್ದು ಈ ಪಟ್ಟಿಯಲ್ಲಿ ತೋರಿಸಿಲ್ಲ

ಆತ್ಮಜ್ಞಾನವಿಲ್ಲದ ಶಿಕ್ಷಣ ವ್ಯರ್ಥ: ಸ್ವಾಮಿ ಬೋಧಮಯಾನಂದ ಮಹಾರಾಜ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಇಂದಿನ ಶಿಕ್ಷಣ ಪದ್ಧತಿಯಲ್ಲಿ ಆತ್ಮಜ್ಞಾನ, ತತ್ವಜ್ಞಾನದ ಕೊರತೆ ಕಾಡುತ್ತಿದೆ. ಇದೇ ಕಾರಣಕ್ಕೆ ಸುಶಿಕ್ಷಿತರೇ ಹೆಚ್ಚಾಗಿ ಸಮಾಜ ಘಾತಕ ಕೃತ್ಯಗಳಲ್ಲಿ ತೊಡಗಿದ್ದಾರೆ’ ಎಂದು ಹೈದರಾಬಾದ್‌ನ ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿ ಬೋಧಮಯಾನಂದ ಮಹಾರಾಜ ಕಳವಳ ವ್ಯಕ್ತಪಡಿಸಿದರು.

ಇಲ್ಲಿನ ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಯಲ್ಲಿ (ಕೆಎಲ್‌ಇ) ಗುರುವಾರ 110ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಮಾತನಾಡಿ, ‘ಕೆಎಲ್‌ಇ ಸಂಸ್ಥೆ ಯಾವುದೇ ಕುಟುಂಬದ ಸ್ವತ್ತಾಗಿಲ್ಲ. ಪ್ರಜಾಪ್ರಭುತ್ವ ಮಾದರಿಯಲ್ಲಿ ಮುನ್ನಡೆದಿದೆ. ಕರ್ನಾಟಕ ಸರ್ಕಾರದಲ್ಲಿ ಈಗ ಇರುವ ಶೇ 50ರಷ್ಟು ಜನಪ್ರತಿನಿಧಿಗಳನ್ನು ನಮ್ಮ ಸಂಸ್ಥೆಯೇ ತಯಾರು ಮಾಡಿದೆ. ರಾಷ್ಟ್ರಕ್ಕೆ ಮೌಲ್ಯಯುತ ನಾಯಕರನ್ನು ನೀಡಿದೆ’ ಎಂದರು.

ಸಂಸ್ಥೆಯ ಅಧ್ಯಕ್ಷ, ಶಾಸಕ ಮಹಾಂತೇಶ ಕೌಜಲಗಿ ಅಧ್ಯಕ್ಷೀಯ ಭಾಷಣ ಮಾಡಿದರು. ಸಂಸ್ಥೆಯ ಕಾರ್ಯದರ್ಶಿ ಡಾ.ಬಿ.ಜಿ.ದೇಸಾಯಿ, ಆಜೀವ ಸದಸ್ಯ ಮಂಡಳಿಯ ಕಾರ್ಯಾಧ್ಯಕ್ಷೆ ಡಾ.ದೀಪಾ ಮೆಟಗುಡ್ಡ ಇದ್ದರು.

ಸಂಸ್ಥೆಯ ವಿವಿಧ ಕಾಲೇಜಿನ ವಿದ್ಯಾರ್ಥಿಗಳನ್ನು, ವೈದ್ಯರನ್ನು, ಶಿಕ್ಷಕರನ್ನು, ನರ್ಸಿಂಗ್ ಸಿಬ್ಬಂದಿ ವರ್ಗದವರನ್ನು ಸತ್ಕರಿಸಲಾಯಿತು. 66 ಚಿನ್ನ, 49 ಬೆಳ್ಳಿ ಪದಕಗಳನ್ನು ವಿತರಿಸಲಾಯಿತು.



ಬೆಳಗಾವಿಯ ಕೆಎಲ್‌ಇ ಸಂಸ್ಥೆಯ 110ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಸ್ವಾಮಿ ಬೋಧಮಯಾನಂದ ಮಹಾರಾಜ ಮಾತನಾಡಿದರು

ಸಮಾಜ ಕಲ್ಯಾಣ ಇಲಾಖೆ ಹಾಸ್ಟೆಲ್‌ಗಳಿಗೆ ಲೋಕಾಯುಕ್ತರ ದಿಢೀರ್ ಭೇಟಿ

ವಿದ್ಯಾರ್ಥಿ ನಿಲಯ; ಅವ್ಯವಸ್ಥೆ ಆಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮಗೆ ನೀಡುವ ಊಟ ಸರಿಯಾಗಿರುವುದಿಲ್ಲ, ಸ್ನಾನಕ್ಕೆ ಬಳಸುವ ನೀರಿನಲ್ಲಿ ಹುಳುಗಳು ಇರುತ್ತವೆ, ಮೊಟ್ಟೆ–ಬಾಳೆಹಣ್ಣು ನೀಡುವುದಿಲ್ಲ. ಪ್ರಶ್ನಿಸಿದರೆ ಬೈಗುಳ ಕೇಳಿಸಿಕೊಳ್ಳಬೇಕಾಗುತ್ತದೆ, ದಿಂಬು ಹಾಸಿಗೆಗಳು ಕೊಳೆತು ನಾರುತ್ತಿವೆ. ಕೊಠಡಿ ತುಂಬೆಲ್ಲಾ ತಿಗಣೆಗಳು ಇದ್ದು, ಅವು ಕಚ್ಚಿ ಮೈಯೆಲ್ಲಾ ಗಂಧೆಗಳಾಗಿವೆ’...

ನಗರದ ಎಂ.ಜಿ.ರಸ್ತೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ನಡೆಸುತ್ತಿರುವ ಡಾ.ಬಿ.ಆರ್. ಅಂಬೇಡ್ಕರ್ ಸರ್ಕಾರಿ ವಿಜ್ಞಾನ ಕಾಲೇಜು ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಗುರುವಾರ ದಿಢೀರ್ ಭೇಟಿ ನೀಡಿದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರ ಎದುರು, ವಿದ್ಯಾರ್ಥಿಗಳು ಇಟ್ಟ ಸಾಲು–ಸಾಲು ದೂರುಗಳಿವು.



ಎಂ.ಜಿ.ರಸ್ತೆಯಲ್ಲಿರುವ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ವಾರ್ಡನ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳನ್ನು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ತರಾಟೆಗೆ ತೆಗೆದುಕೊಂಡರು

2022ರಲ್ಲಿ ವಿದ್ಯಾರ್ಥಿಗಳು ನೀಡಿದ್ದ ದೂರಿನ ಆಧಾರದಲ್ಲಿ ಲೋಕಾಯುಕ್ತವು ಪ್ರಕರಣ ದಾಖಲಿಸಿಕೊಂಡಿತ್ತು. ಲೋಕಾಯುಕ್ತ ಪೊಲೀಸ್ ವಿಭಾಗವು ನಡೆಸಿದ ಪರಿಶೀಲನೆಯ ನಂತರ ನಗರದ ವಿವಿಧೆಡೆ ಇರುವ 28 ವಿದ್ಯಾರ್ಥಿ ನಿಲಯಗಳ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಆ ಪ್ರಕರಣಗಳ ತನಿಖೆಯ ಭಾಗವಾಗಿ ಲೋಕಾಯುಕ್ತರು, ಉಪ ಲೋಕಾಯುಕ್ತರು ಭೇಟಿ ನೀಡಿದಾಗ ವಿದ್ಯಾರ್ಥಿ ನಿಲಯಗಳಲ್ಲಿನ ಅವ್ಯವಸ್ಥೆಗಳ ಲೋಕವೇ ತೆರೆದುಕೊಂಡಿತು.

ಎಂ.ಜಿ.ರಸ್ತೆಯಲ್ಲಿರುವ ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿದಾಗ ವಾರ್ಡನ್ ಮತ್ತು ಅಡುಗೆ ಸಹಾಯಕರು ತಮ್ಮಲ್ಲಿರುವ ವ್ಯವಸ್ಥೆಗಳು ಉತ್ತಮವಾಗಿವೆ ಎಂದು ಮಾಹಿತಿ ನೀಡಿದರು. ಆದರೆ ಲೋಕಾಯುಕ್ತರು ಪರಿಶೀಲನೆ ನಡೆಸಿದಾಗ ಸ್ವಚ್ಛತೆ ಇರದಿರುವುದು, ವಿದ್ಯಾರ್ಥಿಗಳು ಕಿಕ್ಕಿರಿದು ತುಂಬಿರುವುದನ್ನು ಕಂಡರು. ತಕ್ಷಣವೇ ವಾರ್ಡನ್ ಮತ್ತು ಅಡುಗೆ ಸಹಾಯಕರನ್ನು ಹೊರಗಡೆ ಕಳುಹಿಸಿ, ಎಲ್ಲ ವಿದ್ಯಾರ್ಥಿಗಳನ್ನು ಕರೆಯಿಸಿ ಮಾಹಿತಿ ಪಡೆದುಕೊಂಡರು.

ಸಮಾಜ ಕಲ್ಯಾಣ ಇಲಾಖೆಯು ಯಲಹಂಕ ಮತ್ತು ಕೊಡಿಗೆಹಳ್ಳಿಯಲ್ಲಿ ನಡೆಸುತ್ತಿರುವ ಸರ್ಕಾರಿ ಮೆಟ್ರಿಕ್ ನಂತರ, ಸ್ನಾತಕೋತ್ತರ ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಉಪ ಲೋಕಾಯುಕ್ತ ಬಿ.ವೀರಪ್ಪ ಅವರು ಭೇಟಿ ನೀಡಿದಾಗಲೂ ಇಂಥದ್ದೇ ದೂರುಗಳು ಬಂದವು.

‘ಕಿಟಕಿಗೆ ಮರೆಯೇ ಇಲ್ಲ’

ವಿಜಯನಗರದ ಮನುವನ ಬಳಿ ಇರುವ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದ ಸ್ನಾನದ ಮನೆಗಳಿಗೆ ದೊಡ್ಡ ಕಿಟಕಿಗಳಿವೆ. ಆದರೆ ಅವುಗಳಿಗೆ ಅರೆ ಪಾರದರ್ಶಕ ಗಾಜು ಅಥವಾ ಯಾವುದೇ ರೀತಿಯ ಮರೆ ಇರುವುದಿಲ್ಲ. ಇದನ್ನು ಕೂಡಲೇ ಸರಿಪಡಿಸಿ ಎಂದು ಉಪ ಲೋಕಾಯುಕ್ತ ಕೆ.ಎನ್. ಫಣೀಂದ್ರ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಕೊಳಕು ಪಾತ್ರೆಯಲ್ಲಿ ಅಡುಗೆ: ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಯಲಹಂಕದ ಬಾಲಕಿಯರ ವಿದ್ಯಾರ್ಥಿ ನಿಲಯದ ಅಡುಗೆ ಮನೆಗೆ ಭೇಟಿ ನೀಡಿದರು. ಈ ವೇಳೆ ತೀರಾ ಕೊಳಕಾಗಿದ್ದ ಮತ್ತು ಮುಕ್ಕಾಗಿದ್ದ ಪಾತ್ರೆಯಲ್ಲಿ ಕಾಫಿ ಕಾಯಿಸಿಟ್ಟಿರುವುದು ಕಂಡು ಬಂತು. ಲೋಪಗಳನ್ನು ತಕ್ಷಣವೇ ಸರಿಪಡಿಸಿ ಎಂದು ವಾರ್ಡನ್‌ಗೆ ತಾಕೀತು ಮಾಡಿದರು.

ಉಗ್ರ ಕೃತ್ಯದ ತನಿಖೆ ಕಾಶ್ಮೀರದತ್ತ

‘ಬಾಂಬ್‌ಗಳನ್ನಷ್ಟೇ ಹಿಂಬಾಲಿಸುತ್ತಿಲ್ಲ, ಮನಸ್ಸುಗಳನ್ನು ಹಿಂಬಾಲಿಸುತ್ತಿದ್ದೇವೆ’

• ಜುಲ್ಫೀಕರ್ ಮಜೀದ್

ಶ್ರೀನಗರ: ಕೆಂಪುಕೋಟೆಯಲ್ಲಿ ನಡೆದ ಸ್ಫೋಟ ಹಾಗೂ ಫರೀದಾ ಬಾದ್‌ನಲ್ಲಿ ಸ್ಫೋಟಕ ಸಾಗಣೆಗೆ ಸಂಬಂಧಿಸಿದಂತೆ ತನಿಖೆಯನ್ನು ಮತ್ತಷ್ಟು ವಿಸ್ತರಿಸಿರುವ ತನಿಖಾಧಿಕಾರಿಗಳು, ಭದ್ರತಾ ಸಂಸ್ಥೆಗಳು ತಮ್ಮ ಗಮನವನ್ನು ಕಾಶ್ಮೀರದ ಮೇಲೆ ಕೇಂದ್ರಿಕರಿಸಿದ್ದಾರೆ. ಈಗಾಗಲೇ ಬಂಧಿತರಾದ ವೈದ್ಯರ ಸಂಬಂಧಿಕರು, ಸಹೋದ್ಯೋಗಿಗಳು, ಡಿಜಿಟಲ್ ಸಂಪರ್ಕದಲ್ಲಿದ್ದ ವ್ಯಕ್ತಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ವೈದ್ಯರಿಂದ ವಶಕ್ಕೆ ಪಡೆದ ಮೊಬೈಲ್ ಫೋನ್‌ಗಳು, ಲ್ಯಾಪ್‌ಟಾಪ್‌ಗಳನ್ನು ಸೈಬರ್ ತಜ್ಞರು ವಿಧಿವಿಜ್ಞಾನ ಪರೀಕ್ಷೆಗೆ ಕಳುಹಿಸಿದ್ದು, ವೆಬ್ ಸಂಪರ್ಕದ ಮೂಲಕ ಎನ್‌ಕ್ರಿಪ್ಟೆಡ್ ಕಮ್ಯೂನಿಕೇಷನ್ ಸಂವಹನ ಮಾರ್ಗವನ್ನು ಪತ್ತೆಹಚ್ಚಲು ಮುಂದಾಗಿದ್ದಾರೆ.

ಎನ್‌ಕ್ರಿಪ್ಟೆಡ್ ಕಮ್ಯೂನಿಕೇಷನ್ ಹೆಚ್ಚು ಭದ್ರತೆ ಹೊಂದಿರುವ ಸಂವಹನ ಮಾರ್ಗವಾಗಿದ್ದು, ಬೇರೆಯವರು ಇದನ್ನು ಕದ್ದಾಲಿಕೆ ಮಾಡಲು ಸಾಧ್ಯವಿಲ್ಲ.

ಕಳೆದ ಮೂರು ದಿನಗಳಿಂದಲೂ ಪುಲ್ವಾಮಾ, ಕುಲ್ಗಾಮ್, ಶೋಪಿಯಾನ್, ಶ್ರೀನಗರದಲ್ಲಿ ಹಲವೆಡೆ ತನಿಖಾ ತಂಡಗಳು ದಾಳಿ ಮುಂದುವರಿಸಿದ್ದು, ಆರೋಪಿ ಪೈಕಿ ಒಬ್ಬನ ಸಹೋದರಿ ಸೇರಿದಂತೆ ಹಲವರನ್ನು ವಶಕ್ಕೆ ಪಡೆದಿದ್ದಾರೆ. ಸ್ಫೋಟದ ಕುರಿತು ವಶಕ್ಕೆ ಪಡೆದ ವ್ಯಕ್ತಿಗಳಿಗೆ ಮುಂಚಿತವಾಗಿ ಮಾಹಿತಿ ತಿಳಿದಿತ್ತೇ ಎಂಬುದರ ಕುರಿತು ಪ್ರಶ್ನಿಸಲಾಗಿದೆ. ಬಂಧಿತ ವೈದ್ಯರ ಜೊತೆಗೆ ಹಣಕಾಸು ವರ್ಗಾವಣೆ, ಆನ್‌ಲೈನ್ ಸಂಪರ್ಕ ಹೊಂದಿದ್ದವರ ಕುರಿತು ವಿಚಾರಣೆ ನಡೆಸಲಾಗಿದೆ.


‘ಟೆಲಿಗ್ರಾಂ ಖಾತೆ, ಪ್ರೋಟಾನ್ ಮೇಲ್‌ಗಳ ಮೂಲಕ ರಹಸ್ಯ ಸಂವಹನ ನಡೆಸಿರುವುದು, ಖಾಸಗಿ ಖಾತೆಗಳ ಮೂಲಕ ಹಣದ ವಹಿವಾಟು ನಡೆಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ’ ಎಂದು ಮೂಲಗಳು ತಿಳಿಸಿವೆ.

‘ನಾವು ಬಾಂಬ್‌ಗಳನ್ನಷ್ಟೇ ಹಿಂಬಾಲಿಸುತ್ತಿಲ್ಲ, ಅವರನ್ನು ಬೆಂಬಲಿಸಿದ ಮನಸ್ಸುಗಳನ್ನು ಹಿಂಬಾಲಿಸುತ್ತಿದ್ದೇವೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದೆಹಲಿ ಸ್ಫೋಟದ ಬಳಿಕ ಫರೀದಾಬಾದ್‌ನ ಅಲ್‌–ಅಲ್‌–ಫಲಾಹ್ ವಿಶ್ವವಿದ್ಯಾಲಯದಲ್ಲಿ ಹಲವು ವೈದ್ಯರ ಬಂಧನ, 2,900 ಕೆ.ಜಿ. ಸ್ಫೋಟಕಗಳನ್ನು ವಶಕ್ಕೆ ಪಡೆದ ಬಳಿಕ ಜಮ್ಮು ಮತ್ತು ಕಾಶ್ಮೀರದ ಪೊಲೀಸರು, ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಜಂಟಿ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಡಾ. ಮುಜಮ್ಮಿಲ್ ಗನಿ (ಮಾಸ್ಟರ್‌ಮೈಂಡ್)

35 ವರ್ಷದ ಡಾ. ಮುಜಮ್ಮಿಲ್ ಗನಿ ಫರೀದಾಬಾದ್‌ನ ಅಲ್‌–ಫಲಾಹ್ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ. ಪುಲ್ವಾಮಾ ಮೂಲದ ಈತನೇ ದೆಹಲಿ ಸ್ಫೋಟದ ಪ್ರಧಾನ ಸಂಚುಕೋರನಾಗಿದ್ದು, ಉಳಿದವರ ಜೊತೆಗೆ ಸಂಯೋಜಕನಾಗಿ ಕೆಲಸ ಮಾಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.



ಮುಜಮ್ಮಿಲ್ ಗನಿ


ಫರೀದಾಬಾದ್‌ನ ದೌಜ್ ಪ್ರದೇಶದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದ ಈತನ ಮನೆಯಿಂದಲೇ 358 ಕೆ.ಜಿ. ಅಮೋನಿಯಂ ನೈಟ್ರೇಟ್, ಒಂದು ಎ.ಕೆ.–47 ರೈಫಲ್ಸ್, ಮೂರು ಮ್ಯಾಗಜೀನ್, 91 ಜೀವಂತ ಗುಂಡುಗಳು, ಪಿಸ್ತೂಲ್, ಟೈಮರ್, ರಿಮೋಟ್ ಕಂಟ್ರೋಲ್ ಡಿಟೋನೇಟರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಹಲವು ಸಲ ಕೆಂಪು ಕೋಟೆಗೆ ಭೇಟಿ ನೀಡಿದ್ದ ಈತ, ಜನದಟ್ಟಣೆಯ ಜೊತೆಗೆ, ಭದ್ರತಾ ಸ್ಥಿತಿಗತಿ ಕುರಿತು ಪರಿಶೀಲನೆ ನಡೆಸಿದ್ದ. ಗಣರಾಜ್ಯೋತ್ಸವದ ದಿನವೇ ದಾಳಿ ನಡೆಸುವ ಕುರಿತು ಸಂಚು ರೂಪಿಸಿದ್ದ. ಈತನ ಸಹೋದರಿ ಡಾ. ಅಸ್ಮತ್ ಶಕೀಲ್ ಅಲಿಯಾಸ್ ಜಸೀಯನ್ನು ವಶಕ್ಕೆ ಪಡೆದ ಪೊಲೀಸರು ವಿಚಾರಣೆಗೆ ಒಳಪಡಿಸಿದ್ದಾರೆ.

ಸಹೋದರನಿಗೆ ಆರ್ಥಿಕ ನೆರವು ಹಾಗೂ ಸಂವಹನ ಮಧ್ಯವರ್ತಿಯಾಗಿ ಕೆಲಸ ಮಾಡಿದ್ದರೇ ಎಂಬುದರ ಕುರಿತು ವಿಚಾರಣೆ ಮುಂದುವರಿಸಿದ್ದಾರೆ.

ಡಾ. ಉಮರ್ ನಬಿ (ಶಂಕಿತ ಸ್ಫೋಟ ಕಾರ್ಯಗತಗೊಳಿಸಿದವ)

ಪುಲ್ವಾಮಾ ಮೂಲದ ಈತ ತನ್ನ ಐ–20 ಕಾರಿನಲ್ಲಿಯೇ ಸ್ಫೋಟಕಗಳನ್ನು ತೆಗೆದುಕೊಂಡು ಹೋಗಿ ಕೆಂಪೂಕೋಟೆಯಲ್ಲಿ ದಾಳಿಯ ಅಂತಿಮ ಹಂತದ ಕಾರ್ಯಗತಗೊಳಿಸಿದ ಶಂಕೆ ಇದೆ. ಮುಜಮ್ಮಿಲ್ ಗನಿ ಹಾಗೂ ಡಾ.ಆದಿಲ್ ಅಹಮ್ಮದ್ ನಿರಂತರ ಸಂಪರ್ಕ ಹೊಂದಿದ್ದ ಈತ ಡಿಟೋನೇಟರ್ ವ್ಯವಸ್ಥೆಯ ನಿರ್ವಹಣೆ ಜೊತೆಗೆ ಸ್ಫೋಟಕ ಸಾಗಣೆಗೂ ನೆರವಾಗಿದ್ದ.



ಡಾ. ಉಮರ್ ನಬಿ

ಪದೇ ಪದೇ ಫೋನ್ ಹಾಗೂ ವಿಳಾಸ ಬದಲಾಯಿಸಿದ್ದರಿಂದ ಆತನನ್ನು ಪತ್ತೆಹಚ್ಚಲು ಸಾಧ್ಯವಾಗಿರಲಿಲ್ಲ.

ಕೆಂಪುಕೋಟೆಯಲ್ಲಿ ಸ್ಫೋಟ ಸಂಭವಿಸಿದ ಕಾರಿನಲ್ಲಿ ಆತ ಕೂಡ ಇದ್ದ ಎಂಬುದು ಡಿಎನ್‌ಎ ಪರೀಕ್ಷೆ ಮೂಲಕ ದೃಢಪಟ್ಟಿದೆ.

ಡಾ. ನಿಸಾರ್ ಅಲ್ ಹಸನ್ (ಮಿಸ್ಸಿಂಗ್ ಲಿಂಕ್)

ದೇಶದ ಭದ್ರತೆಗೆ ಹಾನಿಯುಂಟು ಮಾಡಿದ ಆರೋಪದ ಮೇಲೆ ಶ್ರೀನಗರದ ಡಾ. ಹಸನ್ ಅವರನ್ನು 2023ರ ನವೆಂಬರ್ ತಿಂಗಳಲ್ಲಿ ಕೆಲಸದಿಂದಲೇ ವಜಾಗೊಳಿಸಲಾಗಿತ್ತು. ಇದಾದ ಬಳಿಕ ಫರೀದಾಬಾದ್‌ನ ಅಲ್‌–ಫಲಾಹ್ ವಿಶ್ವವಿದ್ಯಾಲಯದ ಸೇರಿದ್ದ.

ಸ್ಫೋಟದ ಬಳಿಕ ಹಸನ್ ನಾಪತ್ತೆಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಹೀಗಾಗಿ, ಈ ಸ್ಫೋಟದ ಬಗ್ಗೆ ಮುಂಚಿತವಾಗಿ ಸಂಪೂರ್ಣ ಮಾಹಿತಿ ಆತನಿಗಿತ್ತು ಎಂದು ಶಂಕೆ ವ್ಯಕ್ತಪಡಿಸಿದ್ದಾರೆ.

ಡಾ. ಆದಿಲ್ ಅಹಮ್ಮದ್ (ಲಾಜಿಸ್ಟಿಕ್ ಹ್ಯಾಂಡ್ಲರ್)

ಕಾಶ್ಮೀರದ ಕುಲ್ಗಾಮ್ ಮೂಲಕ ಡಾ.ಆದಿಲ್ ಅಹಮ್ಮದ್ ಕೂಡ ಅಲ್‌–ಫಲಾಹ್ ವಿಶ್ವವಿದ್ಯಾಲಯದ ವೈದ್ಯ. ಸ್ಫೋಟಕಗಳನ್ನು ಸಾಗಿಸಲು ನೆರವಾಗಿದ್ದ. ಉತ್ತರ ಪ್ರದೇಶದ ಸಹರಾನ್‌ಪುರದಲ್ಲಿ ಬಂಧಿಸಿ, ವಿಚಾರಣೆಗೆ ಒಳಪಡಿಸಲಾಗಿದೆ.

ಈ ಹಿಂದೆ ಅನಂತ್‌ನಾಗ್ ಜಿಲ್ಲೆಯ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಹಿರಿಯ ವೈದ್ಯನಾಗಿ ಕೆಲಸ ಮಾಡಿದ್ದ. ಈತನ ಲಾಕರ್‌ನಿಂದ ಎ.ಕೆ.–47 ಬಂದೂಕು ವಶಕ್ಕೆ ಪಡೆಯಲಾಗಿದೆ. ಫರೀದಾಬಾದ್‌ನಲ್ಲಿ ಸ್ಫೋಟಕಗಳನ್ನು ಸಂಗ್ರಹಿಸಿಟ್ಟು, ನಂತರ ದೆಹಲಿಗೆ ಸಾಗಣೆ ಮಾಡಲು ನೆರವಾಗಿದ್ದ. ತನ್ನ ವೈದ್ಯ ವೃತ್ತಿಯನ್ನೇ ಮುಂದಿಟ್ಟುಕೊಂಡು, ಅಂತರರಾಜ್ಯ ಪ್ರವಾಸ ಮಾಡಿದ್ದ. ಬಂಧನದ ವೇಳೆ ಸಹರಾನ್‌ಪುರದ ವಿ–ಬ್ರೊಸ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ. ಈ ಆಸ್ಪತ್ರೆಯು ಆಸ್ಕರ್ ಸಮೂಹ ಆಸ್ಪತ್ರೆಗಳ ಘಟಕವಾಗಿದೆ.



ಡಾ. ಆದಿಲ್ ಅಹಮ್ಮದ್

ಸಾಕ್ಷ್ಯಕ್ಕಾಗಿ ಶೋಧ

ಪಿಟಿಐ ಚಿತ್ರ:



ದೆಹಹಲಿಯ ಕೆಂಪುಕೋಟೆ ಸಮೀಪ ಕಾರು ಸ್ಫೋಟಗೊಂಡ ಸ್ಥಳದಲ್ಲಿ ಪೊಲೀಸ್ ಅಧಿಕಾರಿಯೊಬ್ಬರು ಸಾಕ್ಷ್ಯ ಸಂಗ್ರಹಕ್ಕಾಗಿ ಪರಿಶೀಲನೆ ನಡೆಸಿದರು

ವೈದ್ಯಕೀಯ ವಿದ್ಯಾರ್ಥಿ ಸೆರೆ

ಜಿ.ಎಸ್. ವೈದ್ಯಕೀಯ ಕಾಲೇಜಿನ ಬೋಧಕ ಕೂಡ ವಶಕ್ಕೆ

ಕಾನ್ಪುರ (ಪಿಟಿಐ): ದೆಹಲಿಯ ಕೆಂಪುಕೋಟೆ ಬಳಿ ಸಂಭವಿಸಿದ ಪ್ರಬಲ ಸ್ಫೋಟದ ತನಿಖೆಯ ಭಾಗವಾಗಿ ಉತ್ತರ ಪ್ರದೇಶದ ಭಯೋತ್ಪಾದಕ ನಿಗ್ರಹ ದಳ (ಎಟಿಎಸ್) ವೈದ್ಯಕೀಯ ವಿದ್ಯಾರ್ಥಿಯೊಬ್ಬನನ್ನು ಕಾನ್ಪುರದಲ್ಲಿ ಬಂಧಿಸಿದೆ.

ಬಂಧಿತನನ್ನು ಇಲ್ಲಿನ ಗಣೇಶ ಶಂಕರ ವಿದ್ಯಾರ್ಥಿ ಮೆಮೋರಿಯಲ್ (ಜಿಎಸ್‌ವಿಎಂ) ವೈದ್ಯಕೀಯ ಕಾಲೇಜಿನ ಮೊದಲ ವರ್ಷದ ಡಿ.ಎಂ (ಕಾರ್ಡಿಯಾಲಜಿ) ವಿದ್ಯಾರ್ಥಿ ಡಾ. ಮೊಹಮ್ಮದ್ ಆರಿಫ್ (32) ಎಂದು ಗುರುತಿಸಲಾಗಿದೆ. ಆತನನ್ನು ಹೆಚ್ಚಿನ ವಿಚಾರಣೆಗೆ ದೆಹಲಿಗೆ ಸ್ಥಳಾಂತರಿಸಲಾಗಿದೆ.

ಆತನ ಮೊಬೈಲ್ ಮತ್ತು ಲ್ಯಾಪ್‌ಟಾಪ್ ಅನ್ನು ವಶಕ್ಕೆ ಪಡೆದು, ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಆತ ಬಾಡಿಗೆಗಿದ್ದ ಅಶೋಕನಗರ, ನಜೀರಾಬಾದ್‌ನಲ್ಲಿನ ವಸತಿಗಳನ್ನು ಎಟಿಎಸ್ ತಂಡವರು ಪರಿಶೀಲಿಸಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಆರಿಫ್, ಜಮ್ಮು ಮತ್ತು ಕಾಶ್ಮೀರದ ಅನಂತನಾಗ್ ಜಿಲ್ಲೆಯ ವ್ಯಕ್ತಿ. ಈಗಾಗಲೇ ಬಂಧನದಲ್ಲಿರುವ ಜಿಎಸ್‌ವಿಎಂ ಮಾಜಿ ಬೋಧಕಿ ಡಾ. ಶಾಹೀನ್ ಸಯೀದ್ ಅವರ ವಿಚಾರಣೆ ವೇಳೆ ತಿಳಿದು ಬಂದ ಮಾಹಿತಿ ಆಧರಿಸಿ ಎಟಿಎಸ್‌ನವರು ಆರಿಫ್‌ನನ್ನು ಬಂಧಿಸಿದ್ದಾರೆ.

ನಿಷೇಧಿತ ಜೈಷ್‌–ಎ–ಮೊಹಮ್ಮದ್ (ಜೆಇಎಂ) ಮತ್ತು ಅನ್ಸಾರ್ ಗಜ್ವತ್–ಉಲ್–ಹಿಂದ್ ಸಂಘಟನೆಗಳ ಜತೆಗೆ ನಂಟು ಹೊಂದಿದ್ದ ‘ವೈಟ್‌ಕಾಲರ್ ಭಯೋತ್ಪಾದಕ’ರ ಜಾಲವನ್ನು ಭೇದಿಸಿದ್ದ ಪೊಲೀಸರು, ಶಾಹೀನ್ ಸಯೀದ್ ಸೇರಿದಂತೆ ಎಂಟು ಜನರನ್ನು ಸೋಮವಾರ ಬಂಧಿಸಿದ್ದರು.

ಸ್ಫೋಟದ ವೇಳೆ ಫೋನ್‌ನಲ್ಲಿ ಸಂಪರ್ಕ: ‘ಕೆಂಪುಕೋಟೆ ಬಳಿ ಸ್ಫೋಟ ಸಂಭವಿಸಿದ ವೇಳೆಯಲ್ಲಿ ಡಾ. ಶಾಹೀನ್ ಮತ್ತು ಅವರ ಸಹೋದರ ಪರ್ವೇಜ್ ಸೇರಿದಂತೆ ಅವರ ಜಾಲದಲ್ಲಿದ್ದವರ ಜತೆಗೆ ಆರಿಫ್ ಫೋನ್ ಮೂಲಕ ಸಂಪರ್ಕದಲ್ಲಿದ್ದ’ ಎಂದು ಮೂಲಗಳು ತಿಳಿಸಿವೆ.

‘ಈತ ಸಹ ಇತ್ತೀಚೆಗೆ ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿದ್ದ. ಅದು ಪೊಲೀಸರ ಅನುಮಾನವನ್ನು ಹೆಚ್ಚಿಸಿತ್ತು. ಎಟಿಎಸ್ ಸಿಬ್ಬಂದಿ ಆತನನ್ನು ವಶಕ್ಕೆ ಪಡೆಯುವಾಗ, ಆತ ತನ್ನ ಮೊಬೈಲ್‌ನಲ್ಲಿದ್ದ ದತ್ತಾಂಶವನ್ನು ಅಳಿಸಲು ಪ್ರಯತ್ನಿಸಿದ್ದ. ಅಷ್ಟರಲ್ಲಿ ಸಿಬ್ಬಂದಿ ಅದನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾದರು’ ಎಂದು ಅವರು ವಿವರಿಸಿದ್ದಾರೆ.

‘ಆತನ ದೂರವಾಣಿ ಕರೆ ದಾಖಲೆಗಳು ಮತ್ತು ಚಾಟ್‌ಗಳನ್ನು ಗಮನಿಸಿದರೆ, ಸ್ಫೋಟದ ಸಂಚುಕೋರ ಮತ್ತು ಇತರ ಶಂಕಿತರ ಜತೆ ಸಂಪಕರ್ದಲ್ಲಿದ್ದ’ ಎಂದು ಅಧಿಕಾರಿಗಳು ಹೇಳಿದ್ದಾರೆ.

‘ಈ ಜಾಲದವರು ಒಂದೇ ಇ–ಮೇಲ್ ಐಡಿಯನ್ನು ಹಂಚಿಕೊಂಡಿದ್ದರು ಎಂದು ನಂಬಲಾಗಿದೆ. ಇದರ ಮೂಲಕವೇ ಅವರು ಪರಸ್ಪರ ಸಂದೇಶ ವಿನಿಮಯ ಮಾಡಿಕೊಳ್ಳುತ್ತಿದ್ದರು. ಎಲೆಕ್ಟ್ರಾನಿಕ್ ಕಣ್ಗಾವಲನ್ನು ತಪ್ಪಿಸಿಕೊಳ್ಳಲು ಭಯೋತ್ಪಾದಕ ಸಂಘಟನೆಗಳು ಈ ವಿಧಾನವನ್ನು ಹೆಚ್ಚಾಗಿ ಬಳಸುತ್ತವೆ’ ಎಂದು ತನಿಖಾಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಡಾ. ಆರಿಫ್ ಮೂರು ತಿಂಗಳ ಹಿಂದೆಯಷ್ಟೇ ಅಖಿಲ ಭಾರತ ಕೌನ್ಸೆಲಿಂಗ್ ಮೂಲಕ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದ. ಬುಧವಾರ ಮಧ್ಯಾಹ್ನ ದವರೆಗೂ ಕಾರ್ಯ ನಿರ್ವಹಿಸಿದ್ದ’ ಎಂದು ಕಾಲೇಜಿನ ಕಾರ್ಡಿಯಾಲಜಿ ವಿಭಾಗದ ಮುಖ್ಯ ವೈದ್ಯಕೀಯ ಅಧೀಕ್ಷಕ ಡಾ. ಜ್ಞಾನೇಂದ್ರ ಪ್ರತಿಕ್ರಿಯಿಸಿದ್ದಾರೆ.

ಇದರ ಬೆನ್ನಲ್ಲೇ ಕಾಲೇಜಿನ ಮೊದಲ, ದ್ವಿತೀಯ ಮತ್ತು ಮೂರನೇ ವರ್ಷದ ಕಾರ್ಡಿಯಾಲಜಿ ವಿದ್ಯಾರ್ಥಿಗಳ ಮೇಲೆ ನಿಗಾ ಇಟ್ಟು, ಪರಿಶೀಲಿಸಲಾಗುತ್ತಿದೆ ಎಂದು ಅವರು ಹೇಳಿದರು.

ಮತ್ತೊಬ್ಬ ಬಂಧನ: ಹಪೂರ್‌ನ ಜಿ.ಎಸ್. ವೈದ್ಯಕೀಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಫಾರೂಕ್ ಅನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ.

ಅಲ್‌–ಫಲಾಹ್ ವಿ.ವಿಗೆ ‘ನ್ಯಾಕ್’ ನೋಟಿಸ್

ನವದೆಹಲಿ (ಪಿಟಿಐ): ಹರಿಯಾಣದ ಫರೀದಾಬಾದ್‌ನ ಅಲ್‌–ಫಲಾಹ್ ವಿಶ್ವವಿದ್ಯಾಲಯಕ್ಕೆ ‘ನ್ಯಾಕ್’ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಿದೆ.

ನ್ಯಾಕ್‌ನಿಂದ ‘ಎ’ ಶ್ರೇಣಿಯ ಮಾನ್ಯತೆ ಪಡೆಯದಿದ್ದರೂ ವಿ.ವಿ ತನ್ನ ವೆಬ್‌ಸೈಟ್‌ನಲ್ಲಿ ಮತ್ತು ಇತರ ಪ್ರಚಾರ ಸಾಮಗ್ರಿಗಳಲ್ಲಿ ‘ನ್ಯಾಕ್’ನಿಂದ ‘ಎ’ ಶ್ರೇಣಿಯ ಮಾನ್ಯತೆ ಪಡೆದಿರುವುದಾಗಿ ಘೋಷಿಸಿಕೊಂಡು ತಪ್ಪು ಮಾಹಿತಿ ನೀಡಿದೆ ಎಂದು ಅದು ನೋಟಿಸ್‌ನಲ್ಲಿ ಹೇಳಿದೆ.

ತಪ್ಪು ಮಾಹಿತಿಯ ಮೂಲಕ ವಿದ್ಯಾರ್ಥಿಗಳು, ಪೋಷಕರು ಮತ್ತು ಸಾರ್ವಜನಿಕರನ್ನು ವಿಶ್ವವಿದ್ಯಾಲಯ ದಿಕ್ಕುತಪ್ಪಿಸಿದೆ ಎಂದು ನೋಟಿಸ್‌ನಲ್ಲಿ ತಿಳಿಸಿದೆ.

ಅಲ್ ಫಲಾಹ್ ವಿ.ವಿ.ಯ ಎಐಯು ಸದಸ್ಯತ್ವ ರದ್ದು: ಭಾರತೀಯ ವಿಶ್ವವಿದ್ಯಾಲಯಗಳ ಒಕ್ಕೂಟವು (ಎಐಯು) ಅಲ್ ಫಲಾಹ್ ವಿಶ್ವವಿದ್ಯಾಲಯದ ಸದಸ್ಯತ್ವವನ್ನು ಗುರುವಾರ ರದ್ದುಮಾಡಿದೆ.

‘ಎಐಯು ಬೈ–ಲಾಗಳ ಪ್ರಕಾರ, ಎಲ್ಲಾ ವಿಶ್ವವಿದ್ಯಾಲಯಗಳು ಉತ್ತಮ ನಡತೆಯನ್ನು ಉಳಿಸಿಕೊಳ್ಳುವವರೆಗೆ ಅವುಗಳನ್ನು ಸದಸ್ಯರನ್ನಾಗಿ ಪರಿಗಣಿಸಲಾಗುತ್ತದೆ ಎಂದು ತಿಳಿಸಲಾಗಿದೆ. ಹರಿಯಾಣದ ಫರೀದಾಬಾದ್‌ನಲ್ಲಿರುವ ಅಲ್ ಫಲಾಹ್ ವಿಶ್ವವಿದ್ಯಾಲಯದ ನಡತೆ ಉತ್ತಮವಾಗಿಲ್ಲ ಎಂಬುದು ಗಮನಕ್ಕೆ ಬಂದಿದೆ. ಆದ್ದರಿಂದ ತಕ್ಷಣದಿಂದಲೇ ಜಾರಿಗೆ ಬರುವಂತೆ ಸದಸ್ಯತ್ವ ರದ್ದುಗೊಳಿಸಲಾಗಿದೆ’ ಎಂದು ಎಐಯು ಪ್ರಧಾನ ಕಾರ್ಯದರ್ಶಿ ಪಂಕಜ್ ಮಿತ್ತಲ್ ಹೇಳಿದ್ದಾರೆ.

ಸರ್ವಪಕ್ಷ ಸಭೆಗೆ ಕಾಂಗ್ರೆಸ್ ಆಗ್ರಹ

ನವದೆಹಲಿ (ಪಿಟಿಐ): ಇಲ್ಲಿನ ಕೆಂಪುಕೋಟೆ ಬಳಿ ನಡೆದ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರು ತಕ್ಷಣವೇ ಸರ್ವಪಕ್ಷ ಸಭೆ ಕರೆದು, ಚರ್ಚೆ ನಡೆಸಬೇಕು. ಜತೆಗೆ ಡಿಸೆಂಬರ್ 1ರಿಂದ ಪ್ರಾರಂಭವಾಗಲಿರುವ ಸಂಸತ್ ಚಳಿಗಾಲದ ಅಧಿವೇಶನವನ್ನು ಮುಂಚಿತವಾಗಿಯೇ ಆರಂಭಿಸಬೇಕು ಎಂದು ಕಾಂಗ್ರೆಸ್ ಗುರುವಾರ ಆಗ್ರಹಿಸಿದೆ.

ಕಾಂಗ್ರೆಸ್ ಮಾಧ್ಯಮ ಹಾಗೂ ಪ್ರಚಾರ ವಿಭಾಗದ ಮುಖ್ಯಸ್ಥರಾದ ಪವನ್ ಖೇರಾ ಅವರು ಈ ಬಗ್ಗೆ ಮಾತನಾಡಿ, ‘ಪೆಹಲ್ಗಾಮ್ ದಾಳಿಯ ಬಳಿಕ ಮುಂದಿನ ಯಾವುದೇ ಭಯೋತ್ಪಾದಕ ದಾಳಿಯನ್ನು ಯುದ್ಧ ಎಂದು ಪರಿಗಣಿಸಲಾಗುತ್ತದೆ ಎಂಬ ನೀತಿಯನ್ನು ಕೇಂದ್ರ ಸರ್ಕಾರ ಘೋಷಿಸಿತ್ತು. ಈಗ ಅದೇ ನೀತಿಗೆ ಸರ್ಕಾರ ಬದ್ಧವಾಗಿದೆಯೇ’ ಎಂದು ಪ್ರಶ್ನಿಸಿದ್ದಾರೆ.

‘ಈ ಹಿಂದೆ ಯುಪಿಎ ಸರ್ಕಾರದ ಅವಧಿಯಲ್ಲಿ ಮುಂಬೈ ದಾಳಿ ನಡೆದಾಗ ಅಂದಿನ ಗೃಹ ಸಚಿವರಾಗಿದ್ದ ಶಿವರಾಜ್ ಪಾಟಿಲ್ ಅವರು ಘಟನೆಯ ಹೊಣೆ ಹೊತ್ತು ರಾಜೀನಾಮೆ ನೀಡಿದ್ದರು. ಈಗ ಸರ್ಕಾರದ ಯಾರಾದರು ಒಬ್ಬರು ಈ ಘಟನೆಯ ಹೊಣೆಗಾರಿಕೆ ಹೊರಲೇಬೇಕು’ ಎಂದೂ ಖೇರಾ ಆಗ್ರಹಿಸಿದ್ದಾರೆ.

ಸಹರಾನ್‌ಪುರದ ಡಾ.ಆದಿಲ್ ಅಹ್ಮದ್ ನಿವಾಸದಲ್ಲಿ ಸಿಕ್ಕ ದಾಖಲೆ

ಶ್ರೀನಗರ– ದೆಹಲಿ ವಿಮಾನ ಟಿಕೆಟ್ ಪತ್ತೆ

ಸಹರಾನ್‌ಪುರ (ಉತ್ತರಪ್ರದೇಶ) (ಪಿಟಿಐ): ಕೆಂಪುಕೋಟೆಯ ಬಳಿ ಸಂಭವಿಸಿದ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಕಳೆದ ವಾರ ಬಂಧಿತನಾದ ಕಾಶ್ಮೀರದ ಯುವ ವೈದ್ಯ ಡಾ.ಆದಿಲ್ ಅಹ್ಮದ್, ಅಕ್ಟೋಬರ್ 31ರಂದು ಶ್ರೀನಗರದಿಂದ ದೆಹಲಿಗೆ ಪ್ರಯಾಣಿಸಿರುವ ವಿಮಾನದ ಟಿಕೆಟ್ ಪತ್ತೆಯಾಗಿದೆ.

ಸಹರಾನ್‌ಪುರದ ಅಂಬಾಲ ರಸ್ತೆಯಲ್ಲಿರುವ ಮಾನಕ್‌ಮೌನಲ್ಲಿರುವ ಅಮನ್ ವಿಹಾರ್ ಕಾಲೊನಿಯಲ್ಲಿರುವ ಬಾಡಿಗೆ ಮನೆಯ ಕಸದ ಬುಟ್ಟಿಯಲ್ಲಿ ಆದಿಲ್ ಹೆಸರಿನಲ್ಲಿ ಬುಕ್ಕಿಂಗ್ ಮಾಡಲಾದ ವಿಮಾನದ ಟಿಕೆಟ್ ಪತ್ತೆಯಾಗಿದೆ. ಮನೆಯ ಮೇಲೆ ಮೊಹರು (ಸೀಲ್) ಹಾಕಲಾಗಿದ್ದು, ಪೊಲೀಸರು ಪಹರೆ ಕಾಯುತ್ತಿದ್ದಾರೆ.

ಟಿಕೆಟ್ ಅನ್ನು ವಶಕ್ಕೆ ಪಡೆದು ವಿಧಿವಿಜ್ಞಾನ ಪರೀಕ್ಷೆಗೆ ಕಳುಹಿಸಿಕೊಡಲಾಗಿದೆ. ಟಿಕೆಟ್ ದೊರೆತಿರುವುದರಿಂದ, ಕೆಂಪುಕೋಟೆ ಬಳಿ ನಡೆದ ಸ್ಫೋಟ ಮತ್ತು ಆತನ ಚಲನವಲನಗಳ ಮೇಲೆ ಮತ್ತಷ್ಟು ಪ್ರಶ್ನೆಗಳು ಹುಟ್ಟಿವೆ. ಆತ ದೆಹಲಿಯಲ್ಲಿ ಎಷ್ಟು ದಿನ ತಂಗಿದ್ದ ಹಾಗೂ ಯಾರನ್ನೆಲ್ಲಾ ಭೇಟಿಯಾಗಿದ್ದ ಎಂಬುದರ ಕುರಿತು ತನಿಖೆ ಮುಂದುವರಿಸಿದ್ದಾರೆ.



ಕೆಂಪುಕೋಟೆಯಲ್ಲಿ ನಡೆದ ಬಾಂಬ್ ಸ್ಫೋಟದ ಬಳಿಕ ಜಮ್ಮು – ಶ್ರೀನಗರ ಹೆದ್ದಾರಿಯಲ್ಲಿ ಯೋಧರು ಗಸ್ತು ನಡೆಸಿದರು —ಪಿಟಿಐ ಚಿತ್ರ

‘ಆದಿಲ್‌ನನ್ನು ನವೆಂಬರ್ 6ರಂದು ಸಹರಾನ್‌ಪುರದಲ್ಲಿ ಬಂಧಿಸಲಾಗಿತ್ತು. ಆತನ ಪ್ರಯಾಣ ದಾಖಲೆಗಳನ್ನು ಪರಿಶೀಲಿಸಿದ ವೇಳೆ ಶ್ರೀನಗರದಿಂದ ದೆಹಲಿಗೆ ಅಕ್ಟೋಬರ್ 31ರಂದು ಪ್ರಯಾಣಿಸಿದ್ದು ಖಾತರಿಯಾಗಿದೆ. ಕೆಂಪುಕೋಟೆ ಸ್ಫೋಟ ನಡೆದ ವಾರದ ಹಿಂದಷ್ಟೇ ಆತ ಭೇಟಿ ನೀಡಿರುವುದು ಕಂಡುಬಂದಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಭದ್ರತಾ ಪಡೆ, ಉತ್ತರ ಪ್ರದೇಶ ಹಾಗೂ ಕೇಂದ್ರೀಯ ತನಿಖಾ ಸಂಸ್ಥೆಯ ಅಧಿಕಾರಿಗಳು ಸಹರಾನ್‌ಪುರದಲ್ಲಿ ಬೀಡುಬಿಟ್ಟಿದ್ದು, ಆದಿಲ್ ಜೊತೆಗೆ ಸಂಪರ್ಕ ಹೊಂದಿರುವ ಸ್ಥಳೀಯರ ಸಂಪರ್ಕದ ಮಾಹಿತಿ, ಆತನ ಸಂವಹನ, ಬ್ಯಾಂಕ್‌ನ ದಾಖಲೆಗಳನ್ನು ಪರಿಶೀಲಿಸುತ್ತಿದ್ದಾರೆ.

ಸಹೋದ್ಯೋಗಿಗಳ ಅಚ್ಚರಿ

ಆದಿಲ್ ಎಂಬಿಬಿಎಸ್ ಹಾಗೂ ಎಂಡಿ ಮುಗಿಸಿದ್ದ. ಸಹರಾನ್‌ಪುರದ ಅಂಬಾಲ ರಸ್ತೆಯಲ್ಲಿರುವ ಖಾಸಗಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ.

‘ಆತ ಶಾಂತ ಸ್ವಭಾವದನೂ ವೃತ್ತಿಪರನೂ ಆಗಿದ್ದ’ ಎಂದು ಆತನ ಸಹೋದ್ಯೋಗಿಗಳು ನೆನಪಿಸಿಕೊಳ್ಳುತ್ತಾರೆ.

‘ಡಾ.ಆದಿಲ್ ತನ್ನ ಕ್ಷೇತ್ರದಲ್ಲಿ ಅತ್ಯಂತ ಸಾಮರ್ಥ್ಯ ಹೊಂದಿದ್ದ ವ್ಯಕ್ತಿಯಾಗಿದ್ದ. ವಿದ್ಯಾವಂತ ವ್ಯಕ್ತಿಯೇ ಇಂತಹ ನಾಚಿಕೆಗೇಡಿನ ವಿಚಾರದಲ್ಲಿ ಭಾಗಿಯಾಗಿರುವುದು ಅತ್ಯಂತ ಬೇಸರ ತರಿಸಿದೆ. ರಾತ್ರಿ ವೇಳೆ ಹಲವು ಮಂದಿ ಅವರ ಮನೆಗೆ ಭೇಟಿ ನೀಡುತ್ತಿದ್ದರು ಎಂದು ಸಹೋದ್ಯೋಗಿ ಡಾ. ಬಾಬರ್ ಅಭಿಪ್ರಾಯಪಟ್ಟಿದ್ದಾರೆ.

ಕಾರು ಸ್ಫೋಟಿಸಿದಾತ ನಬಿ

ಒಂದನೇ ಪುಟದಿಂದ...

ದೆಹಲಿಯಲ್ಲಿ ಎಲ್ಲೆಲ್ಲಿ ಸುತ್ತಾಟ?: ಬದರ್‌ಪುರ ಟೋಲ್ ಪ್ಲಾಜಾ ದಾಟಿ ದೆಹಲಿ ಪ್ರವೇಶಿಸಿದ ಉಮರ್, ಓಖ್ಲಾ, ಕೈಗಾರಿಕಾ ಪ್ರದೇಶ ಸೇರಿದಂತೆ ಆಗ್ನೇಯ ದೆಹಲಿಯ ವಿವಿಧೆಡೆ ಕಾರು ಓಡಿಸಿದ್ದಾನೆ. ಕನ್ನಾಟ್ ಪ್ರದೇಶ ದಾಟಿ ಪೂರ್ವ ದೆಹಲಿಗೆ ಬಂದು, ನಂತರ ಮಧ್ಯ ದೆಹಲಿಯ ರಿಂಗ್ ರಸ್ತೆ ಬಳಿ ಕಾಣಿಸಿಕೊಂಡಿದ್ದಾನೆ. ಉದ್ದೇಶಪೂರ್ವಕವಾಗಿಯೇ ಆತ ಪ್ರಮುಖ ರಸ್ತೆಗಳನ್ನು ತಪ್ಪಿಸಿ, ಜನದಟ್ಟಣೆ ಪ್ರದೇಶಗಳ ಮಾರ್ಗವನ್ನು ಆಯ್ಕೆ ಮಾಡಿಕೊಂಡಿರುವಂತೆ ಕಾಣುತ್ತದೆ ಎಂದು ಪೊಲೀಸರು ವಿವರಿಸಿದ್ದಾರೆ.

ದೆಹಲಿಯ ಅಶೋಕ್ ವಿಹಾರದ ಬಳಿ ಮಧ್ಯಾಹ್ನ ರಸ್ತೆ ಬದಿಯ ಉಪಾಹಾರ ಗೃಹದ ಬಳಿ ನಿಂತು ಆಹಾರ ಸೇವಿಸಿ, ಕೆಲ ಕಾಲ ಕಳೆದಿದ್ದಾನೆ. ಈ ವೇಳೆ ಆತ ಶಾಂತವಾಗಿಯೇ ಇದ್ದುದು ಕಂಡುಬಂದಿದೆ.

ನಂತರ ರಾಮಲೀಲಾ ಮೈದಾನದ ಬಳಿಯ ಅಸಫ್ ಅಲಿ ರಸ್ತೆ ಹತ್ತಿರದ ಮಸೀದಿಗೆ ಭೇಟಿ ನೀಡಿದ್ದಾನೆ. ಅಲ್ಲಿ ಪ್ರಾರ್ಥನೆ ಸಲ್ಲಿಸಿ, ಪಾರ್ಕಿಂಗ್ ಪ್ರದೇಶದಲ್ಲಿ ಸುಮಾರು ಮೂರು ಗಂಟೆಗಳಿಗೂ ಹೆಚ್ಚು ಕಾಲ ಕಳೆದಿದ್ದಾನೆ. ಈ ಅವಧಿಯಲ್ಲಿ ಆತ ಮೊಬೈಲ್ ವೀಕ್ಷಣೆಯಲ್ಲಿ ತೊಡಗಿದ್ದ.

‘ಕೆಂಪುಕೋಟೆ ಹತ್ತಿರದ ಸುನೆಹರಿ ಮಸೀದಿ ಪಾರ್ಕಿಂಗ್ ಬಳಿ ಮಧ್ಯಾಹ್ನ 3.19ಕ್ಕೆ ಪ್ರವೇಶಿಸಿ, ಅಲ್ಲಿಯೇ ಸುಮಾರು ಮೂರು ಗಂಟೆ ಕಾರು ನಿಲ್ಲಿಸಿದ್ದಾನೆ. ಸಂಜೆ 6.22ರ ವೇಳೆಗೆ ಪಾರ್ಕಿಂಗ್ ಪ್ರದೇಶದಿಂದ ಕಾರು ಚಲಾಯಿಸಿಕೊಂಡು ಕೆಂಪುಕೋಟೆ ಮಟ್ರೊ ನಿಲ್ದಾಣದತ್ತ ಸಾಗಿದ್ದಾನೆ. 30 ನಿಮಿಷಗಳಲ್ಲಿ ಅಂದರೆ ಸಂಜೆ 6.52ಕ್ಕೆ ಕಾರು ಪ್ರಬಲವಾಗಿ ಸ್ಫೋಟಗೊಂಡಿದೆ. ಈ ಎಲ್ಲ ದೃಶ್ಯಗಳು ಸೆರೆಯಾಗಿವೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಮೂರು ಕಾರುಗಳು ವಶಕ್ಕೆ

ಒಂದನೇ ಪುಟದಿಂದ...

ಆರೋಪಿ ಡಾ. ಶಾಹೀನ್ ಒಂದೂವರೆ ತಿಂಗಳ ಹಿಂದೆ ಖರೀದಿಸಿದ್ದ ಕಾರನ್ನು (ಮಾರುತಿ ಬ್ರೆಜಾ) ಪೊಲೀಸರು ಅಲ್‌–ಫಲಾಹ್ ವಿಶ್ವವಿದ್ಯಾಲಯದ ಆವರಣದಿಂದ ವಶಕ್ಕೆ ಪಡೆದಿದ್ದಾರೆ. ಅದಕ್ಕೂ ಮುನ್ನ ಶಾಹೀನ್‌ಗೆ ಸೇರಿದ ಮಾರುತಿ ಡಿಝೈರ್ ಕಾರನ್ನೂ ವಶಪಡಿಸಿಕೊಂಡು ತಪಾಸಣೆ ನಡೆಸಿದ್ದಾರೆ. ಉಮರ್‌ಗೆ ಸೇರಿದ್ದ ಮತ್ತೊಂದು ಕಾರಾದ ‘ಎಕೊಸ್ಪೋರ್ಟ್ಸ್’ ಅನ್ನು ಬುಧವಾರವೇ ವಶಕ್ಕೆ ಪಡೆದು ತನಿಖೆ ಕೈಗೊಂಡಿದ್ದಾರೆ.

ಈ ಕಾರುಗಳನ್ನು ಸ್ಥಳ ಪರಿಶೀಲನೆಗೆ, ಸ್ಫೋಟಕ್ಕೆ ಅಥವಾ ಭದ್ರತಾ ಪಡೆಗಳಿಂದ ತಪ್ಪಿಸಿಕೊಳ್ಳುವುದಕ್ಕೆ ಬಳಸುವ ಉದ್ದೇಶವನ್ನು ಶಂಕಿತರು ಹೊಂದಿದ್ದರು ಎನ್ನಲಾಗಿದೆ.

ಮೃತರ ಸಂಖ್ಯೆ 13ಕ್ಕೆ ಏರಿಕೆ: ಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ 13ಕ್ಕೆ ಏರಿಕೆಯಾಗಿದೆ. ದೆಹಲಿಯ ಎಲ್‌ಎನ್‌ಜೆಪಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳು ಬಿಲಾಲ್ ಅವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.



ನವದೆಹಲಿಯಲ್ಲಿ ಭದ್ರತಾ ಸಿಬ್ಬಂದಿ ಗುರುವಾರ ವಾಹನಗಳ ತಪಾಸಣೆ ನಡೆಸಿದರು — ಪಿಟಿಐ ಚಿತ್ರ

ತುಂಡಾದ ಕೈ ಅಂಗಡಿ ಚಾವಣಿ ಮೇಲೆ ಪತ್ತೆ

ನವದೆಹಲಿ (ಪಿಟಿಐ): ಕಾರು ಸ್ಫೋಟಗೊಂಡ ಪ್ರದೇಶದಲ್ಲಿದ್ದ ಅಂಗಡಿಯೊಂದರ ಚಾವಣಿ ಮೇಲೆ ತುಂಡಾದ ಕೈಯೊಂದು ಗುರುವಾರ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಫೋಟಗೊಂಡ ಕೆಲವು ಮೀಟರ್‌ಗಳ ದೂರದಲ್ಲಿ ಕೈ ಪತ್ತೆಯಾಗಿದೆ. ಈ ಕುರಿತು ಮಾಹಿತಿ ದೊರೆಯುತ್ತಿದ್ದಂತೆಯೇ ಪೊಲೀಸರು ಸ್ಥಳಕ್ಕೆ ಆಗಮಿಸಿ, ಗುರುತು ಪತ್ತೆಗಾಗಿ ಕೈಯನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ.

ಚಿದಂಬರಂ ಹೇಳಿಕೆಗೆ ವಿರೋಧ

ನವದೆಹಲಿ (ಪಿಟಿಐ): ‘ದೇಶದಲ್ಲಿಯೇ ಭಯೋತ್ಪಾದಕರು ತಯಾರಾಗುತ್ತಿದ್ದಾರೆ’ ಎಂದು ಕಾಂಗ್ರೆಸ್ ನಾಯಕ ಪಿ. ಚಿದಂಬರಂ ಅವರು ಹಂಚಿಕೊಂಡ ಪೋಸ್ಟ್‌ಗೆ ಬಿಜೆಪಿ ನಾಯಕರು ಗುರುವಾರ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ‘ಚಿದಂಬರಂ ಅವರು ಭಯೋತ್ಪಾದಕರ ಪರವಾಗಿ ಮಾತನಾಡುತ್ತಿದ್ದಾರೆ’ ಎಂದೂ ದೂರಿದ್ದಾರೆ.

ಚಿದಂಬರಂ ಅವರು ದೆಹಲಿ ಸ್ಫೋಟದ ಕುರಿತು ತಮ್ಮ ಪೋಸ್ಟ್‌ನಲ್ಲಿ ಪ್ರಸ್ತಾಪಿಸಿರಲಿಲ್ಲ. ಆದರೆ, ‘ಯಾವ ಕಾರಣಕ್ಕಾಗಿ ಭಾರತೀಯರು ಭಯೋತ್ಪಾದಕರಾಗುತ್ತಿದ್ದಾರೆ. ಭಯೋತ್ಪಾದಕರು ಯಾರು ಎಂದು ಭಾರತ ಸರ್ಕಾರಕ್ಕೆ ತಿಳಿದಿರುವುದರಿಂದಲೇ, ಸರ್ಕಾರವು ದಿವ್ಯ ಮೌನವಹಿಸಿದೆ’ ಎಂದು ಬುಧವಾರ ಪೋಸ್ಟ್ ಹಂಚಿಕೊಂಡಿದ್ದರು.

‘ಛೀ..ಛೀ.. ನೀವು (ಚಿದಂಬರಂ) ಎಲ್ಲ ಮಿತಿಗಳನ್ನೂ ಮೀರಿದ್ದೀರಿ. ಮನಮೋಹನ್ ಸಿಂಗ್ ಅವರ ನಾಟಕವನ್ನೂ ಮೀರಿಸಿದಿರಿ’ ಎಂದು ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಹೇಳಿದರು.

ಸಂಕ್ಷಿಪ್ತ ಸುದ್ದಿ

‘ತ್ರೀಮಾ’ ಅಪ್ಲಿಕೇಷನ್ ಬಳಸುತ್ತಿದ್ದ ಶಂಕಿತರು

ನವದೆಹಲಿ (ಪಿಟಿಐ): ದೆಹಲಿ ಸ್ಫೋಟ ಪ್ರಕರಣದಲ್ಲಿ ಬಂಧಿತರಾಗಿರುವ ಅಲ್‌– ಫಲಾಹ್ ವಿಶ್ವವಿದ್ಯಾಲಯ ಮೂವರು ವೈದ್ಯರು, ತಮ್ಮ ನಡುವಿನ ಸಂವಹನ, ಚಿತ್ರ, ನಕ್ಷೆ, ಸ್ಥಳದ ವಿವರವನ್ನು ಹಂಚಿಕೊಳ್ಳಲು ‘ತ್ರೀಮಾ’ ಎಂಬ ಗೂಢಲಿಪಿಯ ‘ಇನ್‌ಸ್ಟಂಟ್ ಮೆಸೇಜಿಂಗ್ ಅಪ್ಲಿಕೇಷನ್’ ಬಳಸುತ್ತಿದ್ದರು ಎಂಬ ಮಾಹಿತಿ ವಿಚಾರಣೆ ವೇಳೆ ತಿಳಿದುಬಂದಿದೆ.

ಸ್ವಿಟ್ಜರ್ಲೆಂಡ್‌ನ ‘ತ್ರೀಮಾ’ ಅಪ್ಲಿಕೇಷನ್ ಮೂಲಕ ಮೊಬೈಲ್ ನಂಬರ್ ಅಥವಾ ಇಮೇಲ್ ಇಲ್ಲದೆಯೂ ಮೆಸೇಜ್, ವಿಡಿಯೊ ಮತ್ತು ಆಡಿಯೊ ಕರೆಗಳನ್ನು ಮಾಡಬಹುದಾಗಿದೆ. ಈ ಆ್ಯಪ್‌ನಿಂದ ಕರೆ, ಎಸ್‌ಎಂಎಸ್ ಸೋರಿಕೆ ಮಾಡುವ ಸಾಧ್ಯತೆ ಕಡಿಮೆ.

ಭಯೋತ್ಪಾದನೆಗೆ ಸಮಾಜದಲ್ಲಿ ನೆಲೆಯಿಲ್ಲ: ಶಾಹಿ ಇಮಾಂ

ನವದೆಹಲಿ (ಪಿಟಿಐ): ದೆಹಲಿಯ ಜಾಮಾ ಮಸೀದಿಯ ಶಾಹಿ ಇಮಾಂ ಸೈಯದ್ ಅಹ್ಮದ್ ಬುಖಾರಿ ಅವರು ಕೆಂಪು ಕೋಟೆ ಬಳಿ ನಡೆದ ಸ್ಫೋಟವನ್ನು ‘ಅಸಹ್ಯಕರ ಭಯೋತ್ಪಾದಕ ದಾಳಿ’ ಎಂದು ಗುರುವಾರ ಕಠಿಣ ಪದಗಳಿಂದ ಖಂಡಿಸಿದ್ದಾರೆ.

ನಾಗರಿಕ ಸಮಾಜದಲ್ಲಿ ಭಯೋತ್ಪಾದನೆಗೆ ಯಾವುದೇ ನೆಲೆಯಿಲ್ಲ; ಅವಕಾಶವೂ ಇಲ್ಲ ಎಂದು ಪ್ರತಿಪಾದಿಸಿರುವ ಅವರು, ಸರ್ಕಾರ ಅಪರಾಧಿಗಳ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಲಿ ಎಂದು ಆಗ್ರಹಿಸಿದ್ದಾರೆ.

‘ದೃಢ ಸಂಕಲ್ಪದೊಂದಿಗೆ ಭಯೋತ್ಪಾದನೆ ಪಿಡುಗಿನ ವಿರುದ್ಧ ಒಗ್ಗಟ್ಟಾಗಿ ಹೋರಾಡಲು ಸಾಧ್ಯವಾಗುತ್ತದೆ’ ಎಂದು ಅವರು ಗುರುವಾರ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮುಜಫರ್‌ಪುರ: ಶಂಕಿತ ಭಯೋತ್ಪಾದಕರಿಬ್ಬರ ಬಂಧನ

ಮುಜಫ್ಫರ್‌ನಗರ (ಉತ್ತರ ಪ್ರದೇಶ) (ಪಿಟಿಐ): ದೇಶದಲ್ಲಿ ನಡೆದಿದೆ ಎನ್ನಲಾದ ಭಯೋತ್ಪಾದಕ ಚಟುವಟಿಕೆಗಳ ಕುರಿತು ತನಿಖೆಯನ್ನು ಮತ್ತಷ್ಟು ವಿಸ್ತಾರಗೊಳಿಸಿರುವ ಗುಜರಾತ್‌ನ ಭಯೋತ್ಪಾದನಾ ನಿಗ್ರಹ ಪಡೆಯ (ಎಟಿಎಸ್) ಪೊಲೀಸರು ಉತ್ತರ ಪ್ರದೇಶದ ಇಬ್ಬರು ಯುವಕರನ್ನು ಬಂಧಿಸಿದ್ದಾರೆ.

ಶಾಮಲಿ ಜಿಲ್ಲೆಯ ಝಿಂಝಾನಾ ಪಟ್ಟಣದ ಆಜಾದ್ ಸುಲೇಮಾನ್ ಶೇಖ್ (20) ಹಾಗೂ ಲಖೀಂಪುರ ಖೇರಿಯ ಮೊಹಮ್ಮದ್ ಸುಹೈಲ್ ಖಾನ್‌ನನ್ನು (23) ಬಂಧಿಸಲಾಗಿದೆ. ಇಬ್ಬರೂ ಬುಠಾನ ಪಟ್ಟಣದ ಮದರಸಾವೊಂದರಲ್ಲಿ ಒಟ್ಟಿಗೆ ಕಲಿತಿದ್ದರು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

‘ಇಬ್ಬರೂ ಯುವಕರು ಹಫೀಜ್–ಎ– ಕುರ್‌ಆನ್ ಕಲಿಯಲು ಬರುತ್ತಿದ್ದರು. ಬಹಳ ಮುಂಚಿತವಾಗಿಯೇ ಅವರು ಇಲ್ಲಿಂದ ಬಿಟ್ಟು ಹೊರಟುಹೋಗಿದ್ದರು’ ಎಂದು ಬುಠಾನ ಮದರಸಾದ ಮುಖ್ಯಸ್ಥ ಮೌಲಾನಾ ದೌಡ್ ತಿಳಿಸಿದ್ದಾರೆ.

‘ಅಜಾದ್ 2018–19ರಲ್ಲಿ ಇಲ್ಲಿ ಕಲಿಯಲು ಬರುತ್ತಿದ್ದ. ಕೋವಿಡ್–19ರ ಸಂದರ್ಭದಲ್ಲಿ ಮದರಸಾ ತನ್ನ ಕಾರ್ಯಚಟುವಟಿಕೆ ಸ್ಥಗಿತಗೊಳಿಸಿತ್ತು. ಸುಹೈಲ್ ಮೂರು ತಿಂಗಳ ಹಿಂದೆ ಕಲಿಯಲು ಬಂದಿದ್ದ’ ಎಂದು ಮಾಹಿತಿ ನೀಡಿದ್ದಾರೆ.

ಗ್ರೆನೇಡ್ ದಾಳಿಗೆ ಸಂಚು: 10 ಮಂದಿ ಬಂಧನ

ಚಂಡೀಗಢ (ಪಿಟಿಐ): ಪಾಕಿಸ್ತಾನ ಗುಪ್ತಚರ ಸಂಸ್ಥೆ ಐಎಸ್‌ಐ ಆಣತಿಯಂತೆ ಭಾರತದ ಪಂಜಾಬ್‌ನಲ್ಲಿ ಗ್ರೆನೇಡ್ ದಾಳಿ ನಡೆಸಲು ಸಂಚು ರೂಪಿಸಿದ್ದ ಜಾಲವನ್ನು ಭೇದಿಸಿರುವುದಾಗಿ ಪಂಜಾಬ್ ಪೊಲೀಸರು ಗುರುವಾರ ತಿಳಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ 10 ಮಂದಿಯನ್ನು ಬಂಧಿಸಿರುವುದಾಗಿಯೂ ಮಾಹಿತಿ ನೀಡಿದ್ದಾರೆ.

ಪೊಲೀಸ್ ಮಹಾನಿರ್ದೇಶಕ ಗೌರವ್ ಯಾದವ್ ಈ ಬಗ್ಗೆ ಮಾಹಿತಿ ನೀಡಿದ್ದು, ‘ಐಎಸ್‌ಐ ಬೆಂಬಲಿತ ಗ್ರೆನೇಡ್ ದಾಳಿ ಜಾಲವನ್ನು ಭೇದಿಸುವಲ್ಲಿ ಲುಧಿಯಾನಾ ಕಮಿಷನರೇಟ್ ಪೊಲೀಸರು ಯಶಸ್ವಿಯಾಗಿದ್ದಾರೆ. ಬಂಧಿತರು ಪಾಕಿಸ್ತಾನಿ ಹ್ಯಾಂಡ್ಲರ್‌ಗಳ ಜತೆಗೆ ಸಂಪರ್ಕದಲ್ಲಿದ್ದು, ಪಂಜಾಬ್‌ನ ಜನನಿಬಿಡ ಪ್ರದೇಶಗಳಲ್ಲಿ ದಾಳಿ ನಡೆಸಲು ಸಂಚು ರೂಪಿಸಿದ್ದರು’ ಎಂದಿದ್ದಾರೆ. ಬಂಧಿತ ವ್ಯಕ್ತಿಗಳು ಮಲೇಷ್ಯಾದಲ್ಲಿರುವ ಮೂವರು ಹ್ಯಾಂಡ್ಲರ್‌ಗಳ ಮೂಲಕ ಪಾಕಿಸ್ತಾನಿ ಹ್ಯಾಂಡ್ಲರ್‌ಗಳ ಜತೆಗೆ ಸಂಪರ್ಕಿಸುತ್ತಿದ್ದರು. ಗ್ರೆನೇಡ್‌ಗಳನ್ನು ತರಲು ಮತ್ತು ಅವುಗಳನ್ನು ನಿರ್ದಿಷ್ಟ ಜಾಗಗಳಿಗೆ ತಲುಪಿಸಲು ಹಾಗೂ ದಾಳಿಗಳನ್ನು ಎಲ್ಲಿ ನಡೆಸಬೇಕೆಂದು ಹ್ಯಾಂಡ್ಲರ್‌ಗಳೇ ನಿರ್ದೇಶಿಸುತ್ತಿದ್ದರು ಎಂಬುದು ತನಿಖೆಯಲ್ಲಿ ತಿಳಿದುಬಂದಿದೆ ಎಂದು ಯಾದವ್ ತಿಳಿಸಿದ್ದಾರೆ.

ರಾಷ್ಟ್ರೀಯ ಉದ್ಯಾನಗಳ 1 ಕಿ.ಮೀ. ವ್ಯಾಪ್ತಿಯಲ್ಲಿ ನಿರ್ಬಂಧ

ಗಣಿಗಾರಿಕೆಗೆ ‘ಸುಪ್ರೀಂ’ ನಿಷೇಧ

ನವದೆಹಲಿ (ಪಿಟಿಐ): ರಾಷ್ಟ್ರೀಯ ಉದ್ಯಾನಗಳು ಮತ್ತು ವನ್ಯಜೀವಿ ಅಭಯಾರಣ್ಯಗಳ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ಗಣಿಗಾರಿಕೆ ಚಟುವಟಿಕೆ ನಡೆಸುವುದನ್ನು ಸುಪ್ರೀಂ ಕೋರ್ಟ್ ಗುರುವಾರ ನಿಷೇಧಿಸಿದೆ.

‘ರಾಷ್ಟ್ರೀಯ ಉದ್ಯಾನಗಳು ಹಾಗೂ ಅಭಯಾರಣ್ಯಗಳ ಒಳಗೆ ಮತ್ತು ಅಂತಹ ಸಂರಕ್ಷಿತ ಪ್ರದೇಶಗಳ ಗಡಿಯಿಂದ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ಗಣಿಗಾರಿಕೆಯನ್ನು ಅನುಮತಿಸಬಾರದು ಎಂದು ನಾವು ನಿರ್ದೇಶಿಸುತ್ತೇವೆ’ ಎಂಬುದಾಗಿ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಮತ್ತು ನ್ಯಾಯಮೂರ್ತಿಗಳಾದ ಕೆ.ವಿನೋದ ಚಂದ್ರನ್ ಅವರ ಪೀಠ ಹೇಳಿದೆ.



‘ಸಂರಕ್ಷಿತ ಪ್ರದೇಶದ ಒಂದು ಕಿ.ಮೀ ವ್ಯಾಪ್ತಿಯೊಳಗೆ ಗಣಿಗಾರಿಕೆ ಚಟುವಟಿಕೆಗಳು ವನ್ಯಜೀವಿಗಳಿಗೆ ಅಪಾಯಕಾರಿ ಎಂಬುದನ್ನು ಈ ನ್ಯಾಯಾಲಯ ಮನಗಂಡಿದೆ. ಈ ಹಿಂದೆ ಗೋವಾ ಫೌಂಡೇಶನ್ ಪ್ರಕರಣದಲ್ಲಿ, ಗೋವಾ ರಾಜ್ಯಕ್ಕೆ ಸಂಬಂಧಿಸಿದಂತೆ ಇದೇ ರೀತಿಯ ನಿರ್ದೇಶನಗಳನ್ನು ನೀಡಲಾಗಿದೆ. ಇದೀಗ ಇಡೀ ದೇಶಕ್ಕೆ ಅನ್ವಯವಾಗುವಂತೆ ಅಂತಹ ನಿರ್ದೇಶನ ನೀಡುತ್ತಿದ್ದೇವೆ’ ಎಂದಿತು.

ಜಾರ್ಖಂಡ್‌ನ ಸಾರಂಡಾ ಅಭಯಾರಣ್ಯ ಮತ್ತು ಸಾಸಂಗದಾಬುರು ಅರಣ್ಯ ಪ್ರದೇಶಗಳನ್ನು ಮೀಸಲು ಅರಣ್ಯ ಪ್ರದೇಶವಾಗಿ ಘೋಷಿಸುವ ಅಧಿಸೂಚನೆಗೆ ಸಂಬಂಧಿಸಿದ ಅರ್ಜಿಗಳ ಕುರಿತು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ. ಈ ಪ್ರದೇಶಗಳನ್ನು ವನ್ಯಜೀವಿ ಅಭಯಾರಣ್ಯವೆಂದು ಘೋಷಿಸುವಂತೆ ಸುಪ್ರೀಂ ಕೋರ್ಟ್, ಜಾರ್ಖಂಡ್ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಅರಣ್ಯ ಹಕ್ಕುಗಳ ಕಾಯ್ದೆಯಡಿ ಈ ಪ್ರದೇಶದ ಬುಡಕಟ್ಟು ಜನರು ಮತ್ತು ಅರಣ್ಯವಾಸಿಗಳ ಹಕ್ಕುಗಳನ್ನು ರಕ್ಷಿಸಬೇಕು ಎಂದು ಸ್ಪಷ್ಟಪಡಿಸಿದ ನ್ಯಾಯಾಲಯ, ಈ ಬಗ್ಗೆ ವ್ಯಾಪಕ ಪ್ರಚಾರ ನೀಡುವಂತೆ ಜಾರ್ಖಂಡ್ ಸರ್ಕಾರಕ್ಕೆ ಸೂಚಿಸಿದೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಜೀವನದಲ್ಲಿ ಕೋಪ-ತಾಪ ನಿಗ್ರಹಿಸಲು ಮತ್ತು ಸಂಯಮ ಬೆಳೆಸಿಕೊಳ್ಳಲು 'ಮೌನಧ್ಯಾನ' ಒಂದು ಉತ್ತಮ ಸಾಧನವಾಗಿದೆ.

–ಮಹಾತ್ಮ ಗಾಂಧೀಜಿ

ಸಂಪಾದಕೀಯ

ಬೀದಿನಾಯಿಗಳ ನಿಯಂತ್ರಣ ಆದೇಶ ಸಹಾನುಭೂತಿ ಕೊರತೆಯ ನಿರ್ಧಾರ

ಬೀದಿನಾಯಿಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಈಚೆಗೆ ನೀಡಿರುವ ಸೂಚನೆಗಳು ಅವಾಸ್ತವಿಕವಾಗಿವೆ, ಅಮಾನವೀಯವಾಗಿವೆ. ಈ ವಿಚಾರವಾಗಿ ಕೋರ್ಟ್ ಈ ಹಿಂದೆ ನೀಡಿದ್ದ ಆದೇಶಕ್ಕೆ ಹೋಲಿಸಿದರೆ ಈ ಬಾರಿಯ ನಿರ್ದೇಶನಗಳು ಪ್ರತಿಗಾಮಿಯಾಗಿ ಕಾಣುತ್ತಿವೆ. ಬೀದಿನಾಯಿಗಳನ್ನು ಸಾರ್ವಜನಿಕ ಸ್ಥಳಗಳಿಂದ ಅವುಗಳಿಗೆ ನಿಗದಿಪಡಿಸಿದ ಆಶ್ರಯಕೇಂದ್ರಗಳಿಗೆ ಸ್ಥಳಾಂತರ ಮಾಡಬೇಕು, ಅದಕ್ಕೂ ಮುನ್ನ ಅವುಗಳ ಸಂತಾನಶಕ್ತಿಹರಣ ಮಾಡಬೇಕು, ಅವುಗಳಿಗೆ ಲಸಿಕೆ ನೀಡಬೇಕು ಎಂದು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ಪೀಠವೊಂದು ಸೂಚಿಸಿದೆ. ಇದಕ್ಕೂ ಮೊದಲು ಇದೇ ನ್ಯಾಯಪೀಠವು, ಆಗಸ್ಟ್ 11ರ ಕಠಿಣ ಆದೇಶವೊಂದನ್ನು ಮಾರ್ಪಾಡು ಮಾಡಿತ್ತು. ಬೀದಿನಾಯಿಗಳಿಗೆ ಲಸಿಕೆ ನೀಡಿ, ಅವುಗಳ ಸಂತಾನಶಕ್ತಿಹರಣ ಮಾಡಿ, ಅವುಗಳನ್ನು ಮೊದಲು ಇದ್ದ ಸ್ಥಳಕ್ಕೇ ಬಿಡಬೇಕು ಎಂದು ಹೇಳಿತ್ತು. ರೇಬಿಸ್ ಕಾಯಿಲೆಗೆ ತುತ್ತಾಗಿರುವ ಹಾಗೂ ತೀರಾ ಆಕ್ರಮಣಕಾರಿ ವರ್ತನೆಯನ್ನು ತೋರುವ ನಾಯಿಗಳನ್ನು ಮಾತ್ರ ಆಶ್ರಯಕೇಂದ್ರಗಳಲ್ಲಿ ಇರಿಸಿಕೊಳ್ಳಬೇಕು ಎಂದು ಆ ಆದೇಶದಲ್ಲಿ ಹೇಳಲಾಗಿತ್ತು. ಈ ಆದೇಶದ ಅನುಷ್ಠಾನದಲ್ಲಿ ಕೂಡ ಒಂದಿಷ್ಟು ಸಮಸ್ಯೆಗಳು ಇದ್ದವು. ಆದರೆ ಈ ಆದೇಶವು, ಎಲ್ಲ ಬೀದಿನಾಯಿಗಳನ್ನು ಆಶ್ರಯಕೇಂದ್ರಗಳಿಗೆ ಶಾಶ್ವತವಾಗಿ ವರ್ಗಾಯಿಸುವಂತೆ ಹೇಳಿದ್ದ ಹಿಂದಿನ ಇನ್ನೊಂದು ಆದೇಶಕ್ಕೆ ಹೋಲಿಸಿದರೆ ವಾಸ್ತವಕ್ಕೆ ಹೆಚ್ಚು ಹತ್ತಿರವಾಗಿತ್ತು ಮತ್ತು ಸಹಾನುಭೂತಿಯಿಂದ ಕೂಡಿತ್ತು.



ಬೀದಿನಾಯಿಗಳನ್ನು ನಿಯಂತ್ರಿಸಲು ಸುಪ್ರೀಂ ಕೋರ್ಟ್ ನೀಡಿರುವ ಸೂಚನೆಗಳು ಸಹಾನುಭೂತಿಯಿಂದ ಕೂಡಿಲ್ಲ; ಜೀವಕಾರುಣ್ಯದ ಪರಿಕಲ್ಪನೆಗಳಿಗೂ ಪೂರಕವಾಗಿಲ್ಲ.

ಬೀದಿಗಳಲ್ಲಿ ಇರುವ ನಾಯಿಗಳನ್ನೆಲ್ಲ ಅಲ್ಲಿಂದ ತೆರವು ಮಾಡಿಸುವ ಸಂಪನ್ಮೂಲ ಅಥವಾ ಸಿಬ್ಬಂದಿಬಲ ದೇಶದ ಯಾವುದೇ ಸರ್ಕಾರದ ಬಳಿ, ಯಾವುದೇ ನಗರ ಸ್ಥಳೀಯ ಸಂಸ್ಥೆಯ ಬಳಿ ಇಲ್ಲ. ದೇಶದ ಎಲ್ಲ ರೈಲು ನಿಲ್ದಾಣಗಳು, ಬಸ್ ನಿಲ್ದಾಣಗಳು, ಶಾಲೆಗಳು ಹಾಗೂ ಇತರ ಸಾರ್ವಜನಿಕ ಸ್ಥಳಗಳು ಬೀದಿನಾಯಿಗಳಿಂದ ಮುಕ್ತವಾಗುವಂತೆ ಮಾಡಲು ಕೋಟ್ಯಂತರ ರೂಪಾಯಿ ಬೇಕಾಗುತ್ತದೆ. ಈ ಕೆಲಸ ಮಾಡಲು ತರಬೇತಿ ಪಡೆದ ನೂರಾರು ಮಂದಿ ಸಿಬ್ಬಂದಿಯೂ ಬೇಕು. ನಾಯಿಗಳು ಹೆದ್ದಾರಿಗಳಿಗೆ ಬಾರದಂತೆ ತಡೆಯಲು ಸಾಧ್ಯವೇ? ಒಂದು ನಾಯಿಯನ್ನು ಆಶ್ರಯ ಕೇಂದ್ರಕ್ಕೆ ರವಾನಿಸಿದರೆ, ಆ ಜಾಗಕ್ಕೆ ಇನ್ನೊಂದು ನಾಯಿ ಬರುತ್ತದೆ. ಬೀದಿಯಲ್ಲಿ ಅಲೆಯುವ ಪ್ರಾಣಿಗಳನ್ನು ನಿಭಾಯಿಸಲು, ಅವುಗಳ ಸಂತಾನಶಕ್ತಿ ಹರಣ ಮಾಡಿ, ಅವುಗಳಿಗೆ ಲಸಿಕೆ ನೀಡುವ ಮಾನವೀಯ ಹಾಗೂ ಪರಿಣಾಮಕಾರಿ ಮಾರ್ಗವನ್ನು ಪ್ರಾಣಿಗಳ ಜನನ ನಿಯಂತ್ರಣ (ಎಬಿಸಿ) ನಿಯಮಗಳು–2023ರಲ್ಲಿ ಹೇಳಲಾಗಿದೆ. ನಾಯಿಗಳು ಮನುಷ್ಯನ ಆರೋಗ್ಯಕ್ಕೆ ಅಥವಾ ಮನುಷ್ಯನ ಜೀವಕ್ಕೆ ಅಪಾಯ ತಂದೊಡ್ಡುತ್ತಿವೆ ಎಂದಾದರೆ ಅದಕ್ಕೆ ಕಾರಣ, ನಿಯಮಗಳ ಅನುಷ್ಠಾನದಲ್ಲಿನ ಲೋಪ. ಅಧಿಕಾರಿಗಳು ನಿಯಮಗಳ ವಿಚಾರದಲ್ಲಿ ಉದಾಸೀನ ಧೋರಣೆ ತೋರುತ್ತಿದ್ದಾರೆ. ಅಲ್ಲದೆ, ಅಗತ್ಯ ಸಂಪನ್ಮೂಲ ಒದಗಿಸದ ಕಾರಣಕ್ಕೆ ಈ ನಿಯಮಗಳ ಅನುಷ್ಠಾನ ಸರಿಯಾಗಿ ಆಗುತ್ತಿಲ್ಲ. ಈಗ ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನಗಳನ್ನು ಪಾಲಿಸಲು ಅಗತ್ಯ ಸಂಪನ್ಮೂಲ ಇಲ್ಲದ ಅಧಿಕಾರಿಗಳು ನಾಯಿಗಳನ್ನು ಸಾಮೂಹಿಕವಾಗಿ ಕೊಲ್ಲುವ ಪರ್ಯಾಯ ಮಾರ್ಗವನ್ನು ಅನುಸರಿಸುವ ಸಾಧ್ಯತೆ ಇದೆ.

ಈಗ ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನಗಳು ಎಬಿಸಿ ನಿಯಮಗಳಿಗೆ ಅನುಗುಣವಾಗಿ ಇಲ್ಲ. ಈ ನಿರ್ದೇಶನಗಳು, ಪ್ರಾಣಿಗಳ ಜೀವದ ಪಾವಿತ್ರ್ಯವನ್ನು ಗುರುತಿಸುವ ಸಂವಿಧಾನದ ಆಶಯಕ್ಕಿಂತ ಭಿನ್ನವಾಗಿವೆ ಎಂದೂ ಹೇಳಬಹುದು. ಪ್ರಾಣಿಗಳನ್ನು ರಕ್ಷಿಸುವುದು ಹಾಗೂ ಅವುಗಳನ್ನು ಘನತೆಯಿಂದ ಕಾಣುವುದು ಪ್ರಜೆಗಳ ಕರ್ತವ್ಯ ಎಂದು ಸಂವಿಧಾನ ಹೇಳುತ್ತದೆ. ಸಂವಿಧಾನದ 21ನೇ ವಿಧಿಯು ಮನುಷ್ಯರ ಹಕ್ಕುಗಳನ್ನು ರಕ್ಷಿಸುವ ಜೊತೆಗೆ, ಜೀವಕ್ಕೂ ರಕ್ಷಣೆಯ ಭರವಸೆ ನೀಡುತ್ತದೆ; ಇಲ್ಲಿ ಜೀವವೆಂದರೆ ಎಲ್ಲರ ಜೀವ, ಅದರಲ್ಲಿ ಪ್ರಾಣಿಗಳ ಜೀವವೂ ಸೇರಿದೆ ಎಂದು ಕೋರ್ಟ್ ಈ ಹಿಂದೆ ಹೇಳಿತ್ತು. ಆದರೆ, ಈಗಿನ ನಿರ್ದೇಶನಗಳು ಈ ಪರಿಕಲ್ಪನೆಗೆ ವಿರುದ್ಧವಾಗಿವೆ. ಈ ಭೂಮಿಯು ಮನುಷ್ಯನಿಗೆ ಸೇರಿದ್ದು ಹಾಗೂ ಇತರ ಎಲ್ಲ ಜೀವಿಗಳು ಮನುಷ್ಯನ ಅಧೀನ ಎಂಬ ತಪ್ಪು ಆಲೋಚನೆಯ ಕಾರಣದಿಂದಾಗಿ ಈ ಬಗೆಯ ನಿರ್ದೇಶನ ಬಂದಿದೆ. ಈ ಭೂಮಿಯು ಮನುಷ್ಯನಿಗೆ ಎಷ್ಟು ಸೇರಿದ್ದೋ ಇತರ ಪ್ರಾಣಿಗಳಿಗೂ ಅಷ್ಟೇ ಪ್ರಮಾಣದಲ್ಲಿ ಸೇರಿದೆ. ದುರದೃಷ್ಟದ ಸಂಗತಿಯೆಂದರೆ ಈ ಸತ್ಯವನ್ನು ಒಪ್ಪಿಕೊಂಡು, ಅದನ್ನು ಎತ್ತಿಹಿಡಿಯುವ ಕೆಲಸಕ್ಕೆ ಬೇಕಿರುವ ವಿವೇಕವನ್ನು ದೇಶದ ನ್ಯಾಯಾಂಗದ ಅತ್ಯುನ್ನತ ಸಂಸ್ಥೆ ಕೂಡ ಬಳಸಿಕೊಂಡಿಲ್ಲ.

ಕನ್ನಡಕೆ ಹೋರಾಡು ಕನ್ನಡದ ಕಂದಾ



ಗತಿಬಿಂಬ

ವೈ.ಗ. ಜಗದೀಶ್

> ಕರ್ನಾಟಕದಿಂದ ಲೋಕಸಭೆಗೆ ಚುನಾಯಿತರಾದ ಸಂಸದರು ಹಾಗೂ ಸಚಿವರಾಗಿ ಕಾರ್ಯ ನಿರ್ವಹಿಸುತ್ತಿರುವವರು ತವರಿನ ಹಿತಚಿಂತಿಸುವ ಬದಲು, ರಾಜ್ಯ ಸರ್ಕಾರ ಟೀಕಿಸುವುದನ್ನೇ ಪೂರ್ಣಾವಧಿ ರಾಜಕಾರಣ ಮಾಡಿಕೊಂಡಿರುವಂತಿದೆ.

ಕುವೆಂಪು ಅವರ 'ಕನ್ನಡಮ್ಮನ ಹರಕೆ' ಪದ್ಯವು ಕನ್ನಡ ಮಾಧ್ಯಮದಲ್ಲಿ ಓದಿದ ಎಲ್ಲರ ಬಾಯಲ್ಲಿ ನಲಿದಾಡುತ್ತಿರುತ್ತದೆ. ನಮ್ಮ ನಾಡಿನ ಸಂಸದರು ಈ ಪದ್ಯವನ್ನು ಒಮ್ಮೆಯಾದರೂ ಓದಿರುತ್ತಾರೆ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಮೂರನೇ ಬಾರಿ ಅಧಿಕಾರಕ್ಕೆ ಬಂದು ಒಂದೂ ಮುಕ್ಕಾಲು ವರ್ಷ ಕಳೆದಿರುವ ಹೊತ್ತಿನಲ್ಲಿ ಕನ್ನಡಮ್ಮನ ಜೋಗುಳದ ಹರಕೆ ಏನು ಎಂಬುದನ್ನು ಸಂಸದರಿಗೆ ನೆನಪಿಸಲೇಬೇಕಾಗಿದೆ.

'ಕನ್ನಡಕೆ ಹೋರಾಡು/ ಕನ್ನಡದ ಕಂದಾ/ ಕನ್ನಡವ ಕಾಪಾಡು/ ನನ್ನ ಆನಂದಾ/ ಜೋಗುಳದ ಹರಕೆಯಿದು/ ಮರೆಯದಿರು, ಚಿನ್ನಾ/ ಮರೆತೆಯಾದರೆ ಅಯ್ಯೊ/ ಮರೆತಂತೆ ನನ್ನ...' ಎಂದು ಹೇಳುವ ಕುವೆಂಪು ಅವರು, ಕನ್ನಡಮ್ಮನ ಅಂತರಂಗದ ತುಡಿತವನ್ನು ಪ್ರತಿಪಾದಿಸಿದ್ದಾರೆ. ಸಂಸದರು ಈ ಪದ್ಯದ ಆಶಯವನ್ನು ತಮ್ಮ ಎದೆಯೊಳಗೆ ಬಿಟ್ಟುಕೊಂಡರೆ ಅವರ ಅಂತಃಸಾಕ್ಷಿ ಆಗಲಾದರೂ ಕಲಕೀತು.

ಕೇಂದ್ರ ಮತ್ತು ರಾಜ್ಯದಲ್ಲಿ ಭಿನ್ನ ಪಕ್ಷಗಳ ಸರ್ಕಾರ ಇದ್ದಾಗಲೆಲ್ಲ ಕರ್ನಾಟಕಕ್ಕೆ ಅನ್ಯಾಯವಾಗುತ್ತಲೇ ಇದೆ. ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರ ನಡೆಸಿದಾಗ ಬಹಳ ಒಳಿತಾಗಿತ್ತು ಎಂದೇನಿಲ್ಲ. ಹೀಗಾಗಿಯೇ ನಿರಂತರವಾಗಿ ಕರ್ನಾಟಕದ ಜನ ಬಿಜೆಪಿಗೆ ಅತಿ ಹೆಚ್ಚು ಸ್ಥಾನ ಕೊಟ್ಟಿದ್ದಿರಬಹುದು. 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 25 ಸ್ಥಾನ ಗೆದ್ದಿತ್ತು. 2024ರಲ್ಲಿ ಒಂಬತ್ತು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆದ್ದಿದ್ದು, ಬಿಜೆಪಿ ಸಂಖ್ಯೆ 17ಕ್ಕೆ ಕುಸಿದಿದೆ. ಕೇಂದ್ರದ ತಾರತಮ್ಯ ಧೋರಣೆಯ ಬಗ್ಗೆ ಕನ್ನಡಿಗರು ನೀಡಿದ ತೀರ್ಪು ಇದು ಎಂದು ಹೇಳಲಿಕ್ಕೇನೂ ಅಡ್ಡಿಯಿಲ್ಲ.

ನಮ್ಮ ಜನ ಆಯ್ಕೆ ಮಾಡಿರುವವರು ಸಾಮಾನ್ಯರೇನಲ್ಲ. ಮಾಜಿ ಮುಖ್ಯಮಂತ್ರಿಗಳಾದ ಎಚ್‌.ಡಿ. ಕುಮಾರಸ್ವಾಮಿ, ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ, ಸಚಿವರಾಗಿ ಅನುಭವ ಇರುವ ಗೋವಿಂದ ಕಾರಜೋಳ, ವಿ. ಸೋಮಣ್ಣ, ಕೋಟ ಶ್ರೀನಿವಾಸ ಪೂಜಾರಿ, ವಿಶ್ವೇಶ್ವರ ಹೆಗಡೆ ಕಾಗೇರಿ, ಕೆ. ಸುಧಾಕರ್, ಕೇಂದ್ರ–ರಾಜ್ಯದಲ್ಲಿ ಸಚಿವರಾಗಿದ್ದ ರಮೇಶ ಜಿಗಜಿಣಗಿ, ಶೋಭಾ ಕರಂದ್ಲಾಜೆ ಹಾಗೂ ಕೇಂದ್ರ ಸಚಿವರಾಗಿರುವ ಪ್ರಲ್ಹಾದ ಜೋಶಿ ಇಲ್ಲಿನವರು.

ರಾಜ್ಯಸಭೆಯಲ್ಲಿ ಎಚ್‌.ಡಿ. ದೇವೇಗೌಡ, ಮಲ್ಲಿಕಾರ್ಜುನ ಖರ್ಗೆ, ಜೈರಾಂ ರಮೇಶ್, ಪ್ರಭಾವಿಗಳಾದ ವೀರೇಂದ್ರ ಹೆಗ್ಗಡೆ, ಸುಧಾಮೂರ್ತಿ ನಮ್ಮ ಪ್ರತಿನಿಧಿಗಳು. 2014ರಿಂದೀಚೆಗೆ ಸಚಿವರಾಗಿರುವ ನಿರ್ಮಲಾ ಸೀತಾರಾಮನ್ ಅವರೂ ಕರ್ನಾಟಕದ ಪ್ರತಿನಿಧಿಯೇ.

ಒಂದೂ ಮುಕ್ಕಾಲು ವರ್ಷದಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ ಸಚಿವರು, ಸಂಸದರಿಂದ ನಾಡಿಗೆ ಆಗಿದ್ದೇನು ಎಂದು ನೋಡಿದರೆ, ನಾಡಿನ ಪರಿವರ್ತನೆಗೆ ಯಾರೊಬ್ಬರೂ ತಮ್ಮ ಕಾಣ್ಕೆ ಕೊಟ್ಟಿರುವುದು ಕಾಣುವುದಿಲ್ಲ. ಕೇಂದ್ರದಲ್ಲಿ ಹೊಸ ಸರ್ಕಾರ ಬಂದ ಬಳಿಕ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಯಲ್ಲಿ ದೊಡ್ಡ ಮಟ್ಟದ ಸಭೆ ನಡೆಸಿದ್ದರು. ಕೇಂದ್ರದ ಸಚಿವರು, ಸಂಸದರನ್ನು ಸಭೆಗೆ ಬರಮಾಡಿಕೊಂಡು ರಾಜ್ಯದ ಪ್ರಸ್ತಾವನೆ ಹಾಗೂ ಬೇಡಿಕೆಗಳ ಪಟ್ಟಿ ಕೊಟ್ಟು ಆದ್ಯತೆ ಮೇರೆಗೆ ಈಡೇರಿಸುವಂತೆ ಕೋರಿದ್ದರು. ಕರ್ನಾಟಕ ಸರ್ಕಾರದ ದೆಹಲಿ ಪ್ರತಿನಿಧಿಯಾಗಿರುವ ಟಿ.ಬಿ. ಜಯಚಂದ್ರ ಅವರು ಈ ಪಟ್ಟಿ ಹಿಡಿದುಕೊಂಡು ಬೆವರು ಸುರಿಸಿದ್ದಷ್ಟೇ ಬಂತು. ಯಾವುದೇ ಕಡತವೂ ಮುಂದೆ ಹೋಗಲಿಲ್ಲ.

ರಾಜ್ಯದ 52 ಪ್ರಸ್ತಾವಗಳು ಕೇಂದ್ರದ ಮುಂದೆ ಬಾಕಿ ಇವೆ. ರಾಜ್ಯದ ಹಿತಕ್ಕೆ ಬಹುಮುಖ್ಯವಾದ ನೀರಾವರಿ ಯೋಜನೆಗಳ ಅನುಮೋದನೆಯ ಕಡತಗಳ ಮೇಲಿನ ದೂಳು ಕೊಡಹುವ ಗೋಜಿಗೆ ಸಚಿವರು ಹೋಗಿಯೇ ಇಲ್ಲ. 2019ರ ಲೋಕಸಭೆ ಚುನಾವಣೆ ವೇಳೆ ರಾಜ್ಯದಲ್ಲಿ ಡಬಲ್ ಎಂಜಿನ್ ಸರ್ಕಾರ ಬಂದರೆ 24 ಗಂಟೆಯೊಳಗೆ ಮಹದಾಯಿ ಯೋಜನೆ ಜಾರಿ ಮಾಡುವುದಾಗಿ ಬಿಜೆಪಿ ನಾಯಕರು ಘೋಷಿಸಿದ್ದರು. ಈವರೆಗೂ ಏನೂ ಆಗಿಯೇ ಇಲ್ಲ. ಕೃಷ್ಣಾ ನದಿ ನೀರಿನ ಹಂಚಿಕೆಗೆ ಸಂಬಂಧಿಸಿ 2013ರಲ್ಲೇ ಸುಪ್ರೀಂಕೋರ್ಟ್ ತೀರ್ಪು ನೀಡಿದೆ. ಗೆಜೆಟ್ ಅಧಿಸೂಚನೆ ಈವರೆಗೆ ಹೊರಬಿದ್ದಿಲ್ಲ. ಎತ್ತಿನಹೊಳೆ ಯೋಜನೆಗೆ 432 ಎಕರೆ ಅರಣ್ಯ ಬಳಕೆಗೆ ಕೇಂದ್ರದ ತಕರಾರು ಹಾಗೆಯೇ ಇದೆ. ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯಾಗಿ ಘೋಷಿಸಿ ₹5,300 ಕೋಟಿ ಅನುದಾನ ನೀಡುವುದಾಗಿ 2023ರ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಹೇಳಿತ್ತು. ಅದು ಆಗಿಲ್ಲ. ಮೇಕೆದಾಟು ಯೋಜನೆ ಪ್ರಶ್ನಿಸಿದ್ದ ತಮಿಳುನಾಡಿನ ತಕರಾರು ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾ ಮಾಡಿದೆ. ಕೇಂದ್ರ ಜಲ ಆಯೋಗದ ಅನುಮೋದನೆ ಯಾವಾಗ ಸಿಗುತ್ತದೆಯೋ ಗೊತ್ತಿಲ್ಲ.

15ನೇ ಹಣಕಾಸು ಆಯೋಗದ ಮಧ್ಯಂತರ ವರದಿಯ ಶಿಫಾರಸಿನಂತೆ ರಾಜ್ಯಕ್ಕೆ ಕೇಂದ್ರ ಸರ್ಕಾರ ₹4,600 ಕೋಟಿ ನೀಡಬೇಕಾಗಿತ್ತು. ತೆರಿಗೆ ಹಂಚಿಕೆಯಲ್ಲಿನ ಪಾಲು, ಅಭಿವೃದ್ಧಿ ಅನುದಾನ ಸೇರಿದಂತೆ ಸುಮಾರು ₹11 ಸಾವಿರ ಕೋಟಿ ಕೇಂದ್ರದಿಂದ ಬರಬೇಕಾಗಿದೆ. ಎರಡನೇ ಬಾರಿ ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ನಿರ್ಮಲಾ ಸೀತಾರಾಮನ್ ಅವರ ಬಳಿಯೇ ಹಣಕಾಸು ಖಾತೆ ಇದ್ದರೂ ಪೈಸೆ ಕೂಡ ಬಿಡುಗಡೆ ಆಗಿಲ್ಲ.

ಸಚಿವರು ಏನೆಲ್ಲ ಮಾಡಿದ್ದಾರೆ ಎಂದು ಹುಡುಕಿದರೆ ಸಮಾಧಾನಕರ ಬಹುಮಾನವನ್ನು ಕೆಲವರಿಗೆ ಕೊಡಬಹುದು. ಎಚ್‌.ಡಿ. ಕುಮಾರಸ್ವಾಮಿ ಅವರು, ಬಳ್ಳಾರಿ ಜಿಲ್ಲೆಯ ಸಂಡೂರಿನ ದೇವದಾರಿ ಕಬ್ಬಿಣದ ಅದಿರು ಗಣಿ ಕಾರ್ಯಾಚರಣೆಗೆ ಸಂಬಂಧಿಸಿದ ಕುದುರೆಮುಖ ಕಬ್ಬಿಣದ ಅದಿರು ಕಂಪನಿಯ (ಕೆಐಒಸಿಎಲ್) ಕಡತಕ್ಕೆ ತಮ್ಮ ಮೊದಲ ಸಹಿ ಹಾಕುವ ಮೂಲಕ ರಾಜ್ಯದ ಪರ ಕಾಳಜಿ ಪ್ರದರ್ಶಿಸಿದರು. ಎಚ್‌ಎಂಟಿ, ಭದ್ರಾವತಿ ವಿಐಎಸ್‌ಎಲ್ ಪುನರುಜ್ಜೀವನ ಅವರ ಕನಸು. ಆದರೆ, ರಾಜ್ಯ ಸರ್ಕಾರ ಅದಕ್ಕೆ ಸ್ಪಂದಿಸದೇ ಅಡ್ಡಗಾಲು ಹಾಕುತ್ತಲೇ ಇದೆ.

ಕಾಂಗ್ರೆಸ್ ಸರ್ಕಾರವನ್ನು ಬೈಯುವುದನ್ನೇ ವೃತ್ತಿ ಮಾಡಿಕೊಂಡಿರುವ ಪ್ರಲ್ಹಾದ ಜೋಶಿ, ರಾಜ್ಯದ ಅನ್ನಭಾಗ್ಯ ಯೋಜನೆಗೆ ಅಕ್ಕಿ ಪೂರೈಸದೇ ಸತಾಯಿಸಿದರು. ಬೆಂಗಳೂರು–ಧಾರವಾಡ, ಬೆಂಗಳೂರು–ಬೆಳಗಾವಿಗೆ ವಂದೇ ಭಾರತ್ ರೈಲು ಆರಂಭಕ್ಕೆ ಒತ್ತಡ ಹಾಕಿದ್ದಷ್ಟೇ ಇವರ ಸಾಧನೆ. ಬೆಂಗಳೂರು–ಹುಬ್ಬಳ್ಳಿ ಮಧ್ಯದ ಎಕ್ಸ್‌ಪ್ರೆಸ್ ರೈಲು ಆರಂಭಕ್ಕೆ ಮುತುವರ್ಜಿ, ವಿವಾದದ ಅಲೆ ಎಬ್ಬಿಸಿರುವ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯಿಂದ ಒಪ್ಪಿಗೆ ಕೊಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಲೆಕ್ಕಕ್ಕೆ ಸಿಗುತ್ತದೆ.

ತಾವು ಪ್ರತಿನಿಧಿಸುವ ತುಮಕೂರು ಕ್ಷೇತ್ರಕ್ಕೆ ಯೋಜನೆಗಳನ್ನು ತರುವಲ್ಲಿ ಹೆಚ್ಚಿನ ಆಸಕ್ತಿ ತೋರಿರುವ ವಿ. ಸೋಮಣ್ಣ, ತುಮಕೂರು–ದಾವಣಗೆರೆ ರೈಲ್ವೆ ಕಾಮಗಾರಿಗೆ ವೇಗ ತಂದಿದ್ದಾರೆ. ಕ್ಷೇತ್ರಕ್ಕೆ ₹500 ಕೋಟಿಗೂ ಹೆಚ್ಚಿನ ಮೊತ್ತದ ರೈಲ್ವೆ ಮೇಲ್ಸೇತುವೆಗಳನ್ನು ಮಂಜೂರು ಮಾಡಿಸಿದ್ದಾರೆ. ₹3,340 ಕೋಟಿ ಮೊತ್ತದ ಬಳ್ಳಾರಿ–ಚಿಕ್ಕಜಾಜೂರು ರೈಲ್ವೆ ಹಳಿ ಡಬ್ಲಿಂಗ್ ಯೋಜನೆಗೆ ಸಚಿವ ಸಂಪುಟದ ಒಪ್ಪಿಗೆ ಕೊಡಿಸಿದ್ದು ಇವರ ಹೆಗ್ಗಳಿಕೆ.

ಕೋಮುಗಲಭೆಗೆ ಬೆಂಕಿ ಸುರಿಯುವುದನ್ನೇ ತಮ್ಮ ಕಾಯಕ ಮಾಡಿಕೊಂಡಂತಿರುವ ಶೋಭಾ ಕರಂದ್ಲಾಜೆ, ಬೆಂಗಳೂರು ಸಂಸದೆ ಎಂಬುದನ್ನೇ ಮರೆತಿದ್ದಾರೆ. ಹಿಂದೂ ಕಾರ್ಯಕರ್ತರ ಹತ್ಯೆ ಪ್ರಕರಣಗಳನ್ನು ಎನ್‌ಐಎಗೆ ಒಪ್ಪಿಸಬೇಕು ಎಂದು ಪತ್ರ ಬರೆದಿದ್ದೇ ಇವರ ಹಿರಿಮೆ.

ಚುನಾವಣೆ ವೇಳೆ ಪಕ್ಷ ರಾಜಕಾರಣ ನಡೆಸಿ, ಎದುರಾಳಿ ಪಕ್ಷವನ್ನು ದೂಷಿಸುವುದು ತಪ್ಪೇನಲ್ಲ. ಅಧಿಕಾರಕ್ಕೆ ಏರಿದ ಬಳಿಕ ರಾಜ್ಯದ ಹಿತ ಕಾಯುವ, ರಾಜ್ಯದ ಬೇಡಿಕೆ, ಪ್ರಸ್ತಾವನೆಗಳನ್ನು ಆಯಾ ಇಲಾಖೆಯಲ್ಲಿ ಅನುಮೋದನೆ ಕೊಡಿಸುವ ಕೆಲಸವನ್ನು ಮಾಡಬೇಕು. ಅದನ್ನು ಬಿಟ್ಟು ದೆಹಲಿಯಲ್ಲಿ ಕುಳಿತು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅವರನ್ನು ನಿತ್ಯವೂ ಟೀಕಿಸಿ, ಕರ್ನಾಟಕದಲ್ಲಿ ಅರಾಜಕ ಸರ್ಕಾರ ಇದೆ ಎಂದು ರಾಷ್ಟ್ರಮಟ್ಟದಲ್ಲಿ ಬಿಂಬಿಸುವುದರಿಂದ ಬಿಜೆಪಿಗೆ ಏನೂ ಲಾಭವಾಗದು. ಅನ್ನ, ನೀರು, ವಿದ್ಯೆ, ಸವಲತ್ತು ಕೊಟ್ಟು ತಮ್ಮನ್ನು ಈ ಮಟ್ಟಕ್ಕೆ ಬೆಳೆಯಿಸಿದ ಮಾತೃಭೂಮಿಗೆ ಮಾಡುವ ದ್ರೋಹವೂ ಹೌದು. ರಾಜ್ಯ ಸರ್ಕಾರದ ಕೆಟ್ಟ ನಡವಳಿಕೆಗಳನ್ನು ಟೀಕಿಸಿ, ಒಳಿತನ್ನು ಮೆಚ್ಚಿದರೆ ಇಲ್ಲಿಯೂ ಉತ್ತಮ ವಾತಾವರಣ ಇದೆ ಎಂಬುದು ಹೊರಜಗತ್ತಿಗೆ ಗೊತ್ತಾಗುತ್ತದೆ. ತಾವು ಪ್ರಧಾನಿ ನರೇಂದ್ರ ಮೋದಿಯ ಕಾಲಾಳುಗಳಲ್ಲ; ತಾವು ಕರ್ನಾಟಕವನ್ನು ಪ್ರತಿನಿಧಿಸುವ ರಾಯಭಾರಿಗಳಂತೆ ಸಂಸದರು, ಸಚಿವರು ನಡೆದುಕೊಂಡರೆ ಅವರನ್ನು ಗೆಲ್ಲಿಸಿದ್ದು ಸಾರ್ಥಕವಾದೀತು.

ಕೇಂದ್ರ ಸಚಿವರು ರಾಜ್ಯ ಸರ್ಕಾರದ ವಿರುದ್ಧ ಆಡುವ ಮಾತುಗಳಲ್ಲಿ ಶೇ 1ರಷ್ಟು ಶಬ್ದಗಳನ್ನು ನರೇಂದ್ರ ಮೋದಿ, ಅಮಿತ್ ಶಾ ಮುಂದೆ ಉದುರಿಸಿದ್ದರೆ, ಧೈರ್ಯ ಮಾಡಿ ಅವರ ಕಿವಿಗಳಲ್ಲಿ ಉಸುರಿದರೆ ನಾಡಿನ ಹಣೆಬರಹವೇ ಬದಲಾಗುತ್ತಿತ್ತು. ಕೇಂದ್ರದ ತಾರತಮ್ಯ ಧೋರಣೆಯ ಬಗ್ಗೆ ಕನ್ನಡಿಗರಲ್ಲಿ ಇರುವ ಬೇಸರ, ಅಸಹನೆಯ ಎಳೆಯಾದರೂ ಅವರ ಅರಿವಿಗೆ ಬರುತ್ತಿತ್ತು.

ಕೇಂದ್ರ ಸಚಿವರಾಗಿದ್ದುಕೊಂಡು, ರಾಜ್ಯದ ಆಡಳಿತ ವೈಫಲ್ಯದ ಬಗ್ಗೆಯೇ ದಿನವೂ ನೀವು ಮಾತನಾಡುವುದನ್ನು ನೋಡಿದರೆ ಇಲ್ಲಿರುವ ನಿಮ್ಮದೇ ಪಕ್ಷದ– ಅಧಿಕೃತ ವಿರೋಧ ಪಕ್ಷದ– ನಾಯಕರು, ರಾಜ್ಯ ಘಟಕದ ಅಧ್ಯಕ್ಷ ಹಾಗೂ ಪದಾಧಿಕಾರಿಗಳು ಖುಲ್ಲಂಖುಲ್ಲಾ ಅಸಮರ್ಥರು ಎಂದು ನೀವೇ ಹೇಳಿದಂತಾಗಲಿಲ್ಲವೇ? ನಿಮ್ಮ ಪಕ್ಷದ ನಾಯಕರು ರಾಜ್ಯ ಸರ್ಕಾರವನ್ನು ಎದುರಿಸುವಲ್ಲಿ ಸೋತಿದ್ದಾರೆ ಎಂದಾದರೆ, ನೀವೇ ಇಲ್ಲಿ ಬಂದು ನಾಯಕತ್ವ ವಹಿಸಿಕೊಳ್ಳಬಹುದಲ್ಲವೇ? ಈಗಲೂ ಕಾಲ ಮಿಂಚಿಲ್ಲ. ಕೇಂದ್ರ ಸಚಿವರಾಗಿದ್ದುಕೊಂಡು ಕೆಲಸ ಮಾಡುವುದು ಸಾಕ್ಷಿದೆ. ಇನ್ನಾದರೂ ಅದನ್ನು ಮಾಡಿ.

'ಕನ್ನಡಕ್ಕಾಗಿ ಕೈಯೆತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ! ಕನ್ನಡಕ್ಕಾಗಿ ಕೊರಳೆತ್ತು; ಅಲ್ಲಿ ಪಾಂಚಜನ್ಯ ಮೂಡುತ್ತದೆ. ಕನ್ನಡಕ್ಕಾಗಿ ಕಿರುಬೆರಳೆತ್ತಿದರೂ ಸಾಕು, ಇಂದು ಅದೇ ಗೋವರ್ಧನ ಗಿರಿಧಾರಿಯಾಗುತ್ತದೆ' ಎಂದು ಕುವೆಂಪು ಹೇಳಿದ್ದರು. ನೀವು ಇದಾವುದನ್ನೂ ಮಾಡುವುದು ಬೇಡ. ಪ್ರಧಾನಿ ಮೋದಿಯವರನ್ನು ಮೆಚ್ಚಿಸುವ ಕಾಯಕ ಮಾಡುವುದರ ಬದಲು, ನಿಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಮತ ಹಾಕಿದವರು ಮೆಚ್ಚುವಂತಹ ಕೆಲಸವನ್ನಾದರೂ ಮಾಡಿ.



ವಾಚಕರ ವಾಣಿ

ಕ್ರಸ್ಟ್ ಗೇಟ್ ಅಳವಡಿಕೆ: ವಿಳಂಬ ಬೇಡ

ತುಂಗಭದ್ರಾ ಜಲಾಶಯಕ್ಕೆ ಹೊಸದಾಗಿ ಕ್ರಸ್ಟ್ ಗೇಟ್‌ಗಳನ್ನು ಅಳವಡಿಸಲು ಸರ್ಕಾರ ಮುಂದಾಗಿದೆ. ಹಾಗಾಗಿ, ಎರಡನೇ ಬೆಳೆಗೆ ನೀರು ಹರಿಸುವುದಿಲ್ಲವೆಂಬ ಸರ್ಕಾರದ ತೀರ್ಮಾನವನ್ನು ರಾಜಕೀಯವಾಗಿ ನೋಡದೆ, ಜಲಾಶಯದ ಭದ್ರತೆಯ ದೃಷ್ಟಿಯಿಂದ ನೋಡಬೇಕಿದೆ.

ಗೇಟ್‌ಗಳ ಅಳವಡಿಕೆಯು ಸ್ವಲ್ಪ ನಿಧಾನವಾದರೂ ಜಲಾಶಯದ ಅಸ್ತಿತ್ವಕ್ಕೆ ಧಕ್ಕೆಯಾಗುವ ಸಾಧ್ಯತೆಯಿದೆ. ಗೇಟ್‌ಗಳ ಅಳವಡಿಕೆ ಕಾರ್ಯ ವಿಳಂಬವಾದರೆ ಜಲಾಶಯದ ಅಚ್ಚುಕಟ್ಟು ಪ್ರದೇಶದ ಜನರನ್ನು ಬಡವರನ್ನಾಗಿ ಮಾಡಿದಂತೆಯೇ ಸರಿ. ವಿಳಂಬ ಮಾಡದೆ ಕೂಡಲೇ, ಹೊಸ ಗೇಟ್‌ಗಳ ಅಳವಡಿಕೆ ಕೆಲಸವನ್ನು ಆರಂಭಿಸಬೇಕಿದೆ.

ರಂಗಸ್ವಾಮಿ ಮಾರ್ಲಬಂಡಿ, ಕರ್ನೂಲು

ಕುಕ್ಕೆ ಸುಬ್ರಹ್ಮಣ್ಯ: ಭಕ್ತರಿಗೆ ಸೌಲಭ್ಯ ಕಲ್ಪಿಸಿ

ಇತ್ತೀಚೆಗೆ ಮುಜರಾಯಿ ಇಲಾಖೆಗೆ ಸೇರಿರುವ ಕುಕ್ಕೆ ಸುಬ್ರಹ್ಮಣ್ಯ ದೇವಾಲಯಕ್ಕೆ ಸಂಸಾರ ಸಮೇತ ಭೇಟಿ ನೀಡಿದ್ದೆ. ಅಲ್ಲಿ ಭಕ್ತರ ಸಂಖ್ಯೆ ಅಧಿಕವಾಗಿದ್ದರಿಂದ ನೂಕುನುಗ್ಗಲು ಉಂಟಾಗಿತ್ತು. ಅಂಗವಿಕಲರು ಮತ್ತು ಹಿರಿಯ ನಾಗರಿಕರಿಗೆ ದೇವರ ದರ್ಶನಕ್ಕೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಿರಲಿಲ್ಲ. ಭಕ್ತರು ದೇಗುಲದಿಂದ ಹೊರಬರುವ ದಾರಿ ವ್ಯವಸ್ಥೆಯೂ ಸರಿಯಾಗಿರಲಿಲ್ಲ. ರಜಾ ದಿನಗಳಲ್ಲಿ ಭಕ್ತರ ಸಂಖ್ಯೆ ಅಧಿಕವಾಗಿರುತ್ತದೆ. ಕಾಲ್ತುಳಿತ ಸಂಭವಿಸುವ ಸಾಧ್ಯತೆ ಇರುತ್ತದೆ. ಭಕ್ತರಿಗೆ ಸಮರ್ಪಕ ವ್ಯವಸ್ಥೆ ಕಲ್ಪಿಸುವುದು ದೇಗುಲದ ಆಡಳಿತ ಮಂಡಳಿಯ ಹೊಣೆಯಾಗಿದೆ.

ಎಚ್. ದೊಡ್ಡಮಾರಯ್ಯ, ಬೆಂಗಳೂರು

ಕನ್ನಡ ಕಲಿಕೆ: ಪರಭಾಷಿಕನ ಜಾದೂ

ಕರ್ನಾಟಕದ ಪ್ರಸಿದ್ಧ ಜಾದೂಗಾರ ಉದಯ್ ಜಾದೂಗಾರ್ ಅವರು, ತಮ್ಮ ವಸತಿ ಸಮುಚ್ಚಯದಲ್ಲಿ ನೌಕರನಾಗಿರುವ ವ್ಯಕ್ತಿಯೊಬ್ಬರ ಜೊತೆಗೆ ಕನ್ನಡದಲ್ಲಿ ಸಂಭಾಷಣೆ ನಡೆಸಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಗಮನಸೆಳೆಯಿತು. ಈಶಾನ್ಯ ರಾಜ್ಯದಿಂದ ಬಂದಿರುವ ಆ ವ್ಯಕ್ತಿ ಕಳೆದ ಮೂರು ವರ್ಷಗಳಿಂದ ಕರ್ನಾಟಕದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರಂತೆ. ಈ ಅವಧಿಯಲ್ಲಿ ಉದಯ್ ಜಾದೂಗಾರ್ ಅವರಿಂದ ಕನ್ನಡ ಕಲಿತು ಸಂಪೂರ್ಣವಾಗಿ ಕನ್ನಡದಲ್ಲಿಯೇ ಮಾತನಾಡುತ್ತಾರೆ.

'ನಾನು ಕನ್ನಡದಲ್ಲಿ ಮಾತನಾಡಿದಾಗ ವಸತಿ ಸಮುಚ್ಚಯದ ಜನರಿಂದ ನನಗೆ ಒಂದು ರೀತಿಯ ವಿಶೇಷ ಗೌರವ ಸಿಗುತ್ತಿದೆ' ಎಂದು ಆತ ಹೇಳಿದ್ದು ಕೇಳಿ ಖುಷಿಯಾಯಿತು. ರಾಜ್ಯೋತ್ಸವವು 'ನವೆಂಬರ್ ಕ್ರಾಂತಿ' ಆಗದೆ ನಿರಂತರ ಪ್ರಕ್ರಿಯೆ ಆದಾಗ ಮಾತ್ರವೇ ಕನ್ನಡವನ್ನು ಉಳಿಸಿ ಬೆಳೆಸಲು ಸಾಧ್ಯ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಭಯೋತ್ಪಾದನೆ: ವೈದ್ಯರ ಹೆಸರಿಗೆ ಕಳಂಕ

ದೆಹಲಿಯ ಕೆಂಪು ಕೋಟೆ ಬಳಿ ನಡೆದ ಬಾಂಬ್ ಸ್ಫೋಟ ನೆನಪಿಸಿಕೊಂಡರೆ ಮೈ ನಡುಗುತ್ತದೆ. ಇಡೀ ದೇಶವೇ ಬೆಚ್ಚಿಬೀಳುವಂತೆ ಮಾಡಿದ ಈ ಹೇಯಕೃತ್ಯ ಎಸಗಿದ ವ್ಯಕ್ತಿಗಳು ವೈದ್ಯರು ಎಂದು ತಿಳಿದು ಇನ್ನೂ ದಿಗ್ಭ್ರಮೆಯಾಯಿತು. ಜನರ ಪ್ರಾಣ ಉಳಿಸಬೇಕಾದ ವೈದ್ಯರೇ ಹತ್ತಾರು ಮುಗ್ಧ ಜನರ ಪ್ರಾಣ ತೆಗೆದದ್ದು ಆತಂಕಕಾರಿ. ವೈದ್ಯರೆಂಬ ಮುಖವಾಡ ಧರಿಸಿರುವ ಇನ್ನೆಷ್ಟು ಮೃಗಗಳಿವೆಯೋ ತಿಳಿಯದು. ಅವರನ್ನು ಪತ್ತೆಹಚ್ಚಿ ಬಲಿ ಹಾಕದಿದ್ದರೆ ದೇಶದಲ್ಲಿ ಕೋಮು ಸಾಮರಸ್ಯಕ್ಕೆ ಉಳಿಗಾಲವಿಲ್ಲ.

ಮಂಜುನಾಥ್ ಜೈನ್ ಎಂ.ಪಿ., ಮಂಡ್ಯ

ಎ.ಐ ದುರ್ಬಳಕೆಗೆ ಮೂಗುದಾರ ಅಗತ್ಯ

'**ಸುಳ್ಳಿಗೀಗ** ಸಂಭ್ರಮದ ಕಾಲ' ಲೇಖನವು (ಲೇ: ನಾಗೇಶ ಹೆಗಡೆ, ಪ್ರ.ವಾ., ನ. 13) ಕೃತಕ ಬುದ್ಧಿಮತ್ತೆಯಿಂದ ಆಗುತ್ತಿರುವ ಅವಾಂತರಗಳನ್ನು ತೆರೆದಿಟ್ಟಿದೆ. ಸತ್ಯದ ತಲೆಯ ಮೇಲೆ ಕುಟ್ಟಿ ಹೇಳುವ ಸುಳ್ಳಿನ ಆವಿಷ್ಕಾರ ವಿಪರ್ಯಾಸವೇ ಸರಿ. ಜನರು ಅಸತ್ಯಗಳ ಜಾಲದಲ್ಲಿ ಸಿಲುಕಿ ನಲುಗುತ್ತಿರುವುದು ದುಃಖದಾಯಕ ಸಂಗತಿ. ಜನಸಾಮಾನ್ಯರ ಅಸಹಾಯಕತೆಯನ್ನು ಸುಳ್ಳಿನ ತಕ್ಕಡಿಯಲ್ಲಿ ತೂಗುತ್ತಿರುವ ಅದೃಶ್ಯ ಭ್ರಷ್ಟತೆಗೆ ಕಡಿವಾಣ ಹಾಕಬೇಕಿದೆ.

ತಂತ್ರಜ್ಞಾನದ ಹೊಸ ಆವಿಷ್ಕಾರಗಳು ಜಗತ್ತಿನ ಒಳಿತಿಗೆ ನೆರವಾಗಬೇಕೇ ಹೊರತು ವಿನಾಶದ ಅಸ್ತ್ರವಾಗಬಾರದು. ಕೃತಕ ಬುದ್ಧಿಮತ್ತೆಯನ್ನು ಬಂಡವಾಳ ಮಾಡಿಕೊಂಡಿರುವವರಿಗೆ ಮೂಗುದಾರ ಹಾಕಬೇಕಿದೆ.

ಅನುಪಮ ಸುಲಾಖೆ, ಹೊಸಪೇಟೆ

ತರಬೇತಿ: ಅಂತಿಮಪಟ್ಟಿ ಪ್ರಕಟ ವಿಳಂಬ

ಸಮಾಜ ಕಲ್ಯಾಣ ಇಲಾಖೆಯು ಇಂದಿರಾಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರದ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಕೆಎಎಸ್, ಗ್ರೂಪ್ 'ಸಿ', ಬ್ಯಾಂಕಿಂಗ್, ಆರ್‌ಆರ್‌ಬಿ, ನ್ಯಾಯಾಂಗ ಸೇವೆಯ ಪೂರ್ವಭಾವಿ ಪರೀಕ್ಷೆಗೆ ಉಚಿತ ತರಬೇತಿ ಮತ್ತು ಶಿಷ್ಯವೇತನ ನೀಡುತ್ತದೆ. ಇದರ ಸಲುವಾಗಿ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿ ಅದರಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಶಿಷ್ಯವೇತನದ ಸೌಲಭ್ಯ ಕಲ್ಪಿಸುತ್ತದೆ. ಅಭ್ಯರ್ಥಿಯು ಪ್ರವೇಶ ಪಡೆದ ತರಬೇತಿ ಕೇಂದ್ರಗಳಿಗೆ ಸರ್ಕಾರದಿಂದಲೇ ಹಣ ಪಾವತಿ ಮಾಡಲಾಗುತ್ತದೆ. 2024–25ನೇ ಸಾಲಿಗೆ ಕಳೆದ ಜೂನ್‌ನಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಲಾಗಿತ್ತು.

ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಫಲಿತಾಂಶವನ್ನು ಕೆಇಎಯಿಂದ ಬಿಡುಗಡೆ ಮಾಡಲಾಗಿದೆ. ಆದರೆ, ಆಯ್ಕೆಯಾದ ಅಭ್ಯರ್ಥಿಗಳ ಅಂತಿಮಪಟ್ಟಿಯನ್ನು ಇಲ್ಲಿಯವರೆಗೂ ಪ್ರಕಟಿಸಿಲ್ಲ. ಇದರಿಂದ ಅಭ್ಯರ್ಥಿಗಳು ಕಂಗಾಲಾಗಿದ್ದಾರೆ. ಸಮಾಜ ಕಲ್ಯಾಣ ಸಚಿವರು ಈ ಬಗ್ಗೆ ಗಮನಹರಿಸಿ ತ್ವರಿತವಾಗಿ ಅರ್ಹರ ಅಂತಿಮಪಟ್ಟಿಯ ಬಿಡುಗಡೆಗೆ ಕ್ರಮವಹಿಸಬೇಕಿದೆ.

ದರ್ಶನ್ ಚಂದ್ರ ಎಂ.ಪಿ., ಮುಕ್ಕಡಹಳ್ಳಿ

ಚಾಟಿ



ಭೂತ ಕಾಟ!

ಧರ್ಮ ಎಂದರೆ ಏನು ಎಂದು ಅರ್ಥ ಮಾಡಿಕೊಳ್ಳದವರು ಮೂಲಭೂತವಾದಿಗಳಾಗಿ, ದೇಶಕ್ಕೆ ಭೂತವಾಗಿ ಕಾಡುತ್ತಿದ್ದಾರೆ... ಮೂಲಭೂತವಾದಿಗಳಿಗೆ ಯಾವುದೇ ಧರ್ಮವಿಲ್ಲ; ಅವರದು ಅಧರ್ಮ.

ಸಯ್ಯದ್ ಯೇಜಸ್ ಪಾಷ, ವಕೀಲ, 'ಫೇಸ್‌ಬುಕ್'ನಿಂದ

ಕಿಡಿನುಡಿ



ದೆಹಲಿಯಲ್ಲಿನ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಭೃತಿಗಳು ಕೇಂದ್ರ ಗೃಹ ಸಚಿವರ ರಾಜೀನಾಮೆ ಕೇಳುತ್ತಿದ್ದಾರೆ. ಆದರೆ, ಬಾಂಬ್ ಇಟ್ಟವರನ್ನು, ಸ್ಲೀಪರ್ ಸೆಲ್ ಸೇರಿದಂತೆ ಅವರಿಗೆ ಸಹಾಯ ಮಾಡಿದವರನ್ನು ಕೆಂಪುಕೋಟೆ ಮುಂದೆ ಗಲ್ಲಿಗೇರಿಸಬೇಕೆಂದು ಹೇಳಲು ಗುಂಡಿಗೆ ಇಲ್ಲವೇಕೆ?

ಬಸನಗೌಡ ಪಾಟೀಲ ಯತ್ನಾಳ, ಶಾಸಕ

25 ವರ್ಷಗಳ ಹಿಂದೆ

ಮಂಗಳವಾರ, 14-11-2000

• ಪುರಸಭೆ, ನಗರಸಭೆ, ಪಾಲಿಕೆಗಳಿಗೆ ಏಕಕಾಲಕ್ಕೆ ಚುನಾವಣೆ ಪರಿಶೀಲನೆ

ಬೆಂಗಳೂರು, ನ. 13– ರಾಜ್ಯದ ಪುರಸಭೆ, ನಗರಸಭೆ ಹಾಗೂ ಮಹಾನಗರ ಪಾಲಿಕೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸುವ ಸಾಧ್ಯತೆಯ ಕುರಿತು ಕಾನೂನು ತಜ್ಞರೊಂದಿಗೆ ಸಮಾಲೋಚಿಸಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಬಿ.ಬಿ. ಚಿಮ್ಮನಕಟ್ಟಿ, ಇಂದು ವಿಧಾನ ಪರಿಷತ್ತಿನಲ್ಲಿ ಭರವಸೆ ನೀಡಿದರು.

ಪ್ರಶ್ನೋತ್ತರ ವೇಳೆಯಲ್ಲಿ ರಾಮಚಂದ್ರ ಗೌಡ ಅವರ ಪ್ರಶ್ನೆಗೆ ಉತ್ತರಿಸುವಾಗ, ವಿರೋಧ ಪಕ್ಷಗಳ ಸದಸ್ಯರು ಈ ಸಂಬಂಧ ಮಾಡಿದ ಸಲಹೆಯನ್ನು ಸಕಾರಾತ್ಮಕವಾಗಿ ಪರಿಶೀಲಿಸಲಾಗುವುದು ಎಂದರು.

• ಸಂಕಷ್ಟದಲ್ಲಿರುವ ರೈತರಿಗಾಗಿ 100 ಕೋಟಿ ಆವರ್ತ ನಿಧಿ

ಬೆಂಗಳೂರು, ನ. 13– ರಾಜ್ಯದಲ್ಲಿ ಕೃಷಿ ಉತ್ಪನ್ನಗಳ ಬೆಲೆ ತೀವ್ರ ಕುಸಿದು ಸಂಕಷ್ಟ ಸ್ಥಿತಿಯನ್ನು ಎದುರಿಸುತ್ತಿರುವ ರೈತನ ನೆರವಿಗೆ ಧಾವಿಸಲು ರಾಜ್ಯ ಸರ್ಕಾರವು 100 ಕೋಟಿ ರೂಪಾಯಿಗಳ ಆವರ್ತ ನಿಧಿಯನ್ನು ಸ್ಥಾಪಿಸಲು ಇಂದು ನಿರ್ಧರಿಸಿದೆ.

ಬೆಳಿಗ್ಗೆ ಸೇರಿದ್ದ ಸಚಿವ ಸಂಪುಟ ಸಭೆಯಲ್ಲಿ ಕೃಷಿ ಉತ್ಪನ್ನಗಳ ಬೆಲೆ ಕುಸಿತ ಆದ ಕಾರಣ– ಪರಿಣಾಮ ಕುರಿತು ಸುದೀರ್ಘ ಚರ್ಚೆ ನಡೆಯಿತು ಎಂದು ಗೊತ್ತಾಗಿದೆ.

75 ವರ್ಷಗಳ ಹಿಂದೆ

ಮಂಗಳವಾರ, 14-11-1950

• ಬ್ರಿಟಿಷ್ ಸರ್ಕಾರದ ನಿರ್ಧಾರಕ್ಕೆ ಅಮೆರಿಕಾ ಕೈವಾಡವೇ ಕಾರಣ

ಲಂಡನ್, ನ. 13– ವಿಶ್ವಶಾಂತಿ ಕಾಂಗ್ರೆಸ್ ಅಧಿವೇಶನ ಒಂದು ದಿನ ಮಾತ್ರ ಷೆಫೀಲ್ಡ್ ನಗರದಲ್ಲಿ ಸೇರಿ, ನಂತರ ವಾರ್ಸಾವಿನಲ್ಲಿ ಮುಂದುವರಿಯುವಂತೆ ತಡೆಯುಂಟಾದರೂ ಎದೆಗುಂದದೆ, ನಾಲ್ಕು ಮಂದಿಯ ಭಾರತ ನಿಯೋಗವಿಂದು ಷೆಫೀಲ್ಡಿಗೆ ಹೊರಟಿತು. ಈ ವಾರಾಂತ್ಯದಲ್ಲಿ ಪೋಲೆಂಡಿಗೆ ಹೋಗಲಿದೆ.

ಶಾಂತಿ ಸಮಿತಿಯ ಅನೇಕ ಪ್ರತಿನಿಧಿಗಳಿಗೆ ಪ್ರವೇಶಕ್ಕೆ ಅವಕಾಶ ಕೊಡದೆ ಅಧಿವೇಶನ ಸ್ಥಳವನ್ನು ವರ್ಗಾಯಿಸುವಂತೆ ಮಾಡಿರುವುದಕ್ಕಾಗಿ, ನಿಯೋಗದ ನಾಯಕರಾದ ಡಾ.ಅತಲರೂ, ಸದಸ್ಯರಾದ ಹರೀಂದ್ರನಾಥ ಚಟ್ಟೋಪಾಧ್ಯಾಯರೂ, ಬ್ರಿಟಿಷ್ ಸರ್ಕಾರದ ವರ್ತನೆಯನ್ನು ಟೀಕಿಸಿದರು.

ಚುರುಮುರಿ



ಉದಯವಾಗಲಿ...

• ಬಿ.ಎನ್. ಮಲ್ಲೇಶ್

'ಏನ್ರಲೆ ಇವತ್ತಿನ ಹೊಸ ಸುದ್ದಿ? ಬಾಂಬ್ ಬಿಟ್ಟು ಬೇರೆ ಏನರೆ ಹೇಳ್ರಿ...' ಹರಟೆಕಟ್ಟೆಯಲ್ಲಿ ದುಬ್ಬೀರ ತಾಕೀತು ಮಾಡಿದ.

'ನಮಗೆ ಪ್ರತ್ಯೇಕ ರಾಜ್ಯ ಬೇಕು' ಎಂದ ಪರ್ಮೇಶಿ.

'ಕೊಡೋಣ ಬಿಡು, ಬೇರೆ ಏನು?'

'ತಮ್ಮನ್ನ ಮಂತ್ರಿ ಮಾಡು ಅಂತ ಎಮ್ಮೆಲ್ಲೆಗಳು ಖರ್ಗೆ ಸಾಹೇಬ್ರ ಮನಿ ಬಾಗಿಲು ಬಡೀತದಾರಂತೆ...' ತೆಪರೇಸಿ ಹೇಳಿದ.

'ಬಾಗಿಲು ಬಡಿದರೆ ಮಂತ್ರಿ, ಒದ್ದರೆ ಮುಖ್ಯಮಂತ್ರಿ!' ಗುಡ್ಡೆ ನಕ್ಕ.

'ಕರೆಕ್ಟ್... ಆಮೇಲೆ ಇವತ್ತು ಬಿಹಾರ ಎಲೆಕ್ಷನ್ ಕೌಂಟಿಂಗು. ಯಾರು ಗೆಲ್ಲಬೋದು?' ಕೊಟ್ರೇಶಿ ಕೇಳಿದ.

'ಎಕ್ಸಿಟ್ ಫೈಲ್ ಆಗ್ಲೇ ಹೇಳೇತಲ್ಲ, ಮತ್ತೇನು?' ಮಂಜಮ್ಮನ ಮುಖದಲ್ಲಿ ಖುಷಿ.

'ನಿನ್ತೆಲಿ, ಅದು ಫೈಲ್ ಅಲ್ಲ ಪೋಲ್... ನಮ್ಗೆ ಎಕ್ಸಿಟ್ ಪೋಲ್ ಬ್ಯಾಡ, ಎಗ್ಸಾಕ್ಟ್ ಪೋಲ್ ಬೇಕು...' ಎಂದ ದುಬ್ಬೀರ.

'ಅಲ್ಲ, ಈ ಎಕ್ಸಿಟ್ ಪೋಲ್‌ನಲ್ಲೂ ಮತ ಕಳವು ಮಾಡಬೋದಾ?' ಕೊಟ್ರೇಶಿ ಕೊಕ್ಕೆ.

'ಅಲೆ ಇವ್ನ, ಕರೆಕ್ಟ್... ಇದ್ರ ಬಗ್ಗೆ ರಾಹುಲ್ ಗಾಂಧಿ ಯಾಕೆ ಇನ್ನೂ ಬಾಂಬ್ ಹಾಕಿಲ್ಲ?'

'ಪಾಪ, ಬ್ಯುಸಿ ಅನ್ಸುತ್ತೆ. ಅದಿರ್ಲಿ, ನಮ್ಗೆ ಈಗ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ಆಗಬೇಕು, ಅದರ ಬಗ್ಗೆ ಮಾತಾಡ್ರಿ' ಎಂದ ಪರ್ಮೇಶಿ.

'ಅದ್ಯಾಕೆ, ಎಲ್ರು ಒಂದೊಂದು ರಾಜ್ಯ ಮಾಡ್ಕಂಬಿಡಿ... ಉತ್ತರ ಕರ್ನಾಟಕ, ಮೈಸೂರು ಕರ್ನಾಟಕ, ಹೈದರಾಬಾದ್ ಕರ್ನಾಟಕ ಅಂತ ಚಾಣ ಛಿದ್ರ ಮಾಡಿ ಒಡೆದಾಕ್ರಿ ಅತ್ಲಾಗೆ...' ಮಂಜಮ್ಮಗೆ ಸಿಟ್ಟು ಬಂತು.

'ಮಧ್ಯ ಕರ್ನಾಟಕ ಯಾಕೆ ಬಿಟ್ಟೆ? ಅದ್ನೂ ಮಾಡ್ರಿ, ನಾವು ದಾವಣಗೆರೆ ರಾಜಧಾನಿ ಮಾಡ್ಕಂತೀವಿ...' ಎಂದ ತೆಪರೇಸಿ.

'ನಿಂಗ್ಯಾವ ರಾಜ್ಯ ಬೇಕೋ ಗುಡ್ಡೆ?' ದುಬ್ಬೀರ ಕೇಳಿದ.

'ನಂಗೆ 'ಮದ್ಯ' ಕರ್ನಾಟಕ ಬೇಕು, ಕೊಡಿಸ್ತೀಯ?' ಗುಡ್ಡೆ ನಕ್ಕ.

'ಅಂದ್ರೆ ಎಣ್ಣೆ? ಥು ನಿನ್ ಜನ್ಮಕ್ಕೆ...' ಎಂದಳು ಮಂಜಮ್ಮ, ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ನೆಹರೂ ಮಾದರಿ: ಜೈಲಿಗೆ ಸೃಜನಶೀಲ ಸ್ಪರ್ಶ


ಬಂದೀಖಾನೆಯನ್ನು ಸಾಂಸ್ಕೃತಿಕ ಕೇಂದ್ರವಾಗಿಸಿದ ಹಿರಿಮೆ ನೆಹರೂ ಅವರದು. ಅವರ ಅತ್ಯುತ್ತಮ ಕೃತಿಗಳು ರೂಪುಗೊಂಡಿದ್ದು ಜೈಲುವಾಸದ ಅವಧಿಯಲ್ಲೇ.

• ಮಲ್ಲಿಕಾರ್ಜುನ ಹೆಗ್ಗಳಗಿ

ಕರ್ನಾಟಕದಲ್ಲಿ ಕಾರಾಗೃಹಗಳನ್ನು ರೆಸಾರ್ಟ್ ಆಗಿಸಲಾಗಿದೆ ಎನ್ನುವ ಚರ್ಚೆಗಳು ನಡೆಯುತ್ತಿವೆ. ಜೈಲು, ರೆಸಾರ್ಟ್ ಆಗುವುದು ಸಮಸ್ಯೆಯೇ. ಆದರೆ, ಸಾಂಸ್ಕೃತಿಕ ಕೇಂದ್ರ ಆಗಬಹುದಲ್ಲ?

ಸ್ವಾತಂತ್ರ್ಯ ಸಂಗ್ರಾಮದ ದಿನಗಳಲ್ಲಿನ ಕೆಲವು ಜೈಲುಗಳು ಸಾಂಸ್ಕೃತಿಕ ಕೇಂದ್ರಗಳ ಸ್ವರೂಪ ಪಡೆದುಕೊಂಡಿದ್ದವು. ಅದಕ್ಕೆ ಅತ್ಯುತ್ತಮ ಉದಾಹರಣೆ, ಜವಾಹರಲಾಲ್ ನೆಹರೂ ಕೈದಿಯಾಗಿದ್ದ ಮಹಾರಾಷ್ಟ್ರದ ಅಹಮದ್‌ನಗರದ ಕೋಟೆ ಜೈಲು. ನೆಹರೂ ಅವರು ತಾವು ಶಿಕ್ಷೆ ಅನುಭವಿಸುತ್ತಿದ್ದ ಬಂದೀಖಾನೆಯನ್ನೇ ಕ್ರೀಡಾಂಗಣ, ಉಪವನ, ಸಾಂಸ್ಕೃತಿಕ ಕೇಂದ್ರವಾಗಿ ಮಾರ್ಪಾಡು ಮಾಡಿದ್ದರು. ಆ ಬದಲಾವಣೆ ಅವರ ಕ್ರಿಯಾಶೀಲ ವ್ಯಕ್ತಿತ್ವದ ಅಭಿವ್ಯಕ್ತಿಯಂತಿತ್ತು.

1942ರ 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ನೆಹರೂ ಅವರನ್ನು ಬಂಧಿಸಿ ಅಹಮದ್‌ನಗರ ಕೋಟೆ ಜೈಲಿನಲ್ಲಿ ಇರಿಸಲಾಗಿತ್ತು. 1942ರ ಆಗಸ್ಟ್ 10ರಿಂದ 1945ರ ಮಾರ್ಚ್ 28ರವರೆಗೆ ನೆಹರೂ ಕೈದಿಯಾಗಿದ್ದ ಮಾಹಿತಿಯ ಫಲಕವನ್ನು ಜೈಲಿನ ಮುಂಭಾಗದಲ್ಲಿ ಹಾಕಲಾಗಿದೆ. ಅವರು ಬಳಸುತ್ತಿದ್ದ ಕಟ್ಟಿಗೆಯ ಕುರ್ಚಿ, ಮಂಚ, ಟೇಬಲ್, ಬೆತ್ತದ ಸೋಫಾಗಳನ್ನು ಸಂರಕ್ಷಿಸಿ ಇಡಲಾಗಿದೆ. ಅವರು ಉಪವನ ಬೆಳೆಸಲು ಬಳಸಿದ ಕೃಷಿ ಉಪಕರಣಗಳು ಹಾಗೂ ಅವರು ಬರೆದ ಕೃತಿಗಳನ್ನು ಸಂಗ್ರಹಿಸಿ ಇಡಲಾಗಿದೆ.



ನೆಹರೂ ಅವರು ಸಲಿಕೆ, ಗುದ್ದಲಿಗಳನ್ನು ಬಳಸಿ ನೆಲ ಹದ ಮಾಡಿ ಜೈಲು ಆವರಣದಲ್ಲಿ ಕಾಯಿಪಲ್ಲೆ ಬೆಳೆಯುತ್ತಿದ್ದರು. ಪುಣೆಯ ವ್ರೋಚ್ ಬೀಜ ಸಂಸ್ಥೆ ಅವರಿಗೆ ಕಾಯಿಪಲ್ಲೆ ಮತ್ತು ಹೂ ಗಿಡಗಳನ್ನು ಬೆಳೆಸಲು ಬೀಜ ಪೂರೈಸುತ್ತಿತ್ತು. ನೆಹರೂ ಖುದ್ದು ನೀರೆರೆದು ಬೆಳೆಸಿದ ಗುಲಾಬಿ ತೋಟವನ್ನು ಉಳಿಸಿಕೊಂಡು ಬರಲಾಗಿದೆ. ಅವರಿಗೆ ಪ್ರಿಯವಾಗಿದ್ದ ಕೆಲವು ಗುಲಾಬಿ ತಳಿಗಳನ್ನು ಅಭಿವೃದ್ಧಿಪಡಿಸುವ ಕಾರ್ಯ ಕೂಡ ಅಲ್ಲಿ ಸತತವಾಗಿ ನಡೆಯುತ್ತಿದೆ. ಪುಣೆಯಿಂದ ದಾಳಿಂಬೆ ಸಸಿಗಳನ್ನು ತರಿಸಿ ಬೆಳೆಸಿದ್ದರಂತೆ. ಅತ್ಯಂತ ದೊಡ್ಡದಾದ ಮರಕ್ಕೆ 'ನೆಹರೂ ಮರ' ಎಂದು ಅಲ್ಲಿದ್ದವರು ಪ್ರೀತಿಯಿಂದ ಕರೆಯುತ್ತಿದ್ದರಂತೆ. ಆ ಮರದ ಟೊಂಗೆಯನ್ನು ಕಸಿ ಮಾಡಿ ದೆಹಲಿಯ ತೀನ್‌ಮೂರ್ತಿ ಭವನದಲ್ಲಿ ಬೆಳೆಸಲಾಗಿದೆ.

ತಾಯಿಯನ್ನು ಕಳೆದುಕೊಂಡು ದೂರದಲ್ಲಿದ್ದ ತಮ್ಮ ಮಗಳು ಇಂದಿರಾಗೆ, ಜಗತ್ತಿನ ಇತಿಹಾಸದ ವಿಹಂಗಮ ನೋಟವನ್ನು ಪರಿಚಯಿಸುವ ಪತ್ರಗಳನ್ನು ನೆಹರೂ ಜೈಲಿನಲ್ಲಿದ್ದುಕೊಂಡೇ ಬರೆದರು. ಆ ಪತ್ರಗಳು ಪುಸ್ತಕ ರೂಪದಲ್ಲೂ (ಮಗಳಿಗೆ ತಂದೆಯ ಓಲೆಗಳು) ಪ್ರಕಟವಾಗಿವೆ.

'ಗ್ಲಿಂಪ್ಸಸ್ ಆಫ್ ವರ್ಲ್ಡ್ ಹಿಸ್ಟರಿ' ಕೃತಿಯನ್ನು ನೆಹರೂ 1936ರಲ್ಲಿ ರಚಿಸಿದಾಗಲೂ ಅವರು ಸೆರೆಮನೆಯಲ್ಲಿಯೇ ಇದ್ದರು. ಮಗಳಿಗೆ ಬರೆದ ಪತ್ರಗಳ ರೂಪದಲ್ಲಿರುವ ಈ ಕೃತಿಯಲ್ಲಿನ ಬರಹಗಳು, ವಿಶ್ವ ಇತಿಹಾಸದ ಪ್ರಮುಖ ಸಂಗತಿಗಳಿಗೆ ಸಂಬಂಧಿಸಿದ್ದಾಗಿವೆ. ಅವರ ಬರಹಗಳ ಸೊಬಗು, ವಿಷಯ ಮಂಡನೆಯ ಒಳನೋಟಗಳು ಗಮನಾರ್ಹವಾಗಿವೆ. ಅವರಲ್ಲಿ ಒಬ್ಬ ಶ್ರೇಷ್ಠ ಬರಹಗಾರ ಇದ್ದ ಎಂಬುದನ್ನು ಈ ಕೃತಿ ಸ್ಪಷ್ಟಪಡಿಸುತ್ತದೆ.

ಅಹಮದ್‌ನಗರದ ಜೈಲಿನಲ್ಲಿ ಕೈದಿಗಳಾಗಿದ್ದ, ಸ್ವಾತಂತ್ರ್ಯ ಸಂಗ್ರಾಮದ ಸಂಗಾತಿಗಳಾದ ವಲ್ಲಭಭಾಯಿ ಪಟೇಲ್, ನರೇಂದ್ರದೇವ್, ಶಂಕರ್‌ರಾವ್ ದೇವ್, ಮೌಲಾನಾ ಅಬುಲ್ ಕಲಾಂ, ಜೆ.ಬಿ. ಕೃಪಲಾನಿ, ಹರೆಕೃಷ್ಣ ಮೆಹತಾಬ್, ಪಟ್ಟಾಭಿ ಸೀತಾರಾಮಯ್ಯ, ಅಸಫ್ ಅಲಿ, ಸೈಯದ್ ಮಹ್ಮದ್ ಮತ್ತು ಪಿ.ಸಿ. ಘೋಷ್ ಅವರೊಂದಿಗೆ ನೆಹರೂ ಬ್ಯಾಡ್ಮಿಂಟನ್ ಆಡಿದ ಮೈದಾನ ಗಮನ ಸೆಳೆಯುತ್ತದೆ. ಅದನ್ನು ಈಗಲೂ ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳಲಾಗಿದೆ.

ಸಾಹಿತ್ಯ ಮತ್ತು ಸಂಗೀತದ ಪ್ರೇಮಿಯಾಗಿದ್ದ ಮುಲ್ಕರಾಂ ಮೆಹ್ತಾ ಎನ್ನುವವರು ಆಗ ಕಾರಾಗೃಹದ ಹಿರಿಯ ಅಧಿಕಾರಿಯಾಗಿದ್ದರು. ಅವರ ಮಗ ನೆಹರೂ ಅವರಿಗೆ ಊಟದ ಡಬ್ಬಿ ಮತ್ತು ಪುಸ್ತಕಗಳನ್ನು ತಂದುಕೊಡುತ್ತಿದ್ದ. ನೆಹರೂ ಅವನಿಂದ ಹಾಡುಗಳನ್ನು ಕೇಳುತ್ತಿದ್ದರು. ಗಾಂಧೀಜಿಗೆ ಪ್ರಿಯವಾದ ಪ್ರಾರ್ಥನಾ ಗೀತೆಗಳನ್ನು ಅವನಿಗೆ ಹೇಳಿ ಕೊಡುತ್ತಿದ್ದರು.

'ಡಿಸ್ಕವರಿ ಆಫ್ ಇಂಡಿಯಾ' ಕೃತಿ ರಚನೆಯಾದುದೂ ಅಹಮದ್‌ನಗರದ ಜೈಲುವಾಸದ ಸಂದರ್ಭದಲ್ಲಿ. ಆ ಕೃತಿಯ ಮೊದಲ ಪುಟದಲ್ಲಿ ಅಹಮದ್‌ನಗರ ಕೋಟೆಯ ಚರಿತ್ರೆಯನ್ನು ನೆಹರೂ ಬಹು ಸುಂದರವಾಗಿ ದಾಖಲಿಸಿದ್ದಾರೆ. ಚಾಂದಬೀಬಿ ರಾಣಿಯ ವಿವರಗಳನ್ನು ನೀಡಿದ್ದಾರೆ.

ಪ್ರಧಾನಿಯಾಗಿದ್ದ ಅವಧಿಯಲ್ಲಿ ನೆಹರೂ ಅವರು ಎರಡು ಬಾರಿ ಈ ಜೈಲಿಗೆ ಭೇಟಿ ನೀಡಿದ್ದಾರೆ. ಆ ಸಂದರ್ಭದಲ್ಲಿ ಅವರು ತಮಗೆ ಊಟ ನೀಡಿದವರು, ಕಾಯಿಪಲ್ಲೆ ಬೆಳೆಯಲು ಬೀಜಗಳನ್ನು ಒದಗಿಸಿದವರು, ಬಟ್ಟೆಗಳನ್ನು ತೊಳೆದು ಇಸ್ತ್ರಿ ಮಾಡಿದವರನ್ನು ನೆನಪಿಸಿಕೊಂಡಿದ್ದರು ಹಾಗೂ ಅವರನ್ನು ವೇದಿಕೆಗೆ ಕರೆದು ಗೌರವಿಸಿದ್ದರು. ಆ ಸುಂದರ ಸಂದರ್ಭವನ್ನು ಅಹಮದ್‌ನಗರದ ಜನ ಅಭಿಮಾನದಿಂದ ಸ್ಮರಿಸುತ್ತಾರೆ.

ಭಾರತದ ಎಲ್ಲ ಜೈಲುಗಳ ವಾತಾವರಣ ಚೆನ್ನಾಗಿರುವಂತೆ ಮರಗಳನ್ನು ಹಾಗೂ ಉಪವನಗಳನ್ನು ಬೆಳೆಸಲು ನೆಹರೂ ಪ್ರಧಾನಿಯಾಗಿದ್ದಾಗ ಕಾಳಜಿ ವಹಿಸಿದ್ದರು. ಜೈಲುಗಳ ಬಗ್ಗೆ ಅವರಿಗೆ ವಿಶೇಷ ಕಾಳಜಿ ಇತ್ತು. ಜೈಲುಗಳನ್ನು ಸಾಂಸ್ಕೃತಿಕ ಕೇಂದ್ರವಾಗಿಸುವ ಅವಕಾಶ ಈಗಲೂ ಇದೆ. ಬೇಕಾದುದು ಸರ್ಕಾರದ ಪ್ರಯತ್ನವಷ್ಟೇ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪ್ರಚಂಡ ಪುಟಾಣಿಗಳು

ಮಕ್ಕಳ ಕ್ರಿಯಾಶೀಲತೆಗೆ ಹಲವು ದಾರಿ; ಅಭಿವ್ಯಕ್ತಿಗೆ ಹಲವು ರೂಪ. ಚೈತನ್ಯ ಉಕ್ಕುವ, ಬೆರಗು, ಉತ್ಸಾಹದಿಂದ ಪುಟಿಯುವ ಚಿಣ್ಣರು, ತಮ್ಮ ಕುತೂಹಲ, ಶಕ್ತಿಯನ್ನೆಲ್ಲ ಕೇಂದ್ರೀಕರಿಸಿ ಕಲೆ, ಕ್ರೀಡೆ, ಕಲಿಕೆಯ ಬೆನ್ನು ಹತ್ತಿದರೆ ಏನಾಗುತ್ತದೆ ಎನ್ನುವುದರ ನಿದರ್ಶನ ಇಲ್ಲಿದೆ. ಚಿಕ್ಕವಯಸ್ಸಿನಲ್ಲಿಯೇ ವಿವಿಧ ರಂಗಗಳಲ್ಲಿ ಚಕಿತಗೊಳಿಸುವ ಸಾಧನೆ ಮಾಡಿದ ಮಕ್ಕಳ ಪರಿಚಯವನ್ನು ಇಲ್ಲಿ ನೀಡಲಾಗಿದೆ

ತುಂಟ ಬಾಲಕ ಬ್ಯಾಡ್ಮಿಂಟನ್ ಸಾಧಕ

• ಬಿ.ವಿ.ಶ್ರೀನಾಥ್

ಬೆಂಗಳೂರು: 6 ವರ್ಷದ ಮಗ ವಿಪರೀತ ತುಂಟನಾಗಿದ್ದ. ಅವನನ್ನು ನಿಭಾಯಿಸುವುದರಲ್ಲಿ ಸುಸ್ತಾದ ತಂದೆ, ಮಗನನ್ನು ಕರೆದುಕೊಂಡು ಹೋಗಿ ಬ್ಯಾಡ್ಮಿಂಟನ್ ಆಟಕ್ಕೆ ಸೇರಿಸಿದರು. ಆ ಬಾಲಕ ಇಂದು 15 ವರ್ಷದ ಒಳಗಿನ ಸಿಂಗಲ್ಸ್ ವಿಭಾಗದಲ್ಲಿ ಭಾರತದ ನಂಬರ್ 3 ಬ್ಯಾಡ್ಮಿಂಟನ್ ಆಟಗಾರ. ಹೆಸರು ಪುಷ್ಕರ್ ಸಾಯಿ.



ಪುಷ್ಕರ್ ಸಾಯಿ, ಗೌರಿಬಿದನೂರು ತಾಲ್ಲೂಕಿನ ಪೋತೇನಹಳ್ಳಿಯ ಪಿ.ಎಸ್. ಜಯಕೀರ್ತಿ ಮತ್ತು ಎಂ.ಸ್ವರೂಪ ಅವರ ಮಗ. ಬೆಂಗಳೂರಿನಲ್ಲಿ ಕಿರು ಉದ್ದಿಮೆ ನಡೆಸುವ ಜಯಕೀರ್ತಿ ಮಗನಿಗಾಗಿ ತಮ್ಮ ತನು ಮನ ಧನ ಎಲ್ಲವನ್ನೂ ಮೀಸಲಿಟ್ಟಿದ್ದಾರೆ.

ಯು.ವಿನೋದ್‌ಕುಮಾರ್ ತರಬೇತುದಾರರಾಗಿ ಬಂದ ನಂತರ ಸಾಯಿ ಪುಷ್ಕರ್‌ನ ಆಟ ಹೊಳಪು ಪಡೆಯಿತು. ಅವರ ಅವಧಿಯಲ್ಲಿಯೇ ಪುಷ್ಕರ್ 13 ವರ್ಷದ ಒಳಗಿನ ವಿಭಾಗದಲ್ಲಿ ಡಬಲ್ಸ್ ಹಾಗೂ ಸಿಂಗಲ್ಸ್ ಎರಡೂ ವಿಭಾಗಗಳಲ್ಲಿಯೂ ರಾಷ್ಟ್ರದ ನಂಬರ್ 1 ಬ್ಯಾಡ್ಮಿಂಟನ್ ಆಟಗಾರನಾದ. 14 ವರ್ಷದೊಳಗಿನ ವಿಭಾಗದಲ್ಲಿ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ರನ್ನರ್ ಅಪ್ ಆದ. ಹಲವು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಭಾಗವಹಿಸಿ, ಪ್ರೀಕ್ವಾರ್ಟರ್ ಫೈನಲ್ ಹಂತದವರೆಗೂ ತಲುಪಿದ್ದ.

ಪುಷ್ಕರ್, ಪ್ರಸ್ತುತ ಸಿದ್ಧಾರ್ಥ್ ಠಾಕೂರ್ ಮತ್ತು ಮಧುಸೂದನ್ ಎಂ. ಅವರ ಅಡಿಯಲ್ಲಿ ತರಬೇತಿ ಪಡೆಯುತ್ತಿದ್ದಾನೆ. ನವೆಂಬರ್‌ನಲ್ಲಿ, ಏಷ್ಯನ್ ಚಾಂಪಿಯನ್‌ಶಿಪ್‌ಗೆ ಭಾರತ ತಂಡದ ಆಯ್ಕೆಗಾಗಿ ನಡೆದ ಪಂದ್ಯಾವಳಿಯಲ್ಲಿ ಗೆದ್ದಿರುವ ಪುಷ್ಕರ್, ಡಿಸೆಂಬರ್‌ನಲ್ಲಿ ನಡೆಯಲಿರುವ 15 ವರ್ಷದ ಒಳಗಿನ ವಿಭಾಗದಲ್ಲಿ ರಾಷ್ಟ್ರೀಯ ಚಾಂಪಿಯನ್‌ಶಿಪ್‌ಗೆ ಸಿದ್ಧತೆ ನಡೆಸಿದ್ದಾನೆ.

9ನೇ ತರಗತಿಯಲ್ಲಿ ಓದುತ್ತಿರುವ ಪುಷ್ಕರ್ ಸಾಯಿ, ಆನ್‌ಲೈನ್‌ನಲ್ಲಿ ಕೋಚಿಂಗ್ ಪಡೆಯುತ್ತಿದ್ದು, ಪೂರ್ಣಾವಧಿ ಬ್ಯಾಡ್ಮಿಂಟನ್ ತರಬೇತಿಯಲ್ಲಿ ನಿರತನಾಗಿದ್ದಾನೆ.

ಸೈಕ್ಲಿಂಗ್‌ನಲ್ಲಿ ಸುಶ್ವಿನ್ ಮಿಂಚು



• ಶಿವರಾಯ ಪೂಜಾರಿ

ಹುಬ್ಬಳ್ಳಿ: ವಯಸ್ಸು ಚಿಕ್ಕದಾದರೂ ಈತನ ಸಾಧನೆ ದೊಡ್ಡದು. ಸೈಕ್ಲಿಂಗ್, ಸ್ಕೇಟಿಂಗ್‌ನಲ್ಲಿ ಮಿಂಚು ಹರಿಸುತ್ತಿರುವ ಐದರ ಈ ಪೋರ 'ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌'ನಲ್ಲಿ ತನ್ನ ಹೆಸರನ್ನು ನೋಂದಾಯಿಸಿಕೊಂಡಿದ್ದಾನೆ. ಹೆಸರು ಸುಶ್ವಿನ್. ಹುಬ್ಬಳ್ಳಿಯ ಇಂದ್ರಪ್ರಸ್ಥ ನಗರದ ವಿನಾಯಕ ಮತ್ತು ಸುಷ್ಮಾ ಹಳಪೇಟಿ ದಂಪತಿಯ ಮಗ.

ಐದು ವರ್ಷ ವಯಸ್ಸಿನ ಸುಶ್ವಿನ್, 4 ವರ್ಷದವನಾಗಿರುವಾಗಲೇ ಸೈಕ್ಲಿಂಗ್ ಮಾಡುತ್ತಾ 39 ನಿಮಿಷ 24 ಸೆಕೆಂಡ್‌ಗಳಲ್ಲಿ 11.02 ಕಿ.ಮೀ ಕ್ರಮಿಸಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಸೇರ್ಪಡೆಯಾದ. ಈ ಮೂಲಕ ತಮಿಳುನಾಡಿನ ಕಲ್ಲಾಕುರಿಚಿಯ ಆಧವ್ ಅಶೋಕ್‌ಕುಮಾರ ಎಂಬ 5 ವರ್ಷದ ಬಾಲಕ 39 ನಿಮಿಷ 44 ಸೆಕೆಂಡ್‌ಗಳಲ್ಲಿ 10.3 ಕಿ.ಮೀ ಕ್ರಮಿಸಿ ನಿರ್ಮಿಸಿದ್ದ ದಾಖಲೆಯನ್ನು ಮೀರಿದ್ದಾನೆ.

ಸ್ಕೇಟಿಂಗ್ ಪಟುವೂ ಆಗಿರುವ ಬಾಲಕ, ಈ ಕ್ರೀಡೆಯಲ್ಲಿ ರಾಷ್ಟ್ರ ಮಟ್ಟದಲ್ಲಿ ಚಿನ್ನದ ಪದಕ, ರಾಜ್ಯಮಟ್ಟದಲ್ಲಿ ಬೆಳ್ಳಿ ಪದಕ ಹಾಗೂ ಧಾರವಾಡ ಜಿಲ್ಲಾಮಟ್ಟದಲ್ಲಿ 2024 ಹಾಗೂ 2025ರಲ್ಲಿ ಚಿನ್ನದ ಪದಕ ಪಡೆದಿದ್ದಾನೆ. ಈತನ ಸಾಧನೆ ಗುರುತಿಸಿ ಮೈಸೂರಿನ ಕರ್ನಾಟಕ ಯುವ ರಕ್ಷಣಾ ವೇದಿಕೆಯು 'ಕರ್ನಾಟಕ ಸೇವಾರತ್ನ' ಪ್ರಶಸ್ತಿ ನೀಡಿ ಗೌರವಿಸಿದೆ.

'ನಾನು ಕ್ರೀಡಾಪಟು. ನನ್ನಂತೆ ಮಗನೂ ಕ್ರೀಡಾಪಟು ಆಗಬೇಕೆಂಬ ಆಸೆಯಿಂದ ಆರಂಭದಲ್ಲಿ ಸೈಕ್ಲಿಂಗ್ ಕಲಿಸಿದೆ. ನಾಲ್ಕು ತಿಂಗಳು ಪ್ರತಿದಿನ ಬೆಳಿಗ್ಗೆ ಸೈಕ್ಲಿಂಗ್ ಮಾಡಿ ಕೊನೆಗೂ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಸ್ಥಾನ ಪಡೆದಿದ್ದಾನೆ. ರಾಷ್ಟ್ರ ಮಟ್ಟದಲ್ಲಿ ಸ್ಕೇಟಿಂಗ್ ಪಟು ಮಾಡಬೇಕೆಂಬ ಗುರಿ ಇದ್ದು, ಈಗಿನಿಂದಲೇ ತಯಾರಿ ಆರಂಭಿಸಲಾಗಿದೆ' ಎನ್ನುತ್ತಾರೆ ಸುಶ್ವಿನ್ ತಂದೆ ವಿನಾಯಕ.

ವಿಶೇಷ ಒಲಿಂಪಿಕ್ಸ್‌ನತ್ತ ಪ್ರತಾಪ್ ಚಿತ್ತ

• ಗಣಪತಿ ಹೆಗಡೆ

ಕಾರವಾರ: ಒಂದು ಕಾಲದಲ್ಲಿ ಆತ ಅತಿಯಾದ ಸಿಟ್ಟು, ಮಾನಸಿಕ ಸ್ತಿಮಿತ ಇಲ್ಲದೆ ಎಲ್ಲರಿಂದ ದೂರಲ್ಪಡುತ್ತಿದ್ದ ಬಾಲಕ. ಇಂದು ಅದೇ ಬಾಲಕ 2027ರಲ್ಲಿ ಚಿಲಿ ದೇಶದಲ್ಲಿ ನಡೆಯಲಿರುವ ವಿಶೇಷ ಒಲಿಪಿಂಕ್ಸ್‌ನ ಟೇಬಲ್ ಟೆನಿಸ್ ಸ್ಪರ್ಧೆಗೆ ಆಯ್ಕೆಯಾಗಿದ್ದಾನೆ. ಕುಮಟಾ ತಾಲ್ಲೂಕಿನ ಐಗಳಕೂರ್ವೆ ಗ್ರಾಮದ ಪ್ರತಾಪ್ ಪಟಗಾರ ಈ ಬಾಲ ಸಾಧಕ. 15 ವರ್ಷದ ಈತನಿಗೆ ಕುಮಟಾದ ದಯಾ ನಿಲಯ ವಸತಿ ಶಾಲೆಯಲ್ಲಿ ತರಬೇತಿ ನೀಡಲಾಗುತ್ತಿದೆ. ಕೆಲ ತಿಂಗಳ ಹಿಂದೆ ಚಂಡೀಗಢದಲ್ಲಿ ನಡೆದಿದ್ದ ರಾಷ್ಟ್ರ ಮಟ್ಟದ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಪ್ರತಾಪ್ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿ ದ್ದಾನೆ.



'ಏಕ ಪಾಲಕರಿರುವ ಬಾಲಕನ ಅತಿಯಾದ ಸಿಟ್ಟು, ಸ್ಥಿಮಿತ ಇಲ್ಲದೆ ವರ್ತಿಸುತ್ತಿದ್ದ ಕಾರಣದಿಂದ ಆತನನ್ನು ನಮ್ಮ ಶಾಲೆಗೆ ಸೇರಿಸಿದ್ದರು. ಮಾನಸಿಕ ಸಮತೋಲನ ಕಾಯ್ದುಕೊಳ್ಳಲು ಪ್ರತಾಪ್‌ನ ಆಸಕ್ತಿಯ ಕ್ರೀಡೆಯಾದ ಟೇಬಲ್ ಟೆನಿಸ್ ಆಟದಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸಲಾಯಿತು. ನಾಲ್ಕು ವರ್ಷಗಳ ನಿರಂತರ ಸಾಧನೆಯಿಂದ ಆತ ಅಂತರರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗುವಂತಾಗಿದೆ' ಎಂದು ದಯಾ ನಿಲಯ ಶಾಲೆಯ ಮುಖ್ಯಸ್ಥ ಸಿರಿನ್ ಲೋಪಿಸ್ ಹೇಳಿದರು.

ಯೋಗ ಸಾಧಕಿ



• ಕೆ.ಎಸ್.ಗಿರೀಶ

ಮಡಿಕೇರಿ: ದಟ್ಟ ಅರಣ್ಯದ ಮಧ್ಯೆ, ಗುಡ್ಡಗಾಡಿನಲ್ಲಿರುವ ಈಕೆ ಮಾಡಿರುವುದು ಬರೋಬ್ಬರಿ 12 ದಾಖಲೆಗಳು.

ಕೊಡಗು ಜಿಲ್ಲೆಯ ಮದೆನಾಡು ಗ್ರಾಮದಲ್ಲಿರುವ ಬಿಜಿಎಸ್ ಪಬ್ಲಿಕ್ ಶಾಲೆಯ 6ನೇ ತರಗತಿಯ ಬಿ.ಕೆ.ಸಿಂಚನಾ, ದೇಹವನ್ನು ಚಕಚಕನೇ ತಿರುಗಿಸುತ್ತಾ, ಬಿಲ್ಲಿನಂತೆ ಬಗ್ಗಿಸುತ್ತಾ ಮಾಡುವ ಯೋಗಾಸನಗಳು ನಿಬ್ಬೆರಗು ಮೂಡಿಸುತ್ತವೆ.

ಅಂತರರಾಷ್ಟ್ರೀಯ ಮಟ್ಟದ ಇಂಟರ್‌ನ್ಯಾಷನಲ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ 2, ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ 8, ರಾಷ್ಟ್ರ ಮಟ್ಟದ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ 1 ಹಾಗೂ ಕರ್ನಾಟಕ ಅಚೀವರ್ಸ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ 1 ದಾಖಲೆ ನಿರ್ಮಿಸಿದ್ದಾಳೆ. ಈಕೆಗೆ ತಾಯಿಯೇ ಗುರು, ಶಾಲೆಯೇ ವೇದಿಕೆ. ಸುತ್ತಮುತ್ತಲ ಸ್ನೇಹಿತರೇ ಪ್ರೇರಣೆ.

ಕೀರ್ತಿಕುಮಾರ್–ರೇಣುಕಾ ದಂಪತಿಯ ಪುತ್ರಿ, ಯಾವುದೇ ಯೋಗ ತರಬೇತಿ ಕೇಂದ್ರಕ್ಕೆ ಹೋಗದೆ ತಾಯಿಯ ಗರಡಿಯಲ್ಲಿ 300ಕ್ಕೂ ಅಧಿಕ ಯೋಗಾಸನಗಳನ್ನು ಕಲಿತಿರುವುದು ವಿಶೇಷ.

'ಕರ್ನಾಟಕ ಅಚೀವರ್ಸ್ ಬುಕ್ ಆಫ್ ರೆಕಾರ್ಡ್ಸ್‌'ನಲ್ಲಿ 'ಸಣ್ಣ ವಯಸ್ಸಿನಲ್ಲಿ ಕಠಿಣ ಆಸನಗಳನ್ನು ಮಾಡುವ ಬಾಲಕಿ' ಎಂಬ ದಾಖಲೆ ನಿರ್ಮಿಸಿದ್ದಾಳೆ.

ಅಕ್ಷರದೀಪ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಲಾವೇದಿಕೆ ಧಾರವಾಡ, ಬೆಳಗಾವಿ ಸಂಸ್ಥೆಯು 'ರಾಷ್ಟ್ರೀಯ ಯೋಗಭಾರತೀ' ಪ್ರಶಸ್ತಿ ನೀಡಿ ಗೌರವಿಸಿದೆ.

'ನಿರಂತರ ಪರಿಶ್ರಮ, ತಂದೆ, ತಾಯಿಯರ ಬೆಂಬಲ ಹಾಗೂ ದೇವರ ಆಶೀರ್ವಾದ ಇದ್ದರೆ ಎಲ್ಲರೂ ಸಾಧನೆ ಮಾಡಬಹುದು' ಎಂಬುದು ಯೋಗಸಾಧಕಿ ಸಿಂಚನಾಳ ಆತ್ಮವಿಶ್ವಾಸದ ನುಡಿ.

15 ವರ್ಷಕ್ಕೆ 10 ದಾಖಲೆ



ಪಿಕ್ಟೋರಿಯಲ್ ಭಾಷೆಯ ಚಿತ್ರ ಲಿಪಿಯಲ್ಲಿ ಮೂಡಿದ ಭಗವದ್ಗೀತೆ

• ಎಚ್.ಎಸ್.ಶ್ರೀಹರಪ್ರಸಾದ

ಹೊಸಪೇಟೆ: ತಾಲ್ಲೂಕಿನ ಮರಿಯಮ್ಮನಹಳ್ಳಿ ಹೋಬಳಿ ಸಮೀಪದ ಜಿ.ನಾಗಲಾಪುರ ಗ್ರಾಮದ ವಿದ್ಯಾರ್ಥಿ ಡಿ.ಪಿ.ಪ್ರಸನ್ನಕುಮಾರ್ 15 ವರ್ಷ ವಯಸ್ಸಿಗೆ ವಿವಿಧ ಸಾಧನೆಗಳ ಮೂಲಕ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಸೇರಿದಂತೆ ವಿವಿಧ 10 ದಾಖಲೆಗಳನ್ನು ಮಾಡಿದ್ದಾನೆ.

ಕಲಾವಿದ ಹಾಗೂ ಸದ್ಯ ಶಿವಮೊಗ್ಗದ ಮೆಸ್ಕಾಂ ಉದ್ಯೋಗಿಯಾಗಿರುವ ಡಿ.ಪಂಪಾಪತಿ ಹಾಗೂ ನಂದಿನಿ ಅವರ ಪುತ್ರ ಪ್ರಸನ್ನ ಸದ್ಯ ಮಂಗಳೂರಿನ ಸ್ವರೂಪ ಅಧ್ಯಯನ ಕೇಂದ್ರದಲ್ಲಿ 9ನೇ ತರಗತಿಯಲ್ಲಿ ಓದುತ್ತಿದ್ದಾನೆ. ವಿಶಿಷ್ಟ ಚಿತ್ರಲಿಪಿಯ ಮೂಲಕ ಭಗವದ್ಗೀತೆಯ 700 ಶ್ಲೋಕಗಳನ್ನು ಕಲಿತು, ಅವುಗಳನ್ನು 84,426 ಪಿಕ್ಟೋರಿಯಲ್ ಭಾಷೆಯ ಚಿತ್ರಲಿಪಿಯಲ್ಲಿ ಬರೆದಿದ್ದಾನೆ. ಈ ಸಾಧನೆಯು 2024ರ ಅಕ್ಟೋಬರ್‌ನಲ್ಲಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಮತ್ತು ವರ್ಲ್ಡ್‌ವೈಡ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಗಿದೆ. ಬ್ಯಾಸ್ಕೆಟ್‌ಬಾಲ್ ಅನ್ನು 2 ಗಂಟೆ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ತಡೆ ಇಲ್ಲದೆ ಕೆಳಗೆ ಬೀಳಿಸದೆ ಪುಶ್ ಮಾಡಿ 2024ರಲ್ಲಿ ದಾಖಲೆ ಬರೆದಿದ್ದಾನೆ. ದೇಶದ 784 ಜಿಲ್ಲೆಗಳನ್ನು ಸಂಕೇತ ಭಾಷೆ (ಕೈ ಭಾಷೆ) ಮೂಲಕ ಪ್ರಸ್ತುತಪಡಿಸಿ, 2 ನಿಮಿಷಗಳ ಕಾಲ ಉತ್ಥಿತ ಪದ್ಮಾಸನದಲ್ಲಿ ಕುಳಿತು (ಈ ಮೊದಲು 1.30 ನಿಮಿಷ ಮಾಡಿದ ದಾಖಲೆ ಮುರಿದು), ಲಿಪಿ ಇರುವ ಜಗತ್ತಿನ 70 ಭಾಷೆಗಳಲ್ಲಿ 'ಸತ್ಯಮೇವ ಜಯತೆ' ಎಂದು ಬರೆದು 2025ರ ವರ್ಲ್ಡ್‌ವೈಡ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಹೆಸರು ದಾಖಲಿಸಿದ್ದಾನೆ.

ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ತಬಲಾವನ್ನು ತಡೆರಹಿತವಾಗಿ 1 ಗಂಟೆ 48 ನಿಮಿಷ ನುಡಿಸಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಸೇರಿದ್ದಾನೆ. 10ನೇ ತರಗತಿಯ 6 ವಿಷಯಗಳನ್ನು ಕೊಡೆಯಲ್ಲಿ ವಿಜುವಲ್ ಆರ್ಟ್ಸ್ (ಮೆಮೊರಿ ಟೆಕ್ನಿಕ್) ಮಾಡಿ 2025ರ ಏಷ್ಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಹೆಸರು ನೋಂದಾಯಿಸಿಕೊಂಡಿದ್ದಾನೆ.

ಸ್ಕೇಟಿಂಗ್‌ನ ಯುವ'ರಾಜ'

• ಸಂಧ್ಯಾ ಹೆಗಡೆ

ಮಂಗಳೂರು: ತುಂಟಾಟವಾಡುತ್ತ ಮನೆಯಲ್ಲಿ ಖುಷಿಯ ಹೊನಲು ಹರಿಸಿದ್ದ ಬಾಲಕನಿಗೆ ಆಗಾಗ ಕಾಡುವ ಉಬ್ಬಸದ ಸಮಸ್ಯೆ ಪಾಲಕರನ್ನು ಕಂಗೆಡಿಸಿತ್ತು. ಮಗನನ್ನು ಆಸ್ಪತ್ರೆಗೆ ಕರೆದೊಯ್ದ ಪಾಲಕರೆದುರು ವೈದ್ಯರು ಎರಡು ಆಯ್ಕೆ ಇಟ್ಟಿದ್ದರು; ಒಂದು ಈಜು, ಇನ್ನೊಂದು ಸ್ಕೇಟಿಂಗ್.

ಸ್ಕೇಟಿಂಗ್ ಹೆಚ್ಚು ಸುರಕ್ಷಿತವೆಂದು ನಿರ್ಧಾರಕ್ಕೆ ಬಂದ ಪಾಲಕರು ಮಗನನ್ನು ಸ್ಕೇಟಿಂಗ್ ತರಬೇತಿಗೆ ಸೇರಿಸಿದರು. ಅಂಬೆಗಾಲಿಕ್ಕುವ ಬಾಲಕ, ಕಾಲಿಗೆ ಚಕ್ರ ಕಟ್ಟಿ ಲೀಲಾಜಾಲವಾಗಿ ಮುನ್ನಡೆಯುವುದನ್ನು ಬಹುಬೇಗ ಕಲಿತ. ಈ ಬಾಲಕನೇ ಈಗ ರಾಷ್ಟ್ರ ಮಟ್ಟದಲ್ಲಿ ಪದಕಗಳನ್ನು ಗಳಿಸಿ ಸ್ಕೇಟಿಂಗ್ ಕ್ರೀಡೆಯಲ್ಲಿ ಭರವಸೆಯಾಗಿ ಬೆಳೆಯುತ್ತಿದ್ದಾನೆ.



ಮಂಗಳೂರಿನ ಕುಂಟಿಕಾನದ ಧೀರಜ್ ಕೋಟ್ಯಾನ್–ವೀಣಾ ದಂಪತಿ ಪುತ್ರ ಯುವರಾಜ್ ಡಿ., ಸೇಂಟ್ ಅಲೋಶಿಯಸ್ ಗೊನ್ಝಾಗ ಶಾಲೆಯ ಎಂಟನೇ ತರಗತಿ ವಿದ್ಯಾರ್ಥಿ. ಯುಕೆಜಿ ಕಲಿಯುವಾಗಲೇ ಮೊದಲ ಪದಕ ಪಡೆದ ಯುವರಾಜ್, 3ನೇ ತರಗತಿಯಲ್ಲಿರುವಾಗ ರಾಜ್ಯ ಮಟ್ಟದ ಸ್ಪೀಡ್ ರೋಲರ್ ಸ್ಕೇಟಿಂಗ್ ಸ್ಪರ್ಧೆಯಲ್ಲಿ ಪದಕ ಪಡೆದಿದ್ದ.

ಸ್ಥಳೀಯ, ರಾಜ್ಯ, ರಾಷ್ಟ್ರ ಮಟ್ಟದ ಸ್ಪರ್ಧೆಗಳು ಸೇರಿ 35 ಚಿನ್ನ, 13 ಬೆಳ್ಳಿ, ಐದು ಕಂಚಿನ ಪದಕಗಳು ಈತನ ಕೊರಳೇರಿವೆ. ಮಂಗಳೂರು ರೋಲರ್ ಸ್ಕೇಟಿಂಗ್ ಕ್ಲಬ್‌ನ ಮಹೇಶ್ ಕುಮಾರ್ ಬಳಿ ತರಬೇತಿ ಪಡೆಯುತ್ತಿದ್ದಾನೆ. ಅಥ್ಲೆಟಿಕ್ಸ್‌ನಲ್ಲೂ ಮಿಂಚುತ್ತಿರುವ ಯುವರಾಜ್, ಭಕ್ಷಿತ್ ಸಾಲ್ಯಾನ್ ಬಳಿ ತರಬೇತಿ ಪಡೆದು, ಓಟ ಮತ್ತು ಲಾಂಗ್‌ಜಂಪ್‌ನಲ್ಲಿ ಪ್ರಶಸ್ತಿ ಪಡೆದಿದ್ದಾನೆ.

ನವದೆಹಲಿಯಲ್ಲಿ ನಡೆಯುತ್ತಿರುವ ಸಿಬಿಎಸ್‌ಇ ಕ್ರೀಡಾಕೂಟದಲ್ಲಿ ಗುರುವಾರ 500 ಮೀಟರ್ ವಿಭಾಗದಲ್ಲಿ ಚಿನ್ನದ ಪದಕ ಗಳಿಸಿದ್ದಾನೆ.

'ದಿವ್ಯ' ಪ್ರತಿಭೆ



• ಎಂ.ಜಿ.ಬಾಲಕೃಷ್ಣ

ಹೊಸಪೇಟೆ: ದಿವ್ಯಶ್ರೀ ಕೆಂಭಾವಿಮಠ. ಇವಳಿಗಿನ್ನೂ ಹತ್ತು ವರ್ಷ ವಯಸ್ಸು. ಆಗಲೇ ಹಂಪಿ ಉತ್ಸವ, ಮೈಸೂರು ದಸರಾ, ಕನಕಗಿರಿ ಉತ್ಸವ, ಆನೆಗೊಂದಿ ಉತ್ಸವ, ಕದಂಬ ಉತ್ಸವಗಳಂತಹ ವೇದಿಕೆಗಳ ಮೇಲೆ ಪ್ರತಿಭೆ ಪ್ರದರ್ಶಿಸಿದ್ದಾಳೆ. ಗಾಯಕಿ ಮಂಗ್ಲಿಗೆ ಸಾಥ್ ನೀಡಿದ್ದಾಳೆ. ಬಳ್ಳಾರಿಯಲ್ಲಿ ಅಲ್ಲದೇ ಆಂಧ್ರಪ್ರದೇಶದಲ್ಲಿ ಗೀತೆಗಳನ್ನು ಹಾಡಿದ್ದಾಳೆ.

ಎಸ್‌ಬಿಐ ಉದ್ಯೋಗಿಗಳಾದ ಜಗದೀಶ್ ಕೆಂಭಾವಿಮಠ–ಶ್ರೀದೇವಿ ದಂಪತಿಯ ದ್ವಿತೀಯ ಪುತ್ರಿ ದಿವ್ಯಶ್ರೀ. ಹೊಸಪೇಟೆಯ ನ್ಯಾಷನಲ್ ಸ್ಕೂಲ್‌ನಲ್ಲಿ ಐದನೇ ತರಗತಿ ವಿದ್ಯಾರ್ಥಿನಿ. ಹಿಂದೂಸ್ಥಾನಿ ಸಂಗೀತ, ಕರೋಕೆ ಸಂಗೀತ, ಭರತನಾಟ್ಯ, ಕರಾಟೆ, ಈಜು, ರ್‍ಯಾಂಪ್ ವಾಕ್‌ಗಳಲ್ಲಿ ತನ್ನ ಪ್ರತಿಭೆಯನ್ನು ತೋರಿಸುತ್ತಿರುವ ಈಕೆ ಸಿನಿಮಾ ಬಾಲನಟಿಯೂ ಹೌದು. 'ಜೋಗಿ ಕಾಮನ್ ಮ್ಯಾನ್' ಸಿನಿಮಾದಲ್ಲಿ ನಟಿಸುತ್ತಿದ್ದು, ಇನ್ನೊಂದು ಚಿತ್ರದಲ್ಲಿ ಸಹ ಅವಕಾಶ ಸಿಕ್ಕಿದೆ. ವೇದಿಕೆ ಏರಿಬಿಟ್ಟಳು ಎಂದರೆ ದಿವ್ಯಶ್ರೀಗೆ ಅಂಜಿಕೆಯೇ ಇಲ್ಲ. ಅದೆಂತಹ ಕಷ್ಟದ ಹಾಡನ್ನಾದರೂ ಲೀಲಾಜಾಲವಾಗಿ ಹಾಡಿಬಿಡುತ್ತಾಳೆ. ಕಳೆದ ಹಂಪಿ ಉತ್ಸವದಲ್ಲಿ ಬಸವಣ್ಣ ವೇದಿಕೆಯಲ್ಲಿ ಈಕೆ ಹಾಡಿದ 'ಜಟಕಾ ಕುದುರೆ ಹತ್ತಿ ಪ್ಯಾಟೆಗೋಗುಮಾ' ಹಾಡು ಪ್ರೇಕ್ಷಕರನ್ನು ಹುಚ್ಚೆದ್ದು ಕುಣಿಸಿಬಿಟ್ಟಿತ್ತು. ಈಕೆಯ ಸಂಗೀತ ಗುರುಗಳು ಜೋಗಿ ಪುಟ್ಟರಾಜ ಗವಾಯಿಗಳು, ಮಂಜುನಾಥ ನೀಲಗಿರಿ. ಮಲ್ಲಿ ಮಾಸ್ಟರ್ ಈಕೆಯ ನೃತ್ಯ ಗುರುಗಳು.

ಅದ್ವಿತೀಯ ಅದ್ವೈತ

• ರಾಜೇಂದ್ರ ಹೆಗಡೆ

ಶಿರಸಿ: ತನ್ನ ಐದನೇ ವಯಸ್ಸಿನಲ್ಲಿ ಲಿಂಬೂ ಸ್ಕೇಟಿಂಗ್ ಮಾಡುತ್ತಾ ಕಾರಿನ ನಾಲ್ಕು ಚಕ್ರಗಳ ಮಧ್ಯ ಹಾದು ಹೋಗಿ ತನ್ನ ಪ್ರತಿಭೆ ಪ್ರದರ್ಶಿಸುತ್ತಿದ್ದ ಶಿರಸಿಯ ಅದ್ವೈತ ಕುಡಾಳಕರ 12ನೇ ವಯಸ್ಸಿಗೆ ಬರುವಷ್ಟರಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಬುಕ್ ಆಫ್ ರೆಕಾರ್ಡ್ಸ್ ಪಟ್ಟಿ ಸೇರಿ, ಸಾಧನೆ ತೋರಿದ್ದಾನೆ.



ಶಿರಸಿಯ ಸೇಂಟ್ ಅಂಥೋನಿ ಇಂಗ್ಲಿಷ್ ಮಾಧ್ಯಮ ಶಾಲೆಯ 6ನೇ ತರಗತಿ ವಿದ್ಯಾರ್ಥಿ ಅದ್ವೈತ ತನ್ನ 8ನೇ ವಯಸ್ಸಿನಲ್ಲಿ ಕಾರವಾರದಿಂದ ಬೆಂಗಳೂರು ವಿಧಾನಸೌಧದವರೆಗೆ 630 ಕಿ.ಮೀ. ಸ್ಕೇಟಿಂಗ್ ಮೂಲಕ ಸಂಚರಿಸಿದ್ದಾನೆ. ಕಣ್ಣಿಗೆ ಬಟ್ಟೆ ಕಟ್ಟಿಕೊಂಡು 5 ಕಿ.ಮೀ. ಸ್ಕೇಟಿಂಗ್ ಪ್ರದರ್ಶನವೂ ನೀಡಿದ್ದಾನೆ. ಇದು 'ಇಂಟರ್‌ನ್ಯಾಷನಲ್ ಬುಕ್ ಆಫ್ ರೆಕಾರ್ಡ್ಸ್‌'ನಲ್ಲಿ ದಾಖಲಾಗಿದೆ. ಯಕ್ಷಗಾನದ ತರಬೇತಿ ಪಡೆದು ಬಾಲ ಕಲಾವಿದನಾಗಿ ಪ್ರದರ್ಶನವೂ ನೀಡಿದ್ದಾನೆ. ಇವುಗಳ ಜತೆಜತೆಗೆ ಚೆಸ್, ಚಿತ್ರಕಲೆ, ನೃತ್ಯ ಮತ್ತು ಹಾಗೂ ಯೋಗಾಸನದಲ್ಲಿ ಪ್ರತಿಭೆ ತೋರಿದ್ದಾನೆ. ಹಾರ್ಮೋನಿಯಂ ಅನ್ನು ಸಲಲಿತವಾಗಿ ನುಡಿಸುವ ಈತ ಹಾರ್ಮೋನಿಯಂ ಮೂಲಕ ತಡೆರಹಿತ 75 ಬಾರಿ ರಾಷ್ಟ್ರಗೀತೆ 'ಜನಗಣಮನ' ನುಡಿಸಿ, 'ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್' ಮತ್ತು 'ಏಷ್ಯನ್ ಬುಕ್ ಆಫ್ ರೆಕಾರ್ಡ್ಸ್‌'ಗೆ ಸೇರಿದ್ದಾನೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ದೇಶದ ರಾಜಧಾನಿ ನವದೆಹಲಿಯ ಕೆಂಪು ಕೋಟೆ ಬಳಿಯ ಮೆಟ್ರೊ ನಿಲ್ದಾಣದ ಗೇಟ್ ನಂ. 1ರಲ್ಲಿ ಇತ್ತೀಚೆಗೆ ಕಾರು ಸ್ಫೋಟಗೊಂಡ ನಂತರದಲ್ಲಿ ಭಾರಿ ಬೆಂಕಿಯಿಂದಾಗಿ ಉಂಟಾದ ಹೊಗೆ ಆಗಸಕ್ಕೆ ಆವರಿಸುತ್ತಿರುವ ಫೋಟೊ ಒಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದು ದೆಹಲಿ ಬಾಂಬ್ ಸ್ಫೋಟದ ದೃಶ್ಯ ಎಂದು ಪ್ರತಿಪಾದಿಸಲಾಗುತ್ತಿದೆ. ಆದರೆ, ಇದು ಸುಳ್ಳು.



ರಿವರ್ಸ್ ಇಮೇಜ್ ವಿಧಾನದಲ್ಲಿ ಚಿತ್ರವನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ 2024ರ ಸೆಪ್ಟೆಂಬರ್ 27ರಂದು ಆಸ್ಟ್ರೇಲಿಯಾದ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ ಪ್ರಕಟಿಸಿರುವ ವರದಿಯೊಂದು ಸಿಕ್ಕಿತು. ಆ ವರದಿಯಲ್ಲಿ ಈಗ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಲಾಗುತ್ತಿರುವ ಫೋಟೊ ಇತ್ತು. ವರದಿಯ ಪ್ರಕಾರ, ಆ ಫೋಟೊವು ಇಸ್ರೇಲ್–ಲೆಬನಾನ್ ಸಂಘರ್ಷಕ್ಕೆ ಸಂಬಂಧಿಸಿದ್ದು. 'ಲೆಬನಾನ್ ರಾಜಧಾನಿ ಬೈರೂತ್‌ನಲ್ಲಿ ಸ್ಥಳೀಯ ಕಾಲಮಾನ 6.20ರ ಸುಮಾರಿಗೆ ಭಾರಿ ಸ್ಫೋಟದ ಸದ್ದು ಕೇಳಿಸಿತು. ದಟ್ಟ ಹೊಗೆಯು ಆಕಾಶವನ್ನು ಆವರಿಸಿತ್ತು. ಐಡಿಎಫ್‌ನ ಈ ಹಿಂದಿನ ದಾಳಿಗಳು ಹಿಜ್ಬುಲ್ ಬಂಡುಕೋರ ಸಂಘಟನೆಯ ನಾಯಕರನ್ನು ಹತ್ಯೆ ಮಾಡುವ ಯತ್ನಗಳಾಗಿದ್ದವು' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇದಕ್ಕೂ ಮಿಗಿಲಾಗಿ, ಚಿತ್ರದ ಶೀರ್ಷಿಕೆಯಲ್ಲಿ 'ಬೈರೂತ್‌ನ ದಕ್ಷಿಣ ಹೊರವಲಯದಲ್ಲಿ ದಟ್ಟ ಹೊಗೆ ಆವರಿಸಿರುವುದು' ಎಂದು ಬರೆಯಲಾಗಿದೆ. ಮುಂದುವರಿದ ಭಾಗವಾಗಿ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಾಡಿದಾಗ ಇದೇ ಘಟನೆಗೆ ಸಂಬಂಧಿಸಿದ ಹಲವು ವರದಿಗಳು ಸಿಕ್ಕವು. ಬೈರೂತ್‌ನ ಮೇಲೆ ಕಳೆದ ವರ್ಷ ನಡೆದ ದಾಳಿಯ ಚಿತ್ರವನ್ನು ದೆಹಲಿ ಕಾರು ಸ್ಫೋಟಕ್ಕೆ ಸಂಬಂಧಿಸಿದ ಚಿತ್ರ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂಬುದಾಗಿ ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು



ರೇಣುಕಾ ನಿಡಗುಂದಿ

ನಗುವೇ ಚಿಕಿತ್ಸೆ

ಮುಖವನ್ನು ಹೃದಯದ ಕನ್ನಡಿ ಎನ್ನುತ್ತಾರೆ. ಒಳಗೇನಿದೆಯೋ ಅದನ್ನೇ ಪ್ರತಿಫಲಿಸುತ್ತದೆ ನಮ್ಮ ಮುಖ. ಕೆಲವರನ್ನು ಕಂಡಾಗ ಮನಸ್ಸಿಗೆ ಆಹ್ಲಾದವೆನಿಸುತ್ತದೆ. ಅಂತಹವರ ಮುಖದಲ್ಲಿ ಒಂದು ಸುಂದರವಾದ ನಗು ಯಾವಾಗಲೂ ಸ್ಥಾಪಿತಗೊಂಡಿರುತ್ತದೆ. ಕೆಲವರು ನಗುತ್ತಿದ್ದರೂ ಮುಖದ ಗಂಟುಗಳು ಬಿಚ್ಚಿಕೊಂಡಿರುವುದಿಲ್ಲ ಹಾಗೆ ನಗುತ್ತಾರೆ. ಕಾರಣ ಇಲ್ಲದೇ ಚಿಕ್ಕಪುಟ್ಟ ವಿಷಯಗಳಿಗೂ ನಗುವವರೂ ಉಂಟು. ಇತ್ತೀಚೆಗೆ ಒಂದು ಗುಂಪಿನಲ್ಲಿ ಪ್ರವಾಸಕ್ಕೆ ಹೋದಾಗ ಇದರ ಅನುಭವವಾಯಿತು. ಒಬ್ಬರಂತೂ ಇನ್ನೊಬ್ಬರಿಗೆ ಕಿರಿಕಿರಿಯೆನಿಸುವಷ್ಟು ಜೋರಾಗಿ ನಗುತ್ತಿದ್ದರು. ಇನ್ನಾರೋ ದೊಡ್ಡ ದನಿಯಲ್ಲಿ ಜೋಕ್ ಮಾಡುವುದನ್ನು ನೋಡಿ ಇವರೆಲ್ಲ ಹೇಗೆ ಇಷ್ಟು ನಗುತ್ತಾರೆ, ಇಷ್ಟು ನಗೆ ಹೇಗೆ ಬರುತ್ತದೆ, ಎಷ್ಟು ಗಲಾಟೆಯಪ್ಪಾ ಇವರದು ಎನಿಸಿ ಶಾಂತವಾದ ವಾತಾವರಣ ಸಿಗಬಾರದೇ ಎಂದು ಕೆಲವರಿಗೆ ಎನಿಸುತ್ತಿತ್ತು.

ಆಗ ಇನ್ನೊಬ್ಬ ಸಹಪ್ರವಾಸಿಗರು ಹೇಳಿದರು: ನಿಮಗೆ ಗೊತ್ತಾ ಆಕೆ ಅಷ್ಟು ದೊಡ್ಡದಾಗಿ ನಗುತ್ತ, ಅಂತಾಕ್ಷರಿ ಹಾಡುತ್ತಿದ್ದಾರಲ್ಲ, ವಾಸ್ತವದಲ್ಲಿ ಅವರಿಗೆ ಮೈತುಂಬ ಸಮಸ್ಯೆಗಳಿವೆ. ಆರೋಗ್ಯ ಸಮಸ್ಯೆ, ಕೌಟುಂಬಿಕ ಸಮಸ್ಯೆ ಹೀಗೆ ನೂರಾರು. ಇಲ್ಲಿ ಹೀಗೆ ಖುಷಿಯಾಗಿರುವ ಆಕೆ ಮನೆಯಲ್ಲಿ ಒಬ್ಬ ಕೈದಿಯಂತೆ ಬದುಕುತ್ತಾಳೆ. ಬಂಗಲೆ, ಗಾಡಿಗಳು ಹಣ ಎಲ್ಲ ಇದ್ದರೂ ಆಕೆಗೆ ಸುಖವಿಲ್ಲ. ಇನ್ನಾರಿಗೋ ನಡೆಯಲೂ ಆಗದಂಥ ಮಂಡಿನೋವು. ಮತ್ತೊಬ್ಬರಿಗೆ ಕೈತುಂಬ ಸಾಲ. ದುಡಿಯದ ಮಗನೊಂದಿಗೆ ಬಾಳಲಾಗದು ಎಂದು ಸೊಸೆ ಮನೆ ತೊರೆದಿದ್ದಾಳೆ. ಆದರೆ ಎಲ್ಲ ಮರೆತು ಅವರೆಲ್ಲ ಮನಸ್ಸು ಬಿಚ್ಚಿ ನಗುತ್ತಿದ್ದಾರಲ್ಲ, ಅದೇ ಅವರ ಸದ್ಯದ ಮೆಡಿಸಿನ್. ನಗುವೇ ಚಿಕಿತ್ಸೆ.

'ನಗುವು ಸಹಜದ ಧರ್ಮ ನಗಿಸುವುದು ಪರಧರ್ಮ, ನಗುವ ಕೇಳುತ ನಗುವುದತಿಶಯದ ಧರ್ಮ'; ನಗುವುದು ಮನುಷ್ಯನ ಸಹಜವಾದ ಧರ್ಮ, ನಗಿಸುವುದು ನಾವು ಆಚರಿಸಬೇಕಾದ ಪರಧರ್ಮ, ಇನ್ನೊಬ್ಬರ ನಗುವನ್ನು ಕೇಳುತ್ತಾ ನಾವೂ ನಗುವುದು ಅತಿಶಯದ ಧರ್ಮ ಎನ್ನುತ್ತಾರೆ ಡಿ.ವಿ.ಗುಂಡಪ್ಪನವರು. ಆದರೆ ಬದುಕಿನ ಕಷ್ಟ ಕಾರ್ಪಣ್ಯಗಳಲ್ಲಿ ಬೆಂದು ಬಸವಳಿದು ನಗುವುದನ್ನೇ ಮರೆತವರಿದ್ದಾರೆ. ಬೆಟ್ಟದಂತಹ ಕಷ್ಟ ಕಾರ್ಪಣ್ಯಗಳಲ್ಲಿಯೂ ಕೂಡ ಮುಕ್ತವಾಗಿ ನಗುತ್ತ, ನಗಿಸುತ್ತ ಇರುವ ನಾಲ್ಕು ದಿನಗಳ ಬದುಕನ್ನು ಅರ್ಥಪೂರ್ಣವಾಗಿ ಬದುಕಿಬಿಡುವವರೂ ಇದ್ದಾರೆ. ಸುಮ್ಮನೇ ಗೋಳಾಡುವುದರಲ್ಲಿ ಯಾವ ಅರ್ಥವಿದೆ?

ಓಶೋ ಹೇಳುತ್ತಾರೆ: 'ಪ್ರಕೃತಿ ಮಾನವನಿಗಿತ್ತ ಔಷಧಿಗಳಲ್ಲೆಲ್ಲಾ ಅತ್ಯಂತ ಆಳಕ್ಕೆ ತಲುಪಬಲ್ಲ ಮದ್ದು ನಗೆ. ಅನಾರೋಗ್ಯದಲ್ಲೂ ನೀವು ನಗಬಲ್ಲಿರಾದರೆ ನೀವು ಬಲು ಬೇಗನೆ ಆರೋಗ್ಯವನ್ನು ಮರಳಿ ಪಡೆಯುವಿರಿ. ಆರೋಗ್ಯವಂತರಾಗಿದ್ದೂ ನೀವು ನಗದೇ ಇದ್ದರೆ ಬಲುಬೇಗನೆ ನೀವು ಆರೋಗ್ಯವನ್ನು ಕಳೆದುಕೊಂಡು ರೋಗಿಯಾಗುವಿರಿ. ನಗು ನಿಮ್ಮ ಆಂತರಿಕ ಸ್ರೋತದಿಂದ ಊರ್ಜೆಯನ್ನು ಮೇಲ್ಮೈಗೆ ತರುತ್ತದೆ. ಊರ್ಜೆ, ನಗೆಯನ್ನು ನೆರಳಿನಂತೆ ಹಿಂಬಾಲಿಸುತ್ತದೆ'.

'ನೀವಿದನ್ನು ಗಮನಿಸಿದ್ದೀರಾ? ನೀವು ನಕ್ಕಾಗ, ನಗೆಯ ಆ ಕೆಲವು ಕ್ಷಣಗಳ ಕಾಲ ನೀವು ಆಳವಾದ ಧ್ಯಾನದ ಸ್ಥಿತಿಯಲ್ಲಿರುತ್ತೀರಿ. ನಗುವಾಗ ಯಾವ ಆಲೋಚನೆಯೂ ಮುತ್ತುವುದಿಲ್ಲ. ನಗುತ್ತಿರುವಾಗ ಆಲೋಚನೆ ಅಸಾಧ್ಯ. ಇವೆರಡೂ ತದ್ವಿರುದ್ಧ ಧ್ರುವಗಳು. ನೀವು ನಗಬಹುದು ಇಲ್ಲವೇ ಆಲೋಚಿಸಬಹುದು. ನೀವು ತುಂಬು ಹೃದಯದಿಂದ ನಕ್ಕಾಗ ಎಲ್ಲ ಆಲೋಚನೆಗಳೂ ಸ್ತಬ್ಧವಾಗುತ್ತವೆ. ನಗುವಾಗ ನೀವು ಆಲೋಚಿಸುತ್ತಿದ್ದಲ್ಲಿ ಆ ನಗು ಬರೀ ತೋರಿಕೆಯ, ಕೃತಕ, ವಿಕೃತ ನಗೆಯಾಗಿರುತ್ತದೆ'. ❖

ಗುಂಡಣ್ಣ




ಪದಬಂಧ 6223

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮರುನಾಮಕರಣವಾಗಿರುವ ದೆಹಲಿಯ ರಾಜಪಥ್ (5)
2.ಓದು ಬರಹ ಬಲ್ಲವನು (3)
4.ಕಮ್ಮಾರನ ಕೈ (2)
5.ಕುಮಾರವ್ಯಾಸ ಪಂಪ ಲಕ್ಷ್ಮೀಶ ಕವಿಗಳ ಊರು (3)
7.ಜವಾನ ನೋಡುತ್ತಿರುವ ಮಂದಿ (2)
8.ಸಾಯುವ ಸಮಯದಲ್ಲಿ ಉಂಟಾಗುವು ನೋವು (6)
10.ಹಂತಕನು ಏರಿದ ಮೆಟ್ಟಿಲು (2)
12.ನೋಡಲು ಸಹಾಯಕವಾಗುವ ಅಂಗ (2)
13.12ನೇ ಶತಮಾನದಲ್ಲಿ ನಡೆದ ಕಲ್ಯಾಣ ಕ್ರಾಂತಿಯ ಪಟ್ಟಣ ಇಂದು ಬೀದರ ಜಿಲ್ಲೆಯ ತಾಲ್ಲೂಕು (6)
16.ಕುಟಿಲನ ವಂಶ! (2)
17.ಪದ ಹೇಳಿ ಬಹುಮಾನ ಪಡೆದಿರುವ ಬಿಲ್ಲೆ (3)
19.ಯವಜನ ನೋಡಿರುವ ಕಾಡು (2)
20.ನಮ್ಮ ರಾಷ್ಟ್ರ ಪಕ್ಷಿ (3)
21.ಹಳೆಯದನ್ನು ಹೊಸದು ಮಾಡುವಿಕೆ (5)

ಮೇಲಿಂದ ಕೆಳಕ್ಕೆ
1.ಭಕ್ತರು ತಲೆಯ ಮೇಲೆ ಕಲಶವನ್ನು ಹೊತ್ತು ನಡೆಸುವ ರಸ್ತೆಯ ಹೆಸರು (3)
2.ಸಾಕ್ಷರನಲ್ಲಿರುವ ತಿರುಳು! (2)
3.ಆನೆಯ ದಾಡೆ (3)
4.ಕಬ್ಬಿಣದ ಭಾರೀ ಪೆಟ್ಟಿಗೆಯಿಲ್ಲಿ ಉಲ್ಟಾ ಆಗಿದೆ (3)
6.ತಿರುಗಿ ನಿಂತಿರುವ ಪುತ್ರ (2)
7.ಟಕ ಟಕ ಸದ್ದು ಮಾಡುವ ಕುದುರೆ ಬಂಡಿ (3)
9.ಜ್ಞಾನೇಂದ್ರಿಯವಿಲ್ಲಿ ಉಲ್ಟಾ ಆಗಿದೆ (3)
11.ಬಲ ಉಳ್ಳವ ಬಾರಿಸಿದ ಚರ್ಮವಾದ್ಯ (3)
14.ವನದಲ್ಲಿರುವ ಉಡುಗೆ ಕಾಣುತ್ತಿದೆಯೇ? (3)
15.ಪಯಣದ ಸಮಯದಲ್ಲಿ ಕಟ್ಟಿದ ಬಾಜಿಯಿಲ್ಲಿ ತಿರುವುಮುರುವಾಗಿದೆ (2)
16.ಯಾವ ವಸ್ತುವೂ ಸಿಗದ ಹಳ್ಳಿ (3)
18.ಕಣದಲ್ಲಿ ನಡೆದ ಮದುವೆ (3)
19.ವಠಾರದಲ್ಲಿರುವ ಮದುವೆ ಗಂಡು (2)



6222ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಬೆಪ್ಪುತಕ್ಕಡಿ 4.ಸದರ
5.ಉಬ್ಧಕ 7.ಗುರಿ 10.ಕಾಸೆ
11.ಪೇಲವ 12.ಬಿಂಕ 13.ನಗ
15.ನಡುಕ 18.ಮಡಿಕೆ
19.ಪಿತೃಭೋಜನ

ಮೇಲಿಂದ ಕೆಳಕ್ಕೆ:
1.ಕುತರ್ಕ 2.ಮಡಿಲು
3.ಬೆರಗು 4.ಸಮಕಾಲೀನ
6.ಕರ್ಣಾಕರ್ಣಿಕೆ 8.ರಿಪೇರಿ
9.ಭವನ 14.ಗಮನ
16.ಕಪಿತ್ಥ 17.ವೈಭೋಗ

ಸುಡೊಕು 6607

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4		6			8	5		1
	5		2	1			7	
1		2			5	3		8
6		9				8		
			5	4	6		1	
3		5				2		7
		4				1		2
			1	5				9
9		1			2	7		

6606 ಸುಡೊಕು

8	3	7	1	9	2	5	6	4
6	1	5	7	3	4	8	2	9
2	9	4	5	6	8	1	3	7
7	6	8	9	5	3	2	4	1
5	2	3	6	4	1	7	9	8
9	4	1	8	2	7	3	5	6
3	7	2	4	8	6	9	1	5
1	5	6	2	7	9	4	8	3
4	8	9	3	1	5	6	7	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

14 ನವೆಂಬರ್ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣದಶಮಿ ಗಂ. 24-50 ನಕ್ಷತ್ರ: ಪೂರ್ವಫಲ್ಗುಣಿ ಗಂ 21-21 ಯೋಗ: ಐಂದ್ರ ಗಂ. 6-27 ಕರಣ: ವಣಿಜ ಗಂ. 12-08 ತುಲಾ ಮಾಸದ 28 ನೇ ದಿನ. ಮಳೆ ನಕ್ಷತ್ರ : ವಿಶಾಖ 3 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00 ಸೂರ್ಯೋದಯ : 06-33 ಸೂರ್ಯಾಸ್ತ : 05-57 ಮುಸ್ಲಿಂ ದಿನಾಂಕ : 22 ಜುಮಾದುಲ್ಲಾವಲ್ ಅದೃಷ್ಟ ಸಂಖ್ಯೆ : 8, 12

ಮೇಷ: ಹಲವು ವಾದ ವಿವಾದಗಳಿಂದ ಸಂಬಂಧದಲ್ಲಿ ಉಂಟಾದ ಒಡಕುಗಳು ಸಮಾಧಾನದ ಮಾತುಗಳಿಂದಾಗಿ ಪರಿಹಾರವಾಗುತ್ತವೆ. ಮನೆಯಲ್ಲಿ ನಡೆಯುವ ಕಾರ್ಯಕ್ರಮಕ್ಕೆ ನಿರೀಕ್ಷೆಗಿಂತ ಹೆಚ್ಚಿನ ಜನರು ಬರಲಿದ್ದಾರೆ.

ವೃಷಭ: ದೇಶಭಕ್ತಿಯ ಹೆಸರಿನಲ್ಲಿ ನಡೆಸಿರುವ ಹಾಗೂ ನಡೆಸುವ ಕಾರ್ಯಗಳು ಜನಮಾನ್ಯವಾಗುತ್ತವೆ. ಗುಂಪು ಚಟುವಟಿಕೆಯಲ್ಲಿ ಮುಂದಾಳತ್ವವು ನಿಮ್ಮದಾಗಲಿದೆ. ಸಾಂಸಾರಿಕ ಜವಾಬ್ದಾರಿಗಳು ಹೆಚ್ಚಲಿವೆ.

ಮಿಥುನ: ಸೂರ್ಯೋದಯದೊಳಗೆ ಮನಸಂಕಲ್ಪ ನೆರವೇರಿಸಿಕೊಳ್ಳಲು ಸರ್ವ-ಪ್ರಯತ್ನ ನಡೆಸುವಿರಿ. ಧನ ಆದಾಯಕ್ಕೆ ಯಾವುದೇ ರೀತಿಯ ಅಡ್ಡಿ ಆತಂಕಗಳು ಇರುವುದಿಲ್ಲ. ಮಾರ್ಗದರ್ಶಕರ ಸಲಹೆ ಪಡೆದು ಪಾಲಿಸಿರಿ.

ಕರ್ಕಾಟಕ: ದಾನ-ಧರ್ಮ ಸ್ವಭಾವ ದುರುಪಯೋಗಪಡಿಸಿಕೊಳ್ಳದಂತೆ ಜಾಗ್ರತೆ ವಹಿಸಿ. ಗೃಹ ಉತ್ಪಾದಕ ವಸ್ತುಗಳ ಮಾರಾಟದಲ್ಲಿ ಲಾಭವಾಗುವ ಸಾಧ್ಯತೆಗಳಿವೆ. ತಂಗಿಯರ ವಿದ್ಯಾಭ್ಯಾಸದಲ್ಲಿ ಮೇಲ್ವಿಚಾರಣೆ ನಡೆಸಿ.

ಸಿಂಹ: ಸ್ಥಿರ ಆಸ್ತಿಯನ್ನು ಸಂಪಾದಿಸುವಲ್ಲಿ ನಿರ್ಣಯದಲ್ಲಿ ದೃಢವಾಗಿ ನಿಲ್ಲುವಂತಹ ತೀರ್ಮಾನವನ್ನು ಮಾಡಿಕೊಳ್ಳಿರಿ. ಸಂಬಂಧಿಗಳಲ್ಲಿ ಆದರ ಭಾವದಿಂದ ನಡೆದುಕೊಳ್ಳುವಿರಿ. ಪ್ರಯಾಣಕ್ಕೆ ಹೆಚ್ಚು ಧನ ವ್ಯಯ ಆಗುವುದು.

ಕನ್ಯಾ: ಮನೆಯಲ್ಲಿ ಸುಖ-ಶಾಂತಿ ಸಮೃದ್ಧಿಯಾಗಿದ್ದರೂ ಮನದಲ್ಲಿ ಮಕ್ಕಳ ವಿಚಾರವಾಗಿ ಭಯದ ಭೀತಿ ತೋರಿಬಂದೀತು. ನೆರೆ ಮನೆಯವರ ಶುಭ ಸಮಾರಂಭಕ್ಕೆ ಹೋಗುವ ಸಲುವಾಗಿ ಕಿರು ಪ್ರಯಾಣ ಇರುವುದು.

ತುಲಾ: ವ್ಯವಹಾರದಲ್ಲಿನ ಹಿಂದಿನ ನಿರ್ಧಾರಗಳು ಒಳಿತಿಗಾಗಿ ಬದಲಾಗುವ ಸಂಭವವಿದೆ. ಕಳೆದು ಹೋದ ವಸ್ತುವನ್ನು ಸಮಾಧಾನದ ಶೋಧನದಿಂದಾಗಿ ಪಡೆದುಕೊಳ್ಳುವಿರಿ. ಪ್ರವಾಸ ಯೋಜನೆಗಳು ಕಾರ್ಯರೂಪಕ್ಕೆ ಬರಲಿವೆ.

ವೃಶ್ಚಿಕ: ಕಟ್ಟಡ ನಿರ್ಮಾಣದ ಕಾರ್ಮಿಕರಿಗೆ ಸಂಪಾದನೆಯ ಜತೆಯಲ್ಲಿ ಉಡುಗೊರೆ ಸಿಗುವ ಯೋಗ. ಮುಗ್ಧವಾದ ಮಕ್ಕಳ ಆಟೋಪಚಾರವನ್ನು ಕಂಡು ಹರ್ಷಗೊಳ್ಳುವಿರಿ. ಧಾರ್ಮಿಕ ಕೆಲಸ ಕಾರ್ಯಗಳಲ್ಲಿ ಪಾಲ್ಗೊಳ್ಳುವಿರಿ.

ಧನು: ಆರೋಗ್ಯದ ಮೇಲೆ ದುಷ್ಪರಿಣಾಮವನ್ನು ಬೀರುವ ಆಹಾರವನ್ನು ಸೇವಿಸದಿರಿ. ವೃತ್ತಿ ಜೀವನಕ್ಕೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಳ್ಳುವಾಗ ಗೊಂದಲ ಉಂಟಾಗಬಹುದು.

ಮಕರ: ಉದ್ಯೋಗದ ಬದುಕಿನಲ್ಲಿ ತಪ್ಪಿ ಹೋಗಿದ್ದ ಅವಕಾಶಗಳು ದೊರೆಯಲಿವೆ. ಬಹುಜನರ ಒಡನಾಟದಿಂದ ವಿಶ್ವಾಸ, ಪ್ರೀತಿ ಪಡೆಯುವಂತಾ-ಗುವುದು. ಸಹಿಯನ್ನು ನಕಲು ಪಡಿಸುವವರಿದ್ದಾರೆ. ಎಚ್ಚರವಾಗಿರಿ.

ಕುಂಭ: ಮನೆಯಲ್ಲಿನ ಮಂಗಳ ಕಾರ್ಯಕ್ರಮಕ್ಕೆ ಆಪ್ತರ ನೆರವು ದೊರೆಯದೆ ಖೇದ ಉಂಟಾದರೂ ಹಠದಿಂದ ಉತ್ತಮವಾಗಿ ಮಾಡುವಿರಿ. ವಿದ್ಯಾರ್ಥಿಗಳಿಗೆ ಸ್ವಪ್ರಯತ್ನದ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುತ್ತದೆ.

ಮೀನ: ಗ್ರಾಮ ಪಂಚಾಯ್ತಿಯಂಥ ಇಲಾಖೆಯ ಅಧಿಕಾರಿಗಳಿಗೆ ಕಾರ್ಯಭಾರ ಹೊರಬೇಕಾಗುವುದು. ಸ್ವಪ್ನಸದೃಶ್ಯವಾದ ಘಟನೆಗಳನ್ನು ನೋಡುವ ಸಾಧ್ಯತೆ ಇದೆ. ಕೃಷಿಕರಿಗೆ ಕೃಷಿಯಲ್ಲಿ ಉತ್ಸಾಹ ಹೆಚ್ಚುವಂತಾಗಲಿದೆ.

ಷೇರುಪೇಟೆ ವಹಿವಾಟು: 84,466 ಹಿಂದಿನ ಅಂತ್ಯ; 12; 84,478 ಇಂದಿನ ಅಂತ್ಯ

ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	25,875
ಇಂದಿನ ಅಂತ್ಯ	25,879
ದಿನದ ಗಳಿಕೆ	26,010
	4

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹640
	12 ಕ್ಕೆ	₹84
ಮೈಸೂರು	100 ಕ್ಕೆ	₹643

ಎನ್.ಆರ್.ಪುರ ರಬ್ಬರ್ (ಪ್ರತಿ ಕೆಜಿಗೆ)	
ಆರ್‌ಎಸ್‌ಎಸ್-4	₹183
ಆರ್‌ಎಸ್‌ಎಸ್-5	₹178
ಗುಡ್ ಲಾಟ್	₹165

ರಾಮನಗರ ರೇಷ್ಮೆಗೂಡು	
ಮಿಶ್ರತಳಿ (ಪ್ರ.ಕೆ)	₹575-730
ದ್ವಿತಳಿ (ಪ್ರ.ಕೆ)	₹500-847

ಮುದ್ರಮನೆ ಕಾಫಿ	
ಎಬಿ	₹28250
ಎಸಿ	₹15540
ಆರ್‌ಎಬಿ	₹18900
ಆರ್‌ಸಿ	₹10640

ಕೊಬ್ಬರಿ ಧಾರಣೆ	
ಅರಸೀಕೆರೆ	₹17000-22000
ತಿಪಟೂರು	₹26100-27800

ಜಿಎಸ್‌ಟಿ ದರ ಇಳಿಕೆ ಪ್ರಯೋಜನ ಮುಂದೆಯೂ ಇರಲಿದೆ: ಎಸ್‌ಬಿಐ

ನವದೆಹಲಿ (ಪಿಟಿಐ): ಚಿಲ್ಲರೆ ಹಣದುಬ್ಬರ ಪ್ರಮಾಣವು ಅಕ್ಟೋಬರ್‌ನಲ್ಲಿ ಶೇಕಡ 0.85ರಷ್ಟು ತಗ್ಗುವಂತೆ ಜಿಎಸ್‌ಟಿ ದರ ಇಳಿಕೆಯು ಮಾಡಿದ್ದು, ಹಣದುಬ್ಬರದ ಇಳಿಕೆಯು ಮುಂದಿನ ದಿನಗಳಲ್ಲಿಯೂ ಕಾಣಲಿದೆ ಎಂದು ತಜ್ಞರು ಹೇಳಿದ್ದಾರೆ.

ಅಕ್ಟೋಬರ್‌ನಲ್ಲಿ ಹಣದುಬ್ಬರ ಪ್ರಮಾಣವು ಶೇಕಡ 0.25ರಷ್ಟು ಆಗಿದೆ. ಇದು 12 ವರ್ಷಗಳ ಕನಿಷ್ಠ ಮಟ್ಟ.

ಚಿನ್ನದ ಬೆಲೆ ಹೆಚ್ಚಳದ ಕಾರಣದಿಂದಾಗಿ ವೈಯಕ್ತಿಕ ಆರೈಕೆ ವರ್ಗದ ಉತ್ಪನ್ನಗಳ ಹಣದುಬ್ಬರ ಪ್ರಮಾಣವು ಶೇ 57.8ರಷ್ಟು ಆಗಿದೆ. ಚಿನ್ನವನ್ನು ಹೊರಗಿರಿಸಿ ಪರಿಶೀಲಿಸಿದರೆ ಚಿಲ್ಲರೆ ಹಣದುಬ್ಬರ ಪ್ರಮಾಣವು ಅಕ್ಟೋಬರ್‌ನಲ್ಲಿ ಶೇಕಡ (–)0.57ರಷ್ಟು ಆಗುತ್ತದೆ ಎಂದು ಎಸ್‌ಬಿಐ ರಿಸರ್ಚ್ ಹೇಳಿದೆ.

‘ಚಿನ್ನವನ್ನು ಹೊರತುಪಡಿಸಿದರೆ, ಚಿಲ್ಲರೆ ಹಣದುಬ್ಬರ ಪ್ರಮಾಣವು ಮುಂದಿನ ಎರಡು ತಿಂಗಳವರೆಗೆ ನಕಾರಾತ್ಮಕ ಮಟ್ಟದಲ್ಲಿ ಇರುತ್ತದೆ ಎಂಬುದು ನಮ್ಮ ನಂಬಿಕೆ’ ಎಂದು ಎಸ್‌ಬಿಐ ಎಕೊವ್ರ್ಯಾಪ್ ವರದಿಯು ಹೇಳಿದೆ.

ಸೆಪ್ಟೆಂಬರ್ 22ರಂದು ಜಾರಿಗೆ ಬಂದ ಜಿಎಸ್‌ಟಿ ದರ ಪರಿಷ್ಕರಣೆಯು ಅಕ್ಟೋಬರ್ ತಿಂಗಳ ಚಿಲ್ಲರೆ ಹಣದುಬ್ಬರ ಪ್ರಮಾಣ ಇಳಿಕೆಗೆ ನೆರವಾಗಿದೆ.

‘ಜಿಎಸ್‌ಟಿ ಕಾರಣದಿಂದಾಗಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 0.65ರಿಂದ ಶೇ 0.75ರವರೆಗೆ ಇಳಿಕೆ ಆಗಬಹುದು ಎಂದು ನಾವು ಮೊದಲು ಅಂದಾಜು ಮಾಡಿದ್ದೆವು. ಆದರೆ ಜಿಎಸ್‌ಟಿ ಕಾರಣದಿಂದಾಗಿ ಆಗಿರುವ ಇಳಿಕೆಯು ಶೇ 0.85ರಷ್ಟಿದೆ’ ಎಂದು ವರದಿಯಲ್ಲಿ ಹೇಳಲಾಗಿದೆ.

ಜಿಎಸ್‌ಟಿ ದರ ಇಳಿಕೆಯ ಪ್ರಯೋಜನವು ಪೂರ್ಣ ಪ್ರಮಾಣದಲ್ಲಿ ಕಾಣಿಸಿದ್ದು ಅಕ್ಟೋಬರ್‌ನಲ್ಲಿ. ದರ ಪರಿಷ್ಕರಣೆಯ ಪ್ರಯೋಜನವು ಮುಂದಿನ ದಿನಗಳಲ್ಲಿಯೂ ಇರುವ ನಿರೀಕ್ಷೆ ಇದೆ ಎಂದು ಕ್ರಿಸಿಲ್ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ದೀಪ್ತಿ ದೇಶಪಾಂಡೆ ಹೇಳಿದ್ದಾರೆ.

ಡಿಸೆಂಬರ್‌ನಲ್ಲಿ ನಡೆಯಲಿರುವ ಹಣಕಾಸು ನೀತಿ ಸಮಿತಿಯ ಸಭೆಯಲ್ಲಿ ಆರ್‌ಬಿಐ ರೆಪೊ ದರ ಇಳಿಕೆಯ ತೀರ್ಮಾನ ತೆಗೆದುಕೊಳ್ಳಬಹುದು ಎಂದು ಅವರು ಅಂದಾಜಿಸಿದ್ದಾರೆ.

‘ಬಡ್ಡಿ ದರ ಕಡಿಮೆ ಮಟ್ಟದಲ್ಲಿರಲಿ’

ಕಿರು ಹಣಕಾಸು ಸಂಸ್ಥೆಗಳಿಗೆ ಹಣಕಾಸು ಸೇವಾ ಇಲಾಖೆ ಕಾರ್ಯದರ್ಶಿ ಸಲಹೆ

ನವದೆಹಲಿ (ಪಿಟಿಐ): ಹಣಕಾಸಿನ ಒಳಗೊಳ್ಳುವಿಕೆಯನ್ನು ಹೆಚ್ಚಿಸಲು ಕಿರು ಹಣಕಾಸು ಸಂಸ್ಥೆಗಳು ತಮ್ಮ ಬಡ್ಡಿ ದರವನ್ನು ಕೈಗೆಟಕುವ ಮಟ್ಟದಲ್ಲಿ ಇರಿಸಬೇಕು ಎಂದು ಕೇಂದ್ರ ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ ಎಂ. ನಾಗರಾಜು ಹೇಳಿದ್ದಾರೆ.

‘ಕೆಲವು ಕಿರು ಹಣಕಾಸು ಸಂಸ್ಥೆಗಳು ಅಸಹನೀಯ ಮಟ್ಟದಲ್ಲಿ ಬಡ್ಡಿ ದರವನ್ನು ನಿಗದಿ ಮಾಡಿರುವುದನ್ನು ನಾನು ನೋಡಿದ್ದೇನೆ. ಇದಕ್ಕೆ ಕಾರಣ ಆ ಕಿರು ಹಣಕಾಸು ಸಂಸ್ಥೆಗಳಲ್ಲಿನ ಅಸಾಮರ್ಥ್ಯ’ ಎಂದು ನಾಗರಾಜು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ಕಿರು ಹಣಕಾಸು ಸಂಸ್ಥೆಗಳು ವೆಚ್ಚಗಳಲ್ಲಿ ದಕ್ಷತೆಯನ್ನು, ಹೆಚ್ಚಿನ ಉತ್ಪಾದಕತೆಯನ್ನು ಸಾಧಿಸಲು ವಿಫಲವಾದ ಕಾರಣಕ್ಕೆ ಹೆಚ್ಚಿನ ಬಡ್ಡಿ ದರ ವಸೂಲಿ ಮಾಡುತ್ತಿರಬಹುದು ಎಂದು ಅವರು ಹೇಳಿದ್ದಾರೆ.

ಸಂಸ್ಥೆಗಳು ವೆಚ್ಚಗಳಲ್ಲಿ ದಕ್ಷತೆಯನ್ನು ಸಾಧಿಸಬೇಕು, ಹೆಚ್ಚಿನ ಉತ್ಪಾದಕತೆ ಸಾಧಿಸಬೇಕು. ಅದರ ಮೂಲಕ ಸಾಲಗಾರರಿಗೆ ಕಡಿಮೆ ಬಡ್ಡಿ ದರಕ್ಕೆ ಸಾಲ ನೀಡುವಂತೆ ಆಗಬೇಕು ಎಂದು ನಾಗರಾಜು ಕಿವಿಮಾತು ಹೇಳಿದ್ದಾರೆ.

ಹಣದ ಅಗತ್ಯ ತೀವ್ರವಾಗಿ ಇರುವವರು ಹೆಚ್ಚಿನ ಬಡ್ಡಿ ದರಕ್ಕೆ ಸಾಲ ಪಡೆಯಬಹುದು. ಆದರೆ ಅವರಿಗೆ ಆ ಸಾಲವನ್ನು ಮರುಪಾವತಿಸಲು ಆಗುವುದಿಲ್ಲ. ಇದರ ಪರಿಣಾಮವು ಹಣಕಾಸು ವ್ಯವಸ್ಥೆಯ ಮೇಲೆ ಆಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಕಿರು ಹಣಕಾಸು ಸಂಸ್ಥೆಗಳು ದೇಶದಲ್ಲಿ ಹಣಕಾಸಿನ ಒಳಗೊಳ್ಳುವಿಕೆಯನ್ನು ಸಾಧಿಸಲು ಬಹಳ ಮುಖ್ಯ. ಈ ಸಂಸ್ಥೆಗಳು ಮನೆಬಾಗಿಲಿಗೆ ತೆರಳಿ ಸಾಲ ನೀಡುವ ಕಾರಣದಿಂದಾಗಿ ಇವು ಮಹಿಳೆಯರ ಸಬಲೀಕರಣಕ್ಕೂ ಬಹಳ ಅಗತ್ಯ ಎಂದು ಅವರು ಹೇಳಿದ್ದಾರೆ.

‘ಹಣಕಾಸಿನ ಒಳಗೊಳ್ಳುವಿಕೆಯ ವ್ಯಾಪ್ತಿಗೆ ನಾವು ಇನ್ನೂ ಅಂದಾಜು 35 ಕೋಟಿಯಷ್ಟು ಯುವಕರನ್ನು ತರಬೇಕಿದೆ. ಸರ್ಕಾರ ರೂಪಿಸಿರುವ ಯೋಜನೆಗಳು ಹಲವಿದ್ದರೂ, ದೇಶದ ಜನಸಂಖ್ಯೆಯಲ್ಲಿ ದೊಡ್ಡ ವರ್ಗವೊಂದು ಹಣಕಾಸಿನ ಒಳಗೊಳ್ಳುವಿಕೆಯ ತೆಕ್ಕೆಗೆ ಬಂದಿಲ್ಲ. ಈ ಬಗ್ಗೆ ಕಿರು ಹಣಕಾಸು ಸಂಸ್ಥೆಗಳು ಆದ್ಯತೆ ನೀಡಬೇಕು’ ಎಂದು ಅವರು ಕರೆ ನೀಡಿದ್ದಾರೆ.

ಗ್ರಾಮೀಣ ಪ್ರದೇಶದವರಿಗೆ ಪ್ರತ್ಯೇಕ ಕ್ರೆಡಿಟ್ ಅಂಕ: ನಬಾರ್ಡ್

ಕಾರ್ಯಕ್ರಮದಲ್ಲಿ ಮಾತನಾಡಿದ ನಬಾರ್ಡ್ ಅಧ್ಯಕ್ಷ ಶಾಜಿ ಕೆ.ವಿ., ‘ನಾವು ಸ್ವಸಹಾಯ ಸಂಘಗಳ ವ್ಯವಸ್ಥೆಯ ಡಿಜಿಟಲೀಕರಣದಲ್ಲಿ ತೊಡಗಿದ್ದೇವೆ. ಗ್ರಾಮೀಣ ಪ್ರದೇಶದವರಿಗಾಗಿ ಕ್ರೆಡಿಟ್ ಅಂಕ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುತ್ತಿದ್ದೇವೆ’ ಎಂದು ಹೇಳಿದ್ದಾರೆ.

‘ಕಡುಬಡವರ ಜೊತೆ ಕೆಲಸ ಮಾಡುತ್ತಿರುವ ಕೆಲವು ಕಿರು ಹಣಕಾಸು ಸಂಸ್ಥೆಗಳ ಜೊತೆ ಸೇರಿ ನಾವು ಗ್ರಾಮೀಣ ಪ್ರದೇಶದವರಿಗೆ ನೀಡುವ ಕ್ರೆಡಿಟ್ ಅಂಕದ ವಿಚಾರವಾಗಿ ಒಂದಿಷ್ಟು ಪ್ರಾಯೋಗಿಕ ಕೆಲಸ ಮಾಡುತ್ತಿದ್ದೇವೆ’ ಎಂದರು.

ಕೇಂದ್ರದ 2025–26ನೇ ಸಾಲಿನ ಬಜೆಟ್‌ನಲ್ಲಿ ‘ಗ್ರಾಮೀಣ ಕ್ರೆಡಿಟ್ ಅಂಕ’ದ ಬಗ್ಗೆ ಪ್ರಸ್ತಾವ ಇದೆ. ಗ್ರಾಮೀಣ ಪ್ರದೇಶಗಳ ಜನರಿಗಾಗಿ ಹಾಗೂ ಸ್ವಸಹಾಯ ಸಂಘಗಳ ಸದಸ್ಯರಿಗಾಗಿ ಕ್ರೆಡಿಟ್ ಅಂಕಗಳ ಚೌಕಟ್ಟೊಂದನ್ನು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಜೊತೆ ಸೇರಿ ಅಭಿವೃದ್ಧಿಪಡಿಸುವ ಘೋಷಣೆ ಇದು.

ಈಗ ಚಾಲ್ತಿಯಲ್ಲಿರುವ ಕ್ರೆಡಿಟ್ ಅಂಕ ನೀಡುವ ವ್ಯವಸ್ಥೆಯು ಎಲ್ಲರಿಗೂ ಒಂದೇ ಬಗೆಯ ನಿಯಮ ಅನ್ವಯ ಮಾಡುತ್ತದೆ, ಅದು ಗ್ರಾಮೀಣ ಪ್ರದೇಶದವರ ಅಗತ್ಯಗಳನ್ನು ಗಮನದಲ್ಲಿ ಇಟ್ಟುಕೊಂಡಿಲ್ಲ.

ಸ್ವಸಹಾಯ ಸಂಘಗಳ ಸದಸ್ಯರು ಹಾಗೂ ಗ್ರಾಮೀಣ ಪ್ರದೇಶದ ಜನರು ಸಾಲಕ್ಕೆ ಅರ್ಜಿ ಸಲ್ಲಿಸಿದಾಗ, ಅದರ ಬಗ್ಗೆ ಸೂಕ್ತವಾದ ತೀರ್ಮಾನ ತೆಗೆದುಕೊಳ್ಳಲು ಸಹಾಯ ಆಗುವಂತೆ ಗ್ರಾಮೀಣ ಕ್ರೆಡಿಟ್ ಅಂಕ ವ್ಯವಸ್ಥೆಯನ್ನು ರೂಪಿಸಲಾಗುತ್ತದೆ. ಆಗ ಸ್ವಸಹಾಯ ಸಂಘಗಳ ಸದಸ್ಯರಿಗೆ, ಗ್ರಾಮೀಣ ಪ್ರದೇಶದ ಜನರಿಗೆ, ರೈತರಿಗೆ, ದುರ್ಬಲ ವರ್ಗಗಳ ಜನರಿಗೆ ಹಣಕಾಸು ಸಂಸ್ಥೆಗಳಿಂದ ಸಾಲ ಸಿಗುವ ಪ್ರಕ್ರಿಯೆಯಲ್ಲಿ ಸುಧಾರಣೆ ಸಾಧ್ಯವಾಗುತ್ತದೆ ಎಂದು ನಿರೀಕ್ಷಿಸಲಾಗಿದೆ.

ಸುದ್ದಿ 2 ನಿಮಿಷ

‘ಸಂಪುಟದ ನಿರ್ಧಾರದಿಂದ ರಫ್ತುದಾರರಿಗೆ ಅನುಕೂಲ’

ನವದೆಹಲಿ (ಪಿಟಿಐ): ದೇಶದ ರಫ್ತು ವಲಯಕ್ಕೆ ಉತ್ತೇಜನ ನೀಡಲು ಕೇಂದ್ರ ಸರ್ಕಾರ ₹45 ಸಾವಿರ ಕೋಟಿ ವೆಚ್ಚದ ಎರಡು ಯೋಜನೆಗಳಿಗೆ ಅನುಮೋದನೆ ನೀಡಿರುವುದರಿಂದ ದೇಶದ ರಫ್ತು ವಲಯ ಸದೃಢಗೊಳ್ಳಲಿದೆ ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ದೇಶದ ರಫ್ತು ವಲಯದ ಸ್ಪರ್ಧಾತ್ಮಕತೆ ಹೆಚ್ಚಲಿದೆ ಎಂದು ರಫ್ತುದಾರರು ಹೇಳಿದ್ದಾರೆ.

ರಫ್ತು ಉತ್ತೇಜನಾ ಮಿಷನ್‌ಗೆ ₹25,060 ಕೋಟಿ ಮತ್ತು ಸಾಲ ಖಾತರಿ ಯೋಜನೆಗೆ ₹20 ಸಾವಿರ ಕೋಟಿ ನೀಡುವ ಎರಡು ಯೋಜನೆಗಳಿಗೆ ಕೇಂದ್ರ ಸಚಿವ ಸಂಪುಟವು ಬುಧವಾರ ಒಪ್ಪಿದೆ. ಈ ಯೋಜನೆಗಳಿಂದ ಉದ್ಯಮಗಳಿಗೆ ಸಾಲವು ಕೈಗೆಟಕುವಂತಾಗಲಿದೆ ಎಂದು ರಫ್ತುದಾರರು ತಿಳಿಸಿದ್ದಾರೆ.

‘ಸರ್ಕಾರದ ಈ ಕ್ರಮವು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳು (ಎಂಎಸ್‌ಎಂಇ), ಮೊದಲ ಬಾರಿಗೆ ರಫ್ತು ಮಾಡುವವರ ಕೈ ಬಲಪಡಿಸುವ ಉದ್ದೇಶ ಹೊಂದಿದೆ’ ಎಂದು ಭಾರತೀಯ ರಫ್ತು ಸಂಘಟನೆಗಳ ಒಕ್ಕೂಟದ (ಫಿಯೊ) ರಾಷ್ಟ್ರೀಯ ಸಮಿತಿಯ ಅಧ್ಯಕ್ಷ ಸಂಜಯ್ ಬುಧಿಯಾ ಹೇಳಿದ್ದಾರೆ.

‘ಕೇಂದ್ರ ಸರ್ಕಾರ ಈ ಯೋಜನೆಗಳಿಗೆ ಒಪ್ಪಿಗೆ ನೀಡಿರುವುದರಿಂದ ಉದ್ಯಮಗಳಿಗೆ ಹಣಕಾಸಿನ ನೆರವು ದೊರೆಯಲಿದೆ. ದೇಶದ ರಫ್ತು ವ್ಯವಸ್ಥೆ ಸದೃಢಗೊಳ್ಳಲಿದ್ದು, ಅಗಾಧ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿ ಆಗಲಿದೆ’ ಎಂದು ಸಿದ್ಧ ಉಡುಪು ರಫ್ತು ಉತ್ತೇಜನ ಮಂಡಳಿಯ (ಎಇಪಿಸಿ) ಉಪಾಧ್ಯಕ್ಷ ಎ. ಶಕ್ತಿವೇಲ್ ಹೇಳಿದ್ದಾರೆ.



ಜವಳಿ ಉತ್ಪನ್ನಗಳ ರಫ್ತು ಏರಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ 111 ದೇಶಗಳಿಗೆ ಭಾರತದಿಂದ ಆಗಿರುವ ಜವಳಿ ಉತ್ಪನ್ನಗಳ ರಫ್ತು ಶೇ 10ರಷ್ಟು ಏರಿಕೆ ಆಗಿದೆ ಎಂದು ಕೇಂದ್ರ ಸರ್ಕಾರ ಗುರುವಾರ ತಿಳಿಸಿದೆ.

ಕಳೆದ ಆರ್ಥಿಕ ವರ್ಷದ ಮೊದಲ ಆರು ತಿಂಗಳಿನಲ್ಲಿ ದೇಶದ ಜವಳಿ ಉತ್ಪನ್ನಗಳ ರಫ್ತು ಹಣಕಾಸಿನ ಮೌಲ್ಯದಲ್ಲಿ ₹68,453 ಕೋಟಿಯಷ್ಟಾಗಿತ್ತು. ಈ ಬಾರಿ ಅದು ₹75,291 ಕೋಟಿಯಷ್ಟಾಗಿದೆ. ಜಾಗತಿಕ ಮಟ್ಟದಲ್ಲಿ ಉಂಟಾಗಿದ್ದ ಅನಿಶ್ಚಿತತೆ, ಸುಂಕ ಸಂಬಂಧಿತ ಸವಾಲುಗಳ ನಡುವೆಯೂ ದೇಶದ ಜವಳಿ ರಫ್ತು ಮೌಲ್ಯ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಒಟ್ಟಾರೆ ದೇಶದ ಜವಳಿ ಉತ್ಪನ್ನಗಳು, ಸಿದ್ಧ ಉಡುಪುಗಳ ಜಾಗತಿಕ ರಫ್ತು ಪ್ರಮಾಣ ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ಈ ಬಾರಿ ಶೇ 0.1ರಷ್ಟು ಏರಿಕೆಯಾಗಿದೆ ಎಂದು ಹೇಳಿದೆ.

ಹಾಂಗ್‌ಕಾಂಗ್‌ಗೆ ದೇಶದ ರಫ್ತು ಶೇ 69ರಷ್ಟು ಹೆಚ್ಚಳವಾಗಿದೆ. ಈಜಿಪ್ಟ್, ಸೌದಿ ಅರೇಬಿಯಾ, ಯುಎಇ, ಬ್ರಿಟನ್, ಜಪಾನ್, ಜರ್ಮನಿ, ಸ್ಪೇನ್ ಮತ್ತು ಫ್ರಾನ್ಸ್‌ಗೆ ರಫ್ತು ಸಕಾರಾತ್ಮಕ ಬೆಳವಣಿಗೆ ದಾಖಲಿಸಿದೆ. ಜವಳಿ ಉತ್ಪನ್ನಗಳ ಒಟ್ಟು ರಫ್ತು ಶೇ 3.42ರಷ್ಟು ಮತ್ತು ಸೆಣಬು ಶೇ 5.56ರಷ್ಟು ಏರಿಕೆ ಆಗಿದೆ ಎಂದು ತಿಳಿಸಿದೆ.

ಓಪನ್‌ಎಐ-ಫೋನ್‌ಪೇ ಪಾಲುದಾರಿಕೆ

ನವದೆಹಲಿ (ಪಿಟಿಐ): ದೇಶದ ಹಣಕಾಸು ತಂತ್ರಜ್ಞಾನ ಕಂಪನಿ ‘ಫೋನ್‌ಪೇ’ ತನ್ನ ಬಳಕೆದಾರರಿಗೆ ಚಾಟ್‌ಜಿಪಿಟಿ ಸೌಲಭ್ಯಗಳನ್ನು ಕಲ್ಪಿಸಲು ಅಮೆರಿಕದ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ (ಎ.ಐ) ಕಂಪನಿ ಓಪನ್‌ಎಐ ಜೊತೆ ಪಾಲುದಾರಿಕೆ ಮಾಡಿಕೊಂಡಿದೆ.

ಫೋನ್‌ಪೇ ಗ್ರಾಹಕರ ಆ್ಯಪ್ ಮತ್ತು ಫೋನ್‌ಪೇ ಬಿಸಿನೆಸ್ ಆ್ಯಪ್ ಮೂಲಕವೇ ‘ಚಾಟ್‌ಜಿಪಿಟಿ’ಯ ಆಧುನಿಕ ಎ.ಐ ಸೌಲಭ್ಯವನ್ನು ಬಳಕೆದಾರರು ಪಡೆದುಕೊಳ್ಳಬಹುದು ಎಂದು ಕಂಪನಿ ಗುರುವಾರ ತಿಳಿಸಿದೆ.

ಇದು ಬಳಕೆದಾರರಿಗೆ ಪ್ರವಾಸದ ಯೋಜನೆ ರೂಪಿಸುವುದರಿಂದ ಆರಂಭಿಸಿ ಶಾಪಿಂಗ್ ನಡೆಸುವುದರವರೆಗಿನ ದಿನನಿತ್ಯದ ಅಗತ್ಯಗಳಿಗೆ ಸಂಬಂಧಿಸಿದ ಎಲ್ಲ ಮಾಹಿತಿಯನ್ನು ಒದಗಿಸುತ್ತದೆ ಎಂದು ತಿಳಿಸಿದೆ.

ಸೆಸ್ ಪ್ರಸ್ತಾವ ಒಪ್ಪದ ಆರ್ಥಿಕ ಇಲಾಖೆ

ಪೆಟ್ರೋಲ್, ಡೀಸೆಲ್ ಮೇಲೆ ಸೆಸ್ ವಿಧಿಸಲು ಮನವಿ ಮಾಡಿದ್ದ ಕಾರ್ಮಿಕ ಇಲಾಖೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ಪ್ರತಿ ಲೀಟರ್ ಪೆಟ್ರೋಲ್, ಡೀಸೆಲ್ ಮೇಲೆ ₹1 ಸೆಸ್ ವಿಧಿಸುವ ಕಾರ್ಮಿಕ ಇಲಾಖೆಯು ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಿದೆ.

ಆದರೆ, ಈ ಪ್ರಸ್ತಾವ ಅನುಷ್ಠಾನಕ್ಕೆ ಸೂಕ್ತವಾಗಿಲ್ಲ ಎಂದು ಹೇಳಿರುವ ಆರ್ಥಿಕ ಇಲಾಖೆ, ಪ್ರಸ್ತಾವವನ್ನು ತಿರಸ್ಕರಿಸಿದೆ.

‘ಅಸಂಘಟಿತ ವಲಯದಲ್ಲಿ ಸುಮಾರು 1.30 ಕೋಟಿ ಕಾರ್ಮಿಕರು ಇದ್ದಾರೆ. ಇಂತಹ ಕಾರ್ಮಿಕರ ಕಲ್ಯಾಣ ಹಾಗೂ ಅವರಿಗೆ ಉಚಿತ ಆರೋಗ್ಯ ಸೇವೆ ಒದಗಿಸಲು ದೊಡ್ಡ ಮೊತ್ತದ ಸಂಪನ್ಮೂಲದ ಅಗತ್ಯವಿದೆ. ಪೆಟ್ರೋಲ್, ಡೀಸೆಲ್ ಮತ್ತು ಎಥೆನಾಲ್ ಮೇಲೆ ಸೆಸ್ ವಿಧಿಸುವುದರಿಂದ ವಾರ್ಷಿಕ ಸುಮಾರು ₹2,120 ಕೋಟಿ ಸಂಗ್ರಹವಾಗುತ್ತದೆ. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಯೋಜನೆಗಳಾದ ಆರೋಗ್ಯ ಸೌಲಭ್ಯ, ಅಪಘಾತ ಪರಿಹಾರ, ಮಕ್ಕಳ ಶಿಕ್ಷಣಕ್ಕೆ ನೆರವು ನೀಡಲು ಬಳಸಲಾಗುವುದು’ ಎಂದು ಮುಖ್ಯಮಂತ್ರಿಗೆ ಸಲ್ಲಿಸಿದ ಪ್ರಸ್ತಾವದಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ವಿವರಿಸಿದ್ದಾರೆ.

‘ಅಸಂಘಟಿತ ವಲಯಕ್ಕೆ ಪ್ರತ್ಯೇಕ ಸೆಸ್ ಸಂಗ್ರಹಿಸಿದರೆ ಆರೋಗ್ಯ ಸೌಲಭ್ಯಕ್ಕೆ ₹1,772 ಕೋಟಿ ವಿನಿಯೋಗಿಸಲಾಗುವುದು. ಉಳಿದ ಹಣವನ್ನು 62 ಲಕ್ಷ ಕಾರ್ಮಿಕ ಕುಟುಂಬಗಳ ಕಲ್ಯಾಣ ಕಾರ್ಯಗಳಿಗೆ ಬಳಸಲಾಗುವುದು. ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೂ ಹಣ ನೀಡಲಾಗುವುದು’ ಎಂದು ಲಾಡ್ ಹೇಳಿದ್ದಾರೆ.



ಮತ್ತೆ ಬೆಲೆ ಏರಿಕೆ ಬರೆ: ಆರ್.ಅಶೋಕ

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಡೀಸೆಲ್ ಬೆಲೆ ₹5.5 ಹಾಗೂ ಪೆಟ್ರೋಲ್ ಬೆಲೆ ₹3 ಹೆಚ್ಚಳ ಮಾಡಿದೆ. ಈಗ ಮತ್ತೊಮ್ಮೆ ಬೆಲೆ ಏರಿಕೆಯ ಬರೆ ಎಳೆಯಲು ಸಿದ್ಧತೆ ನಡೆಸಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

‘ಸರ್ಕಾದ ದುರಾಡಳಿತ, ಅಸಮರ್ಥತೆ, ಭ್ರಷ್ಟಾಚಾರಕ್ಕೆ ಕನ್ನಡಿಗರು ಇನ್ನೆಷ್ಟು ಬೆಲೆ ತೆತ್ತಬೇಕು? ಈ ಜನವಿರೋಧಿ ಸರ್ಕಾರದಿಂದ ಕರ್ನಾಟಕದ ಜನತೆ ಬೇಸತ್ತು ಹೋಗಿದ್ದಾರೆ. ಇಂತಹ ಆಡಳಿತ ನೀಡುವ ಬದಲು ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕು’ ಎಂದು ಒತ್ತಾಯಿಸಿದ್ದಾರೆ.

ಮುಂಬೈ ಖಾದ್ಯ ತೈಲ

(ಆವರಣದಲ್ಲಿ ಕಳೆದ ವಹಿವಾಟಿನ ದರ)

(10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1490 (1445)
ಸೋಯಾ (ರಿಫೈನ್ಡ್)	₹1275 (1270)
ಸೂರ್ಯಕಾಂತಿ (ರಿಫೈನ್ಡ್)	₹1480 (1465)
ಪಾಮೋಲಿನ್	₹1260 (1255)

ಮುಂಬೈ ಧಾರಣೆ (ಶೇಂಗಾ)

13-11-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7800-7900
ದಪ್ಪ ಗುಜರಾತ್ (ಹೊಸ)	8900-9000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1500 (1455)
ಒಂದು ವಾರದ ಡೆಲಿವರಿ	1495 (1450)
ಪಾಮ್ ವಾರದ ಡೆಲಿವರಿ	1258 (1253)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1400)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,26,000 (1,23,400)
ಬೆಳ್ಳಿ ಕೆ.ಜಿಗೆ	1,62,200 (1,56,700)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಟಾಟಾ ಮೋಟರ್ಸ್‌ಗೆ ₹867 ಕೋಟಿ ನಷ್ಟ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಟಾಟಾ ಮೋಟರ್ಸ್ ₹867 ಕೋಟಿ ನಷ್ಟ ದಾಖಲಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹498 ಕೋಟಿ ನಿವ್ವಳ ಲಾಭ ಗಳಿಸಿತ್ತು. ಒಟ್ಟು ವರಮಾನವು ₹17,535 ಕೋಟಿಯಿಂದ ₹18,585 ಕೋಟಿಗೆ ಹೆಚ್ಚಳವಾಗಿದೆ ಎಂದು ಷೇರುಪೇಟೆಗೆ ಗುರುವಾರ ತಿಳಿಸಿದೆ.

‘ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ’

ಸಚಿವ ಪೀಯೂಷ್ ಗೋಯಲ್ ಜೊತೆ ಎಚ್‌ಡಿಕೆ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಒಂಬತ್ತು ಜಿಲ್ಲೆಗಳನ್ನು ಒಳಗೊಂಡ ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಯೋಜನೆ ಅನುಷ್ಠಾನಗೊಳಿಸಬೇಕೆಂದು ಕೋರಿ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರದ ವಾಣಿಜ್ಯ ಮತ್ತು ಕೈಗಾರಿಕೆ ಸಚಿವ ಪೀಯೂಷ್ ಗೋಯಲ್ ಅವರೊಂದಿಗೆ ಗುರುವಾರ ಚರ್ಚೆ ನಡೆಸಿದರು.

ಮಂಡ್ಯ, ಮೈಸೂರು, ಚಾಮರಾಜನಗರ, ಕೋಲಾರ, ಹಾಸನ, ದಕ್ಷಿಣ ಕನ್ನಡ, ಹುಬ್ಬಳ್ಳಿ-ಧಾರವಾಡ, ರಾಯಚೂರು ಮತ್ತು ಬೀದರ್ ಜಿಲ್ಲೆಗಳನ್ನು ಒಳಗೊಂಡ ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಯೋಜನೆ ಅನುಷ್ಠಾನ ಮಾಡಬೇಕೆಂದು ಕೋರಿದರು.

ಪ್ರಾದೇಶಿಕ ಕೈಗಾರಿಕಾ ಬೆಳವಣಿಗೆ ಬಲಪಡಿಸಿ ಉತ್ತೇಜಿಸಲು, ಸಾಗಾಣಿಕೆಯ ಮೂಲಸೌಕರ್ಯ ಅಭಿವೃದ್ಧಿಪಡಿಸಲು ಹಾಗೂ ಕರ್ನಾಟಕದ ಉದ್ದಗಲಕ್ಕೂ ಬೃಹತ್ ಪ್ರಮಾಣದಲ್ಲಿ ಉದ್ಯೋಗಾವಕಾಶ ಸೃಷ್ಟಿಸಲು ಈ ಯೋಜನೆಯು ಬಹುದೊಡ್ಡ ಮಟ್ಟದಲ್ಲಿ ಕೊಡುಗೆ ನೀಡುತ್ತದೆ ಎಂಬ ಅಂಶವನ್ನು ಸಚಿವ ಗೋಯಲ್ ಅವರಿಗೆ ಮನವರಿಕೆ ಮಾಡಿಕೊಡಲಾಯಿತು. ನನ್ನ ಪ್ರಸ್ತಾವನೆಗೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿದರು. ರಾಜ್ಯದ ಕೈಗಾರಿಕಾಭಿವೃದ್ಧಿಗೆ ಕೈಜೋಡಿಸುವುದಾಗಿ ಭರವಸೆ ನೀಡಿದರು ಎಂದು ಕುಮಾರಸ್ವಾಮಿ ಮಾಹಿತಿ ನೀಡಿದರು.



ಪೀಯೂಷ್ ಗೋಯಲ್ ಅವರಿಗೆ ಎಚ್‌.ಡಿ.ಕುಮಾರಸ್ವಾಮಿ ಮನವಿ ಸಲ್ಲಿಸಿದರು

ಈ ಯೋಜನೆ ಅನುಷ್ಠಾನಕ್ಕೆ ಬಂದರೆ ಸಾಗಾಣಿಕೆ ಸುಲಭವಾಗಿ ಕೈಗಾರಿಕಾಭಿವೃದ್ಧಿ ವೇಗಗತಿಯಲ್ಲಿ ಸಾಗುತ್ತದೆ. ಉದ್ದೇಶಿತ ಜಿಲ್ಲೆಗಳಲ್ಲಿ ಯೋಜನೆ ಬಂದರೆ ಇಡೀ ರಾಜ್ಯಕ್ಕೆ ಸಮಗ್ರವಾಗಿ ಅನುಕೂಲ ಆಗುತ್ತದೆ. ಮುಖ್ಯವಾಗಿ ಈ ಪ್ರದೇಶಗಳು ಸಾಮೂಹಿಕವಾಗಿ ದೊಡ್ಡ ಮಟ್ಟದಲ್ಲಿ ಕೈಗಾರಿಕಾ ಅಭಿವೃದ್ಧಿ ಕಾಣುವುದಲ್ಲದೆ, ಸಮತೋಲಿತ ಪ್ರಾದೇಶಿಕ ಬೆಳವಣಿಗೆಗೆ ಕಾಣಿಕೆ ನೀಡುತ್ತವೆ ಎಂದು ಕುಮಾರಸ್ವಾಮಿ ತಿಳಿಸಿದರು.

ಅಡಿಕೆ ಧಾರಣೆ

ಮಾರುಕಟ್ಟೆ	ವಿಧ	ಧಾರಣೆ
ಚಿತ್ರದುರ್ಗ	ಅಪಿ	56629-57069
	ಬೆಟ್ಟೆ	35519-35959
	ಕೆಂಪುಗೋಟು	30800-31200
	ರಾಶಿ	56139-56599
ಕುಮಟಾ	ಚಾಲಿ	40589-48019
	ಚಿಪ್ಪು	20799-37749
	ಕೋಕ	11200-34120
	ಹಳೆಚಾಲಿ	45298-47099
ಪುತ್ತೂರು	ಕೋಕ	20000-31500
	ಹೊಸತು	26000-37000
	ಹಳತು	43000-53500
ಸಾಗರ	ಬಿಳಿಗೋಟು	15000-33865
	ಚಾಲಿ	18254-43219
	ಕೋಕ	15111-35299
	ಕೆಂಪುಗೋಟು	23299-38299
	ರಾಶಿ	33299-61999
	ಸಿಪ್ಪೆಗೋಟು	11000-22811
ಶಿವಮೊಗ್ಗ	ಬೆಟ್ಟೆ	52410-72619
	ಗೊರಬಲು	19000-40280
	ಹೊಸತು	53869-59889
	ರಾಶಿ	42366-59889
	ಸರಕು	51100-84169
ಸಿದ್ದಾಪುರ	ಬಿಳಿಗೋಟು	25619-36579
	ಚಾಲಿ	41209-48139
	ಕೋಕ	22119-32499
	ಕೆಂಪುಗೋಟು	31700-32699
	ರಾಶಿ	46219-57099
	ತಟ್ಟಿಬೆಟ್ಟೆ	33989-47299
ಶಿರಸಿ	ಬೆಟ್ಟೆ	40099-49989
	ಬಿಳಿಗೋಟು	29009-40109
	ಚಾಲಿ	44099-49258
	ಕೆಂಪುಗೋಟು	16899-36199
	ರಾಶಿ	53699-59699
ಯಲ್ಲಾಪುರ	ಬಿಳಿಗೋಟು	14899-36096
	ಚಾಲಿ	38969-49000
	ಕೋಕ	10110-26899
	ಕೆಂಪುಗೋಟು	16899-36666
	ರಾಶಿ	50090-64229
	ತಟ್ಟಿಬೆಟ್ಟೆ	39599-49100

ಎಪ್‌ಸ್ಟೈನ್–ಟ್ರಂಪ್ ನಂಟು 3 ಹೊಸ ಇ–ಮೇಲ್ ಬಹಿರಂಗ

ವಾಷಿಂಗ್ಟನ್ (ಎಎಫ್‌ಪಿ/ಎಪಿ): ‘ಮಹಿಳೆಯರು ಮತ್ತು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಮಾನವ ಕಳ್ಳಸಾಗಣೆ ಪ್ರಕರಣಗಳಲ್ಲಿ ಅಪರಾಧಿಯಾಗಿದ್ದ ಉದ್ಯಮಿ ಜೆಫ್ರಿ ಎಪ್‌ಸ್ಟೈನ್‌ನ ದುಷ್ಕೃತ್ಯಗಳ ಬಗ್ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಗೊತ್ತಿತ್ತು’ ಎಂಬುದು ಸೇರಿ ಹಲವು ವಿಚಾರಗಳನ್ನು ಒಳಗೊಂಡ ಇ–ಮೇಲ್‌ಗಳು ಬಹಿರಂಗಗೊಂಡಿವೆ. ಈ ಬೆಳವಣಿಗೆಯು ಟ್ರಂಪ್ ಅವರನ್ನು ಪೇಚಿಗೆ ಸಿಲುಕಿಸಲಿದೆ ಎನ್ನಲಾಗುತ್ತಿದೆ.

‘ಟ್ರಂಪ್‌ಗೆ ಬಾಲಕಿಯರ ಬಗ್ಗೆ ಗೊತ್ತಿತ್ತು’ ಎಂಬುದು ಲೇಖಕರೊಬ್ಬರಿಗೆ ಎಪ್‌ಸ್ಟೈನ್ ಕಳುಹಿಸಿದ್ದ ಒಂದು ಇ–ಮೇಲ್‌ನಲ್ಲಿ ಇದೆ.

ಅಮೆರಿಕ ಸಂಸತ್‌ನ ಸದನ ಮೇಲ್ವಿಚಾರಣಾ ಸಮಿತಿಯೊಂದರ ಸದಸ್ಯರಾಗಿರುವ ಡೆಮಾಕ್ರಟಿಕ್ ಪಕ್ಷದ ಸಂಸದರು ಹೊಸದಾಗಿ ಬಿಡುಗಡೆ ಮಾಡಿರುವ ಮೂರು ಇ–ಮೇಲ್‌ಗಳು ರಾಜಕೀಯ ಜಟಾಪಟಿಗೆ ಕಾರಣವಾಗುವ ಸಾಧ್ಯತೆ ಇದೆ.

ಆದರೆ, ಡೆಮಾಕ್ರಟಿಕ್ ಸದಸ್ಯರ ಆರೋಪಗಳನ್ನು ಟ್ರಂಪ್ ತಳ್ಳಿಹಾಕಿದ್ದಾರೆ. ‘ತಮ್ಮ ವೈಫಲ್ಯಗಳಿಂದ ಜನರ ಗಮನ ಬೇರೆಡೆ ಸೆಳೆಯುವುದಕ್ಕಾಗಿ ಇಂಥ ಆರೋಪಗಳನ್ನು ಮಾಡುತ್ತಿದ್ದಾರೆ’ ಎಂದು ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ ‘ಟ್ರುತ್ ಸೋಷಿಯಲ್’ನಲ್ಲಿ ಟೀಕಿಸಿದ್ದಾರೆ.

ಇನ್ನೊಂದೆಡೆ, ಈ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು (ಎಪ್‌ಸ್ಟೈನ್ ಫೈಲ್ ಎಂದು ಕರೆಯಲಾಗುತ್ತದೆ) ಬಿಡುಗಡೆ ಮಾಡುವಂತೆ ನ್ಯಾಯ ಇಲಾಖೆ ಮೇಲೆ ಒತ್ತಡ ಹೇರಲಾಗುವುದು. ಈ ವಿಚಾರವನ್ನು ಮುಂದಿನ ವಾರ ಮತಕ್ಕೆ ಹಾಕಲಾಗುವುದು ಎಂದು ಸ್ಪೀಕರ್ ಮೈಕ್ ಜಾನ್ಸನ್ ಹೇಳಿದ್ದಾರೆ.

ಆರೋಪಗಳೇನು?: ಲೈಂಗಿಕ ವೃತ್ತಿಗೆ ಬಾಲಕಿಯರನ್ನು ಅಕ್ರಮವಾಗಿ ಸಾಗಿಸಿದ ಆರೋಪಕ್ಕಾಗಿ ಜೆಫ್ರಿಯನ್ನು ಬಂಧಿಸಲಾಗಿತ್ತು. 2019ರಲ್ಲಿ ಕಾರಾಗೃಹದಲ್ಲಿ ನೇಣು ಹಾಕಿಕೊಂಡು ಜೆಫ್ರಿ ಎಪ್‌ಸ್ಟೈನ್ ಆತ್ಮಹತ್ಯೆ ಮಾಡಿಕೊಂಡಿದ್ದ.

ಜೆಫ್ರಿ, ಬಾಲಕಿಯರ ಕಳ್ಳಸಾಗಣೆ ಮಾಡುತ್ತಿರುವ ಕುರಿತು ತಮಗೆ ಮಾಹಿತಿ ಇಲ್ಲ ಎಂದೇ ಟ್ರಂಪ್ ಹೇಳಿಕೊಂಡು ಬಂದಿದ್ದಾರೆ.

ಭಾರತಕ್ಕೆ ಎಂಟು ಚೀತಾ ಹಸ್ತಾಂತರ

ಗ್ಯಾಬರೋನೆ (ಪಿಟಿಐ): ಬೋಟ್ಸ್‌ವಾನಾ ಎಂಟು ಚೀತಾಗಳನ್ನು ಗುರುವಾರ ಭಾರತಕ್ಕೆ ಹಸ್ತಾಂತರಿಸಲಾಯಿತು.

ಬೋಟ್ಸ್‌ವಾನಾಕ್ಕೆ ಭೇಟಿ ನೀಡಿದ್ದ ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಈ ಚೀತಾಗಳನ್ನು ಅಲ್ಲಿನ ಅಧ್ಯಕ್ಷ ಡುಮಾ ಗಿಡೋನ್ ಬೋಕೊ ಹಸ್ತಾಂತರ ಮಾಡಿದರು.

ಬೋಟ್ಸ್‌ವಾನಾಗೆ ಮುರ್ಮು ಅವರು ಮೂರು ದಿನಗಳ ಪ್ರವಾಸ ಕೈಗೊಂಡಿದ್ದರು. ಪ್ರವಾಸದ ಅಂತಿಮ ದಿನವಾದ ಗುರುವಾರ ಮೊಕೊಲೋಡಿ ಮೀಸಲು ಅರಣ್ಯ ಪ್ರದೇಶದಲ್ಲಿ ಚೀತಾಗಳನ್ನು ಸಾಂಕೇತಿಕವಾಗಿ ಹಸ್ತಾಂತರಿಸಲಾಯಿತು.

ಸಂರಕ್ಷಿತ ಅರಣ್ಯ ಪ್ರದೇಶವನ್ನು ಬೋಕೊ ಅವರ ಜೊತೆಗೂಡಿ ಮುರ್ಮು ಅವರು ಸಫಾರಿ ವಾಹನದಲ್ಲಿ ತೆರಳಿ ವೀಕ್ಷಿಸಿದರು. ಭಾರತ ಮತ್ತು ಬೋಟ್ಸ್‌ವಾನಾನ ವನ್ಯಜೀವಿ ಅಧಿಕಾರಿಗಳು ಹಸ್ತಾಂತರ ಪ್ರಕ್ರಿಯೆ ಬಗ್ಗೆ ವಿವರಿಸಿದರು.

ಎಂಟು ಚೀತಾಗಳನ್ನು ಸದ್ಯ ಪ್ರತ್ಯೇಕವಾಗಿರಿಸಲಾಗಿದ್ದು, ಕೆಲವೇ ವಾರಗಳಲ್ಲಿ ಭಾರತಕ್ಕೆ ಸ್ಥಳಾಂತರಗೊಳ್ಳಲಿವೆ. ಎಂಟು ಚೀತಾಗಳಲ್ಲಿ ಮರಿಗಳೂ ಸೇರಿವೆ.

ಚಿನ್ನದ ದರ ₹3 ಸಾವಿರ, ಬೆಳ್ಳಿ ₹7,700 ಜಿಗಿತ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಹೆಚ್ಚಳವಾಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹3 ಸಾವಿರ ಹೆಚ್ಚಳವಾಗಿ, ₹1,30,900ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5ರಷ್ಟು ಪರಿಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹1,30,300 ಆಗಿದೆ. ಬೆಳ್ಳಿ ದರವು ಕೆ.ಜಿಗೆ ₹7,700 ಜಿಗಿತವಾಗಿ, ₹1.69 ಲಕ್ಷಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಡಾಲರ್ ಮೌಲ್ಯವು ಇಳಿಕೆ ಆಗಿದೆ. ಅಮೆರಿಕದಲ್ಲಿ ಆಡಳಿತ ಬಿಕ್ಕಟ್ಟು ಅಂತ್ಯಗೊಂಡಿದೆ. ಇದರಿಂದ ಹೂಡಿಕೆದಾರರು ಚಿನ್ನದ ಕಡೆ ಹೂಡಿಕೆಗೆ ಮುಂದಾಗಿದ್ದರಿಂದ ಹಳದಿ ಲೋಹದ ಧಾರಣೆ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಯಾರಿಗೆ ಅಧಿಕಾರ?: ಇಂದು ನಿರ್ಧಾರ

ಬಿಹಾರ: ಮತ ಎಣಿಕೆಗೆ ಕ್ಷಣಗಣನೆ • ಜೆಡಿಯುನಿಂದ 'ಟೈಗರ್ ಜಿಂದಾ ಹೈ' ಪೋಸ್ಟರ್, ಆರ್‌ಜೆಡಿಯಿಂದ ಎಚ್ಚರಿಕೆ ಹೆಜ್ಜೆ

• ಅಭಯ ಕುಮಾರ್

ಪಟ್ನಾ: ಬಿಹಾರ ವಿಧಾನಸಭೆ ಚುನಾವಣೆಯ ಮತ ಎಣಿಕೆಗೆ ಒಂದೆಡೆ ಕ್ಷಣಗಣನೆ ಶುರುವಾಗಿದೆ. ಮತ್ತೊಂದೆಡೆ, ಚುನಾವಣೆ ಮುಗಿಸಿ ಈವರೆಗೆ ವಿಶ್ರಾಂತಿ ತೆಗೆದುಕೊಂಡಿರುವ ಅಭ್ಯರ್ಥಿಗಳಲ್ಲಿ ಈಗ ಆತಂಕ ಮನೆ ಮಾಡಿದೆ.

ಈ ನಡುವೆ, ಎನ್‌ಡಿಎದ ಪ್ರಮುಖ ಅಂಗಪಕ್ಷವಾಗಿರುವ ಜೆಡಿಯು ಕಾರ್ಯಕರ್ತರಲ್ಲಿ ಉತ್ಸಾಹ ಮೇರೆ ಮೀರಿದೆ. ಪಟ್ನಾದ ಬೀರ್‌ಚಾಂದ್ ಪಟೇಲ್ ಮಾರ್ಗದಲ್ಲಿರುವ ಪಕ್ಷದ ಕಚೇರಿ ಹೊರಗೆ ಪಕ್ಷದ ಕಾರ್ಯಕರ್ತರು 'ಟೈಗರ್ ಜಿಂದಾ ಹೈ' (ಹುಲಿ ಬದುಕಿದೆ) ಎಂಬ ಪೋಸ್ಟರ್‌ಗಳನ್ನು ಅಂಟಿಸಿದ್ದಾರೆ.

ಮತದಾನ ನಡೆಯುವುದಕ್ಕೂ ಮೊದಲು 'ಅಶಕ್ತ ಹಾಗೂ ಅಸ್ವಸ್ಥ'ರಂತೆ ಕಂಡುಬಂದಿದ್ದ ನಿತೀಶ್ ಕುಮಾರ್ ಅವರು ಕ್ರಮೇಣ ಅತ್ಯುತ್ಸಾಹದಿಂದ ಬೀಗುತ್ತಿದ್ದರು. ಪುಟಿದೇಳುವ ಮೂಲಕ ಗಮನ ಸೆಳೆದಿದ್ದರು. ಇದು, ಕಾರ್ಯಕರ್ತರಲ್ಲಿ ಉತ್ಸಾಹ ಕಂಡುಬರಲು ಕಾರಣ.

ಮತ್ತೊಂದೆಡೆ, ಎಲ್ಲ ಮತಗಟ್ಟೆ ಸಮೀಕ್ಷೆಗಳು ಎನ್‌ಡಿಎಗೆ ನಿಚ್ಚಳ ಬಹುಮತ ಸಿಗಲಿದೆ ಹಾಗೂ ನಿತೀಶ್ ಕುಮಾರ್ ಅವರು ಸತತ ಐದನೇ ಬಾರಿಗೆ ಮುಖ್ಯಮಂತ್ರಿಯಾಗುವ ಸಾಧ್ಯತೆ ಇದೆ ಎಂದು ಹೇಳಿರುವುದು ಕೂಡ ಜೆಡಿಯು ಕಾರ್ಯಕರ್ತರಲ್ಲಿನ ಸಂಭ್ರಮಕ್ಕೆ ಮತ್ತೊಂದು ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ.

ಇದೇ ಮಾರ್ಗದಲ್ಲಿ ಆರ್‌ಜೆಡಿ ಕಚೇರಿಯೂ ಇದೆ. ಆರ್‌ಜೆಡಿ ಮುಖ್ಯಸ್ಥ ತೇಜಸ್ವಿ ಯಾದವ್ ಹಾಗೂ ಕಾರ್ಯಕರ್ತರು ಮಾತ್ರ ಚುನಾವಣಾ ಫಲಿತಾಂಶದ ಬಗ್ಗೆ ಆಶಾಭಾವ ಹೊಂದಿದ್ದರೂ, ಬಹಳ ಎಚ್ಚರಿಕೆಯ ನಡೆ ತೋರಲು ನಿರ್ಧರಿಸಿದ್ದಾರೆ. ಅಚ್ಚರಿಯ ವಿಷಯವೆಂದರೆ, ಎನ್‌ಡಿಎ ಹಾಗೂ 'ಇಂಡಿಯಾ' ಮೈತ್ರಿಕೂಟ ಎರಡೂ ಪಾಳಯಗಳು ನೂರಾರು ಕೆ.ಜಿ ಸಿಹಿ ಹಾಗೂ ಹೂವುಗಳು/ ಹೂಗುಚ್ಛಗಳ ಪೂರೈಕೆಗೆ ಬೇಡಿಕೆ ಇಟ್ಟಿವೆ. ಚುನಾವಣೆ ಫಲಿತಾಂಶ ಕುರಿತಂತೆ ಪ್ರತಿಕ್ರಿಯಿಸಿರುವ ಆರ್‌ಜೆಡಿ ವಕ್ತಾರೆ ಪ್ರಿಯಾಂಕಾ ಭಾರ್ತಿ, 'ನಾವು ನಿಖರವಾದ ಸಮೀಕ್ಷೆಯನ್ನು ನಂಬುತ್ತೇವೆಯೇ ಹೊರತು ಮತಗಟ್ಟೆ ಸಮೀಕ್ಷೆಗಳನ್ನಲ್ಲ' ಎಂದು ಹೇಳಿದ್ದಾರೆ.

ಪ್ರಜಾಮತ
ಜನತಂತ್ರದ ಹಬ್ಬ
ಬಿಹಾರ
ವಿಧಾನಸಭಾ ಚುನಾವಣೆ - 2025

ರಾಘೋಪುರ, ತಾರಾಪುರದತ್ತ ಎಲ್ಲರ ಚಿತ್ತ

ಬಿಹಾರದಲ್ಲಿ ಯಾರ ಕೈಗೆ ಅಧಿಕಾರದ ಚುಕ್ಕಾಣಿ ಸಿಗಲಿದೆ ಎಂಬ ಕುತೂಹಲಕ್ಕೆ ಶುಕ್ರವಾರ ತೆರೆ ಬೀಳಲಿದೆ. ಆದರೆ, ಎಲ್ಲರ ಚಿತ್ತ ರಾಘೋಪುರ ಹಾಗೂ ತಾರಾಪುರದ ಫಲಿತಾಂಶದತ್ತ ಇರಲಿದೆ.

ಈ ಕ್ಷೇತ್ರಗಳಲ್ಲಿ ಕ್ರಮವಾಗಿ ತೇಜಸ್ವಿ ಯಾದವ್ ಹಾಗೂ ಡಿಸಿಎಂ, ಬಿಜೆಪಿಯ ಸಾಮ್ರಾಟ್ ಚೌಧರಿ ಸ್ಪರ್ಧಿಸಿರುವುದು ಈ ಕುತೂಹಲಕ್ಕೆ ಕಾರಣ.

ಬೇರೆ ಬೇರೆ ಕಾರಣಗಳಿಂದಾಗಿ, ಪ್ರಸಕ್ತ ಚುನಾವಣೆಯಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್, ಮಾಜಿ ಮುಖ್ಯಮಂತ್ರಿಗಳಾದ ಲಾಲೂ ಪ್ರಸಾದ್ ಹಾಗೂ ರಾಬ್ಡಿ ದೇವಿ ಅವರು ಸ್ಪರ್ಧಿಸಿರಲಿಲ್ಲ.

ನಿತೀಶ್ ಕುಮಾರ್ ಹಾಗೂ ರಾಬ್ಡಿ ದೇವಿ ಅವರು ಈಗಾಗಲೇ ವಿಧಾನ ಪರಿಷತ್ತಿನ ಸದಸ್ಯರಾಗಿದ್ದಾರೆ. ಮೇವು ಹಗರಣದಲ್ಲಿ ಶಿಕ್ಷೆಗೆ ಗುರಿಯಾಗಿರುವ ಲಾಲೂ ಪ್ರಸಾದ್ ಅವರು ಚುನಾವಣೆಯಲ್ಲಿ ಸ್ಪರ್ಧಿಸುವಂತಿಲ್ಲ.



ಮತ ಎಣಿಕೆ ಪ್ರಕ್ರಿಯೆ ವಿವರ

ಬೆಳಿಗ್ಗೆ 8ಕ್ಕೆ ಎಣಿಕೆ ಪ್ರಕ್ರಿಯೆ ಆರಂಭ	ಬೆಳಿಗ್ಗೆ 8.30 ಇವಿಎಂ ಮತಗಳ ಎಣಿಕೆ ಆರಂಭ
4,372 ಮತ ಎಣಿಕೆ ಟೇಬಲ್‌ಗಳು	243 ಮತ ಎಣಿಕೆ ವೀಕ್ಷಕರು

ಇವಿಎಂನಲ್ಲಿನ ಮತ ಎಣಿಕೆ

- ಆಯಾ ಸುತ್ತುಗಳವಾರು ಕಂಟ್ರೋಲ್ ಯುನಿಟ್‌ಗಳನ್ನು ಕೌಂಟಿಂಗ್ ಟೇಬಲ್‌ಗೆ ತರಲಾಗುತ್ತದೆ. ಅವುಗಳನ್ನು ಕೌಂಟಿಂಗ್ ಏಜೆಂಟ್‌ಗಳಿಗೆ ತೋರಿಸಲಾಗುತ್ತದೆ. ಕಂಟ್ರೋಲ್ ಯೂನಿಟ್‌ಗಳಿಗೆ ಹಾಕಲಾದ ಮೊಹರು ಭದ್ರವಾಗಿದೆ ಹಾಗೂ ಫಾರ್ಮ್17ಸಿ(ಭಾಗ 1)ಯಲ್ಲಿ ದಾಖಲಾದ ವಿವರಗಳೊಂದಿಗೆ ಅನುಕ್ರಮ ಸಂಖ್ಯೆ ಹೊಂದುತ್ತದೆಯೇ ಎಂಬುದನ್ನು ಏಜೆಂಟರು ಪರಿಶೀಲಿಸಿ, ದೃಢಪಡಿಸುವುದು ಇದರ ಉದ್ದೇಶ
- ಇವಿಎಂನಲ್ಲಿ ದಾಖಲಾದ ಮತಗಳು ಹಾಗೂ ಫಾರ್ಮ್17ಸಿಯಲ್ಲಿ ನಮೂದಿಸಿದ ಮತಗಳ ಸಂಖ್ಯೆಯನ್ನು ತಾಳೆ ನೋಡಲಾಗುವುದು
- ಯಾವುದೇ ಸುತ್ತಿನಲ್ಲಿ ಒಂದು ವೇಳೆ ಮತಗಳ ಸಂಖ್ಯೆ ಹೊಂದಾಣಿಕೆಯಾಗದಿದ್ದಲ್ಲಿ, ಸಂಬಂಧಪಟ್ಟ ಮತಗಟ್ಟೆಯ ವಿವಿಪ್ಯಾಟ್ ಸ್ಲಿಪ್‌ಗಳ ಎಣಿಕೆ ಮಾಡಲಾಗುವುದು
- ಇವಿಎಂ ಕೌಂಟಿಂಗ್ ಪೂರ್ಣಗೊಂಡ ಬಳಿಕ, ಪ್ರತಿ ವಿಧಾನಸಭಾ ಕ್ಷೇತ್ರದ ಯಾವುದಾದರೂ ಐದು ಮತಗಟ್ಟೆಗಳನ್ನು ಆಯ್ಕೆ ಮಾಡಿ, ಅವುಗಳ ವಿವಿಪ್ಯಾಟ್‌ಗಳನ್ನು ಪರಿಶೀಲಿಸಿ, ದೃಢೀಕರಿಸಲಾಗುವುದು
- ಪ್ರತಿ ಟೇಬಲ್‌ಗೆ ಒಬ್ಬರು ಮತ ಎಣಿಕೆ ಮೇಲ್ವಿಚಾರಕ, ಮತ ಎಣಿಕೆ ಸಹಾಯಕ ಹಾಗೂ ಸೂಕ್ಷ್ಮ ವೀಕ್ಷಕರು ಇರುತ್ತಾರೆ
- ಎಲ್ಲ ಪಕ್ಷಗಳ ಅಭ್ಯರ್ಥಿಗಳಿಂದ ನೇಮಕಗೊಂಡಿರುವ ಏಜೆಂಟರ ಸಂಖ್ಯೆ ಕನಿಷ್ಠ 18 ಸಾವಿರ
- ಮೊದಲಿಗೆ ಅಂಚೆ ಮತಪತ್ರಗಳ ಎಣಿಕೆ ನಡೆಯುತ್ತದೆ. ಕೊನೆಯ ಇವಿಎಂಗಿಂತಲೂ ಮೊದಲ ಸುತ್ತಿನ ಎಣಿಕೆ ಪೂರ್ಣಗೊಳ್ಳುವುದಕ್ಕೂ ಮುನ್ನ ಅಂಚೆ ಮತಪತ್ರಗಳ ಎಣಿಕೆ ಕಾರ್ಯ ಮುಕ್ತಾಯಗೊಳ್ಳುವುದು



ಕೊನೆಯ ಮತ ಎಣಿಕೆ ಪೂರ್ಣಗೊಳ್ಳುವ ತನಕ ಎಣಿಕೆ ಕೇಂದ್ರಗಳ ಮುಂದೆ ಕಾವಲಿರುವಂತೆ ಪಕ್ಷದ ಕಾರ್ಯಕರ್ತರಿಗೆ ಸೂಚಿಸಲಾಗಿದೆ. ಈ ಬಾರಿ ಮತ ಕಳ್ಳತನಕ್ಕೆ ಅವಕಾಶ ನೀಡುವುದಿಲ್ಲ
ಪ್ರಿಯಾಂಕಾ ಭಾರ್ತಿ, ಆರ್‌ಜೆಡಿ ವಕ್ತಾರೆ

ಚುನಾವಣೆಯಲ್ಲಿ ಭಾಗಿಯಾಗಿದ್ದ ಅಧಿಕಾರಿಗಳ ಮೇಲೆ ಪ್ರಭಾವ ಬೀರುವುದೇ ಮತಗಟ್ಟೆ ಸಮೀಕ್ಷೆಗಳ ಉದ್ದೇಶ. ದಾಖಲೆ ಪ್ರಮಾಣದ ಮತದಾನವು ಜನರು ಬದಲಾವಣೆ ಬಯಸಿರುವುದನ್ನು ಸೂಚಿಸುತ್ತದೆ
ತೇಜಸ್ವಿ ಯಾದವ್, ಆರ್‌ಜೆಡಿ ಮುಖ್ಯಸ್ಥ

ತೀವ್ರ ಪೈಪೋಟಿಗೆ ಸಾಕ್ಷಿಯಾಗಿದ್ದ ಕಣ

ವಿಧಾನಸಭೆ ಚುನಾವಣೆಯಲ್ಲಿ ಎನ್‌ಡಿಎ ಹಾಗೂ 'ಇಂಡಿಯಾ' ಕೂಟಗಳ ನಡುವೆ ನೇರ ಹಾಗೂ ತುರುಸಿನ ಸ್ಪರ್ಧೆ ಕಂಡುಬಂದಿತ್ತು. ನಿತೀಶ್ ಕುಮಾರ್ ನೇತೃತ್ವದ ಎನ್‌ಡಿಎಗೆ ಸ್ಪಷ್ಟ ಬಹುಮತ ಸಿಗಲಿದೆ ಎಂದು ಎಲ್ಲ ಮತಗಟ್ಟೆ ಸಮೀಕ್ಷೆಗಳು ಹೇಳಿವೆ.

ಆರ್‌ಜೆಡಿ ಮುಖ್ಯಸ್ಥ ತೇಜಸ್ವಿ ಯಾದವ್ ಮಾತ್ರ ಎಲ್ಲ ಮತಗಟ್ಟೆ ಸಮೀಕ್ಷೆಗಳನ್ನು ತಳ್ಳಿಹಾಕಿದ್ದಾರೆ. 'ಎರಡನೇ ಹಂತದ ಮತದಾನದ ವೇಳೆ, ಜನರು ಮತ ಚಲಾಯಿಸಲು ಇನ್ನೂ ಸರದಿಯಲ್ಲಿ ನಿಂತಿದ್ದರು. ಅದೇ ವೇಳೆ ಮತಗಟ್ಟೆ ಸಮೀಕ್ಷೆಯ ವಿವರಗಳನ್ನು ಬಹಿರಂಗಪಡಿಸಲಾಗಿದೆ' ಎನ್ನುವ ಮೂಲಕ ತಮ್ಮ ಸಮರ್ಥನೆ ನೀಡುತ್ತಾರೆ.

ಆರ್‌ಜೆಡಿ, ಕಾಂಗ್ರೆಸ್, ಸಿಪಿಐ–ಎಂಎಲ್,ಸಿಪಿಐ, ಸಿಪಿಎಂ ಹಾಗೂ ವಿಐಪಿ 'ಇಂಡಿಯಾ' ಮೈತ್ರಿಕೂಟದ ಅಂಗಪಕ್ಷಗಳು. ಜೆಡಿಯು, ಬಿಜೆಪಿ, ಎಲ್‌ಜೆಪಿ, ಎಚ್‌ಎಂ,ಆರ್‌ಎಲ್‌ಎಂ ಪಕ್ಷಗಳು ಎನ್‌ಡಿಎ ಭಾಗವಾಗಿದೆ.

ಅಮೆರಿಕನ್ನರಿಗೆ ತರಬೇತಿ ನೀಡಿ ವಾಪಸಾಗಬೇಕು: ಬೆಸೆಂಟ್

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): 'ಕೌಶಲ ಹೊಂದಿರುವ ವಿದೇಶಿ ಉದ್ಯೋಗಿಗಳನ್ನು ಕರೆತರುವುದು ಹಾಗೂ ಅವರಿಂದ ಅಮೆರಿಕನ್ನರಿಗೆ ತರಬೇತಿ ಕೊಡಿಸುವುದು. ಆ ಬಳಿಕ ಅವರು ತಮ್ಮ ದೇಶಗಳಿಗೆ ಮರಳಬೇಕು. ಇದು ಎಚ್‌–1ಬಿ ವೀಸಾದ ಮುಖ್ಯ ಉದ್ದೇಶ' ಎಂದು ಅಮೆರಿಕದ ಹಣಕಾಸು ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಹೇಳಿದ್ದಾರೆ.


ಫಾಕ್ಸ್ ನ್ಯೂಸ್‌ಗೆ ಸಂದರ್ಶನ ನೀಡಿರುವ ಅವರು, 'ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಉದ್ದೇಶವೂ ಇದೇ ಆಗಿದೆ' ಎನ್ನುವ ಮೂಲಕ ಎಚ್‌–1ಬಿ ವೀಸಾ ಯೋಜನೆಯನ್ನು ಸಮರ್ಥಿಸಿಕೊಂಡಿದ್ದಾರೆ. 'ವಿದೇಶಗಳಿಂದ ಬರುವ ಉದ್ಯೋಗಿಗಳು ಮೂರು, ಐದು ಇಲ್ಲವೇ ಏಳು ವರ್ಷ ಇಲ್ಲಿ ಕೆಲಸ ಮಾಡಬೇಕು. ಈ ಅವಧಿಯಲ್ಲಿ ಅವರು ಅಮೆರಿಕನ್ ಉದ್ಯೋಗಿಗಳಿಗೆ ತರಬೇತಿ ನೀಡಿ ತಮ್ಮ ದೇಶಗಳಿಗೆ ಹಿಂತಿರುಗಬೇಕು. ನಂತರ, ಅಮೆರಿಕದ ನೌಕರರೇ ಎಲ್ಲ ಕೆಲಸಗಳನ್ನು ನಿರ್ವಹಣೆ ಮಾಡುವಂತಾಗಬೇಕು ಎಂಬುದು ಟ್ರಂಪ್ ಅವರ ಉದ್ದೇಶವಾಗಿದೆ' ಎಂದು ಸ್ಕಾಟ್ ಹೇಳಿದ್ದಾರೆ.

'ಕೆಲವು ಕೆಲಸಗಳನ್ನು ನಿರ್ವಹಿಸಬಲ್ಲಂತಹ ಪ್ರತಿಭಾವಂತರು ಅಮೆರಿಕದಲ್ಲಿ ಇಲ್ಲ' ಎಂಬ ಟ್ರಂಪ್ ಅವರ ಹೇಳಿಕೆ ಕುರಿತು ಪ್ರಶ್ನಿಸಿದಾಗ, 'ಕಳೆದ 20–30 ವರ್ಷಗಳವರೆಗೆ ಕೆಲ ನಿರ್ದಿಷ್ಟ ಕೆಲಸಗಳನ್ನು ಇತರ ದೇಶಗಳ ನುರಿತ ಕೆಲಸಗಾರರಿಂದಲೇ ಮಾಡಿಸಲಾಗಿದೆ. ಈಗ, ನೀವು ರಾತ್ರೋರಾತ್ರಿ ಹಡಗು ನಿರ್ಮಾಣ ಕಲಿಯಬೇಕು ಎಂದು ಸ್ಥಳೀಯ ಉದ್ಯೋಗಿಗಳಿಗೆ ಸೂಚನೆ ನೀಡಲು ಸಾಧ್ಯವೇ?' ಎಂದು ಅವರು ಉತ್ತರಿಸಿದ್ದಾರೆ.

ಕ್ರಿಸ್ಟಿ ಸಮರ್ಥನೆ: 'ಅಮೆರಿಕವು ಎಚ್‌–1ಬಿ ವೀಸಾ ಕಾರ್ಯಕ್ರಮವನ್ನು ಮುಂದುವರಿಸಲಿದೆ. ಈ ವೀಸಾ ಸೌಲಭ್ಯ ಪಡೆದು ಇಲ್ಲಿ ಬಂದವರು ಭಯೋತ್ಪಾದಕರನ್ನು ಹಾಗೂ ಅಮೆರಿಕ ದ್ವೇಷಿಸುವವರನ್ನು ಬೆಂಬಲಿಗರಾಗಿರಬಾರದು' ಎಂದು ಆಂತರಿಕ ಭದ್ರತಾ ಇಲಾಖೆ ಕಾರ್ಯದರ್ಶಿ ಕ್ರಿಸ್ಟಿ ನೋಯಮ್ ಹೇಳಿದ್ದಾರೆ.



ಎಷ್ಟೋ ವರ್ಷಗಳಿಂದ ಅಮೆರಿಕನ್ನರು ಹಡಗು ನಿರ್ಮಾಣ ಮಾಡಿಯೇ ಇಲ್ಲ. ಸೆಮಿಕಂಡಕ್ಟರ್‌ಗಳನ್ನೂ ತಯಾರಿಸಿಲ್ಲ. ಈಗ ಸೆಮಿಕಂಡಕ್ಟರ್ ಉದ್ಯಮವನ್ನು ಅಮೆರಿಕಕ್ಕೆ ಮರಳಿ ತರುತ್ತೇವೆ
ಸ್ಕಾಟ್ ಬೆಸೆಂಟ್
ಹಣಕಾಸು ಕಾರ್ಯದರ್ಶಿ, ಅಮೆರಿಕ



'ಸಾವಿರಾರು ಉಗ್ರ'ರು ದೇಶದೊಳಗೆ ಬರಲು ಹಿಂದಿನ ಅಧ್ಯಕ್ಷ ಜೋ ಬೈಡನ್ ಆಡಳಿತ ಅವಕಾಶ ನೀಡಿತ್ತು. ಹೀಗೆ ಬಂದವರು ನಮ್ಮ ಹಲವಾರು ಯೋಜನೆಗಳನ್ನು ದುರುಪಯೋಗಪಡಿಸಿಕೊಂಡರು
ಕ್ರಿಸ್ಟಿ ನೋಯಮ್,
ಆಂತರಿಕ ಭದ್ರತಾ ಇಲಾಖೆ ಕಾರ್ಯದರ್ಶಿ

ಸಂಕ್ಷಿಪ್ತ ಸುದ್ದಿ

ಎಸ್‌ಐಆರ್: ಒಂದೇ ದಿನ 5 ಕೋಟಿ ಅರ್ಜಿ ವಿತರಣೆ

ನವದೆಹಲಿ (ಪಿಟಿಐ): ಒಂಬತ್ತು ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಭಾಗವಾಗಿ ಗುರುವಾರ ಒಂದೇ ದಿನದಲ್ಲಿ ಐದು ಕೋಟಿಗೂ ಹೆಚ್ಚು ಅರ್ಜಿ ನಮೂನೆಗಳನ್ನು ಮತದಾರರಿಗೆ ವಿತರಿಸಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಎರಡನೇ ಹಂತದ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಈವರೆಗೆ 42 ಕೋಟಿ ಅರ್ಜಿ ನಮೂನೆಗಳನ್ನು ವಿತರಿಸಲಾಗಿದೆ. ಅಂದರೆ, ಒಂಬತ್ತು ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿರುವ ಒಟ್ಟು 50.99 ಕೋಟಿ ಮತದಾರರಲ್ಲಿ ಇದುವರೆಗೆ ಶೇ 82.71ರಷ್ಟು ಮಂದಿಗೆ ಅರ್ಜಿ ನಮೂನೆ ವಿತರಿಸಿದಂತೆ ಆಗಿದೆ.

ಮೊದಲ ಹಂತದ ಎಸ್‌ಐಆರ್ ಪ್ರಕ್ರಿಯೆಯನ್ನು ಬಿಹಾರದಲ್ಲಿ ನಡೆಸಲಾಗಿದೆ. ಚುನಾವಣಾ ಆಯೋಗವು ಎರಡನೇ ಹಂತದಲ್ಲಿ ಛತ್ತೀಸಗಢ, ಗೋವಾ, ಗುಜರಾತ್, ಕೇರಳ, ಮಧ್ಯ ಪ್ರದೇಶ, ರಾಜಸ್ಥಾನ, ತಮಿಳುನಾಡು, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಪುದುಚೇರಿ, ಅಂಡಮಾನ್ ಮತ್ತು ನಿಕೋಬಾರ್ ಹಾಗೂ ಲಕ್ಷದ್ವೀಪದಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆಸುತ್ತಿದೆ.



ಛತ್ತೀಸಗಢ: 6 ನಕ್ಸಲರ ಸಾವು

ಬಿಜಾಪುರ್ (ಪಿಟಿಐ): ಉಗ್ರ ಮಾವೋವಾದಿ ನಾಯಕಿ ಹಾಗೂ ಹಿರಿಯ ನಕ್ಸಲ್ ಪಾಪಾರಾವ್ ಅವರ ಪತ್ನಿ ಊರ್ಮಿಳಾ, ಬುಚ್ಚಣ್ಣ ಕುಡಿಯಂ ಸೇರಿದಂತೆ ಆರು ಮಂದಿ ನಕ್ಸಲರು ಛತ್ತೀಸಗಢದ ಬಿಜಾಪುರ್ ಜಿಲ್ಲೆಯಲ್ಲಿ ನವೆಂಬರ್ 11ರಂದು ಭದ್ರತಾ ಪಡೆಗಳು ನಡೆಸಿದ ಗುಂಡಿನ ದಾಳಿಯಲ್ಲಿ ಮೃತಪಟ್ಟಿದ್ದಾರೆ ಎಂದು ಗುರುವಾರ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಕಾಂಡುಲ್ನರ್ ಮತ್ತು ಕಚಲರಾಮ್ ಗ್ರಾಮದ ಸಮೀಪ ಇರುವ ಇಂದ್ರಾವತಿ ರಾಷ್ಟ್ರೀಯ ಉದ್ಯಾನದ ದಟ್ಟ ಅರಣ್ಯದಲ್ಲಿ ಇವರೆಲ್ಲರೂ ಗುಂಡಿಗೆ ಬಲಿಯಾದರು. ಇವರೆಲ್ಲರ ಮಾಹಿತಿ ಕೊಟ್ಟವರಿಗೆ ₹27 ಲಕ್ಷ ಬಹುಮಾನ ಘೋಷಿಸಲಾಗಿತ್ತು ಎಂದು ಬಿಜಾಪುರ್ ಎಸ್.ಪಿ. ಜಿತೇಂದ್ರ ಯಾದವ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಬುಚ್ಚಣ್ಣ ಅಲಿಯಾಸ್ ಕನ್ನಾ ಹಲವು ಬೃಹತ್ ನಕ್ಸಲ್ ದಾಳಿಗಳ ಸೂತ್ರಧಾರರಾಗಿದ್ದರು. ಪೊಲೀಸ್ ಮಾಹಿತಿದಾರರು ಎಂದು ಭಾವಿಸಿ 20ಕ್ಕೂ ಹೆಚ್ಚು ಗ್ರಾಮಸ್ಥರನ್ನು ಬಾಂಬ್‌ಗಳನ್ನು ಸ್ಫೋಟಿಸಿ ಹತ್ಯೆ ಮಾಡಿದ ಆರೋಪ ಇವರ ಮೇಲಿತ್ತು. ಊರ್ಮಿಳಾ ಪೀಪಲ್ಸ್ ಲಿಬರೇಷನ್ ಗೆರಿಲ್ಲಾ ಆರ್ಮಿಯ ಸಹಚರರಾಗಿದ್ದರು. ಇವರಲ್ಲದೇ ಜಗತ್ ಟಾಮೋ ಅಲಿಯಾಸ್ ಟಾಮೋ, ದೇವೆ, ಭಗತ್, ಮಂಗ್ಲಿ ಓಯಮ್ ಗುಂಡಿನ ದಾಳಿಯಲ್ಲಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿ ತಿಳಿಸಿದರು.

ಸಿಐಎಸ್‌ಸಿಇ: 10,12ನೇ ತರಗತಿ ಪರೀಕ್ಷಾ ದಿನಾಂಕ ಪ್ರಕಟ

ನವದೆಹಲಿ (ಪಿಟಿಐ): 'ಕೌನ್ಸಿಲ್ ಫಾರ್ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್' (ಸಿಐಎಸ್‌ಸಿಇ) 10 ಮತ್ತು 12ನೇ ತರಗತಿಗಳ ಬೋರ್ಡ್ ಪರೀಕ್ಷಾ ದಿನಾಂಕ ಪ್ರಕಟಿಸಿದೆ.



10ನೇ ತರಗತಿ ಪರೀಕ್ಷೆ ಫೆಬ್ರುವರಿ 17ರಿಂದ ಮಾರ್ಚ್ 30ರವರೆಗೆ ನಡೆಯಲಿದ್ದು, 12ನೇ ತರಗತಿ ಪರೀಕ್ಷೆ ಫೆಬ್ರುವರಿ 12ರಿಂದ ಏಪ್ರಿಲ್ 6ರ ವರೆಗೆ ನಡೆಯಲಿವೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

'ಈ ವರ್ಷ ಪರೀಕ್ಷಾ ವೇಳಾಪಟ್ಟಿಯನ್ನು ಶೈಕ್ಷಣಿಕ ವೇಳಾಪಟ್ಟಿಗೆ ಸರಿಹೊಂದುವಂತೆ ಮಾಡಲಾಗಿದ್ದು, ಪ್ರಮುಖ ವಿಷಯಗಳ ನಡುವೆ ವಿದ್ಯಾರ್ಥಿಗಳ ತಯಾರಿಗೆ ಹೆಚ್ಚು ಸಮಯವನ್ನು ಮೀಸಲಿಡಲಾಗಿದೆ' ಎಂದು ಸಿಐಎಸ್‌ಸಿಇ ಮುಖ್ಯ ಕಾರ್ಯನಿರ್ವಾಹಕ ಜೋಸೆಫ್ ಎಮ್ಯಾನುಯೆಲ್ ತಿಳಿಸಿದ್ದಾರೆ.

ಈ ವರ್ಷ ಐಸಿಎಸ್‌ಇ (10ನೇ ತರಗತಿ) ಪರೀಕ್ಷೆಯನ್ನು ಸುಮಾರು 2.6 ಲಕ್ಷ ಅಭ್ಯರ್ಥಿಗಳು ಬರೆಯಲಿದ್ದು, ಐಎಸ್‌ಸಿ (12ನೇ ತರಗತಿ) ಪರೀಕ್ಷೆಯನ್ನು ಸುಮಾರು 1.5 ಲಕ್ಷ ಅಭ್ಯರ್ಥಿಗಳು ಬರೆಯಲಿದ್ದಾರೆ.

'ವಂದೇ ಮಾತರಂ'ಗೆ ಆಕ್ಷೇಪ: ಸರ್ಕಾರಿ ಶಾಲೆಯ ಶಿಕ್ಷಕ ಅಮಾನತು

ಅಲಿಗಢ (ಉತ್ತರ ಪ್ರದೇಶ) (ಪಿಟಿಐ): 'ವಂದೇ ಮಾತರಂ' ಹಾಡಲು ಆಕ್ಷೇಪ ವ್ಯಕ್ತಪಡಿಸಿದ ಆರೋಪದ ಮೇಲೆ ಸರ್ಕಾರಿ ಶಾಲೆಯೊಂದರ ಶಿಕ್ಷಕನನ್ನು ಅಮಾನತು ಮಾಡಲಾಗಿದೆ.

ಘಟನೆಯು ಶಹಪುರದ ಕುತುಬ್ ಪ್ರದೇಶದಲ್ಲಿನ ಸರ್ಕಾರಿ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಬುಧವಾರ ನಡೆದಿದೆ. ಬೆಳಗಿನ ಪ್ರಾರ್ಥನೆ ವೇಳೆ ರಾಷ್ಟ್ರಗೀತೆಯ ಬಳಿಕ 'ವಂದೇ ಮಾತರಂ' ಹಾಡಲು ಶಿಕ್ಷಕ ಶಂಸುಲ್ ಹಸನ್ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದು ಜಿಲ್ಲಾ ಶಿಕ್ಷಣ ಅಧಿಕಾರಿ (ಬಿಎಸ್‌ಎ) ರಾಕೇಶ್ ಕುಮಾರ್ ಸಿಂಗ್ ಅವರು ಗುರುವಾರ ತಿಳಿಸಿದ್ದಾರೆ.

ಶಾಲಾ ಆಡಳಿತ ನೀಡಿದ ದೂರಿನ ಅನ್ವಯ ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ಶಾಲೆಗೆ ಭೇಟಿ ನೀಡಿ, ಸಿಬ್ಬಂದಿಯ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದಾರೆ.

ಸಿಬ್ಬಂದಿಯೊಂದಿಗೆ ಅನುಚಿತವಾಗಿ ವರ್ತಿಸಿದರು ಎಂಬ ಆರೋಪವನ್ನೂ ಕೆಲವರು ಮಾಡಿದ್ದಾರೆ ಎಂದಿದ್ದಾರೆ. 'ವಂದೇ ಮಾತರಂ' ಹಾಡುವುದು ತಮ್ಮ ಧರ್ಮದ ತತ್ವಗಳಿಗೆ ವಿರುದ್ಧವಾಗಿದೆ' ಎಂದು ಹಸನ್ ಆರೋಪಿಸುತ್ತಿದ್ದರು ಎಂದು ಶಾಲಾ ಪ್ರಾಂಶುಪಾಲರಾದ ಸುಷ್ಮಾ ರಾಣಿ ಅವರು ಅಧಿಕಾರಿಗಳಿಗೆ ತಿಳಿಸಿದ್ದಾರೆ.

ತನಿಖೆಯ ಬಳಿಕ, ಬಿಎಸ್‌ಎ ನಿರ್ದೇಶನಗಳನ್ನು ಉಲ್ಲಂಘಿಸಿದ ಮತ್ತು ಧಾರ್ಮಿಕ ಭಾವನೆಗೆ ನೋವುಂಟು ಮಾಡಿದ ಆರೋಪದಡಿ ಹಸನ್ ಅವರನ್ನು ಅಮಾನತುಗೊಳಿಸಲಾಗಿದೆ.

ಚೆಸ್ ವಿಶ್ವಕಪ್: ಹಾಲಿ ರನ್ನರ್ ಅಪ್ ಪ್ರಜ್ಞಾನಂದ ಸವಾಲು ಅಂತ್ಯ

ಪ್ರಿಕ್ವಾರ್ಟರ್‌ಗೆ ಅರ್ಜುನ್, ಹರಿಕೃಷ್ಣ

ಪಣಜಿ (ಗೋವಾ): ಗ್ರ್ಯಾಂಡ್‌ಮಾಸ್ಟರ್‌ಗಳಾದ ಅರ್ಜುನ್ ಇರಿಗೇಶಿ ಮತ್ತು ಪೆಂಟಾಲ ಹರಿಕೃಷ್ಣ ಅವರು ವಿಶ್ವಕಪ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನ ಟೈಬ್ರೇಕರ್‌ನಲ್ಲಿ ಕ್ರಮವಾಗಿ ಹಂಗೇರಿಯ ಪೀಟರ್ ಲೆಕೊ ಮತ್ತು ಸ್ವೀಡನ್‌ನ ನಿಲ್ಸ್ ಗ್ರಾಂಡೆಲಿಯಸ್ ಅವರನ್ನು ಸೋಲಿಸಿ ಅಂತಿಮ 16ರ ಸುತ್ತು ತಲುಪಿದರು. ಆದರೆ ಹೋದ ವಿಶ್ವಕಪ್‌ನಲ್ಲಿ ರನ್ನರ್ ಅಪ್ ಆಗಿದ್ದ ಆರ್.ಪ್ರಜ್ಞಾನಂದ ಹೊರಬಿದ್ದರು.

ಇದರಿಂದಾಗಿ ಪ್ರಿಕ್ವಾರ್ಟರ್ ಫೈನಲ್ ಸುತ್ತಿನಲ್ಲಿ ಭಾರತದ ಇಬ್ಬರು ಆಟಗಾರರಷ್ಟೇ ಉಳಿದಿದ್ದಾರೆ.

ಎರಡನೇ ಶ್ರೇಯಾಂಕದ ಅರ್ಜುನ್, ಹಂಗೇರಿಯ ಅನುಭವಿ ಆಟಗಾರನ ವಿರುದ್ಧ ಗುರುವಾರ ಟೈಬ್ರೇಕರ್‌ನ ಮೊದಲ ಸೆಟ್‌ನಲ್ಲಿ ಎರಡೂ ಆಟ ಗೆಲ್ಲುವ ಮೂಲಕ 3–1ರಿಂದ ಪಂದ್ಯ ಗೆದ್ದರು.

ವೈಭವೋಪೇತ ರೆಸಾರ್ಟ್‌ರಿಯೊದಲ್ಲಿ ನಡೆಯುತ್ತಿರುವ ಈ ಟೂರ್ನಿ ಯಲ್ಲಿ ಹರಿಕೃಷ್ಣ ಅವರು ನಿಲ್ಸ್ ವಿರುದ್ಧ ಟೈಬ್ರೇಕರ್‌ನ ಮೊದಲ ಆಟ ಡ್ರಾ ಮಾಡಿದರು. ನಂತರ ಎರಡನೆಯನ್ನು ಗೆದ್ದು 2.5–1.5ರಲ್ಲಿ ಪಂದ್ಯ ಗೆದ್ದರು.

2023ರ ವಿಶ್ವಕಪ್‌ನಲ್ಲಿ ಕಾರ್ಲ್‌ಸನ್ ಎದುರು ಫೈನಲ್ ಆಡಿದ್ದ ಪ್ರಜ್ಞಾನಂದ ಇಲ್ಲಿ ಟೈಬ್ರೇಕರಿನಲ್ಲಿ ರಷ್ಯಾದ (ಫಿಡೆ ಪ್ರತಿನಿಧಿಸಿರುವ) ಡೇನಿಯಲ್ ದುಬೋವ್ ಅವರಿಗೆ ಸೋತರು. ಟೈಬ್ರೇಕರಿನ ಮೊದಲ ಆಟ ಡ್ರಾ ಆಯಿತು. ಎರಡನೇ ಆಟವನ್ನು ದುಬೋವ್ 53 ನಡೆಗಳಲ್ಲಿ ಗೆದ್ದರು.

ಅರ್ಜುನ್ ಇರಿಗೇಶಿ ಅವರಿಗೆ ಮುಂದಿನ ಸುತ್ತಿನಲ್ಲಿ ಉತ್ತಮ ಲಯದಲ್ಲಿರುವ ಅಮೆರಿಕದ ಆಟಗಾರ ಲೆವೋನ್ ಅರೋನಿಯನ್ ಅವರ ಸವಾಲು ಕಾದಿದೆ. ಅರೋನಿಯನ್ ಎರಡು ಬಾರಿಯ ಚಾಂಪಿಯನ್ ಆಗಿದ್ದಾರೆ.

ಮೂರನೇ ಸುತ್ತಿನಲ್ಲಿ, ವಿಶ್ವ ಚಾಂಪಿಯನ್ ಗುಕೇಶ್ ಅವರನ್ನು ಹೊರದೂಡಿದ್ದ ಜರ್ಮನಿಯ ಫ್ರೆಡೆರಿಕ್ ಸ್ವೇನ್ ಅವರು ನಾಲ್ಕನೇ ಸುತ್ತಿನಲ್ಲಿ ಅರ್ಮೇನಿಯಾದ ಸೆರ್ಗಿಸ್ಯಾನ್ ಶಾಂತ್ ಅವರನ್ನು 2.5–1.5 ರಿಂದ ಸೋಲಿಸಿ ಯಶಸ್ಸಿನ ಓಟ ಮುಂದುವರಿಸಿದ್ದಾರೆ.



ಅರ್ಜುನ್ ಇರಿಗೇಶಿ ಫಿಡೆ ವೆಬ್‌ಸೈಟ್ ಚಿತ್ರ

ಲಗ್ರಾವ್‌ಗೆ ಆಘಾತ

ರಷ್ಯಾದ ಅಲೆಕ್ಸಿ ಗ್ರೆಬ್ನೆವ್, ಫ್ರಾನ್ಸ್‌ನ ತಾರೆ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಅವರನ್ನು 2.5–1.5 ರಿಂದ ಸೋಲಿಸಿದ್ದು ದಿನದ ಅನಿರೀಕ್ಷಿತವೆನಿಸಿತು.

ಜರ್ಮನಿಯ ವಿನ್ಸೆಂಟ್ ಕೀಮರ್ ಅವರೂ ಹೊರಬಿದ್ದರು. ರಷ್ಯಾದ ಆಂಡ್ರಿ ಎಸಿಪೆಂಕೊ 4–2 ರಿಂದ ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಕೀಮರ್ ಅವರನ್ನು ಸೋಲಿಸಿದರು. ಮತ್ತೊಂದು ಪಂದ್ಯದಲ್ಲಿ ಸ್ಯಾಮ್ ಶಂಕ್ಲಾಂಡ್ (ಅಮೆರಿಕ) ಗೆಲುವಿನ ಓಟ ಮುಂದುವರಿಸಿ 3–1 ರಿಂದ ಹಂಗೇರಿಯ ರಿಚರ್ಡ್ ರ್‍ಯಾಪೋರ್ಟ್ ಅವರನ್ನು ಸೋಲಿಸಿದರು. ಉಜ್ಬೇಕ್ ಆಟಗಾರ ಜಾವೊಖಿರ್ ಸಿಂದರೊವ್ 2.5–1.5 ರಿಂದ ಚೀನಾದ ಯು ಯಾಂಗ್‌ಯಿ ಅವರನ್ನು ಸೋಲಿಸಿದರು.

ಶೂಟಿಂಗ್: ಇಶಾ, ಮನು ಫೈನಲ್‌ಗೆ

ಕೈರೊ (ಪಿಟಿಐ): ಭಾರತದ ಶೂಟರ್‌ಗಳಾದ ಇಶಾ ಸಿಂಗ್ ಮತ್ತು ಮನು ಭಾಕರ್ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವ ಚಾಂಪಿಯನ್‌ಷಿಪ್‌ನ ಮಹಿಳೆಯರ 25 ಮೀ. ಸ್ಪೋರ್ಟ್ ಪಿಸ್ತೂಲ್ ಸ್ಪರ್ಧೆಯಲ್ಲಿ ಫೈನಲ್‌ಗೆ ಮುನ್ನಡೆದರು.

85 ಶೂಟರ್‌ಗಳಿದ್ದ ಅರ್ಹತಾ ಸುತ್ತಿನಲ್ಲಿ ಇಶಾ ನಾಲ್ಕನೇ ಸ್ಥಾನ ಮತ್ತು ಮನು ಏಳನೇ ಸ್ಥಾನದೊಂದಿಗೆ ಫೈನಲ್‌ಗೆ ಅರ್ಹತೆ ಪಡೆದರು.

ಒಲಿಂಪಿಯನ್ ಇಶಾ 294 ಅಂಕಗಳನ್ನು ಗಳಿಸಿದರೆ, ಒಲಿಂಪಿಕ್ ಅವಳಿ ಪದಕ ವಿಜೇತೆ ಮನು 292 ಅಂಕಗಳನ್ನು ಸಂಪಾದಿಸಿದರು. ಸ್ಪರ್ಧೆಯಲ್ಲಿದ್ದ ಭಾರತದ ಮತ್ತೊಬ್ಬ ಶೂಟರ್ ರಾಹಿ ಸರ್ನೋಬತ್ 284 ಅಂಕಗಳೊಂದಿಗೆ 56ನೇ ಸ್ಥಾನ ಗಳಿಸಿದರು.

ಅರ್ಹತಾ ಸುತ್ತಿನಲ್ಲಿ ಟರ್ಕಿಯ ಸೆವ್ವಲ್ ಇಲೈಡಾ ತರ್ಹಾನ್ (299) ಅಗ್ರಸ್ಥಾನ ಪಡೆದರೆ, ಪ್ಯಾರಿಸ್ ಒಲಿಂಪಿಕ್ ಬೆಳ್ಳಿ ಪದಕ ವಿಜೇತೆ, ಫ್ರಾನ್ಸ್‌ನ ಕ್ಯಾಮಿಲ್ಲೆ ಜೆಡ್ರೆಜೆವ್‌ಸ್ಕಿ ಮತ್ತು ಇರಾನ್‌ನ ಹನಿಯೆ ರೋಸ್ತಾಮಿಯನ್ (ತಲಾ 295 ಅಂಕ) ನಂತರದ ಸ್ಥಾನ ಪಡೆದರು.

ಏಷ್ಯನ್ ಆರ್ಚರಿ ಚಾಂಪಿಯನ್‌ಷಿಪ್ ಮಿಂಚಿದ ಜ್ಯೋತಿ: ಭಾರತಕ್ಕೆ 3 ಚಿನ್ನ

ಢಾಕಾ (ಪಿಟಿಐ): ಅನುಭವಿ ಸ್ಪರ್ಧಿ ಜ್ಯೋತಿ ಸುರೇಖಾ ವೆನ್ನಂ ಮುಂಚೂಣಿಯಲ್ಲಿದ್ದ ಭಾರತ ಕಾಂಪೌಂಡ್ ಆರ್ಚರಿ ತಂಡ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ಅಮೋಘ ಪ್ರದರ್ಶನ ನೀಡಿ ಮೂರು ಚಿನ್ನ ಮತ್ತು ಎರಡು ಬೆಳ್ಳಿ ಪದಕಗಳನ್ನು ಬಾಚಿಕೊಂಡಿತು.

29 ವರ್ಷ ವಯಸ್ಸಿನ ಜ್ಯೋತಿ ಅವರು ಕಾಂಪೌಂಡ್ ವಿಭಾಗದಲ್ಲಿ ವೈಯಕ್ತಿಕ ಚಿನ್ನ ಗೆದ್ದರಲ್ಲದೇ, ತಂಡ ವಿಭಾಗದಲ್ಲೂ ಚಿನ್ನ ಗೆಲ್ಲಲು ನೆರವಾದರು.

ದೀಪ್ಶಿಕಾ, ಪ್ರತೀಕಾ ಪ್ರದೀಪ್ ಅವರ ಜೊತೆಗೂಡಿದ ಜ್ಯೋತಿ ತಂಡ ವಿಭಾಗದ ಫೈನಲ್‌ನಲ್ಲಿ 236–234 ರಿಂದ ದಕ್ಷಿಣ ಕೊರಿಯಾವನ್ನು (ಪಾರ್ಕ್ ಯೆರಿನ್, ಒಹ್ ಯೂಹ್ಯುನ್, ಜುಂಗ್‌ಯೂನ್ ಪಾರ್ಕ್) ಸೋಲಿಸಲು ನೆರವಾದರು.

ಭಾರತೀಯ ಬಿಲ್ಗಾರ್ತಿಯರ ವ್ಯವಹಾರವಾಗಿದ್ದ ವೈಯಕ್ತಿಕ ಫೈನಲ್‌ನಲ್ಲಿ ಜ್ಯೋತಿ, 17 ವರ್ಷ ವಯಸ್ಸಿನ ಪ್ರತೀಕಾ ಅವರಿಂದ ಕಠಿಣ ಸವಾಲು ಎದುರಿಸಿದರೂ ಅಂತಿಮವಾಗಿ 147–145ರಲ್ಲಿ ಗೆದ್ದರು.

ಕಾಂಪೌಂಡ್ ಮಿಶ್ರ ವಿಭಾಗದ ಫೈನಲ್‌ನಲ್ಲಿ ಅಭಿಷೇಕ್ ವರ್ಮಾ–ದೀಪ್ಶಿಕಾ ಜೋಡಿ 153–151 ರಿಂದ ಬಾಂಗ್ಲಾದೇಶದ ಜೋಡಿಯನ್ನು ಸೋಲಿಸಿ ಭಾರತ ಮತ್ತೊಂದು ಚಿನ್ನ ತನ್ನದಾಗಿಸಿಕೊಂಡಿತು.

ಕಾಂಪೌಂಡ್ ತಂಡ ವಿಭಾಗದ ಫೈನಲ್‌ನಲ್ಲಿ ಭಾರತ 229–230ರಲ್ಲಿ ಕಜಾಕಸ್ತಾನ ತಂಡಕ್ಕೆ ಸೋತು ಬೆಳ್ಳಿ ಪದಕ ಗಳಿಸಿತು. ಅಭಿಷೇಕ್ ವರ್ಮಾ, ಸಾಹಿಲ್ ರಾಜೇಶ್ ಜಾಧವ್, ಪ್ರಥಮೇಶ ಬಾಲಚಂದ್ರ ಫುಗೆ ತಂಡದಲ್ಲಿದ್ದರು.



ಚಿನ್ನದ ಪದಕದೊಂದಿಗೆ ಜ್ಯೋತಿ ಸುರೇಖಾ ವೆನ್ನಂ

ಜಪಾನ್ ಮಾಸ್ಟರ್ಸ್ ಕ್ವಾರ್ಟರ್‌ಗೆ ಸೇನ್, ಪ್ರಣಯ್ ನಿರ್ಗಮನ

ಕುಮಾಮೊಟೊ (ಜಪಾನ್), (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಕುಮಾಮೊಟೊ ಮಾಸ್ಟರ್ಸ್ ಜಪಾನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದರು. ಆದರೆ, ಅನುಭವಿ ಎಚ್.ಎಸ್. ಪ್ರಣಯ್ ಎರಡನೇ ಸುತ್ತಿನಲ್ಲಿ ಅಭಿಯಾನ ಮುಗಿಸಿದರು.

ಏಳನೇ ಶ್ರೇಯಾಂಕ ಹೊಂದಿರುವ 24 ವರ್ಷದ ಸೇನ್ 21-13, 21-11ರಿಂದ ಸಿಂಗಪುರದ ಜಿಯಾ ಹೆಂಗ್ ಜೇಸನ್ ತೆಹ್ ಅವರನ್ನು ಹಿಮ್ಮೆಟ್ಟಿಸಿದರು. ವಿಶ್ವ ರ್‍ಯಾಂಕಿಂಗ್‌ನಲ್ಲಿ 20ನೇ ಸ್ಥಾನದಲ್ಲಿರುವ ಜಿಯಾ ಕೇವಲ 39 ನಿಮಿಷದಲ್ಲಿ ಸೋಲೊಪ್ಪಿಕೊಂಡರು.

15ನೇ ಕ್ರಮಾಂಕದ ಭಾರತದ ಆಟಗಾರ ಮುಂದಿನ ಸುತ್ತಿನಲ್ಲಿ ಮಾಜಿ ವಿಶ್ವ ಚಾಂಪಿಯನ್ ಲೋಹ್ ಕೀನ್ ಯೂ (ಸಿಂಗಪುರ) ಅವರನ್ನು ಎದುರಿಸಲಿದ್ದಾರೆ.

33 ವರ್ಷದ ಪ್ರಣಯ್ 18-21, 15-21ರಿಂದ ಡೆನ್ಮಾರ್ಕ್‌ನ ರಾಸ್ಮಸ್ ಗೆಮ್ಕೆ ಅವರಿಗೆ ಶರಣಾದರು.

ಲಕ್ಷದೀಪೋತ್ಸವ: ಎಲ್ಲರ ಚಿತ್ತ ಧರ್ಮಸ್ಥಳದತ್ತ

ನ:15ರಿಂದ 19ರವರೆಗೆ ಧರ್ಮಸ್ಥಳದಲ್ಲಿ ಲಕ್ಷ ದೀಪಗಳ ವೈಭವ

ಆರ್.ಎನ್.ಪೂವಣಿ, ಉಜಿರೆ

ಎಂಟು ಶತಮಾನಗಳ ಇತಿಹಾಸ ಮತ್ತು ಪರಂಪರೆಯನ್ನು ಹೊಂದಿರುವ ನಾಡಿನ ಪವಿತ್ರ ಕ್ಷೇತ್ರ ಧರ್ಮಸ್ಥಳ, ಸರ್ವಧರ್ಮಗಳ ನೆಲೆವೀಡು. ಅನ್ನದಾನ, ಅಭಯದಾನ, ವಿದ್ಯಾದಾನ ಮತ್ತು ಔಷಧದಾನ- ಎಂಬ ಚತುರ್ವಿಧ ದಾನಗಳು ಇಲ್ಲಿ ನಿತ್ಯೋತ್ಸವ. ಜಾತಿ- ಮತ ಭೇದವಿಲ್ಲದೆ ಇಲ್ಲಿಗೆ ಬರುವ ಎಲ್ಲ ಭಕ್ತರನ್ನು ಅತಿಥಿಗಳಂತೆ ಗೌರವಿಸಿ ಸತ್ಕರಿಸಲಾಗುತ್ತದೆ. ಸತ್ಯ, ಧರ್ಮ, ನ್ಯಾಯ, ನೀತಿ ಇಲ್ಲಿ ನೆಲೆ ನಿಂತಿದೆ.

ಸರ್ವಧರ್ಮ ಸಮನ್ವಯ ಕೇಂದ್ರ: ಇಲ್ಲಿನ ಮುಖ್ಯ ಆರಾಧ್ಯ ದೇವರು ಶಿವ. ಅರ್ಚಕರು ವೈಷ್ಣವ ಸಂಪ್ರದಾಯದವರು. ಆಡಳಿತ ನಡೆಸುವ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಜೈನರು. ಯಾವುದೇ ಜಾತಿ-ಮತ ಭೇದವಿಲ್ಲದ ಈ ಕ್ಷೇತ್ರಕ್ಕೆ ಸರ್ವಧರ್ಮೀಯರೂ ಭಕ್ತರು.

ಡಿ.ವೀರೇಂದ್ರ ಹೆಗ್ಗಡೆ ಅವರು ಹೆಗ್ಗಡೆ ಪರಂಪರೆಯಲ್ಲಿ 21ನೇ ಧರ್ಮಾಧಿಕಾರಿ. ಧರ್ಮಸ್ಥಳದಲ್ಲಿ ಕಾರ್ತಿಕ ಮಾಸ ಉತ್ಸವಗಳ ಪರ್ವಕಾಲ. ಲಕ್ಷದೀಪೋತ್ಸವದ ಸಂಭ್ರಮ- ಸಡಗರ. ಧರ್ಮಸ್ಥಳಕ್ಕೆ ಸಂಬಂಧಪಟ್ಟಂತೆ 'ಮಾತು ಬಿಡ ಮಂಜುನಾಥ' ಎಂಬ ಮಾತು ಎಲ್ಲರಿಗೂ ಚಿರಪರಿಚಿತವಾಗಿದೆ. ಈ ಕಾರಣದಿಂದಲೇ ಆಣೆಮಾತು ತೀರ್ಮಾನ, ವಾಕ್‌ದೋಷ ಪರಿಹಾರ, ಉಯಿಲು, ನ್ಯಾಯದಾನ ಮೊದಲಾದ ವಿಶಿಷ್ಟ ಸಂಪ್ರದಾಯಗಳು ಇಲ್ಲಿವೆ.

ವೈವಿಧ್ಯಮಯ ಸೇವೆಗಳು: ಅನೇಕ ಭಕ್ತರು ಧರ್ಮಸ್ಥಳಕ್ಕೆ ಪಾದಯಾತ್ರೆಯಲ್ಲಿ ಬಂದರೆ, ಹಲವರು ಸೈಕಲ್ ಹಾಗೂ ಇತರ ದ್ವಿಚಕ್ರವಾಹನಗಳ ಮೂಲಕ ಬಂದು ಸೇವೆ ಮಾಡುತ್ತಾರೆ. ರೈತರು ಬೆಳೆದ ತರಕಾರಿ, ಹಣ್ಣುಹಂಪಲು, ಧಾನ್ಯಗಳನ್ನು ಅನ್ನದಾಸೋಹಕ್ಕೆ ಕಾಣಿಕೆಯಾಗಿ ಅರ್ಪಿಸುತ್ತಾರೆ.

ಬೆಂಗಳೂರಿನ ಹೂವಿನ ವ್ಯಾಪಾರಿಗಳು ವಿವಿಧ ಜಾತಿಯ ಹೂಗಳನ್ನು ತಂದು ದೇವಸ್ಥಾನ, ಬೀಡು (ಹೆಗ್ಗಡೆಯವರ ನಿವಾಸ), ಅನ್ನಪೂರ್ಣಾ ಹಾಗೂ ವಸತಿ ಛತ್ರಗಳನ್ನು ಆಕರ್ಷಕ ವಿನ್ಯಾಸದಿಂದ ಅಲಂಕರಿಸಿ ಧನ್ಯತೆ ಹೊಂದುತ್ತಾರೆ. ಲಕ್ಷದೀಪೋತ್ಸವದ ದಿನ (ನ.19) ರಾತ್ರಿ ಅನ್ನಪೂರ್ಣದಲ್ಲಿ ಊಟದ ವ್ಯವಸ್ಥೆ ಇರುವುದಿಲ್ಲ. ಅಂದು ಬೆಂಗಳೂರಿನ ಭಕ್ತರೇ ಸೇರಿ ವಿಶೇಷ ಸಿಹಿತಿಂಡಿಗಳೊಂದಿಗೆ ಅನ್ನದಾಸೋಹದ ಸೇವೆ ಮಾಡುತ್ತಾರೆ.

ಪ್ರೇಕ್ಷಣೀಯ ಸ್ಥಳಗಳು: ಬಾಹುಬಲಿ ಬೆಟ್ಟ (ರತ್ನಗಿರಿ), ಅಣ್ಣಪ್ಪ ಸ್ವಾಮಿಬೆಟ್ಟ, ಲಲಿತೋದ್ಯಾನ, ಮಂಜೂಷಾ ವಸ್ತುಸಂಗ್ರಹಾಲಯ, ಕಾರ್‌ಮ್ಯೂಸಿಯಂ, ಜಮಾ ಉಗ್ರಾಣ, ಭಗವಾನ್ ಚಂದ್ರನಾಥ ಸ್ವಾಮಿ ಬಸದಿ, ನೆಲ್ಯಾಡಿಬೀಡು, ತಾಳೆಗರಿ/ ಹಸ್ತಪ್ರತಿ ಗ್ರಂಥಾಲಯ, ವಸಂತ ಮಹಲ್ (ಕೀರ್ತಿಶೇಷ ಮಂಜಯ್ಯ ಹೆಗ್ಗಡೆ ಅವರು ರಚಿಸಿದ ಪೇಂಟಿಂಗ್ ಕಲಾಕೃತಿಗಳನ್ನು ಇಲ್ಲಿ ನೋಡಬಹುದು).

ವಸತಿಛತ್ರಗಳು: ರಜತಾದ್ರಿ, ಸಹ್ಯಾದ್ರಿ, ಗಾಯತ್ರಿ, ವೈಶಾಲಿ, ಶರಾವತಿ, ಗಂಗೋತ್ರಿ, ಸಾಕೇತ ವಸತಿಛತ್ರದಲ್ಲಿ ವಸತಿ ಸೌಲಭ್ಯವೂ ಇದೆ. ನೇತ್ರಾವತಿ ಮತ್ತು ಶ್ರೀಸನ್ನಿಧಿಯಲ್ಲಿ ವಸತಿ ಪಡೆಯಲು ದೇವಳ ಕಾರ್ಯಾಲಯದಿಂದ ಅನುಮತಿ ಪಡೆಯಬೇಕಾಗುತ್ತದೆ.

ದರ್ಶನದ ಸಮಯ: ಪ್ರತಿದಿನ ಬೆಳಿಗ್ಗೆ 6.30ರಿಂದ 11.30ರವರೆಗೆ, ಮಧ್ಯಾಹ್ನ 12.30ರಿಂದ 2.30ರವರೆಗೆ. ಸಂಜೆ 5ರಿಂದ ರಾತ್ರಿ 8.30ರವರೆಗೆ. ಜಾತ್ರೆ, ಉತ್ಸವ, ರಜಾದಿನಗಳಲ್ಲಿ ಸಮಯದಲ್ಲಿ ಕೊಂಚ ವ್ಯತ್ಯಯವಾಗುತ್ತದೆ.

ಬೀಡಿನಲ್ಲಿ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರ ಭೇಟಿಯ ಸಮಯ: ಬೆಳಿಗ್ಗೆ 9ರಿಂದ 12ರವರೆಗೆ. ಸಂಜೆ 4ರಿಂದ 5.30, ರಾತ್ರಿ 7ರಿಂದ 8.

ಲಕ್ಷದೀಪೋತ್ಸವ: ಧರ್ಮಸ್ಥಳದಲ್ಲಿ ಹಬ್ಬಗಳು, ಉತ್ಸವಗಳು, ಚತುರ್ವಿಧ ದಾನ-ಪರಂಪರೆ, ಸೇವಾ ಕಾರ್ಯಗಳು ನಿತ್ಯ, ನಿರಂತರ ನಡೆಯುತ್ತವೆ. ಉತ್ಸವಗಳ ಪೈಕಿ ಕಾರ್ತಿಕ ಮಾಸದಲ್ಲಿ ನಡೆಯುವ ಲಕ್ಷದೀಪೋತ್ಸವ ವಿಶೇಷ ಮಹತ್ವ ಹೊಂದಿದೆ. ದೀಪ ಜ್ಞಾನದ ಸಂಕೇತ. ಕತ್ತಲೆಯಿಂದ ಬೆಳಕಿನ ಕಡೆಗೆ, ಅಜ್ಞಾನದಿಂದ ಸುಜ್ಞಾನದ ಕಡೆಗೆ ಸಾಗುವಂತೆ ಮಾಡುವುದೇ ದೀಪದ ಸಂಕೇತ. ಲಕ್ಷದೀಪೋತ್ಸವ ಕೇವಲ ಬೆಳಕಿನ ಹಬ್ಬವಲ್ಲ. ಅದು ಧರ್ಮ, ಸಾಹಿತ್ಯ ಮತ್ತು ಕಲೆಗಳ ತ್ರಿವೇಣಿ ಸಂಗಮ. ಅನ್ನದಾಸೋಹ ಮತ್ತು ಜ್ಞಾನ ದಾಸೋಹದೊಂದಿಗೆ ಲಕ್ಷಾಂತರ ಮಂದಿಗೆ ಧರ್ಮ, ಕಲೆ, ಸಾಹಿತ್ಯ, ಸಂಸ್ಕೃತಿಗಳ ಉದ್ದೀಪನದೊಂದಿಗೆ ಸಾರ್ಥಕ ಬದುಕಿನ ಉಪಯುಕ್ತ ಸಂದೇಶ ಮತ್ತು ಮಾರ್ಗದರ್ಶನ ನೀಡುವ ಸಂದರ್ಭವೂ ಆಗಿದೆ.

ಧರ್ಮಸ್ಥಳದ ಪ್ರೌಢಶಾಲೆ ವಠಾರದಲ್ಲಿ ನ.15ರಿಂದ 19ರವರೆಗೆ ರಾಜ್ಯಮಟ್ಟದ ವಸ್ತುಪ್ರದರ್ಶನ ಆಯೋಜಿಸಿದ್ದು, ಸುಮಾರು 300 ಮಳಿಗೆಗಳು ಪ್ರೇಕ್ಷಕರನ್ನು ಆಕರ್ಷಿಸುತ್ತವೆ. ಕೃಷಿ, ಆರೋಗ್ಯ, ಶಿಕ್ಷಣ, ಕೈಗಾರಿಕೆ, ಸರ್ಕಾರದ ವಿವಿಧ ಇಲಾಖೆಗಳ ಮಳಿಗೆಗಳೂ ಇಲ್ಲಿದ್ದು, ಮಾಹಿತಿ ನೀಡುತ್ತಿವೆ.

ವಸ್ತುಪ್ರದರ್ಶನ ವೇದಿಕೆ ಹಾಗೂ ಅಮೃತವರ್ಷಿಣಿ ಸಭಾಭವನದಲ್ಲಿ ಪ್ರತಿದಿನ ಸಂಗೀತ, ನೃತ್ಯ, ನಾಟಕ, ಯಕ್ಷಗಾನ ಸೇರಿದಂತೆ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಹೀಗೆ ಲಕ್ಷದೀಪೋತ್ಸವವು ಬೆಳಕಿನ ರೂಪದಲ್ಲಿ ಮಾನವೀಯತೆ, ನೈತಿಕತೆ ಮತ್ತು ಮಾನವೀಯ ಮೌಲ್ಯಗಳನ್ನು ಉದ್ದೀಪನಗೊಳಿಸುವ ಮಹಾ ಉತ್ಸವ. ಭಕ್ತರ ಬದುಕಿಗೆ ನಿರಂತರ ನಂದಾದೀಪವಾಗಿ ಬೆಳಗುವ ಮಹೋತ್ಸವ.

ಸರ್ವಧರ್ಮ ಸಮ್ಮೇಳನ ಮತ್ತು ಸಾಹಿತ್ಯ ಸಮ್ಮೇಳನ: 'ಜನ ಮರುಳೋ, ಜಾತ್ರೆ ಮರುಳೋ' ಎಂಬಂತೆ ಆಗಬಾರದು ಎಂಬ ಉದ್ದೇಶದಿಂದ ಅಂದಿನ ಧರ್ಮಾಧಿಕಾರಿ, 'ಮಾತನಾಡುವ ಮಂಜುನಾಥ' ಎಂದೇ ಚಿರಪರಿಚಿತರಾಗಿದ್ದ ಕೀರ್ತಿಶೇಷ ಮಂಜಯ್ಯ ಹೆಗ್ಗಡೆಯವರು 1933ರಲ್ಲಿ ಲಕ್ಷದೀಪೋತ್ಸವ ಸಂದರ್ಭದಲ್ಲಿ ಸರ್ವಧರ್ಮ ಸಮ್ಮೇಳನ ಮತ್ತು ಸಾಹಿತ್ಯ ಸಮ್ಮೇಳನ ಪ್ರಾರಂಭಿಸಿದರು. ಈ ಬಾರಿ ಉಭಯ ಸಮ್ಮೇಳನಗಳ 93ನೇ ಅಧಿವೇಶನ ನಡೆಯಲಿದೆ. ಉತ್ಸವದಲ್ಲಿ ಭಾಗವಹಿಸಿದ ಭಕ್ತರಿಗೆ ಸಾಹಿತ್ಯ ಸಿಂಚನ ಹಾಗೂ ಸರ್ವಧರ್ಮಗಳ ಬಗ್ಗೆ ಚಿಂತನ- ಮಂಥನದೊಂದಿಗೆ ಪುನೀತರಾಗುವ ಸುವರ್ಣಾವಕಾಶ ಇದಾಗಿದೆ.

ಲಕ್ಷದೀಪೋತ್ಸವ ಮರುದಿನ ನ.20ರಂದು ಮಹೋತ್ಸವ ಸಭಾಭವನದಲ್ಲಿ ಭಗವಾನ್ ಚಂದ್ರನಾಥ ಸ್ವಾಮಿಯ ಸಮವಸರಣ ಪೂಜೆ ನಡೆಯುತ್ತದೆ. ತೀರ್ಥಂಕರರು ತಮ್ಮ ದಿವ್ಯಧ್ವನಿಯಿಂದ ಉಪದೇಶ ನೀಡುವ ಧರ್ಮಸಭೆಗೆ ಸಮವಸರಣ ಎನ್ನುತ್ತಾರೆ. ಇಲ್ಲಿ ಸಕಲ ಜೀವಿಗಳಿಗೂ ಧರ್ಮೋಪದೇಶ ಕೇಳುವ ಅವಕಾಶ ಇರುವುದರಿಂದ ಇದಕ್ಕೆ ಸಮವಸರಣ ಎನ್ನುತ್ತಾರೆ. ಜೈನರ ಆರಾಧನಾ ಕೇಂದ್ರಗಳಾದ ಬಸದಿಗಳು (ಜಿನಚೈತ್ಯಾಲಯಗಳು) ಸಮವಸರಣದ ಪ್ರತೀಕವಾಗಿವೆ.




ಮಂಜಯ್ಯ ಹೆಗ್ಗಡೆ



ಡಿ.ವೀರೇಂದ್ರ ಹೆಗ್ಗಡೆ





ಚಂದ್ರನಾಥ ಸ್ವಾಮಿ



ಭಾರತ ಬ್ಯಾಟರ್‌ಗಳಿಗೆ 'ಸ್ಪಿನ್ ಟೆಸ್ಟ್'

ಭಾರತ–ದಕ್ಷಿಣ ಆಫ್ರಿಕಾ ಮೊದಲ ಪಂದ್ಯ ಇಂದಿನಿಂದ • ಗಿಲ್ ನಾಯಕತ್ವದ ಪರೀಕ್ಷೆ

ಕೋಲ್ಕತ್ತ (ಪಿಟಿಐ): ಆತಿಥೇಯ ಭಾರತ ತಂಡದ ಬ್ಯಾಟಿಂಗ್ ಶಕ್ತಿಗೆ ದಕ್ಷಿಣ ಆಫ್ರಿಕಾದ ಉತ್ತಮ ಸ್ಪಿನ್ನರ್‌ಗಳು ಸವಾಲೊಡ್ಡಲು ಸಿದ್ಧರಾಗಿದ್ದಾರೆ. ಈಡನ್ ಗಾರ್ಡನ್‌ನಲ್ಲಿ ಶುಕ್ರವಾರ ಆರಂಭವಾಗಲಿರುವ ಉಭಯ ತಂಡಗಳ ಮೊದಲ ಟೆಸ್ಟ್ ಪಂದ್ಯವು ಆತಿಥೇಯ ಬ್ಯಾಟರ್‌ಗಳಿಗೆ ಸತ್ವಪರೀಕ್ಷೆಯ ವೇದಿಕೆಯಾಗಲಿದೆ.

ಭಾರತ ತಂಡವು ತನ್ನ ತವರಿನ ಅಂಗಳಲ್ಲಿ ವಿದೇಶಿ ತಂಡಗಳ ಸ್ಪಿನ್ನರ್‌ಗಳ ಎದುರು ಈ ಹಿಂದೆಯೂ ಪರದಾಡಿದ ನಿದರ್ಶನಗಳಿವೆ. ಹೋದವರ್ಷ ನ್ಯೂಜಿಲೆಂಡ್ ಎದುರು ತವರಿನಲ್ಲಿಯೇ ಸರಣಿ ಸೋತಿತ್ತು. ಕಿವೀಸ್ ಬಳಗದ ಮಿಚೆಲ್ ಸ್ಯಾಂಟನರ್, ಅಜಾಜ್ ಪಟೇಲ್ ಮತ್ತು ಗ್ಲೆನ್ ಫಿಲಿಪ್ಸ್ ಅವರ ಸ್ಪಿನ್ ದಾಳಿಯ ಎದುರು ಕುಸಿದಿತ್ತು. 3 ಟೆಸ್ಟ್‌ಗಳ ಸರಣಿಯನ್ನು ಕಿವೀಸ್ ಕ್ಲೀನ್‌ಸ್ವೀಪ್ ಮಾಡಿತ್ತು.



ತೆಂಬಾ ಬವುಮಾ

ಹಾಲಿ ವಿಶ್ವ ಟೆಸ್ಟ್ ಚಾಂಪಿಯನ್ ದಕ್ಷಿಣ ಆಫ್ರಿಕಾ ತಂಡದಲ್ಲಿ ಉತ್ತಮ ಸ್ಪಿನ್ನರ್‌ಗಳಿದ್ದಾರೆ. ಈ ಹಿಂದೆ ತನ್ನ ವೇಗದ ಬೌಲಿಂಗ್ ಶಕ್ತಿಯ ಮೂಲಕ ಎದುರಾಳಿಗಳನ್ನು ಕಂಗೆಡಿಸಿದ್ದ ತಂಡ ಸ್ಪಿನ್ ಬೌಲಿಂಗ್‌ನಲ್ಲಿಯೂ ಪರಿಣತಿ ಸಾಧಿಸಿಕೊಂಡಿದೆ. ದಕ್ಷಿಣ ಆಫ್ರಿಕಾ ತಂಡವು ಇತ್ತೀಚೆಗೆ ಪಾಕಿಸ್ತಾನದಲ್ಲಿ ಸರಣಿಯನ್ನು 1–1ರಿಂದ ಸಮಬಲಗೊಳಿಸಿ ಕೊಂಡು ಇಲ್ಲಿಗೆ ಬಂದಿದೆ. ಆ ಸರಣಿಯಲ್ಲಿ ತೆಂಬಾ ಬವುಮಾ ಇರಲಿಲ್ಲ. ಭಾರತದ ಎದುರು ಅವರು ದಕ್ಷಿಣ ಆಫ್ರಿಕಾ ತಂಡವನ್ನು ಮುನ್ನಡೆಸುವರು.

ಈಚೆಗೆ ಭಾರತ ಎ ತಂಡದ ವಿರುದ್ಧ ಅವರು ದಕ್ಷಿಣ ಆಫ್ರಿಕಾ ಎ ತಂಡವನ್ನು ಪ್ರತಿನಿಧಿಸಿದ್ದರು. ಆ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಎ ತಂಡವು ದೊಡ್ಡ ಮೊತ್ತವನ್ನು ಬೆನ್ನಟ್ಟಿ ಜಯಿಸಿತ್ತು. ತಮ್ಮ ತಂಡದ ಆಟಗಾರರನ್ನು ಕೊನೆಯ ಹಂತದವರೆಗೂ ಹುರಿದುಂಬಿಸುವ ತೆಂಬಾ ಅವರ ಗುಣವೂ ಭಾರತಕ್ಕೆ ಕಠಿಣ ಸವಾಲಾಗಬಹುದು. ಏಡನ್ ಮರ್ಕರಂ, ಟ್ರಿಸ್ಟನ್ ಸ್ಟಬ್ಸ್, ಜುಬೇರ್ ಹಮ್ಜಾ ಆತಿಥೇಯ ಬೌಲರ್‌ಗಳಿಗೆ ಸವಾಲೊಡ್ಡಬಲ್ಲರು. ಎಡಗೈ ವೇಗಿ ಮಾರ್ಕೊ ಯಾನ್ಸೆನ್, ಕಗಿಸೊ ರಬಾಡ ಐಪಿಎಲ್‌ನಲ್ಲಿ ಆಡಿದ ಅನುಭವಿಗಳು. ಆದ್ದರಿಂದ ಅವರಿಗೆ ಭಾರತದ ಪಿಚ್‌ಗಳ ಕುರಿತು ಚೆನ್ನಾಗಿ ಅರಿವಿದೆ. ಸ್ಪಿನ್ನರ್ ಕೇಶವ್ ಮಹಾರಾಜ್ ಕೂಡ ತಮ್ಮ ಕೈಚಳಕ ಮೆರೆಯಲು ಉತ್ಸುಕರಾಗಿದ್ದಾರೆ.

ಇದರಿಂದಾಗಿ ಭಾರತ ಯುವನಾಯಕ ಶುಭಮನ್ ಗಿಲ್ ಮತ್ತು ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ವಿಭಿನ್ನ ತಂತ್ರಗಾರಿಕೆಯೊಂದಿಗೆ ಕಣಕ್ಕಿಳಿಯುವುದು ಅನಿವಾರ್ಯ. ಈ ಸರಣಿಯಲ್ಲಿ ವಿಕೆಟ್‌ಕೀಪರ್‌ಗಳಾದ ರಿಷಭ್ ಪಂತ್ ಮತ್ತು ಧ್ರುವ ಜುರೇಲ್ ಅವರಿಬ್ಬರೂ ಅಂತಿಮ ಹನ್ನೊಂದರ ಬಳಗದಲ್ಲಿ ಸ್ಥಾನ ಪಡೆಯುವುದು ಬಹುತೇಕ ಖಚಿತವಾಗಿದೆ. ಇದರಿಂದಾಗಿ ಬ್ಯಾಟಿಂಗ್ ಶಕ್ತಿ ವೃದ್ಧಿಸಲಿದೆ. ರಿಷಭ್ ಇಂಗ್ಲೆಂಡ್‌ನಲ್ಲಿ ಆಡಿದ್ದ ಟೆಸ್ಟ್‌ನಲ್ಲಿ ಗಾಯಗೊಂಡಿದ್ದರು. ಅದರಿಂದಾಗಿ ಅವರು ಅಕ್ಟೋಬರ್‌ನಲ್ಲಿ ವೆಸ್ಟ್ ಇಂಡೀಸ್ ಎದುರಿನ ಸರಣಿಯಲ್ಲಿ ಆಡಿರಲಿಲ್ಲ. ಸ್ಪಿನ್ ವಿಭಾಗದಲ್ಲಿ ಆಲ್‌ರೌಂಡರ್‌ಗಳಾದ ರವೀಂದ್ರ ಜಡೇಜ, ವಾಷಿಂಗ್ಟನ್ ಸುಂದರ್ ಅವರ ಮೇಲೆ ಹೆಚ್ಚಿನ ನಿರೀಕ್ಷೆ ಇದೆ. ಕುಲದೀಪ್ ಯಾದವ್ ಅವರೂ ಕಣಕ್ಕಿಳಿಯುವ ಸಾಧ್ಯತೆ ಹೆಚ್ಚಿದೆ. ಅಕ್ಷರ್ ಪಟೇಲ್ ಅವರಿಗೆ ಅವಕಾಶ ಸಿಕ್ಕರೆ ಯಾದವ್ ವಿಶ್ರಾಂತಿ ಪಡೆಯಬಹುದು.

ಶುಭಮನ್ ಗಿಲ್ ಬ್ಯಾಟಿಂಗ್‌ನಲ್ಲಿ ತಮ್ಮ ಲಯಕ್ಕೆ ಮರಳಿದರೆ ಅಗ್ರಕ್ರಮಾಂಕದಲ್ಲಿ ಸ್ಥಿರತೆ ಮೂಡಲಿದೆ. ಯಶಸ್ವಿ ಜೈಸ್ವಾಲ್, ಕೆ.ಎಲ್. ರಾಹುಲ್ ಅವರು ಉತ್ತಮ ಲಯದಲ್ಲಿದ್ದಾರೆ. ಸಾಯಿ ಸುದರ್ಶನ್ ಅವರಿಗೆ ಮೂರನೇ ಕ್ರಮಾಂಕದಲ್ಲಿ ತಮ್ಮ ಸಾಮರ್ಥ್ಯವನ್ನು ಸಾಬೀತು ಮಾಡಲು ಮತ್ತೊಂದು ಅವಕಾಶ ಸಿಗುವ ನಿರೀಕ್ಷೆ ಇದೆ.

ತಂಡ ಇಂತಿವೆ

ಭಾರತ: ಶುಭಮನ್ ಗಿಲ್ (ನಾಯಕ), ಕೆ.ಎಲ್. ರಾಹುಲ್, ಯಶಸ್ವಿ ಜೈಸ್ವಾಲ್, ಸಾಯಿ ಸುದರ್ಶನ್, ರಿಷಭ್ ಪಂತ್ (ವಿಕೆಟ್‌ಕೀಪರ್/ಉಪನಾಯಕ), ಧ್ರುವ ಜುರೇಲ್ (ವಿಕೆಟ್‌ಕೀಪರ್), ರವೀಂದ್ರ ಜಡೇಜ, ವಾಷಿಂಗ್ಟನ್ ಸುಂದರ್, ಜಸ್‌ಪ್ರೀತ್ ಬೂಮ್ರಾ, ಆಕಾಶದೀಪ್, ಮೊಹಮ್ಮದ್ ಸಿರಾಜ್, ಕುಲದೀಪ್ ಯಾದವ್, ಅಕ್ಷರ್ ಪಟೇಲ್, ದೇವದತ್ತ ಪಡಿಕ್ಕಲ್.

ದಕ್ಷಿಣ ಆಫ್ರಿಕಾ: ತೆಂಬಾ ಬವುಮಾ (ನಾಯಕ), ಏಡನ್ ಮರ್ಕರಂ, ರಿಯಾನ್ ರಿಕೆಲ್ಟನ್, ಟ್ರಿಸ್ಟನ್ ಸ್ಟಬ್ಸ್, ಕೈಲ್ ವೆರೆಯೆನ್, ಡಿವಾಲ್ಡ್ ಬ್ರೆವಿಸ್, ಜುಬೇರ್ ಹಮ್ಜಾ, ಟೋನಿ ಡಿ ಝೂರ್ಜಿ, ಕಾರ್ಬಿನ್ ಬಾಷ್, ವಿಯಾನ್ ಮಲ್ದರ್, ಮಾರ್ಕೊ ಯಾನ್ಸೆನ್, ಕೇಶವ್ ಮಹಾರಾಜ್, ಸೆನುರನ್ ಮುತ್ತುಸಾಮಿ, ಕಗಿಸೊ ರಬಾಡ, ಸಿಮೊನ್ ಹಾರ್ಮರ್.

ಪಂದ್ಯ ಆರಂಭ: ಬೆಳಿಗ್ಗೆ 9.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್



ಭಾರತ ತಂಡದ ನಾಯಕ ಶುಭಮನ್ ಗಿಲ್ ಮತ್ತು ಸಾಯಿ ಸುದರ್ಶನ್ ತಾಲೀಮು –ಪಿಟಿಐ ಚಿತ್ರಗಳು

ಬಲಾಬಲ

ಪಂದ್ಯ	ಭಾರತ ಜಯ	ದ.ಆಫ್ರಿಕಾ ಜಯ	ಡ್ರಾ
44	16	18	10

ಧ್ರುವ ಪ್ರಭಾಕರ್ ಶತಕ ಕೆಎಸ್‌ಸಿಎ ಜಯಭೇರಿ

ಬೆಂಗಳೂರು: ಧ್ರುವ ಪ್ರಭಾಕರ್ ಶತಕದ ಬಲದಿಂದ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ತಂಡವು ಜೈಪುರದಲ್ಲಿ ನಡೆಯುತ್ತಿರುವ ಬಿಸಿಸಿಐ 23 ವರ್ಷದೊಳಗಿನವರ 'ಎ' ಟ್ರೋಫಿ ಪುರುಷರ ಕ್ರಿಕೆಟ್ ಟೂರ್ನಿಯಲ್ಲಿ ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆಯ ತಂಡದ ಎದುರು ಜಯಿಸಿತು.

ಜೈಪುರದ ಡಾ. ಸೋನಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಕೆಎಸ್‌ಸಿಎ ತಂಡವು 63 ರನ್‌ಗಳಿಂದ ಜಯಿಸಿತು. ಧ್ರುವ ಪ್ರಭಾಕರ್ 90 ಎಸೆತಗಳಲ್ಲಿ 104 ರನ್ ಗಳಿಸಿದರು. 6 ಬೌಂಡರಿ ಮತ್ತು 3 ಸಿಕ್ಸರ್ ಬಾರಿಸಿದರು. ಇ.ಜೆ. ಜಾಸ್ಪರ್ (57; 79ಎಸೆತ), ಅನೀಶ್ವರ್ ಗೌತಮ್ (75; 63ಎಸೆತ) ಮತ್ತು ಹರ್ಷಿಲ್ ಧರ್ಮಾನಿ (67; 30ಎಸೆತ) ಅರ್ಧಶತಕ ಗಳಿಸಿದರು. ಇದರಿಂದಾಗಿ ತಂಡವು 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 363 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಹಿಮಾಚಲಪ್ರದೇಶ ತಂಡಕ್ಕೆ 45.3 ಓವರ್‌ಗಳಲ್ಲಿ 300 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ : 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 363 (ಇ.ಜೆ. ಜಾಸ್ಪರ್ 57, ಧ್ರುವ ಪ್ರಭಾಕರ್ 104, ಅನೀಶ್ವರ್ ಗೌತಮ್ 75, ಹರ್ಷಿಲ್ ಧರ್ಮಾನಿ 67, ಮೃದುಲ್ ಪಿ ಸರೋಚ್ 54ಕ್ಕೆ2) ಹಿಮಾಚಲಪ್ರದೇಶ: 45.3 ಓವರ್‌ಗಳಲ್ಲಿ 300 (ಅತುಲ್ ಎ ಜೈಸ್ವಾಲ್ 86, ಮೃದುಲ್ ಸರೋಚ್ 50, ಅಮನಪ್ರೀತ್ ಸಿಂಗ್ 70, ಹಾರ್ದಿಕ್ ರಾಜ್ 35ಕ್ಕೆ3, ಮನ್ವಂತ್ ಕುಮಾರ್ ಎಲ್ 54ಕ್ಕೆ3, ಧ್ರುವ ಪ್ರಭಾಕರ್ 38ಕ್ಕೆ2) ಫಲಿತಾಂಶ: ಕರ್ನಾಟಕ ತಂಡಕ್ಕೆ 63 ರನ್ ಜಯ.

ಆರ್ಚರಿ: 16ಕ್ಕೆ ಟ್ರಯಲ್ಸ್

ಬೆಂಗಳೂರು: ಮುಂಬರುವ 45ನೇ ಎನ್‌ಟಿಪಿಸಿ ಸೀನಿಯರ್ (ಪುರುಷರ ಮತ್ತು ಮಹಿಳೆಯರ) ರಿಕರ್ವ್ ಸುತ್ತು, 21ನೇ ಎನ್‌ಟಿಪಿಸಿ ಸೀನಿಯರ್ ಕಾಂಪೌಂಡ್ ಸುತ್ತು, 32ನೇ ಸೀನಿಯರ್ ರಾಷ್ಟ್ರೀಯ ಆರ್ಚರಿ ಚಾಂಪಿಯನ್‌ಷಿಪ್‌ಗೆ ರಾಜ್ಯ ತಂಡವನ್ನು ಆಯ್ಕೆ ಮಾಡಲು ಕರ್ನಾಟಕ ಅಮೆಚೂರ್ ಆರ್ಚರಿ ಸಂಸ್ಥೆಯು ಇದೇ 16ರಂದು ಕಂಠೀರವ ಕ್ರೀಡಾಂಗಣದಲ್ಲಿ ಆಯ್ಕೆ ಟ್ರಯಲ್ಸ್ ನಡೆಯಲಿದೆ.

ಈ ಸ್ಪರ್ಧೆಗಳು ಹೈದರಾಬಾದಿ ನಲ್ಲಿ ಡಿ.10 ರಿಂದ 19ರವರೆಗೆ ನಡೆಯಲಿದೆ. ಇದರ ಜೊತೆಗೆ ಛತ್ತೀಸಗಢದ ರಾಯಪುರದಲ್ಲಿ ಡಿಸೆಂಬರ್ 22 ರಿಂದ 30ರವರೆಗೆ ನಡೆಯುವ 45ನೇ ಜೂನಿಯರ್ ರಾಷ್ಟ್ರೀಯ ಆರ್ಚರಿ ಚಾಂಪಿಯನ್‌ಷಿಪ್‌ಗೂ ಆಯ್ಕೆ ಟ್ರಯಲ್ಸ್ ನಡೆಯಲಿದೆ. ಆಸಕ್ತ ಸ್ಪರ್ಧಿಗಳು ಅಂದು (ಭಾನುವಾರ) ಬೆಳಿಗ್ಗೆ 8.30ಕ್ಕೆ ಆರ್ಚರಿ ಮೈದಾನದಲ್ಲಿ ಹಾಜರಿರುವಂತೆ ಸಂಸ್ಥೆಯ ಕಾರ್ಯದರ್ಶಿ ಟಿ.ಅನಂತರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ದೂ: 080 22275656.

ಸ್ನೂಕರ್: ಅನುಪಮಾಗೆ ಕಿರೀಟ

ದೋಹಾ (ಪಿಟಿಐ): ಭಾರತದ ಅನುಪಮಾ ರಾಮಚಂದ್ರನ್ ಅವರು ಗುರುವಾರ ನಡೆದ ವಿಶ್ವ ಸ್ನೂಕರ್ ಫೈನಲ್‌ನಲ್ಲಿ ಹಾಂಗ್‌ಕಾಂಗ್‌ನ ಎನ್‌ಜಿ ಆನ್ ಯಿ ಅವರನ್ನು ಸೋಲಿಸಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಚೆನ್ನೈನ 23 ವರ್ಷದ ಅನುಪಮಾ ಅವರು 3–2 (51-74, 65-41, 10-71, 78-20, 68-60) ಅಂತರದಿಂದ ಆನ್ ಯಿ ಅವರನ್ನು ಮಣಿಸಿ ಐಬಿಎಸ್‌ಎಫ್ ವಿಶ್ವ ಸ್ನೂಕರ್ ಕಿರೀಟವನ್ನು ಗೆದ್ದ ಭಾರತದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಕಳೆದ ವರ್ಷ ಏಷ್ಯನ್ ಸ್ನೂಕರ್ ಪ್ರಶಸ್ತಿಯನ್ನು ಗೆದ್ದಿದ್ದ ಅನುಪಮಾ ಇಲ್ಲಿ ಕೊನೆಯ ಹಂತದಲ್ಲಿ ಅದೃಷ್ಟಶಾಲಿಯಾಗಿ ಜಯ ಗಳಿಸಿದರು. ಮೂರು ಬಾರಿ ಚಾಂಪಿಯನ್ ಆನ್ ಯೀ ನಿರ್ಣಾಯಕ ಪಂದ್ಯದಲ್ಲಿ 60-61 ಅಂತರದಿಂದ ಎಡವಿದರು.

ಬುಧವಾರ ತಡರಾತ್ರಿ ನಡೆದ ಸೆಮಿಫೈನಲ್‌ನಲ್ಲಿ ಅನುಪಮಾ 3–1ರಿಂದ ಸ್ವದೇಶದ ಕೀರ್ತನಾ ಪಾಂಡಿಯನ್ ಅವರನ್ನು ಮಣಿಸಿ ಪ್ರಶಸ್ತಿ ಸುತ್ತಿಗೆ ಮುನ್ನಡೆದಿದ್ದರು. ಆನ್ ಯಿ 3–0ಯಿಂದ ತಮ್ಮದೇ ದೇಶದ ಸೋ ಮನ್ ಯಾನ್ ಅವರನ್ನು ಸೋಲಿಸಿದ್ದರು.



ಅನುಪಮಾ ರಾಮಚಂದ್ರನ್

ಕ್ವೀನ್ಸ್ ಪ್ರೀಮಿಯರ್ ಲೀಗ್– ಕ್ರೀಡೋತ್ಸವಕ್ಕೆ ನಾಳೆ ತೆರೆ

ಕ್ರಿಕೆಟ್: ಹುಬ್ಬಳ್ಳಿ, ಬೆಂಗಳೂರು ಪಾರಮ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡನೇ ಆವೃತ್ತಿಯ ಕ್ವೀನ್ಸ್ ಪ್ರೀಮಿಯರ್ ಲೀಗ್ (ಕ್ಯೂಪಿಎಲ್) ಕ್ರೀಡೋತ್ಸವದ ನಾಲ್ಕನೇ ದಿನವಾದ ಗುರುವಾರ ಕ್ರಿಕೆಟ್ ಪಂದ್ಯಾಟಗಳು ಪ್ರೇಕ್ಷಕರನ್ನು ರೋಮಾಂಚನಗೊಳಿಸಿದವು. ಹುಬ್ಬಳ್ಳಿ ಕ್ವೀನ್ಸ್ ಮತ್ತು ಬೆಂಗಳೂರು ಕ್ವೀನ್ಸ್ ತಂಡಗಳು ದಿನದ ತನ್ನ ಎರಡೂ ಪಂದ್ಯಗಳನ್ನು ಗೆದ್ದು ಬೀಗಿದವು.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯಗಳಲ್ಲಿ ಸ್ಟಾರ್ ನಾಯಕಿಯರ ಹತ್ತು ತಂಡಗಳೂ ಕ್ರೀಡಾ ಸ್ಫೂರ್ತಿಯಿಂದ ಪಾಲ್ಗೊಂಡವು. ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಂದ್ಯವನ್ನು ವೀಕ್ಷಿಸಿ ತಮ್ಮ ನೆಚ್ಚಿನ ತಾರೆಯರನ್ನು ಹುರಿದುಂಬಿಸಿದರು.

ದಿನದ ಮೊದಲ ಪಂದ್ಯದಲ್ಲಿ ಹುಬ್ಬಳ್ಳಿ ಕ್ವೀನ್ಸ್ ಮತ್ತು ಶಿವಮೊಗ್ಗ ಕ್ವೀನ್ಸ್ ತಂಡಗಳು ಮುಖಾಮುಖಿಯಾದವು. ಆಲ್‌ರೌಂಡ್ ಪ್ರದರ್ಶನ ನೀಡಿದ ಹುಬ್ಬಳ್ಳಿ ತಂಡವು ಭರ್ಜರಿ ಗೆಲುವು ಸಾಧಿಸಿತು. ನಂತರದಲ್ಲಿ ಕೋಲಾರ ಕ್ವೀನ್ಸ್ ತಂಡವನ್ನು ಮಣಿಸಿದ ಹುಬ್ಬಳ್ಳಿ ತಂಡವು ಸತತ ಎರಡನೇ ಜಯ ತನ್ನದಾಗಿಸಿಕೊಂಡಿತು.

ಮತ್ತೊಂದು ರೋಚಕ ಪಂದ್ಯದಲ್ಲಿ ಚಿತ್ರದುರ್ಗ ಕ್ವೀನ್ಸ್ ತಂಡವು ಮಂಗಳೂರು ಕ್ವೀನ್ಸ್ ವಿರುದ್ಧ ಗೆಲುವು ಸಾಧಿಸಿತು. ಚಿತ್ರದುರ್ಗ ತಂಡದ ಶಿಸ್ತುಬದ್ಧ ಬೌಲಿಂಗ್ ದಾಳಿ ಮುಂದೆ ಮಂಗಳೂರು ತಂಡ ಮಂಡಿಯೂರಿತು.

ಬಳ್ಳಾರಿ ಕ್ವೀನ್ಸ್ ವಿರುದ್ಧ ಮೈಸೂರು ಕ್ವೀನ್ಸ್ ತಂಡವು ಉತ್ಸಾಹಭರಿತ ಪ್ರದರ್ಶನದೊಂದಿಗೆ ಜಯ ದಾಖಲಿಸಿತು. ಕುತೂಹಲ ಮೂಡಿಸಿದ್ದ ಮತ್ತೊಂದು ಹಣಾಹಣಿಯಲ್ಲಿ ಬೆಂಗಳೂರು ಕ್ವೀನ್ಸ್ ತಂಡವು 6 ರನ್‌ಗಳಿಂದ ಮೈಸೂರು ತಂಡವನ್ನು ಸೋಲಿಸಿತು. ಕೊನೆಯ ಓವರ್‌ವರೆಗೆ ಸಾಗಿದ ಈ ಪಂದ್ಯವು ಪ್ರೇಕ್ಷಕರನ್ನು ತುದಿಗಾಲಿನಲ್ಲಿ ನಿಲ್ಲಿಸಿತ್ತು. ಬೆಂಗಳೂರು ಕ್ವೀನ್ಸ್ ತಂಡವು ಮತ್ತೊಂದು ಅಮೋಘ ಬ್ಯಾಟಿಂಗ್ ಪ್ರದರ್ಶನದೊಂದಿಗೆ ಹಾಸನ ಕ್ವೀನ್ಸ್ ತಂಡವನ್ನು ಸೋಲಿಸಿದರೆ, ಬೆಳಗಾವಿ ಕ್ವೀನ್ಸ್ ತಂಡವು ಬಳ್ಳಾರಿ ಕ್ವೀನ್ಸ್ ವಿರುದ್ಧ ಜಯ ಗಳಿಸಿತು.



ಬೆಂಗಳೂರು ಕ್ವೀನ್ಸ್ ತಂಡದ ಸ್ಟಾರ್ ನಾಯಕಿ ಸಪ್ತಮಿ ಗೌಡ ಮತ್ತು ಹಾಸನ ಕ್ವೀನ್ಸ್ ತಂಡದ ನಾಯಕಿ ಶಾನ್ವಿ ಶ್ರೀವಾಸ್ತವ

ಋತುರಾಜ್ ಶತಕದ ಸೊಬಗು

ರಾಜ್‌ಕೋಟ್: ಅಮೋಘ ಶತಕ ಬಾರಿಸಿದ ಋತುರಾಜ್ ಗಾಯಕವಾಡ ಅವರ ಆಟದ ಬಲದಿಂದ ಭಾರತ ಎ ತಂಡವು ದಕ್ಷಿಣ ಆಫ್ರಿಕಾ ಎ ವಿರುದ್ಧದ 'ಏಕದಿನ' ಕ್ರಿಕೆಟ್ ಪಂದ್ಯದಲ್ಲಿ ಜಯಿಸಿತು.

ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಎ ತಂಡವು ಬ್ಯಾಟಿಂಗ್ ಮಾಡಿತು. ಡಿಯಾನ್ ಫಾರೆಸ್ಟರ್ (77 ರನ್), ಡೆಲೇನೊ ಪಾಟ್‌ಜೀಟರ್ (90 ರನ್) ಹಾಗೂ ಬಿಜಾರ್ನ್ ಫರ್ಟೀನ್ (59 ರನ್) ಅವರ ಅರ್ಧ ಶತಕಗಳ ಬಲದಿಂದ 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 285 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಭಾರತ ತಂಡವು 49.3 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 290 ರನ್ ಗಳಿಸಿ ಗೆದ್ದಿತು. ಋತುರಾಜ್ (117; 129ಎ, 4X12) ಶತಕ ಗಳಿಸಿದರು. ನಾಯಕ ತಿಲಕ್ ವರ್ಮಾ (39; 58ಎ, 4X2) ಮತ್ತು ನಿತೀಶ್ ಕುಮಾರ್ ರೆಡ್ಡಿ (37; 26ಎ) ಉಪಯುಕ್ತ ಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ ಎ: 50 ಓವರ್‌ಗಳಲ್ಲಿ 9ಕ್ಕೆ 285 (ಡಿಯಾನ್ ಫಾರೆಸ್ಟರ್ 77, ಡೆಲೇನೊ ಪಾಟ್‌ಜೀಟರ್ 90, ಬಿಜಾರ್ನ್ ಫರ್ಟೀನ್ 59, ಅರ್ಷದೀಪ್ ಸಿಂಗ್ 59ಕ್ಕೆ2, ಹರ್ಷಿತ್ ರಾಣಾ 49ಕ್ಕೆ2) ಭಾರತ ಎ : 49.3 ಓವರ್‌ಗಳಲ್ಲಿ 6ಕ್ಕೆ290 (ಋತುರಾಜ್ ಗಾಯಕವಾಡ 117, ಅಭಿಷೇಕ್ ಶರ್ಮಾ 31, ತಿಲಕ್ ವರ್ಮಾ 39, ನಿತೀಶ್ ಕುಮಾರ್ ರೆಡ್ಡಿ 37, ನಿಶಾಂತ್ ಸಂಧು ಔಟಾಗದೇ 29, ಟಿಯಾನ್ ವ್ಯಾನ್ ವುರೆನ್ 64ಕ್ಕೆ2, ಬಿಜಾರ್ನ್ ಫರ್ಟೀನ್ 50ಕ್ಕೆ2, ಒಟೆನಿಲ್ ಬಾರ್ಟ್‌ಮನ್ 51ಕ್ಕೆ2) ಫಲಿತಾಂಶ: ಭಾರತ ತಂಡಕ್ಕೆ 4 ವಿಕೆಟ್‌ಗಳ ಜಯ. ಪಂದ್ಯಶ್ರೇಷ್ಠ: ಋತುರಾಜ್ ಗಾಯಕವಾಡ



ಋತುರಾಜ್ ಗಾಯಕವಾಡ

ಬಿಲ್ಲಿ ಜೀನ್ ಕಿಂಗ್ ಕಪ್ ಪ್ಲೇ ಆಫ್ ಇಂದಿನಿಂದ: ಕಣದಲ್ಲಿ ಮೂರು ತಂಡಗಳು

ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿ ಭಾರತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಟೆನಿಸ್‌ನ ಅಗ್ರ ಆಟಗಾರ್ತಿಯರು ಕೆಲದಿನಗಳಿಂದ ಉದ್ಯಾನ ನಗರಿಯಲ್ಲಿ ಕಠಿಣ ಅಭ್ಯಾಸದಲ್ಲಿ ತೊಡಗಿದ್ದಾರೆ. ಮುಂದಿನ ವರ್ಷದ ಬಿಲ್ಲಿ ಜೀನ್ ಕಿಂಗ್ ಕಪ್ ಕ್ವಾಲಿಫೈಯರ್ಸ್‌ನಲ್ಲಿ ಸ್ಥಾನ ಪಡೆಯುವ ವಿಶ್ವಾಸದೊಡನೆ ಪ್ಲೇ ಆಫ್‌ನಲ್ಲಿ ಕಣಕ್ಕಿಳಿಯಲು ತಂಡ ತಯಾರಿ ನಡೆಸಿದೆ. ಮೂರು ತಂಡಗಳಿರುವ ಟೂರ್ನಿಯ ಜಿ ಗುಂಪಿನ ಪ್ಲೇ ಆಫ್ ಪಂದ್ಯಗಳು ನಗರದಲ್ಲಿ ಶುಕ್ರವಾರ ಆರಂಭವಾಗಲಿವೆ.

ಆದರೆ ಭಾರತದ ಮುಂದಿರುವ ಗುರಿ ಅಂದುಕೊಂಡಷ್ಟು ಸುಲಭವಲ್ಲ. ಪ್ರಬಲ ನೆದರ್ಲೆಂಡ್ಸ್ ಮತ್ತು ಸ್ಲೊವೇನಿಯಾ ತಂಡಗಳ ಸವಾಲನ್ನು ಎದುರಿಸಬೇಕಾಗಿದೆ.

ಕಬ್ಬನ್‌ಪಾರ್ಕ್‌ನ ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಮೊದಲ ಮುಖಾಮುಖಿಯಲ್ಲಿ ನೆದರ್ಲೆಂಡ್ಸ್ ತಂಡವು, ಸ್ಲೊವೇನಿಯಾ ತಂಡವನ್ನು ಎದುರಿಸಲಿದೆ. ಭಾರತ ಶನಿವಾರ ಸ್ಲೊವೇನಿಯಾ ವಿರುದ್ಧ ಮೊದಲ ಪಂದ್ಯ ಆಡಲಿದೆ. ಈ ಹಿಂದೆ ಫೆಡರೇಷನ್ ಕಪ್ (ಪುರುಷರ ಡೇವಿಸ್ ಕಪ್ ರೀತಿ) ಎಂದು ಕರೆಸಿಕೊಳ್ಳುತ್ತಿದ್ದ ಬಿಲ್ಲಿ ಜೀನ್ ಕಿಂಗ್ ಕಪ್ (ಬಿಜೆಕೆಸಿ) ಮಹಿಳಾ ಟೆನಿಸ್‌ನ ಪ್ರತಿಷ್ಠಿತ ಟೂರ್ನಿ.

ಭಾರತ ತಂಡವು ಅಗ್ರಮಾನ್ಯ ಸಿಂಗಲ್ಸ್ ಆಟಗಾರ್ತಿ ಸಹಜಾ ಯಮಲಪಲ್ಲಿ ಅವರ ಮೇಲೆ ಭರವಸೆ ಇಟ್ಟಿದೆ. ವಿಶ್ವ ಕ್ರಮಾಂಕದಲ್ಲಿ 309ನೇ ಸ್ಥಾನದಲ್ಲಿರುವ ಅವರು ಅಕ್ಟೋಬರ್‌ನಲ್ಲಿ ಮೆಕ್ಸಿಕೊದಲ್ಲಿ ನಡೆದ ಪಂದ್ಯದಲ್ಲಿ 2017ರ ಅಮೆರಿಕ ಓಪನ್ ಚಾಂಪಿಯನ್ ಸ್ಲೋನ್ ಸ್ಟೀಫನ್ಸ್ ಮೇಲೆ ಜಯ ಗಳಿಸಿದ್ದರು. ಚೆನ್ನೈ ಓಪನ್‌ನಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ್ದರು. ಡಬಲ್ಸ್‌ನಲ್ಲಿ ಫೈನಲ್ ತಲುಪಿದ್ದರು.

ವಿಶ್ವ ಕ್ರಮಾಂಕದಲ್ಲಿ 381ನೇ ಸ್ಥಾನದಲ್ಲಿರುವ ಶ್ರೀವಲ್ಲಿ ಭಮಿಡಿಪಾಟಿ ತಮ್ಮ ಸರ್ವ್‌ಗಳು ಮತ್ತು ನಿಖರವಾದ ಗ್ರೌಂಡ್‌ಸ್ಟ್ರೋಕ್‌ಗಳ ಮೇಲೆ ವಿಶ್ವಾಸ ಇಟ್ಟುಕೊಂಡಿದ್ದಾರೆ.

ಪುಣೆಯಲ್ಲಿ ನಡೆದ ಏಷ್ಯಾ–ಓಷಾನಿಯಾ ಒಂದನೇ ಗುಂಪಿನಲ್ಲಿ ಅವರು ಹಾಂಗ್‌ಕಾಂಗ್ ಮತ್ತು ಕೊರಿಯಾ ತಂಡಗಳ ವಿರುದ್ಧ ಪಂದ್ಯದಲ್ಲಿ ತಮಗಿಂತ ಮೇಲಿನ ರ‍್ಯಾಂಕಿನ ಆಟಗಾರ್ತಿಯರನ್ನು ಮಣಿಸಿ ಗಮನ ಸೆಳೆದಿದ್ದರು. ಹೀಗಾಗಿ ಪ್ಲೇ ಆಫ್ ತಲುಪಲು ಸಾಧ್ಯವಾಗಿತ್ತು.

ಡಚ್ಚರ ತಂಡದಲ್ಲಿ ಸುರ್ಘಾನ್ ಲಮೆನ್ಸ್ ಜೊತೆ ಅರಂಟ್ಸಾ ರುಸ್ ಮತ್ತು ಡಬಲ್ಸ್ ಪರಿಣತೆ ಡೆಮಿ ಶುರ್ಸ್ ಅವರಿದ್ದಾರೆ. ಸ್ಲೊವೇನಿಯಾ ತಂಡವು, ಫ್ರೆಂಚ್ ಓಪನ್‌ನಲ್ಲಿ ಈ ಹಿಂದೆ ಸೆಮಿಫೈನಲ್ ತಲುಪಿದ್ದ ತಮರಾ ಝಿದಾನ್ಸೆಕ್ ಅವರನ್ನು ಒಳಗೊಂಡಿದೆ.

ಭಾರತ ತಂಡ ನವೆಂಬರ್ 4 ರಿಂದ ನಗರದಲ್ಲಿ ಸಿದ್ಧತಾ ಶಿಬಿರ ನಡೆಸಿದ್ದು, ಆಟಗಾರ್ತಿಯರಿಗೆ ಇಲ್ಲಿನ ಹವೆಗೆ ಹೊಂದಿಕೊಳ್ಳಲು ನೆರವಾಗಿದೆ.

'ಆಟಗಾರ್ತಿಯರು ಉತ್ತಮ ಸ್ಪರ್ಧೆ ನೀಡಲಿದ್ದಾರೆ. ನಮಗಿಂತ ಮೇಲಿನ ರ‍್ಯಾಂಕಿನ ಆಟಗಾರ್ತಿಯರಿಗೆ ಪ್ರಬಲ ಪೈಪೋಟಿ ನೀಡಲು ಮಾನಸಿಕವಾಗಿ ಸಜ್ಜಾಗಿದ್ದೇವೆ' ಎಂದು ಆಟವಾಡದ ನಾಯಕ ವಿಶಾಲ್ ಉಪ್ಪಲ್ ಹೇಳಿದರು.

'ಬಿಜೆಕೆಸಿ ಸಕಾಲದಲ್ಲೇ ನಡೆಯುತ್ತಿದೆ. ನಮ್ಮ ಮಹಿಳಾ ಕ್ರಿಕೆಟ್ ತಂಡ ಇತ್ತೀಚೆಗಷ್ಟೇ ಏಕದಿನ ವಿಶ್ವಕಪ್ ಗೆದ್ದಿದ್ದು, ಕ್ರೀಡೆಯಲ್ಲಿ ದೇಶದಲ್ಲಿ ಮಹಿಳೆಯರು ಪ್ರಗತಿ ಕಾಣುತ್ತಿದ್ದಾರೆ. ಪ್ರೇಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ನಮಗೆಲ್ಲಾ ಉತ್ಸಾಹ ತುಂಬಲಿದ್ದಾರೆ ಎಂಬ ನಿರೀಕ್ಷೆಯಿದೆ' ಎಂದು ಡಬಲ್ಸ್ ಪರಿಣತೆ ಪ್ರಾರ್ಥನಾ ಠೊಂಬರೆ ಹೇಳಿದರು. ಬಿಜೆಕೆಸಿಯಲ್ಲಿ ಪ್ರಾರ್ಥನಾ ಮತ್ತು ಅಂಕಿತಾ ಒಟ್ಟು 90 ಪಂದ್ಯಗಳನ್ನು ಆಡಿದ್ದಾರೆ.

ತಂಡಗಳು

ಭಾರತ: ಸಹಜಾ ಯಮಲಪಲ್ಲಿ, ಅಂಕಿತಾ ರೈನಾ, ಶ್ರೀವಲ್ಲಿ ಭಮಿಡಿಪಾಟಿ, ರಿಯಾ ಭಾಟಿಯಾ, ಪ್ರಾರ್ಥನಾ ಠೊಂಬರೆ. ಆಟವಾಡದ ನಾಯಕ: ವಿಶಾಲ್ ಉಪ್ಪಲ್.

ನೆದರ್ಲೆಂಡ್ಸ್: ಸುರ್ಘಾನ್ ಲಮೆನ್ಸ್, ಅರಂಟ್ಸಾ ರುಸ್, ಅನೂಕ್ ಕೊವೆರ್‌ಮನ್ಸ್, ಡೆಮಿ ಶೂವ್ಸ್. ನಾಯಕಿ: ಎಲಿಸ್ ತಮೇಲಾ.

ಸ್ಲೊವೇನಿಯಾ: ಕಯಾ ಜುವಾನ್, ತಮರಾ ಝಿದಾನ್ಸೆಕ್, ದಲೀಲಾ ಜಕುಪೊವಿಕ್, ನಿಕಾ ರಾಡಿಸಿಕ್. ನಾಯಕಿ: ಮಸಾ ಝೆಕ್ ಪೆಸ್ಕಿರಿಕ್.



ಶ್ರೀವಲ್ಲಿ ಭಮಿಡಿಪಾಟಿ ಪ್ರಜಾವಾಣಿ ಚಿತ್ರ

ಪಂದ್ಯಗಳು	
ನ. 14	ನೆದರ್ಲೆಂಡ್ಸ್– ಸ್ಲೊವೇನಿಯಾ
ನ.15	ಭಾರತ– ಸ್ಲೊವೇನಿಯಾ
ನ.16	ಭಾರತ– ನೆದರ್ಲೆಂಡ್ಸ್
ಪಂದ್ಯಗಳ ಆರಂಭ: ಮಧ್ಯಾಹ್ನ 3	



"ಈ ಕಾಲದ ಮಕ್ಕಳು. . ." ಎಂದು ಹೇಳುವ ಎಲ್ಲಾ ವಯಸ್ಕರಿಗೂ ಈ ಮುಕ್ತ ಪತ್ರ ಸಮರ್ಪಣೆ

ಆತಂಕಿತ ಮಕ್ಕಳು. ಕೋಪಿಷ್ಠ ಮಕ್ಕಳು. ಅತಿ ಬುದ್ಧಿವಂತ ಮಕ್ಕಳು. ಮೇಲರಿಮೆ ಇರುವ ಮಕ್ಕಳು.

ಏಕೆ ಇಷ್ಟು ಮಾತನಾಡುತ್ತಾರೆ?
ಏಕೆ ಪ್ರತಿಯೊಂದನ್ನೂ ಪ್ರಶ್ನಿಸುತ್ತಾರೆ?
ಏಕೆ ಇಷ್ಟು ನಿರ್ಧಿಷ್ಠ ಮನಸ್ಥಿತಿ ಹೊಂದಿದ್ದಾರೆ?

ನಿಮ್ಮ ಮಾತು ನಾವು ಒಪ್ಪುತ್ತೇವೆ.

ಆದರೆ, ದೇಶದ ವಿವಿಧ ಮೂಲೆಗಳಲ್ಲಿ ಬೇರೆಯವರಿಗಿಂತ ಹೆಚ್ಚು ಸಮಯವನ್ನು
ಅವರೊಂದಿಗೆ ಕಳೆಯುವ ಶಾಲೆಯಾಗಿ, ನಾವು ಹೀಗೆ ಕಾಣಬಹುದು:

"ಅವರು ಸದಾ ಫೋನ್‌ನಲ್ಲಿ ಇರುತ್ತಾರೆ."
ಬಹುಶಃ, ಅವರಿಗೆ ಮನುಷ್ಯರ ಸಂಪರ್ಕ ಅಥವಾ ಪ್ರೀತಿಯ ಕೊರತೆ ಇರಬಹುದು.

"ಅವರು ಹಿರಿಯರನ್ನು ಗೌರವಿಸುತ್ತಿಲ್ಲ."
ಬಹುಶಃ, ಅವರು ಪ್ರಶ್ನೆ ಕೇಳುವುದು ಕಲಿತ್ತಿದ್ದಾರೆ; ನಾವು ಮೌನವಾಗಿರಲು ಕಲಿತ್ತಿದ್ದೇವೆ.

"ಅವರಿಗೆ ಗಮನ ಕಡಿಮೆ."
ಬಹುಶಃ, ನಾವು ಅವರಲ್ಲಿ ಎಲ್ಲಾ ವಿಷಯದಲ್ಲೂ ಬರೀ ಯಶಸ್ಸನ್ನು ನೀರಿಕ್ಷಿಸುತ್ತಿದ್ದೇವೆ.

"ಅವರು ಸೋಲನ್ನು ಸಹಿಸಲಾರರು."
ಏಕೆಂದರೆ, ನಾವು ಗೆಲ್ಲುವುದು ಮಾತ್ರ ಮುಖ್ಯ ಎಂದು ಕಲಿಸಿದ್ದೇವೆ.

"ಅವರು ಸಂಸ್ಕೃತಿಯನ್ನು ತಿಳಿಯಲು ವಿಫಲರಾಗಿದ್ದಾರೆ."
ಆದರೆ, ಬಹುಶಃ, ಅವರು ಹೊಸ ಸಂಸ್ಕೃತಿಯನ್ನು ತಿಳಿಯುವಂತವರಾಗಿದ್ದಾರೆ; ನಾವು ಮಾಡಿರುವುದು ಅದೆ.

"ಅವರು ಅತೀ ಸಂವೇದನಾಶೀಲರು."
ಬಹುಶಃ, ನಾವು ಮರೆ ಮಾಚಿದ ಭಾವನೆಗಳನ್ನು ಅವರು ಧೈರ್ಯವಾಗಿ ತೋರಿಸುತ್ತಿದ್ದಾರೆ?

ಅವರು **"ಕಷ್ಟಕರ"** ಮಕ್ಕಳೇ?
ಅಥವಾ ನಾವು ನಿರ್ಮಿಸಿದ ಈ ಜಗತ್ತನ್ನು ಅವರಿಗೆ ಮಾರ್ಗದರ್ಶಕ ಪುಸ್ತಕವಿಲ್ಲದೆ ಹಸ್ತಾಂತರಿಸಿದ್ದೇವೆಯೇ?

ಈ ಮಕ್ಕಳ ದಿನದಂದು ಅವರಿಗೆ ಸ್ವಲ್ಪ ವಿಶ್ರಾಂತಿ ಕೊಡೋಣ.
ಅವರು ಗೊಂದಲದಲ್ಲಿದ್ದಾರೆ, ದಿಕ್ಕುತೋಚದೆ ಇದ್ದಾರೆ.
ಏಕೆಂದರೆ, ಅವರು ವಯಸ್ಸಿನಲ್ಲಿ ಚಿಕ್ಕವರಾಗಿದ್ದರು, ನಾಳಿನ ಭಾರವನ್ನು ಹೊರುವ ಧೀರರು, ವೀರರು ಇವರು.

ನಾವು ಕಂಡ ಅತ್ಯಂತ ಸಹನಶೀಲ ಮತ್ತು
ಧೈರ್ಯಶಾಲಿ ತಲೆಮಾರಿಗೆ,

ಮಕ್ಕಳ ದಿನಾಚರಣೆಯ ಶುಭಾಶಯಗಳು.

ORCHIDS®
The International School

Contact: 9999-412-999 | www.orchidsinternationalschool.com | 110+ Schools Across India

Bengaluru
Mumbai | Pune | Hyderabad | Chennai | Kolkata | Gurugram | Delhi | Jaipur | Jodhpur | Nagpur | Chh. Sambhaji Nagar
Ahilyanagar | Bhopal | Jabalpur | Indore | Sonipat | Rohtak | Hubballi | Dharwad | Tumkur

ರೈತರ ಆದಾಯ ಹೆಚ್ಚಿಸಲಿದೆ ಕೃಷಿ ಪ್ರವಾಸೋದ್ಯಮ

• ಖಲೀಲಅಹ್ಮದ ಶೇಖ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳದಲ್ಲಿ ಕೃಷಿ ಪ್ರವಾಸೋದ್ಯಮ ಮಾದರಿ ಗಮನ ಸೆಳೆಯುತ್ತಿದೆ. ನಗರವಾಸಿಗಳಿಗೆ ಪಾರಂಪರಿಕ ಕೃಷಿ ಪದ್ಧತಿಗಳು, ಕೃಷಿ ಚಟುವಟಿಕೆಗಳು ಮತ್ತು ಗ್ರಾಮೀಣ ಪ್ರದೇಶದ ಕಲೆ, ಸಂಸ್ಕೃತಿ, ಆಹಾರ ಪದ್ಧತಿಗಳನ್ನು ಪರಿಚಯಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

ಮೂರು ಎಕರೆ ಪ್ರದೇಶದ ವ್ಯಾಪ್ತಿಯಲ್ಲಿ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಈ ಮಾದರಿಯನ್ನು ರೂಪಿಸಲಾಗಿದೆ. ಪಾರಂಪರಿಕ ಬೇಸಾಯ ಪದ್ಧತಿಯ ಚಟುವಟಿಕೆಗಳಾದ ಉಳುಮೆ, ನೇಗಿಲು, ಕೊಯ್ಲು, ಒಕ್ಕಣೆಯನ್ನು ಪ್ರಾಯೋಗಿಕವಾಗಿ ಮಾಡುವ ಹಾಗೂ ನೋಡುವ ಅವಕಾಶ ಒದಗಿಸಲಾಗಿದೆ. ಇದರ ಜೊತೆಗೆ ಎತ್ತಿನ ಗಾಡಿ ಸವಾರಿ ಮಾಡುವುದು, ರಾಗಿ ಬೀಸುವುದು, ಭತ್ತ ಕುಟ್ಟುವುದಕ್ಕೂ ಸಾರ್ವಜನಿಕರಿಗೆ ಮುಕ್ತ ವ್ಯವಸ್ಥೆ ಇದೆ. ಎಣ್ಣೆಗಾಣ, ಆಲೆಮನೆ, ಕುಲುಮೆ, ಬುಟ್ಟಿ ಹೆಣೆಯುವಿಕೆ, ಮಡಿಕೆ ತಯಾರಿಸುವುದು, ನೇಗಿಲು ತಯಾರಿಕೆಯಂತಹ ಸಾಂಪ್ರದಾಯಿಕ ಕಸುಬುಗಳನ್ನು ಪರಿಚಯಿಸಲಾಗಿದೆ.

ಗಮನಸೆಳೆದ 'ಹಳ್ಳಿಮನೆ'

ಗ್ರಾಮೀಣ ಭಾಗದ ಕೃಷಿ ಭೂಮಿಗಳಲ್ಲಿ ಇರುವ ಹಳ್ಳಿಮನೆಯನ್ನು ಬಿದಿರಿನಲ್ಲಿ ನಿರ್ಮಿಸಲಾಗಿದ್ದು, ಇದರಲ್ಲಿ ಹಳೆಯ ಕಾಲದ ಸೇರು, ಪಾವು, ಚಟಾಕು, ಬೀಸುಕಲ್ಲು, ಒರಳು, ಒನಕೆಗಳು, ಮೊರ, ಮಡಿಕೆ, ಗರಗಸ, ಕೈಬಾಚಿ, ಕೈಗುದ್ದಲಿ, ಹಾರೆ, ಕುರ್ಚಿಗೆ, ನೊಗ, ಚಾವಟಿ, ಮರದ ನೇಗಿಲು, ಹಲುಬೆ, ಕುಂಟೆ, ಇಲಿಬೋನು, ಕುಡುಗೋಲು, ಮಚ್ಚು ಸೇರಿದಂತೆ 70ಕ್ಕೂ ಹೆಚ್ಚು ಪಾರಂಪರಿಕ ಪರಿಕರಗಳನ್ನು ಒಂದೇ ಜಾಗದಲ್ಲಿ ನೋಡುವ ಅವಕಾಶ ಇದೆ.

ತಾಕಿನ ಅಂಚುಗಳಲ್ಲಿ ಕಾವಲು ಗೋಪುರಗಳನ್ನು ನಿರ್ಮಿಸಲಾಗಿದೆ. ಸಾರ್ವಜನಿಕರು ಇದರ ಮೇಲೆ ಹತ್ತಿ ನೋಡುವ ಅವಕಾಶ ಕಲ್ಪಿಸಲಾಗಿದೆ. ದೇಸಿ ಹಸುಗಳು, ಮೇಕೆಗಳು ಗಮನ ಸೆಳೆಯುತ್ತಿವೆ. ಈ ಎಲ್ಲಾ ಚಟುವಟಿಕೆಗಳಿಗೆ ಜಾನಪದ ಮೆರುಗು ನೀಡುವ ಉದ್ದೇಶದಿಂದ ರಾಗಿ ಬೀಸುವ ಪದಗಳು, ಒಕ್ಕಣಿ ಪದಗಳು, ಸೋಬಾನೆ ಪದಗಳು, ಭಜನೆಗೆ ಸಂಬಂಧಿಸಿದ ಹಾಡುಗಳನ್ನು ಬ್ಯಾನರ್‌ಗಳಲ್ಲಿ ಬರೆದು ಹಾಕಲಾಗಿದೆ. ಆಸಕ್ತರು ರಾಗಿ ಬೀಸುವ ಜೊತೆಗೆ ರಾಗಿ ಬೀಸುವ ಪದಗಳನ್ನೂ ಹಾಡಬಹುದು.

ಕೃಷಿ ಮೇಳಕ್ಕೆ ಬಂದಿದ್ದ ವಿದ್ಯಾರ್ಥಿಗಳು, ವಿಶೇಷವಾಗಿ ನಗರವಾಸಿಗಳು ಕೃಷಿ ಪ್ರವಾಸೋದ್ಯಮದ ಮಾದರಿಯಲ್ಲಿ ಇರುವ ಕೆರೆಯಲ್ಲಿ ಮೀನು ಹಿಡಿದು ಪುಳಕಿತಗೊಂಡರು. ಕೆಲವರು ಎತ್ತುಗಳನ್ನು ಹಿಡಿದುಕೊಂಡು ಜಮೀನಿನಲ್ಲಿ ನೇಗಿಲು ಹೊಡೆಯುವ ಅನುಭವ ಪಡೆದುಕೊಂಡರು. ವಿದ್ಯಾರ್ಥಿನಿಯರು, ಮಕ್ಕಳು ಜೋಕಾಲಿ ಆಟವಾಡಿ ಸಂಭ್ರಮಿಸಿದರು.

'ರೈತರು ಬೇಸಾಯದ ಜತೆಗೆ ಕೃಷಿ ಪ್ರವಾಸೋದ್ಯಮದ ಪರಿಕಲ್ಪನೆಯನ್ನು ಅಳವಡಿಸಿಕೊಂಡು ಆದಾಯ ಹೆಚ್ಚಿಸಿಕೊಳ್ಳಬಹುದು. ರೈತರು ತಮ್ಮ ಹೊಲ ಅಥವಾ ತೋಟಗಳಲ್ಲಿ ಕೃಷಿ ಆಸಕ್ತ ಪ್ರವಾಸಿಗರಿಗೆ ಕೃಷಿ ಚಟುವಟಿಕೆಗಳನ್ನು ಪರಿಚಯಿಸುವ ಜೊತೆಗೆ ಆತಿಥ್ಯ, ಊಟ, ತಿಂಡಿ, ವಾಸ್ತವ್ಯಕ್ಕೆ ಇಂತಿಷ್ಟು ಅಂತ ದರ ನಿಗದಿ ಮಾಡಿ ಆದಾಯ ಪಡೆದುಕೊಳ್ಳಬಹುದು' ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ 'ಪ್ರಜಾವಾಣಿ'ಗೆ ತಿಳಿಸಿದರು.



ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಆಯೋಜಿಸಿರುವ ಕೃಷಿ ಮೇಳದಲ್ಲಿ ಈ ವರ್ಷದ ವಿಶೇಷ ಆಕರ್ಷಣೆಯಾದ 'ಕೃಷಿ ಪ್ರವಾಸೋದ್ಯಮ' ತಾಕುವಿನಲ್ಲಿ ರಾಗಿ ಬೀಸುವ ಅನುಭವ ಪಡೆದ ಮಹಿಳೆಯರು ಪ್ರಜಾವಾಣಿ ಚಿತ್ರ/ ಕೃಷ್ಣ ಕುಮಾರ್ ಪಿ.ಎಸ್.

'ಕೃಷಿ ಸಾಂಪ್ರದಾಯಿಕ ಕಸುಬಾಗದೆ ಉದ್ಯಮವಾಗಿ ಮಾರ್ಪಟ್ಟಿದೆ. ಕೃಷಿ ಚಟುವಟಿಕೆಗಳನ್ನು ವಾಣಿಜ್ಯ ಉದ್ದೇಶದಿಂದ ಪರಿಚಯಿಸಿ ಪೂರಕ ಆದಾಯ ಪಡೆದುಕೊಳ್ಳಲು ಕೃಷಿ ಪ್ರವಾಸೋದ್ಯಮ ಸಹಕಾರಿ ಆಗಿದೆ' ಎಂದು ವಿವರಿಸಿದರು.

ಕೃಷಿ ಮೇಳದಲ್ಲಿ...

ಕೃಷಿ ಮೇಳ: 14ರ ಕಾರ್ಯಕ್ರಮ

ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಹಮ್ಮಿಕೊಂಡಿರುವ ಕೃಷಿಮೇಳದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ತುಮಕೂರು ಜಿಲ್ಲಾ ಮಟ್ಟದ ಪ್ರಗತಿಪರ ರೈತ ಹಾಗೂ ರೈತ ಮಹಿಳಾ ಪ್ರಶಸ್ತಿ, ತುಮಕೂರು ತಾಲ್ಲೂಕು ಮಟ್ಟದ ಯುವ ರೈತ ಹಾಗೂ ರೈತ ಮಹಿಳಾ ಪ್ರಶಸ್ತಿ, ಅತ್ಯುತ್ತಮ ವೈಜ್ಞಾನಿಕ ಲೇಖನ ಪ್ರಶಸ್ತಿ ಪ್ರದಾನ. ಅತಿಥಿಗಳು: ಕೇಂದ್ರ ಸಚಿವ ವಿ.ಸೋಮಣ್ಣ. ಉಪಸ್ಥಿತಿ: ರಾಜ್ಯ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ. ಅತಿಥಿಗಳು: ಗೃಹ ಸಚಿವ ಜಿ.ಪರಮೇಶ್ವರ, ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ.ಮಹದೇವಪ್ಪ, ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್, ರಾಜ್ಯಸಭಾ ಸದಸ್ಯ ಜಗ್ಗೇಶ್, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವ ಕೆ.ಎಚ್.ಮುನಿಯಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ಮೀನುಗಾರಿಕಾ ಸಚಿವ ಮಂಕಾಳ ಎಸ್. ವೈದ್ಯ. ಅಧ್ಯಕ್ಷತೆ: ಕೃಷಿ ವಿ.ವಿ. ಕುಲಪತಿ ಎಸ್.ವಿ.ಸುರೇಶ. ಮಧ್ಯಾಹ್ನ 2ಕ್ಕೆ.

ಮೇಳದ ಪ್ರಮುಖ ಆಕರ್ಷಣೆ

ಮಣ್ಣುರಹಿತ ಕೃಷಿ, ಬಿತ್ತನೆ ಬೀಜಗಳ ಪರೀಕ್ಷೆ ಹಾಗೂ ಶೇಖರಣೆ, ಸುಧಾರಿತ ಕೃಷಿ ಯಂತ್ರೋಪಕರಣಗಳ ಪ್ರದರ್ಶನ, ಮಳೆ ಹಾಗೂ ಚಾವಣಿ ನೀರಿನ ಸಂಗ್ರಹ, ಹನಿ ಮತ್ತು ತುಂತುರು ನೀರಾವರಿ ಪದ್ಧತಿ, ಸಿರಿಧಾನ್ಯಗಳು ಮತ್ತು ಅವುಗಳ ಮಹತ್ವ ಹಾಗೂ ಇನ್ನೂ ಹಲವು.

ನವೆಂಬರ್ 15ರ ಕಾರ್ಯಕ್ರಮ

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಪ್ರಗತಿಪರ ರೈತ, ರೈತ ಮಹಿಳಾ ಪ್ರಶಸ್ತಿ ಪ್ರದಾನ: ಅತಿಥಿ: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಉಪಸ್ಥಿತಿ: ಎನ್.ಚಲುವರಾಯಸ್ವಾಮಿ, ಅತಿಥಿಗಳು: ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ, ಈಶ್ವರ ಖಂಡ್ರೆ, ಎನ್.ಎಸ್.ಭೋಸರಾಜು, ದಿನೇಶ್ ಗುಂಡೂರಾವ್, ಶಿವಾನಂದ ಪಾಟೀಲ್, ಸಂಸದರಾದ ಮಲ್ಲೇಶ್ ಎಂ. ಬಾಬು, ಡಾ. ಕೆ.ಸುಧಾಕರ್, ಮಧ್ಯಾಹ್ನ 2ಕ್ಕೆ.

ನವೆಂಬರ್ 16ಕ್ಕೆ

ಸಮಾರೋಪ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ
ಅತಿಥಿ: ಮುಖ್ಯಮಂತ್ರಿ ಸಿದ್ದರಾಮಯ್ಯ. ಉಪಸ್ಥಿತಿ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಅಧ್ಯಕ್ಷತೆ: ಕಂದಾಯ ಸಚಿವ ಕೃಷ್ಣಬೈರೇಗೌಡ. ಮಧ್ಯಾಹ್ನ 2.30ಕ್ಕೆ
ಸ್ಥಳ: ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ)





ಉದ್ಯಮವಾಗಿ ಕೃಷಿ: ಸ್ಟಾರ್ಟ್ ಅಪ್ ಖುಷಿ

• ಉಮೇಶ ಭಟ್ಟ ಪಿ.ಎಚ್.

ಬೆಂಗಳೂರು: ವಿವಿಧ ವೃತ್ತಿಯಲ್ಲಿದ್ದ ಯುವಕ ಯುವತಿಯರು ನವೋದ್ಯಮದ ಅವಕಾಶಗಳನ್ನು ಬಳಸಿಕೊಂಡು ಕೃಷಿ ಉದ್ಯಮದತ್ತ ಹೊರಳಿದ್ದಾರೆ. ಗೃಹಿಣಿಯರೂ ಕೃಷಿ ಉತ್ಪನ್ನ ಆಹಾರೋದ್ಯಮದತ್ತ ಆಕರ್ಷಿತರಾಗಿದ್ದಾರೆ. ನಗರದ ಜಿಕೆವಿಕೆಯಲ್ಲಿ ಆರಂಭವಾದ ಕೃಷಿ ಮೇಳದಲ್ಲಿ ಇಂಥ ಸಾಧಕರ ಯಶೋಗಾಥೆಗಳು ಅನಾವರಣಗೊಂಡವು.

ಬೆಂಗಳೂರಿನ ಪೂಜಾ ಅವರು ಕನಕದಾಸರ 'ರಾಮಧಾನ್ಯ ಚರಿತೆ'ಯಿಂದ ಆಕರ್ಷಿತರಾಗಿ ಅದೇ ಹೆಸರಲ್ಲಿ ವಿಭಿನ್ನ ಆಹಾರ ಉತ್ಪನ್ನಗಳನ್ನು ಉತ್ಪಾದನೆ ಮಾಡುವ ಪ್ರಯೋಗ ಮಾಡಿದ್ದಾರೆ. ಹೆಚ್ಚಿನವು 'ರೆಡಿ ಟು ಈಟ್' ರೂಪದಲ್ಲಿಯೇ ಇವೆ. ಅವಲಕ್ಕಿ, ಉಪ್ಪಿಟ್ಟು, ಪೊಂಗಲ್ ಸಹಿತ ಬಗೆಬಗೆಯ ತಿಂಡಿಗಳನ್ನು ಸಿರಿಧಾನ್ಯ ಬಳಸಿಕೊಂಡು ತಯಾರಿಸಿದ್ದಾರೆ.

ಎಂಜಿನಿಯರ್ ಆಗಿದ್ದು ಲೋಕಸೇವಾ ಆಯೋಗದ ಪರೀಕ್ಷೆಗೂ ತಯಾರಿ ನಡೆಸುತ್ತಿರುವ ಪೂಜಾ, 'ಹೊಸದೇನಾದರೂ ಮಾಡಬೇಕು ಎಂಬ ಉದ್ದೇಶದಿಂದ ಸ್ನೇಹಿತರು, ಮನೆಯವರ ಸಹಕಾರ ಪಡೆದು ಆಹಾರ ಸಂಸ್ಕರಣೆ ಉದ್ಯಮ ಆಯ್ಕೆ ಮಾಡಿಕೊಳ್ಳಬೇಕು ಅನಿಸಿತು. ಇದಕ್ಕೆ ಬೇಕಾದ ತಂತ್ರಜ್ಞಾನ, ಪ್ಯಾಕೇಜಿಂಗ್ ಬಗ್ಗೆ ತರಬೇತಿ ಪಡೆದು ಮೊದಲ ಬಾರಿಗೆ ರಾಮಧಾನ್ಯ ಉತ್ಪನ್ನಗಳನ್ನು ಮಾರುಕಟ್ಟೆಗೆ ತಂದಿದ್ದೇನೆ' ಎಂದು ಹೆಮ್ಮೆಯಿಂದ ಹೇಳಿಕೊಂಡರು.

₹10 ಲಕ್ಷದ ಎತ್ತುಗಳು

ಕೃಷಿ ಮೇಳದಲ್ಲಿ ಜೋಡಿ ಎತ್ತುಗಳ ಮೆರವಣಿಗೆ ಗಮನ ಸೆಳೆಯಿತು. ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ಹಿರಿಸಾವೆಯ ಸಂದೀಪ್ ಮುದ್ದೇಗೌಡ ಅವರ ಎತ್ತುಗಳ ಬೆಲೆಯೇ ₹10 ಲಕ್ಷ. ಮೂರೂವರೆ ವರ್ಷ ಪ್ರಾಯದ ಹಳ್ಳಿಕಾರ್ ತಳಿಗಳು ಮುಖ್ಯರಸ್ತೆಯಲ್ಲಿ ಕ್ಯಾಟ್‌ವಾಕ್ ಮಾಡುತ್ತಿದ್ದರೆ, ಅವುಗಳೊಂದಿಗೆ ಜನ ಫೋಟೊ ತೆಗೆಸಿಕೊಂಡು ಸಂಭ್ರಮಿಸಿದರು.

ಮೇಳದಲ್ಲಿ ಎತ್ತುಗಳ ಮಾರಾಟವೂ ಜೋರಾಗಿತ್ತು. ಕೆಲವರು ಮೆರವಣಿಗೆಯನ್ನೂ ನಡೆಸಿದರು.

'ಜನ ರುಚಿಕರ ಆಹಾರ ಬಯಸುವ ಜತೆಗೆ ತತ್‌ಕ್ಷಣಕ್ಕೆ ಬಳಸುವುದಕ್ಕೆ ಇಷ್ಟಪಡುತ್ತಾರೆ. ಅಂತಹ ಆಹಾರ ಪರಿಚಯಿಸಿದ್ದೇವೆ. ಪ್ರತಿಕ್ರಿಯೆ ನೋಡಿಕೊಂಡು ಹೊಸ ಉತ್ಪನ್ನ ಬಿಡುಗಡೆ ಮಾಡುತ್ತೇವೆ' ಎಂದು ಮಾಹಿತಿ ನೀಡಿದರು.

ಖಾಸಗಿ ಉದ್ಯೋಗಿಯಾಗಿದ್ದ ಉದಯ್ ಅವರು ನೇರಳೆ ಹಣ್ಣಿನ ವಿವಿಧ ಉತ್ಪನ್ನಗಳ ಘಟಕ ಆರಂಭಿಸಿ ಉತ್ಪಾದನೆ ಶುರು ಮಾಡಿದ್ದಾರೆ. ನೇರಳೆ ಹಣ್ಣಿನ ಪೌಡರ್, ಜ್ಯೂಸ್, ಜಾಮ್, ಸ್ಟಿಪ್ಸ್ ಸಹಿತ ಏಳೆಂಟು ರೀತಿಯ ಆರೋಗ್ಯಪೂರ್ಣ ಉತ್ಪನ್ನಗಳನ್ನು ತಯಾರಿಸಿದ್ದಾರೆ.

'ನೇರಳೆ ಹಣ್ಣು ಕಿತ್ತ ಬಳಿಕ ಎರಡು ಮೂರು ದಿನದಲ್ಲಿ ಹಾಳಾಗುತ್ತದೆ. ಅದನ್ನು ಸಂಸ್ಕರಣೆ ಮಾಡಿ ವಿವಿಧ ರೂಪದಲ್ಲಿ ನೀಡಿದರೆ ಜನ ಇಷ್ಟಪಡಬಲ್ಲರು ಎಂದು ಇದನ್ನು ಆರಂಭಿಸಿದ್ದೇವೆ' ಎಂದು ಹೇಳಿದರು.

ವಿದೇಶದಲ್ಲಿ ಪತಿಯೊಂದಿಗೆ ಇದ್ದ ಗೃಹಿಣಿ ಸ್ಪಂದನಾ ಜಯಂತ್ ಬೆಂಗಳೂರಿಗೆ ಮರಳಿದ ಬಳಿಕ 'ತ್ವಾರಿಷ್' ಹೆಸರಿನ ಜೋಳ, ರಾಗಿ ಹಾಗೂ ಸಿರಿಧಾನ್ಯಗಳ ದೋಸೆ ಪೌಡರ್ ತಯಾರಿಸಿ ಮೊದಲ ಬಾರಿಗೆ ಕೃಷಿ ಮೇಳದಲ್ಲಿ ಪರಿಚಯಿಸಿದ್ದಾರೆ. 'ಮನೆಯಲ್ಲಿ ಅಮ್ಮ ಮಾಡುತ್ತಿದ್ದ ಅಡುಗೆಯ ರುಚಿಯನ್ನು ಜನರಿಗೆ ನೀಡಬೇಕು ಎನ್ನುವ ಉದ್ದೇಶದಿಂದ ಇಂತಹ ಪ್ರಯೋಗ ಮಾಡಿದ್ದೇನೆ' ಎಂದು ವಿವರಿಸಿದರು.

'ನವೋದ್ಯಮ ಮಾಡಿ ಮೂರ್ನಾಲ್ಕು ರೀತಿಯ ದೋಸೆ ಹಿಟ್ಟನ್ನು ಹತ್ತು ದಿನದ ಹಿಂದೆ ಮಾರುಕಟ್ಟೆಗೆ ಪರಿಚಯಿಸಿದ್ದೆವು. ಇನ್ನಷ್ಟು ಹಿಟ್ಟುಗಳ ಉತ್ಪನ್ನಗಳ ಪ್ರಯೋಗವೂ ನಡೆದಿದೆ' ಎಂದು ಸ್ಪಂದನಾ ತಿಳಿಸಿದರು.

ಜೇನು, ರಾಗಿ– ಜೋಳದ ಎಣ್ಣೆರಹಿತ ಬೋಟಿ, ಹಪ್ಪಳ, ಅಣಬೆಯಿಂದ ತಯಾರಿಸಿದ ಉಪ್ಪಿನಕಾಯಿ, ಬಿಸ್ಕೆಟ್, ಪೌಡರ್‌ಗಳು ಕೂಡ ನವೋದ್ಯಮದ ಅಡಿಯೇ ಆಹಾರೋತ್ಪನ್ನಗಳ ರೂಪ ಪಡೆದಿವೆ.



ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಆಯೋಜಿಸಿರುವ ಕೃಷಿ ಮೇಳದಲ್ಲಿ ವಿವಿಧ ಸ್ಟಾರ್ಟ್‌ಅಪ್ ಕಂಪೆನಿಗಳು ತಮ್ಮ ಕೃಷಿ ಆಧಾರಿತ ಮೌಲ್ಯವರ್ಧಿತ ಉತ್ಪನ್ನಗಳನ್ನು ಮಾರಾಟಕ್ಕೆ ಇಟ್ಟಿದ್ದವು

ರಾಜ್ಯ ಮೀನಿನ ಲಾಲಿತ್ಯ

ಕೃಷಿ ಮೇಳದಲ್ಲಿ ಆಕರ್ಷಿಸುತ್ತಿರುವುದು ದಶಕದ ನಂತರ ಆರಂಭಿಸಿರುವ ಮತ್ಸ್ಯಮೇಳ. ಇಲ್ಲಿ 45 ಬಗೆಯ ಆಲಂಕಾರಿಕ ಮೀನುಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಅದರಲ್ಲಿ 'ಕರ್ನಾಟಕ ರಾಜ್ಯ ಮೀನು' ಸ್ಥಾನ ಪಡೆದಿರುವ ಹಾಲುಗೆಂಡೆ ಮೀನು ಗಮನ ಸೆಳೆಯುತ್ತಿದೆ.

'ಮಹಷಿರ್ ಮೀನನ್ನೇ ಹೋಲುವ ಹಾಲುಗೆಂಡೆ ಮೀನು ಕಾವೇರಿ ನದಿಯಲ್ಲಿ ಹೆಚ್ಚು ಸಿಗುತ್ತದೆ. ಹಿಂದೆಯೇ ಇದನ್ನು 'ರಾಜ್ಯ ಮೀನು' ಎಂದು ಘೋಷಿಸಲಾಗಿದ್ದರೂ ಈ ಬಗ್ಗೆ ಹೆಚ್ಚಿನವರಿಗೆ ಅರಿವಿಲ್ಲ. ಈ ಮಾಹಿತಿಯನ್ನು ಜನರಿಗೆ ನೀಡುತ್ತಿದ್ದೇವೆ' ಎಂದು ಕೃಷಿ ವಿಶ್ವವಿದ್ಯಾಲಯದ ಒಳನಾಡು ಮೀನುಗಾರಿಕೆ ಘಟಕದ ಮುಖ್ಯಸ್ಥ ಹರ್ಷ ನಾಯಕ್ ತಿಳಿಸಿದರು.

ತರಹೇವಾರಿ ಬಾಳೆ ತಳಿ

'ಹಿಂದೆ 800ಕ್ಕೂ ಅಧಿಕ ಬಾಳೆ ತಳಿಗಳನ್ನು ನಮ್ಮಲ್ಲಿ ಬೆಳೆಯಲಾಗುತ್ತಿತ್ತು. ಈಗ ಬಹುತೇಕ ತಳಿಗಳು ಅಳಿದುಹೋಗಿದ್ದು, 300 ತಳಿಗಳನ್ನು ದಕ್ಷಿಣ ಭಾರತದಲ್ಲಿ ಬೆಳೆಯಲಾಗುತ್ತಿದೆ. ಇದರಲ್ಲಿ 100ರಷ್ಟು ಬಳಕೆಯಲ್ಲಿವೆ. ಕೃಷಿ ಮೇಳದಲ್ಲಿ ಬಾಳೆಯ ವೈವಿಧ್ಯಮಯ ಜಗತ್ತನ್ನು ನೋಡಿ ಖುಷಿಪಡಬಹುದು. 20 ಅಡಿ ಉದ್ದನೆಯ ಶಾಸ್ತ್ರ ಬಾಳೆ ಗಮನ ಸೆಳೆಯುತ್ತಿದೆ. ಬೂದುಬಾಳೆ, ಕರ್ಪೂರವಲ್ಲಿ ಬಾಳೆ, ಚಿರಾಪುಂಜಿ, ನಮಸ್ತೆ ಬಾಳೆ, ಚಂದ್ರಬಾಳೆ, ರಸಥಾಳಿ, ಆಟುಕೊಂಬಟ್ಟು, ಫಿಂಗರ್ಸ್ ಬಾಳೆ, ಪೂವನ ಬಾಳೆ ಅಲ್ಲಿವೆ.

'ಸಹಜ ಸಮೃದ್ಧ ಸಂಸ್ಥೆಯು ಬಾಳೆ ತಳಿಗಳನ್ನು ಸಂಗ್ರಹಿಸಿ ಪ್ರದರ್ಶನ ಏರ್ಪಡಿಸುತ್ತಿದೆ. ಈಗಲೂ ಹಲವು ತಳಿಗಳ ಉತ್ಪಾದನೆ ಇದೆ. ಒಂದೊಂದು ಬಾಳೆಯ ರುಚಿ ಒಂದೊಂದು ರೀತಿ' ಎಂದು ಸಂಸ್ಥೆಯ ಅಭಿ ಹೇಳಿದರು.

ಮೊಗ್ಗಿನ ಜಡೆ ಸಂಭ್ರಮ ನೋಡೆ!

• ಯು.ಎ

ಪುಟ್ಟಪೋರಿ ತನ್ವಿಯದ್ದು ಒಂದೇ ಹಟ. 'ಅಮ್ಮಾ, ನಾಳೆ ಶ್ರೀಕೃಷ್ಣ ಜನ್ಮಾಷ್ಟಮಿ. ಶಾಲೆಯಲ್ಲಿ ಫ್ಯಾನ್ಸಿ ಡ್ರೆಸ್ ಕಾಂಪಿಟಿಷನ್ ಇದೆ. ನಾನು ರಾಧೆ ತರಹ ವೇಷ ಹಾಕಬೇಕು. ಅದರಲ್ಲೂ ತುರುಬನ್ನು 'ಮೊಗ್ಗಿನ ಜಡೆ'ಯಿಂದ ಅಲಂಕರಿಸಬೇಕು, ಆಗುತ್ತಾ ಅಮ್ಮಾ...' ಮಗಳ ಆಸೆಗೆ ತಣ್ಣೀರೆರಚಲು ಯಾವ ತಾಯಿ ತಾನೇ ಬಯಸುತ್ತಾಳೆ? ಆದರೆ ಒಂದೇ ದಿನದಲ್ಲಿ ಹೇಗಪ್ಪಾ ರಾಧೆಯಂತೆ ಕಾಣುವ ತರಹ ಮೊಗ್ಗಿನ ಜಡೆ ರೆಡಿ ಮಾಡೋದು ಎಂಬ ಆತಂಕ ತಾಯಿಗೆ. ತಕ್ಷಣ ಮಾರುಕಟ್ಟೆಗೆ ತೆರಳಿದ ಅಮ್ಮ, ಜಡೆ, ಜಡೆಬಿಲ್ಲೆ ಖರೀದಿಸಿಯೇ ಬಿಟ್ಟಳು. ಇದನ್ನು ಮೊಗ್ಗಿನ ಜಡೆಯಿಂದ ಅಲಂಕರಿಸಬೇಕಲ್ಲ? ಗೆಳತಿಯ ಸಲಹೆ ಪಡೆದು ಬ್ಯುಟೀಷಿಯನ್ ಮೊರೆ ಹೋದಳು. ಮರುದಿನ ಬೆಳಿಗ್ಗೆ ಪುಟಾಣಿ ತನ್ವಿ 'ರಾಧೆ'ಯಾಗಿಯೇ ಬಿಟ್ಟಳು. ಅದೂ ಅತ್ಯಾಕರ್ಷಕವಾಗಿ ಕಂಗೊಳಿಸುವ ಮೊಗ್ಗಿನ ಜಡೆಯೊಂದಿಗೆ!

ಮೊಗ್ಗಿನ ಜಡೆ ಹಾಕಿಸಿಕೊಳ್ಳುವ ಹಳೆಯ ಕಾಲದ ಹೆಣ್ಣುಮಕ್ಕಳ ಕ್ರೇಜ್ ಈಗ ಹೊಸ ಟ್ರೆಂಡ್ ಆಗಿ ಮತ್ತೆ ಬಂದಿದೆ. ಮದುವೆ ಸಮಾರಂಭಗಳಲ್ಲಿ ಮದುಮಗಳ ಅಲಂಕಾರ ಮುಗಿಯುವುದೇ ತಡ, ಹೆಣ್ಣುಮಕ್ಕಳ ಉದ್ದನೆಯ ಕ್ಯೂ ಬ್ಯುಟೀಷಿಯನ್ ಬಳಿ ಇರುತ್ತದೆ. ಅಲಂಕಾರ ಮಾಡಿಸಿಕೊಳ್ಳಲು, ಜಡೆ ಹಾಕಿಸಿಕೊಳ್ಳಲು ಕಾದಿರುತ್ತದೆ. ಅದರಲ್ಲೂ ಮೊಗ್ಗಿನ ಜಡೆ ಹಾಕಿಸಿಕೊಳ್ಳಲು ತಾ ಮುಂದು, ನಾ ಮುಂದು ಎಂದು ಹಾತೊರೆಯುವವರೇ ಹೆಚ್ಚು.

ಶಾಲಾ ವಾರ್ಷಿಕೋತ್ಸವಗಳಲ್ಲಿ ಹೆಣ್ಣುಮಕ್ಕಳು ನೃತ್ಯ ಮಾಡಲು ಮೊಗ್ಗಿನ ಜಡೆ ಹಾಕಿಸಿಕೊಳ್ಳುವುದಿದೆ. ಭರತನಾಟ್ಯದಲ್ಲಂತೂ ಮೊಗ್ಗಿನ ಜಡೆಗೇ ಹೆಚ್ಚಿನ ಆದ್ಯತೆ. ಏಕೆಂದರೆ ಇದನ್ನು ಹಾಕಿಕೊಳ್ಳುವುದು ಸುಲಭ. ಈಗೀಗಂತೂ ರೆಡಿಮೇಡ್ ಮೊಗ್ಗಿನ ಜಡೆಗಳು ಸಿಗುತ್ತವೆ. ಇದು ತಾಜಾ ದುಂಡುಮಲ್ಲಿಗೆಯಿಂದ ಮಾಡಿದ್ದಲ್ಲ. ಕೃತಕ ಹೂವಿನಿಂದ ಮಾಡಿದ್ದು. ಆದರೆ ನೋಟದಲ್ಲಿ ನೈಜ ಹೂವಿಗಿಂತಲೂ ಚೆನ್ನಾಗಿ ಕಾಣಿಸುತ್ತದೆ.

ಮಲ್ಲಿಗೆ ಮೊಗ್ಗಿನಿಂದ...

ಸಾಮಾನ್ಯವಾಗಿ ಮೊಗ್ಗಿನ ಜಡೆಯನ್ನು ದುಂಡು ಮಲ್ಲಿಗೆಯ ಮೊಗ್ಗುಗಳಿಂದಲೇ ಮಾಡಲಾಗುತ್ತದೆ. ಸೂಜಿ ಮಲ್ಲಿಗೆ ಮೊಗ್ಗು, ಮಂಗಳೂರು ಮಲ್ಲಿಗೆ ಮೊಗ್ಗು, ಕಾಡು ಮಲ್ಲಿಗೆ, ಕಾಕಡ ಮಲ್ಲಿಗೆ ಮೊಗ್ಗುಗಳೂ ಮೊಗ್ಗಿನ ಜಡೆಗೆ ಸೂಕ್ತವೇ ಆಗಿವೆ. ಇಂದು ಮೊಗ್ಗಿನ ಜಡೆ ಹಾಕಿಕೊಳ್ಳಬೇಕಾದರೆ ಹಿಂದಿನ ದಿನವೇ ಇದನ್ನು ಸಿದ್ಧಪಡಿಸಿಕೊಂಡಿರಬೇಕು. ಮೊಗ್ಗಿನ ಜಡೆ ತಯಾರಿಸಿದ ಬಳಿಕ ಅದನ್ನು ನೆನೆಸಿದ ಹತ್ತಿ ಬಟ್ಟೆಯಲ್ಲಿ ಸುತ್ತಿ ತೆಗೆದಿಡಬೇಕು. ಹೀಗೆ ಮಾಡಿದರೆ ಮರುದಿನ ಬಳಸುವಾಗ ಅದರ ತಾಜಾತನ ಹೋಗದು.

ಹಳ್ಳಿ ಮನೆಗಳಲ್ಲಿ...

ಮನೆಯ ಹಿತ್ತಲಿನಲ್ಲಿ ತಾನೇತಾನಾಗಿ ಬೆಳೆದ ಮಲ್ಲಿಗೆ ಮೊಗ್ಗುಗಳನ್ನು ಆಯ್ದು ಬಾಳೆದಿಂಡಿನ ಹಗ್ಗದಲ್ಲಿ ಒಂದೊಂದೇ ಮೊಗ್ಗನ್ನು ಪೋಣಿಸಿ, ನಾಲ್ಕು ಪದರಗಳಲ್ಲಿ ಎಳೆದು ಕಟ್ಟಿ ದಂಡೆ ಮಾಡಿದರೆ ಮೊಗ್ಗಿನ ಜಡೆ ತಯಾರಾದ ಹಾಗೇ. ಕಡುಬಣ್ಣದ ಜರಿ ಲಂಗ ತೊಡಿಸಿ, ಮುದ್ದು ಪುಟಾಣಿಗೆ ಜಡೆ ಕಟ್ಟಿ ಅದರ ಮೇಲೆ ಮೊಗ್ಗಿನ ಜಡೆ ಇಡಬೇಕು. ಇನ್ನೂ ಚೆನ್ನಾಗಿ ಕಾಣಲು ಅಲ್ಲಲ್ಲಿ ಕೆಂಪು ಗುಲಾಬಿ ಎಸಳನ್ನು ಪಿನ್ ಸಹಾಯದಿಂದ ಇಟ್ಟರೆ ಮತ್ತಷ್ಟು ಅಂದ. ಜಡೆಯ ತುದಿಯನ್ನು ಜಡೆಗೊಂಡೆಯಿಂದ ಅಲಂಕರಿಸಬೇಕು. ಈಗ ಒಂದು ಹಂತದ ಅಲಂಕಾರ ಮುಗಿದಂತೆ.

ಚಲನಚಿತ್ರವೂ ಆಗಿದೆ...

2008ರಲ್ಲಿ ಬಿಡುಗಡೆಯಾದ ಕನ್ನಡ ಚಲನಚಿತ್ರ 'ಮೊಗ್ಗಿನ ಜಡೆ' ನೋಡಿದ್ದೀರಲ್ಲ? ರಾಮದಾಸ್ ನಾಯ್ಡು ನಿರ್ದೇಶನದ ಈ ಚಿತ್ರದಲ್ಲಿ ಬೇಬಿ ಶ್ರೀಶಾ ನಟಿಸಿದ್ದು, ಅಂತರರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವದಲ್ಲಿ ಪ್ರದರ್ಶಿಸಲಾಗಿತ್ತು. ಈ ಚಿತ್ರದಲ್ಲಿ ಪ್ರಿಯಾ ಎಂಬ ಹುಡುಗಿಗೆ ಆಕೆಯ ತಾಯಿ ಆಧುನಿಕತೆಯ ಕಾರಣದಿಂದಾಗಿ 'ಮೊಗ್ಗಿನ ಜಡೆ' ಹಾಕಲು ವಿರೋಧಿಸುವ ಸನ್ನಿವೇಶವಿದೆ. ಕೊನೆಗೆ ಪ್ರಿಯಾ ತನ್ನ ಕುಟುಂಬದಿಂದ ಪ್ರತ್ಯೇಕಗೊಂಡ ನಂತರ ಆಕೆಯ ಕುಟುಂಬವು ಅವಳನ್ನು ಹೇಗೆ ಹುಡುಕುತ್ತದೆ ಮತ್ತು ಅವಳಿಗೆ ಮೊಗ್ಗಿನ ಜಡೆ ಹಾಕಲು ಹೇಗೆ ಅನುಮತಿ ನೀಡುತ್ತದೆ ಎಂಬುದರ ಚಿತ್ರಣ ಇದರಲ್ಲಿದೆ. ಮಕ್ಕಳ ದಿನಾಚರಣೆಯ ಈ ಸಂದರ್ಭದಲ್ಲಿ, ಜರಿ ಲಂಗ ತೊಟ್ಟ ಹೆಣ್ಣುಮಗು ಮೊಗ್ಗಿನ ಜಡೆ ಹಾಕಿಸಿಕೊಂಡು, ಅಂದವಾಗಿ ಅಲಂಕರಿಸಿಕೊಂಡು ಶಾಲೆಗೆ ಹೋದರೆ ಎಲ್ಲರ ಕಣ್ಣು ಈಕೆಯತ್ತಲೇ.



ಬೆಂಗಳೂರಿನ ಕೆ.ಆರ್ ಮಾರುಕಟ್ಟೆಯ ಮುಂಜಾನೆಯ ಹೂವಿನ ವ್ಯಾಪಾರದ ನಡುವೆ ಕಂಡುಬಂದ ಮೊಗ್ಗಿನ ಜಡೆ –ಪ್ರಜಾವಾಣಿ ಚಿತ್ರ/ ರಂಜು ಪಿ



ಇಂದು ಮಕ್ಕಳ ದಿನಾಚರಣೆ

'ನಾವು ಎಳೆಯರು ನಾವು ಗೆಳೆಯರು, ಹೃದಯ ಹೂವಿನ ಹಂದರ, ನಾಳೆ ನಾವೇ ನಾಡ ಹಿರಿಯರು ನಮ್ಮ ಕನಸದೊ ಸುಂದರ...' ಶಂ.ಗು.ಬಿರಾದಾರ ಅವರ ಕವನದ ಈ ಸಾಲುಗಳು ಮಕ್ಕಳ ನಿಷ್ಕಲ್ಮಷ ಭಾವನೆಗೆ ಕನ್ನಡಿ ಹಿಡಿಯುತ್ತವೆ. ಬನ್ನಿ, ಕನ್ನಡ ನಾಡೆಂಬ ಈ ಸುಂದರ ಹೂದೋಟದಲ್ಲಿ ನಲಿಯುತ್ತಿರುವ ನಮ್ಮ ಮಕ್ಕಳ ಹೃದಯದಲ್ಲಿ ಮಾನವೀಯತೆಯ ಬೆಳಕು ಹಚ್ಚೋಣ, ನಾಳಿನ ಪ್ರಜೆಗಳು ಒಗ್ಗೂಡಿ ಬಾಳುವಂತೆ, ಅವರ ಮನವೆಂಬ ಗಿಡಕ್ಕೆ ಸೌಹಾರ್ದದ ನೀರೆರೆಯೋಣ.





ಪ್ರಜಾವಾಣಿ ಪ್ರಜಾಪ್ಲಸ್
ಮನರಂಜನೆ | ಜಾಹೀರಾತು
ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ
ಶುಕ್ರವಾರ • ನವೆಂಬರ್ 14, 2025


ರಾಜ್ಯೋತ್ಸವದ ಜೊತೆ ಮಕ್ಕಳ ಹಬ್ಬ


ಸಂಗ್ರಹ ಚಿತ್ರ

ಪಟೇಲ್ ಗುಳ್ಳಪ್ಪ ಪ್ರಾಥಮಿಕ ಮತ್ತು ಪ್ರೌಢಶಾಲೆ, ನ್ಯಾಷನಲ್ ಇಂಗ್ಲಿಷ್ ಪಬ್ಲಿಕ್ ಸ್ಕೂಲ್ ಹಾಗೂ ಶ್ರೀ ಪಟೇಲ್ ಗುಳ್ಳಪ್ಪ ಪದವಿಪೂರ್ವ ಮತ್ತು ಪದವಿ ಕಾಲೇಜಿನ ಸಹಯೋಗದಲ್ಲಿ 70ನೇ ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆಯನ್ನು ನವೆಂಬರ್ 14ರಂದು ಬೆಳಿಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ.

ಧ್ವಜಾರೋಹಣ: ಶ್ರೀನಿವಾಸ ರಾಮಾನುಜ ಭಟ್ಟಾಚಾರ್ಯ, ಅತಿಥಿಗಳು: ನೊಣವಿನಕೆರೆ ರಾಮಕೃಷ್ಣಯ್ಯ, ರಮೇಶ್ ರಾಜನಹಳ್ಳಿ, ಬಿ.ಪಿ. ಹರ್ಷ. ಅಧ್ಯಕ್ಷತೆ: ಬಿ.ಎಂ. ಪಟೇಲ್ ಪಾಂಡು. ಬೆಳಿಗ್ಗೆ 10ಕ್ಕೆ.
ಸ್ಥಳ: ಶಾಲಾ–ಕಾಲೇಜು ಆವರಣ.

ವಿಂಟೇಜ್ ಕಾರುಗಳ ಲೋಕಕ್ಕೆ ಕರೆದೊಯ್ಯುವ 'ಪಯಣ'



ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರ ಸಂಗ್ರಹದ ಕಾರುಗಳ ಪ್ರದರ್ಶನ-ವನ್ನು 'ಪಯಣ' ಕಾರು ಸಂಗ್ರಹಾಲಯವು ನವೆಂಬರ್ 14ರಂದು ಬೆಳಿಗ್ಗೆ 11 ಗಂಟೆಗೆ ಏರ್ಪಡಿಸಿದೆ. ಗತಕಾಲದ ಅಪರೂಪದ ಕಾರುಗಳ ಜಗತ್ತಿನ ಪರಿಚಯ ಇದಾಗಿದೆ.

ಭಾರತದ ವಿಕಾಸ ಪಥದಲ್ಲಿ ನಾಲ್ಕು ಚಕ್ರಗಳು ಹೇಗೆಲ್ಲ ರೂಪುಗೊಂಡವು, ಆಯಾ ಕಾಲಘಟ್ಟದಲ್ಲಿ ದೊಡ್ಡ ಮಟ್ಟದಲ್ಲಿ ಜನಪ್ರಿಯವಾಗಿದ್ದ ಕಾರುಗಳೆಲ್ಲ ಹೇಗೆ 'ವಿಂಟೇಜ್' ವರ್ಗಕ್ಕೆ ಸೇರುತ್ತಾ ಹೋದವು ಎಂಬಂತಹ ಸಂಪೂರ್ಣ ಮಾಹಿತಿ ನೀಡುವ ವಿನೂತನ ಕಾರ್ಯಕ್ರಮ ಇದಾಗಿದೆ. ಹೆಗ್ಗಡೆ ಅವರಲ್ಲಿ ಸಂಗ್ರಹವಾಗಿರುವ ವಿಂಟೇಜ್ ಕಾರುಗಳ ಪ್ರದರ್ಶನ ಇದಾಗಿರುತ್ತದೆ. ಕಾರುಗಳ ವಿನ್ಯಾಸ, ಬದಲಾದ ಎಂಜಿನ್‌ಗಳು ಹಾಗೂ ತಂತ್ರಜ್ಞಾನದ ಕುರಿತು ವಿಶೇಷ ಮಾಹಿತಿ ಇರುತ್ತದೆ. ಕಸ್ಟಮೈಸ್ಡ್ ಮಾಡಿದ ಕಾರಿನ ನಿರ್ವಹಣಾ ತಂತ್ರಗಳ ಬಗ್ಗೆ ತಜ್ಞರು ಪ್ರಾಯೋಗಿಕ ಒಳನೋಟಗಳನ್ನು ನೀಡಲಿದ್ದಾರೆ.


ಸ್ಥಳ: ಅರಮನೆ ಮೈದಾನ, ತ್ರಿಪುರವಾಸಿನಿ, ಮೇಖ್ರಿ ವೃತ್ತ. ಬೆಳಿಗ್ಗೆ 11ಕ್ಕೆ. ಮಾಹಿತಿಗೆ: 98440 06736



'ಮನೆಯಂಗಳದಲ್ಲಿ' ಮರುಳಸಿದ್ಧಪ್ಪ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿರುವ 'ಮನೆಯಂಗಳದಲ್ಲಿ ಮಾತುಕತೆ' ಕಾರ್ಯಕ್ರಮದಲ್ಲಿ ನವೆಂಬರ್ ತಿಂಗಳ ಅತಿಥಿಯಾಗಿ ಹಿರಿಯ ಸಾಹಿತಿ ಹಾಗೂ ಸಂಸ್ಕೃತಿ ಚಿಂತಕ ಕೆ.ಮರುಳಸಿದ್ಧಪ್ಪ ಪಾಲ್ಗೊಳ್ಳಲಿದ್ದಾರೆ.

ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿನ ನಯನ ರಂಗಮಂದಿರದಲ್ಲಿ 15ರಂದು ಮಧ್ಯಾಹ್ನ 3 ಗಂಟೆಗೆ ಕಾರ್ಯಕ್ರಮ ನಡೆಯಲಿದೆ.


ಕೆ. ಮರುಳಸಿದ್ಧಪ್ಪ

ಸಾಹಿತ್ಯ–ಸಂಸ್ಕೃತಿಯ ಜುಗಲ್‌ಬಂದಿ

'ರಾಷ್ಟ್ರೋತ್ಥಾನ ಸಾಹಿತ್ಯ–ಬೆಂಗಳೂರು' ಸಂಸ್ಥೆಯು ನ.1ರಿಂದ ಡಿ. 7ರವರೆಗೆ 5ನೇ ಕನ್ನಡ ಪುಸ್ತಕ ಹಬ್ಬವನ್ನು ಆಯೋಜಿಸಿದೆ. 37 ದಿನಗಳ ಸಾಹಿತ್ಯ–ಸಂಸ್ಕೃತಿ ಉತ್ಸವ ಇದಾಗಿದೆ. ನವೆಂಬರ್ 14ರಂದು–ಜೆಜಿಆರ್‌ವಿಕೆ ಶಾಲೆ ಹಾಗೂ ಪೂರ್ಣಪ್ರಮತಿ ಶಾಲೆಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 6. 15ರಂದು– ಆರ್‌ಎನ್‌ಎಸ್ ಪ್ರಥಮದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಬೆಳಿಗ್ಗೆ 11. ವಿದುಷಿ ಸಂಗೀತಾ ಕಟ್ಟಿ ಅವರಿಂದ ಸುಗಮ ಸಂಗೀತ ಕಾರ್ಯಕ್ರಮ ಸಂಜೆ 6ಕ್ಕೆ. 16ರಂದು– ನಾಟ್ಯಸಂಪದ ಯಕ್ಷಗಾನ ಶಾಲೆಯ ವಿದ್ಯಾರ್ಥಿಗಳಿಂದ ಯಕ್ಷಗಾನ 'ಸುಂದೋಪಸುಂದ ಕಾಳಗ', 'ರುಕ್ಮಿಣೀ ವಿಜಯ' ಪ್ರದರ್ಶನ. ನಿರ್ದೇಶನ: ರವೀಶ್ ಹೆಗ್ಡೆ. ಸಂಜೆ 6.

ಸ್ಥಳ: ಕೇಶವಶಿಲ್ಪ ಸಭಾಂಗಣ, ರಾಷ್ಟ್ರೋತ್ಥಾನ ಪರಿಷತ್, ಕೆಂಪೇಗೌಡ ನಗರ. ಕನ್ನಡ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ– ಪ್ರತಿದಿನ ಬೆಳಿಗ್ಗೆ 10ರಿಂದ ರಾತ್ರಿ 9ರವರೆಗೆ.


ಸಂಗೀತಾ ಕಟ್ಟಿ

ಶ್ರೀಗಂಧದ ನಾಡಿನ ಘಮಲು



ಶಿವಲೀಲಾ ಕಲ್ಚರಲ್ ಮತ್ತು ಚಾರಿಟಬಲ್ ಟ್ರಸ್ಟ್ 'ಕಲಾಸತ್ವಥ -2025' ಸಾಂಸ್ಕೃತಿಕ ಸಂಜೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಶ್ರೀಗಂಧದ ನಾಡಿನ ಗತವೈಭವವನ್ನು ಸಾರುವ ನೃತ್ಯರೂಪಕ 'ಸಿರಿಗನ್ನಡಂ ಗೆಲ್ಗೆ' ಪ್ರದರ್ಶನಗೊಳ್ಳಲಿದೆ. ಉದ್ಘಾಟನೆ: ಗೃಹ ಸಚಿವ ಜಿ.ಪರಮೇಶ್ವರ. ಅತಿಥಿಗಳು: ಸಚಿವ ಶಿವರಾಜ್ ತಂಗಡಗಿ, ಅಖಿಲ ಭಾರತ ಶರಣ ಸಾಹಿತ್ಯ ಸಮಿತಿಯ ಅಧ್ಯಕ್ಷ ಸಿ. ಸೋಮಶೇಖರ್, ಶ್ರೀಕ್ಷೇತ್ರ ಧರ್ಮಸ್ಥಳದ ಡಿ. ಸುರೇಂದ್ರ ಕುಮಾರ್, ವಿಧಾನಪರಿಷತ್ ಸದಸ್ಯೆ ಆರತಿ ಕೃಷ್ಣ, ರಂಗ ನಿರ್ದೇಶಕ ಶಶಿಧರ ಅಡಪ. ಅಧ್ಯಕ್ಷತೆ: ಗೊ.ರು. ಚನ್ನಬಸಪ್ಪ.
ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ. ಸಂಜೆ. 5.30.

ಸಾಂಸ್ಕೃತಿಕ

ಸಾವಯವ ಸಂವಾದ–ಸಂಭ್ರಮ



'ದ ಗ್ರೀನ್ ಪಾಥ್' ಸಂಸ್ಥೆಯು ನವೆಂಬರ್ 14, 15 ಮತ್ತು 16ರಂದು ಮೂರು ದಿನಗಳ 101ನೇ ಸಾವಯವ ಸಂತೆಯನ್ನು ಆಯೋಜಿಸಿದೆ. ಉದ್ಘಾಟನಾ ಸಮಾರಂಭ ಮತ್ತು 'ಸಾವಯವ ಕೃಷಿ ಮತ್ತು ಆಹಾರ ಅತ್ಯವಶ್ಯಕ' ಎಂಬ ಗೋಷ್ಠಿ ನಡೆಯಲಿದೆ. ಉದ್ಘಾಟನೆ: ಉದ್ಯಮಿ, ವೀಣಾವಾದಕಿ ರೇವತಿ ಕಾಮತ್, ಅತಿಥಿಗಳು: ಗಾಯಕಿ ಸಂಗೀತಾ ಕಟ್ಟಿ, ಚಿತ್ರನಟ ರಿಷಿ, ಗಾಯಕಿ ರಮ್ಯಾ ವಸಿಷ್ಠ. ಸಂಜೆ 4ಕ್ಕೆ.

15ಕ್ಕೆ ಹಸಿರು ಸಂವಾದ ಮತ್ತು ಸಂಗೀತ ಸಂಭ್ರಮ. ಅತಿಥಿಗಳು: ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಸದಸ್ಯ ಕೆ.ಟಿ.ತಿಪ್ಪೇಸ್ವಾಮಿ, ನಿವೃತ್ತ ಐಎಎಸ್ ಅಧಿಕಾರಿ ರಾಜ್‌ಕುಮಾರ್ ಕತ್ರಿ, ನಿರೂಪಕಿ ಭಾವನಾ ನಾಗಯ್ಯ. ಬೆಳಿಗ್ಗೆ 10.30ರಿಂದ.

ಸಾವಯವ ಸಂವಾದ ಮತ್ತು ಸಂಗೀತ ಸಂಭ್ರಮ. ಅತಿಥಿಗಳು: ಡಾ. ವಸುಂಧರಾ ಭೂಪತಿ, ವಿಮರ್ಶಕಿ ಎಂ.ಎಸ್.ಆಶಾದೇವಿ. ಸಂಜೆ 5ರಿಂದ.

16ಕ್ಕೆ ಭೂಮಿಯೊಂದಿಗಿನ ನಿಕಟ ಸಂಬಂಧ ಮತ್ತು ಸಾಂಸ್ಕೃತಿಕ ಸಂಭ್ರಮ. ಅತಿಥಿಗಳು: ಸಾವಯವ ಕೃಷಿಕ ಬಿ.ಕೆ.ಶಿವರಾಂ, ಶಿಕ್ಷಣ ತಜ್ಞ ಅಬ್ರಹಾಂ ಎಬೆನೈಝರ್, ಪತ್ರಕರ್ತ ಗಾಣಧಾಳು ಶ್ರೀಕಂಠ, ಉಮೇಶ್ ಕುಮಾರ್, ರಚನಾ ಪಾಯಲ್. ಬೆಳಿಗ್ಗೆ 10.30. 'ಆಹಾರದಿಂದ ಆರೋಗ್ಯ' ಗೋಷ್ಠಿ: ಅತಿಥಿಗಳು: ಹಂ.ಪ. ನಾಗರಾಜಯ್ಯ, ವೂಡೆ ಪಿ. ಕೃಷ್ಣ, ಸಿಂಚನ್ ದೀಕ್ಷಿತ್. ಸಂಜೆ 4.

ಸ್ಥಳ: ದ ಗ್ರೀನ್ ಪಾಥ್, ಮಂತ್ರಿ ಮಾಲ್ ಮೆಟ್ರೊ ಸ್ಟೇಷನ್ ಎದುರು, ಮಲ್ಲೇಶ್ವರಂ. ಮಾಹಿತಿಗೆ 9900911777

ಆಫ್‌ಬೀಟ್ –2025

ಸಂಗೀತ ರಸಸಂಜೆ


ಡಾ.ವಸುಧಾ





ವಿ.ಟಿ.ಎಂಟರ್‌ಟೈನರ್ಸ್ ಚಾರಿಟಬಲ್ ಟ್ರಸ್ಟ್ ಬಹುನಿರೀಕ್ಷಿತ ಸಂಗೀತ ಮೇಳದ ದಶಮ ಸಂಚಿಕೆ 'ಆಫ್‌ಬೀಟ್–2025' ಕಾರ್ಯಕ್ರಮವನ್ನು ನವೆಂಬರ್ 15ರಂದು ಶನಿವಾರ ಹಮ್ಮಿಕೊಂಡಿದೆ. ಪ್ರೇಕ್ಷಕರಿಗೆ ಅತ್ಯುತ್ತಮ ರೆಟ್ರೊ ಮತ್ತು ಮೆಟ್ರೊ ಹಾಡುಗಳ ಗಾಯನ ಇರಲಿದೆ.

ಡಾ. ವಸುಧಾ ತೀರ್ಥರಾಮ್ ಅವರ ಕಲ್ಪನೆ ಮತ್ತು ಸಂಯೋಜನೆಯಂತೆ ಆಫ್‌ಬೀಟ್– 2025 ಅನ್ನು ರೂಪಿಸಲಾಗಿದೆ. ಈ ನಿಧಿ ಸಂಗ್ರಹ ಕಾರ್ಯಕ್ರಮದಿಂದ ಸಂಗ್ರಹವಾಗುವ ನಿಧಿಯು ಅಂಗವಿಕಲರ ವಸತಿಗೃಹ ವಿಶ್ವಶಾಂತಿನಿಕೇತನಕ್ಕೆ ಹೋಗಲಿದೆ.

ಭಾಗವಹಿಸಲಿರುವ ಕಲಾವಿದರು: ಶೃತಿ ಭಿಡೆ, ಅಭಿಷೇಕ ರಾವ್ ಕೋರ್ದಕಲ್, ಸಮನ್ವಿತಾ ಶರ್ಮಾ, ಗೋವಿಂದ ಕುರುನೂಲ್, ಮಾಲವಿಕಾ ನಿರಂಜನ್, ನರಸಿಂಹನ್ ಕಣ್ಣನ್, ದಿವ್ಯಾ ರಾಘವನ್, ಸೌಮ್ಯಾ, ಸುಬ್ರತ ಸಾಹೂ ಮತ್ತು ಜ್ಯೋತಿ ಕುಂಜೂರು.

ಪ್ರದೀಪ್ ಪಾಟ್ಕರ್ ಮತ್ತು ತಂಡವು ವಾದ್ಯವೃಂದವನ್ನು ನಿರ್ವಹಿಸಲಿದೆ. ಧ್ವನಿ ಮತ್ತು ಬೆಳಕಿನ ವಿನ್ಯಾಸ: ಶಾಂತಳ ವಿಜಯಿ.

ಸ್ಥಳ: ಚೌಡಯ್ಯ ಸ್ಮಾರಕ ಭವನ, ಸಂಜೆ 6ಕ್ಕೆ.



'ಬಾಬ್ ಮಾರ್ಲಿ ಫ್ರಂ ಕೋಡಿಹಳ್ಳಿ' ನಾಟಕದ ದೃಶ್ಯ

'ಜಂಗಮ ಕಲೆಕ್ಟಿವ್' ಸಂಭ್ರಮಾಚರಣೆ

ಸಾಮಾಜಿಕವಾಗಿ ಪರಿಣಾಮ ಬೀರುವ ನಾಟಕ ಪ್ರದರ್ಶನಗಳ ಮೂಲಕ ಗುರುತಿಸಿಕೊಂಡಿರುವ 'ಜಂಗಮ ಕಲೆಕ್ಟಿವ್' ಆರು ವರ್ಷದ ಸಂಭ್ರಮಾಚರಣೆಯಲ್ಲಿದೆ.

ರಂಗಭೂಮಿಯನ್ನೇ ಸಾಮಾಜಿಕ ಮತ್ತು ರಾಜಕೀಯ ಅಭಿವ್ಯಕ್ತಿಯಾಗಿ ರೂಪಿಸಿಕೊಂಡಿರುವ 'ಜಂಗಮ ಕಲೆಕ್ಟಿವ್' ಜಾತಿ, ಗುರುತು, ರಾಜಕೀಯ ಮತ್ತು ಸಮಾಜದ ವಾಸ್ತವಗಳನ್ನು ಪ್ರಶ್ನಿಸುವ, ಸವಾಲು ಹಾಕುವ ಮತ್ತು ಹೊಸ ಸಾಧ್ಯತೆಗಳನ್ನು ಕಾಣಿಸುವ ಕಾರ್ಯದಲ್ಲಿ ತೊಡಗಿಕೊಂಡಿದೆ.

ಆರು ವರ್ಷಗಳ ಅವಧಿಯಲ್ಲಿ 'ಜಂಗಮ ಕಲೆಕ್ಟಿವ್' ಉಚಿತ ಛಾಯಾಗ್ರಹಣ ಕಾರ್ಯಾಗಾರ, ಡಾಕ್ಯುಮೆಂಟರಿ ಪ್ರದರ್ಶನ, ಮಕ್ಕಳ ನಾಟಕ ಮತ್ತು ಚಲನಚಿತ್ರ ತರಗತಿಗಳು, ಜಾತಿ ರಾಜಕೀಯ, ಸಂಸ್ಕೃತಿಯ ರಾಜಕೀಯ ಮತ್ತು ಜನಪರ ಕಲೆಗಳ ಭವಿಷ್ಯದ ಕುರಿತು ಮುಕ್ತ ಸಂವಾದಗಳನ್ನು ಆಯೋಜಿಸಿದೆ. 'ನನ್ನಜ್ಜ', 'ಬಾಬ್ ಮಾರ್ಲಿ ಫ್ರಂ ಕೋಡಿಹಳ್ಳಿ', 'ದಕ್ಲಕಥಾ ದೇವಿ ಕಾವ್ಯ', 'ರುಮುರುಮುರುಮು', 'ಪಂಚಮಪದ', 'ವಿ ದ ಪೀಪಲ್ ಆಫ್ ಇಂಡಿಯಾ' ನಾಟಕಗಳ ಪ್ರದರ್ಶನದ ಜತೆಗೆ 'ಸಾಂಗ್ ಆಫ್ ದ ಗೆಟ್ಟೊ' ಕಿರುಚಿತ್ರವನ್ನೂ ಪ್ರದರ್ಶಿಸಿದೆ. ಜಂಗಮ ಕಲೆಕ್ಟಿವ್ ಭಾರತದೆಲ್ಲೆಡೆ ವಿವಿಧ ಕಲಾವಿದರೊಂದಿಗೆ ಸಂವಾದ ಮತ್ತು ಸಾಂಸ್ಕೃತಿಕ ವಿನಿಮಯದ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಯುವಜನರ ನಡುವೆ ಸೇತುವೆಯಾಗಿಯೂ ಕಾರ್ಯ ನಿರ್ವಹಿಸುತ್ತಿದೆ.

ಈ ನಾಟಕಗಳು ದೇಶೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಹಲವು ಪ್ರಮುಖ ಉತ್ಸವಗಳಿಗೆ ಆಹ್ವಾನಿತವಾಗಿರುವುದು ವಿಶೇಷ. ಇಲ್ಲಿನ ಕಲಾವಿದರು 'ಮೆಟಾ' ಪ್ರಶಸ್ತಿಯಲ್ಲಿ ಅತ್ಯುತ್ತಮ ನಟ ಮತ್ತು ಅತ್ಯುತ್ತಮ ಸಹನಟ ಪ್ರಶಸ್ತಿಗಳನ್ನೂ ಪಡೆದಿದ್ದಾರೆ.

ಆರನೇ ವರ್ಷದ ಸಂಭ್ರಮದ ನಿಮಿತ್ತ ಜಂಗಮ ಕಲೆಕ್ಟಿವ್ ನ. 22ರಂದು ರಂಗಶಂಕರದಲ್ಲಿ 'ಬಾಬ್ ಮಾರ್ಲಿ ಫ್ರಂ ಕೋಡಿಹಳ್ಳಿ' ನಾಟಕ ಪ್ರದರ್ಶನವನ್ನು ಆಯೋಜಿಸಿದೆ. ಸಮಯ: ಮಧ್ಯಾಹ್ನ 3.30 ಮತ್ತು ಸಂಜೆ 7.30.
ಹೆಚ್ಚಿನ ಮಾಹಿತಿಗೆ: 97432 89572.


ಒಡಿಶಾ ನೃತ್ಯ ಕಲೆ

15ರಿಂದ ಒಡಿಶಾ ಪರಬ್

ಬೆಂಗಳೂರಿಗರಿಗೆ ಒಡಿಶಾ ಸಂಸ್ಕೃತಿಯನ್ನು ಪರಿಚಯಿಸುವ ಸಲುವಾಗಿ ನವೆಂಬರ್ 15ರಿಂದ 17ರವರೆಗೆ 'ಒಡಿಶಾ ಪರಬ್' ಮೇಳ ಆಯೋಜಿಸಲಾಗಿದೆ.

ಒಡಿಶಾದ ಕರಕುಶಲ ಮತ್ತು ಕೈಮಗ್ಗ ಬಟ್ಟೆಗಳ ಪ್ರದರ್ಶನ ನಡೆಯಲಿದೆ. ರಘುರಾಜ್‌ಪುರ, ಪಿಪಿಲಿ ಮತ್ತು ಧೋಕ್ರಾದ ಪ್ರಸಿದ್ಧ ಕುಶಲಕರ್ಮಿಗಳಿಂದ ನೇಯ್ದ ಬಟ್ಟೆಗಳು, ಪಟ್ಟಚಿತ್ರ, ಇಕಾತ್ ನೇಯ್ಗೆ, ಟೆರ್ರಾಕೋಟಾ-ದಂತಹ ಸಾಂಪ್ರದಾಯಿಕ ಕರಕುಶಲ ವಸ್ತುಗಳ ಪ್ರದರ್ಶನ ಇರಲಿದೆ. ಜತೆಗೆ ಒಡಿಶಾದ ಸಾಂಪ್ರದಾಯಿಕ ಭಕ್ಷ್ಯಗಳನ್ನೂ ಸವಿಯಬಹುದು.

ಒಡಿಶಾದ ಪ್ರಮುಖ ಪ್ರವಾಸೋದ್ಯಮ ತಾಣಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಕರ್ನಾಟಕ ಮತ್ತು ಒಡಿಶಾದ ಸಮುದಾಯಗಳ ನಡುವೆ ಸಾಂಸ್ಕೃತಿಕ ಸಂಬಂಧವನ್ನು ಬಲಪಡಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮ ನಡೆಯುವ ಸ್ಥಳ: ದ ಲಲಿತ್ ಅಶೋಕ್. ಪ್ರವೇಶ ಉಚಿತವಾಗಿರುತ್ತದೆ. ಬೆಳಿಗ್ಗೆ 10ರಿಂದ ಸಂಜೆ 7ರವರೆಗೆ.



ರಕ್ತಕ್ಯಾನ್ಸರ್: ಮಿಥ್ಯೆ ಅರಿಯಿರಿ

ರಕ್ತಕ್ಯಾನ್ಸರ್ ಎಂಬ ಹೆಸರು ಕೇಳಿದಾಕ್ಷಣ ಭೀತಿಗೆ ಒಳಗಾಗುವವರೇ ಹೆಚ್ಚು. ಸದಾ ಆಸ್ಪತ್ರೆಯ ವಾಸ, ಗಂಭೀರವಾದ ಚಿಕಿತ್ಸೆಯ ಕಾರಣದಿಂದ ದೇಹ ಹಾಗೂ ಮನಸ್ಸು ಜರ್ಜರಿತಗೊಳ್ಳುವ ಚಿತ್ರಣವೇ ಕಣ್ಮುಂದೆ ಬರುತ್ತದೆ. ಆದರೆ, ಈ ಗ್ರಹಿಕೆ ಸಂಪೂರ್ಣ ನಿಜವಲ್ಲ ಎಂಬುದನ್ನು ನೆನಪಿಡಿ.


ಡಾ.ಎ.ಲಕ್ಷ್ಮಿಕುಮಾರಿ

ಲ್ಯುಕೇಮಿಯಾ, ಲಿಂಫೋಮಾ ಮತ್ತು ಮೈಲೋಮಾದಂಥ ರಕ್ತದ ಕ್ಯಾನ್ಸರ್‌ಗಳು ಮೂಳೆ, ಮಜ್ಜೆ, ದುಗ್ಧರಸ ಅಥವಾ ಪ್ಲಾಸ್ಮಾ ಕೋಶಗಳಲ್ಲಿ ಬೆಳೆಯುತ್ತವೆ. ಆರೋಗ್ಯಕರ ರಕ್ತವನ್ನು ಉತ್ಪಾದಿಸುವ ದೇಹದ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತವೆ.

ಆಯಾ ಕಾಲಕ್ಕೆ ಪರೀಕ್ಷೆ, ಗುಣಮಟ್ಟದ ಚಿಕಿತ್ಸೆ, ಮೂಳೆ, ಮಜ್ಜೆಯ ಕಸಿ ಹಾಗೂ ಹೊಸ ಇಮ್ಯುನೊಥೆರಪಿಯಂತಹ ಕಾರಣಗಳಿಂದ, ರಕ್ತ ಕ್ಯಾನ್ಸರ್ ಇರುವವರು ಹೆಚ್ಚು ಕಾಲ ಬದುಕುತ್ತಿರುವುದಲ್ಲದೆ ಗುಣಮಟ್ಟದ ಜೀವನ ನಡೆಸುತ್ತಿದ್ದಾರೆ. ಚಿಕಿತ್ಸೆಗಿಂತಲೂ ರೋಗ ನಿರ್ಣಾಯಕ ಸರಿಯಾದ ಸಮಯಕ್ಕೆ ಆದರೆ, ಅದು ಚಿಕಿತ್ಸೆಯ ಗುಣಮಟ್ಟವನ್ನು ಮತ್ತು ಉತ್ತಮ ಫಲಿತಾಂಶವನ್ನು ನಿರೀಕ್ಷಿಸುವಂತೆ ಮಾಡುತ್ತದೆ.


ರಕ್ತಕ್ಯಾನ್ಸರ್ ಎಂಬುದು ಅದರ ಪ್ರಕಾರ, ಹಂತ, ವಯಸ್ಸು ಮತ್ತು ಒಟ್ಟಾರೆ ಆರೋಗ್ಯವನ್ನು ಅವಲಂಬಿಸಿರುತ್ತದೆ. ಹಾಗಾಗಿ, ರಕ್ತಕ್ಯಾನ್ಸರ್‌ಗೆ ಚಿಕಿತ್ಸೆ ನೀಡಲು ಮೂಳೆ ಮಜ್ಜೆ ಕಸಿಯ ಆಯ್ಕೆ ಮಾತ್ರ ಇರುವುದಿಲ್ಲ. ಇಮ್ಯುನೊಥೆರಪಿ (ಕ್ಯಾನ್ಸರ್ ಕೋಶಗಳ ಮೇಲೆ ದಾಳಿ ಮಾಡಲು ಪ್ರತಿರಕ್ಷಣಾ ವ್ಯವಸ್ಥೆಯನ್ನು ಹೆಚ್ಚಿಸುವುದು), ಕಾಂಡಕೋಶ ಕಸಿಯಂಥ ಆಧುನಿಕ ಚಿಕಿತ್ಸಾ ಕ್ರಮಗಳಿವೆ.

ಕಬ್ಬಿಣದ ಅಂಶದ ಕೊರತೆ, ಪೌಷ್ಟಿಕಾಂಶದ ಸಮಸ್ಯೆಗಳು, ದೀರ್ಘಕಾಲದ ಅನಾರೋಗ್ಯದಿಂದಾಗಿ ದೇಹವು ಆರೋಗ್ಯಕರ ಕೆಂಪು ರಕ್ತಕಣಗಳನ್ನು ಉತ್ಪಾದಿಸಲು ವಿಫಲವಾದಾಗ ಅದನ್ನು ರಕ್ತಹೀನತೆ ಎನ್ನಲಾಗುತ್ತದೆ. ಆದರೆ, ಮೂಳೆ ಮಜ್ಜೆಯಲ್ಲಿ ಅಸಹಜ ರಕ್ತಕಣಗಳು ಅನಿಯಂತ್ರಿತವಾಗಿ ಬೆಳೆದಾಗ ಲ್ಯುಕೇಮಿಯಾ, ಲಿಂಫೋಮಾ ಮತ್ತು ಮೈಲೋಮಾದಂಥ ರಕ್ತದ ಕ್ಯಾನ್ಸರ್‌ಗಳು ಕಾಣಿಸಿಕೊಳ್ಳಬಹುದು. ಮೂಳೆ ಮಜ್ಜೆಯ ಕಾರ್ಯಕ್ಕೆ ಅಡ್ಡಿಯಾಗುವ ರಕ್ತಹೀನತೆಯು ಕೆಲವೊಮ್ಮೆ ರಕ್ತ ಕ್ಯಾನ್ಸರ್‌ನ ಲಕ್ಷಣವಾಗಬಹುದು.

ರಕ್ತಕ್ಯಾನ್ಸರ್ ಆನುವಂಶಿಕವಲ್ಲ. ಅಸಮರ್ಪಕ ಜೀವನಶೈಲಿ, ಮಲಿನಕಾರಕ ಪರಿಸರಕ್ಕೆ ಒಡ್ಡಿಕೊಳ್ಳುವುದು, ಕೋಶಗಳಲ್ಲಿ ಇರಬಹುದಾದ ದೋಷಗಳ ಕಾರಣಕ್ಕೆ ಉಂಟಾಗಬಹುದು. ಕೌಟುಂಬಿಕ ಕ್ಯಾನ್ಸರ್ ಇತಿಹಾಸವು ಕ್ಯಾನ್ಸರ್ ಬರುವ ಅಪಾಯವನ್ನು ಹೆಚ್ಚಿಸಬಹುದೇ ವಿನಾ ಅದೊಂದೇ ಕಾರಣಕ್ಕೆ ರಕ್ತಕ್ಯಾನ್ಸರ್ ಬರುವುದಿಲ್ಲ.

ಲ್ಯುಕೇಮಿಯಾವು ಮಕ್ಕಳಲ್ಲಿ ಅಷ್ಟೇ ಅಲ್ಲದೆ ವಯಸ್ಕರಲ್ಲಿಯೂ ಕಾಣಿಸಿಕೊಳ್ಳಬಹುದು. ವಯಸ್ಸು ಯಾವುದೇ ಇರಲಿ ಆಯಾಸ, ಬಿಟ್ಟು ಬಿಟ್ಟು ಬರುವ ಜ್ವರ, ಸುಲಭವಾಗಿ ಆಗಬಲ್ಲ ಮೂಗೇಟುಗಳು, ಊತದಂಥ ಸಮಸ್ಯೆಗಳನ್ನು ನಿರ್ಲಕ್ಷ್ಯ ಮಾಡಬೇಡಿ.

ಲೇಖಕಿ: ಡಾ. ಎ.ಲಕ್ಷ್ಮಿಕುಮಾರಿ, ಮಿಲನ ಫರ್ಟಿಲಿಟಿ ಆಸ್ಪತ್ರೆ



ಯಾವುದೆಲ್ಲಾ ಮಿಥ್ಯೆ?

- ಎಲ್ಲಾ ರಕ್ತಕ್ಯಾನ್ಸರ್ ರೋಗಿಗಳಿಗೆ ಮೂಳೆಮಜ್ಜೆಯ ಕಸಿ ಅಗತ್ಯವಿದೆ
- ರಕ್ತಹೀನತೆಯು ರಕ್ತಕ್ಯಾನ್ಸರ್‌ಗೆ ಕಾರಣವಾಗುತ್ತದೆ
- ರಕ್ತಕ್ಯಾನ್ಸರ್ ಆನುವಂಶಿಕ ಕಾರಣದಿಂದ ಮಾತ್ರ ಉಂಟಾಗುತ್ತದೆ
- ಈ ರೋಗವನ್ನು ತಡೆಯಲು ಏನನ್ನೂ ಮಾಡಲು ಸಾಧ್ಯವಿಲ್ಲ
- ರಕ್ತಕ್ಯಾನ್ಸರ್ ಗುಣಪಡಿಸಲು ಸಾಧ್ಯವಿಲ್ಲ
- ಲ್ಯುಕೇಮಿಯಾ ಮಕ್ಕಳ ಮೇಲೆ ಮಾತ್ರ ಪರಿಣಾಮ ಬೀರುತ್ತದೆ

ಒಟಿಟಿಗೆ ಬಂದ 'ಎಕ್ಕ'



ನಟ ಯುವ ರಾಜ್‌ಕುಮಾರ್, ಸಂಜನಾ ಆನಂದ್, ಸಂಪದಾ ನಟನೆಯ 'ಎಕ್ಕ' ಚಿತ್ರವು ಒಟಿಟಿ ಪ್ಲ್ಯಾಟ್‌ಫಾರಂ ಸನ್ ನೆಕ್ಸ್ಟ್‌ನಲ್ಲಿ ಗುರುವಾರ (ನ. 13) ಬಿಡುಗಡೆಯಾಗಿದೆ ಎಂದು ಪಿಆರ್‌ಕೆ ಪ್ರೊಡಕ್ಷನ್ ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದೆ.

'ಯುವ' ಸಿನಿಮಾ ಬಳಿಕ ಯುವ ರಾಜ್‌ಕುಮಾರ್ ನಟಿಸುತ್ತಿರುವ ಎರಡನೇ ಸಿನಿಮಾ ಇದಾಗಿದೆ. ಯಾವುದೋ ಒಂದು ಕಾರಣಕ್ಕೆ ಹುಟ್ಟಿದ ಊರು ಬಿಟ್ಟು ನಗರ ಸೇರುವ ನಾಯಕ, ಮುಂದೆ ಭೂಗತ ಜಗತ್ತಿಗೆ ಹೆಜ್ಜೆ ಇಡುವ, ತಾಯಿಯ ಪ್ರೀತಿ ಅರಸುವ ಕಥೆ ಇದಾಗಿದೆ.

ಚಿತ್ರದಲ್ಲಿ 'ಡೆಡ್ಲಿ ಸೋಮ' ಖ್ಯಾತಿಯ ನಟ ಆದಿತ್ಯ ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದಾರೆ. ಬಾಲಿವುಡ್ ನಟ ಅತುಲ್ ಕುಲಕರ್ಣಿ ಕೂಡಾ ತಾರಾಬಳಗದಲ್ಲಿದ್ದಾರೆ.

'ಎಕ್ಕ' ಚಿತ್ರವನ್ನು ರೋಹಿತ್ ಪದಕಿ ನಿರ್ದೇಶಿಸಿದ್ದು, ಪಿಆರ್‌ಕೆ ಪ್ರೊಡಕ್ಷನ್ಸ್, ಕೆಆರ್‌ಜಿ ಸ್ಟುಡಿಯೋಸ್ ಹಾಗೂ ಜಯಣ್ಣ ಕಂಬೈನ್ಸ್ ಬ್ಯಾನರ್‌ಗಳ ಅಡಿಯಲ್ಲಿ ನಿರ್ಮಾಣ ಮಾಡಲಾಗಿದೆ. ಈ ಚಿತ್ರದ 'ಬ್ಯಾಂಗಲ್ ಬಂಗಾರಿ' ಹಾಡು ಈಗಾಗಲೇ ಪ್ರೇಕ್ಷಕರನ್ನು ಸೆಳೆದಿದೆ.

ಕಾಫಿ ವಿತ್ ಕರಣ್ ಕೊಹ್ಲಿ ಪಾಲ್ಗೊಂಡಿಲ್ಲ ಏಕೆ?


ಕರಣ್ ಜೋಹರ್

ಜನಪ್ರಿಯ ಟಾಕ್ ಶೋ 'ಕಾಫಿ ವಿತ್ ಕರಣ್' ಕಾರ್ಯಕ್ರಮದಲ್ಲಿ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ವಿರಾಟ್ ಕೊಹ್ಲಿ ಇದುವರೆಗೂ ಕಾಣಿಸಿಕೊಂಡಿಲ್ಲ. ಈ ಕಾರ್ಯಕ್ರಮಕ್ಕೆ ಕೊಹ್ಲಿ ಸೇರಿದಂತೆ ಕೆಲವು ಕ್ರಿಕೆಟ್ ತಾರೆಯರನ್ನು ಆಹ್ವಾನಿಸದಿರಲು ಕಾರಣವೇನು ಎಂಬುದನ್ನು ಸಿನಿಮಾ ನಿರ್ಮಾಪಕ ಕರಣ್ ಜೋಹರ್ ಹಂಚಿಕೊಂಡಿದ್ದಾರೆ.

ಕೊಹ್ಲಿ ಅವರ ಪತ್ನಿ ಅನುಷ್ಕಾ ಶರ್ಮಾ ಈ ಕಾರ್ಯಕ್ರಮದಲ್ಲಿ ಹಲವು ಬಾರಿ ಕಾಣಿಸಿಕೊಂಡಿದ್ದಾರೆ. ಆದರೆ, ವಿರಾಟ್ ಕೊಹ್ಲಿಯವರಿಗೆ ತಮ್ಮ ಶೋನಲ್ಲಿ ಭಾಗವಹಿಸುವಂತೆ ಇದುವರೆಗೂ ಆಹ್ವಾನಿಸಿಲ್ಲ ಎಂದು ಜೋಹರ್ ಅವರು ಸಾನಿಯಾ ಮಿರ್ಜಾ ಅವರ ಜೊತೆಗಿನ 'ಸರ್ವಿಂಗ್ ಇಟ್ ಅಪ್ ವಿತ್ ಸಾನಿಯಾ' ಎಂಬ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ಸಾನಿಯಾ ಅವರು 'ಕಾಫಿ ವಿತ್ ಕರಣ್ ಕಾರ್ಯಕ್ರಮದಲ್ಲಿ ಎಂದಿಗೂ ಕಾಣಿಸಿಕೊಳ್ಳದ ವ್ಯಕ್ತಿಯ ಬಗ್ಗೆ ಹೇಳಿ' ಎಂದು ಕರಣ್ ಅವರನ್ನು ಕೇಳಿದ್ದಾರೆ. ಕರಣ್ ಸ್ವಲ್ಪ ಸಮಯ ತೆಗೆದುಕೊಂಡು, ಟೀಂ ಇಂಡಿಯಾ ಮಾಜಿ ನಾಯಕನ ಹೆಸರು ಹೇಳಿದರು.

'ನಾನು ವಿರಾಟ್ ಅವರನ್ನು ಶೋನಲ್ಲಿ ಭಾಗವಹಿಸುವಂತೆ ಎಂದಿಗೂ ಕೇಳಿಲ್ಲ. 2019ರ ಪಾಡ್‌ಕಾಸ್ಟ್ ಒಂದರಲ್ಲಿ ಮಾತನಾಡುವಾಗ ಹಾರ್ದಿಕ್ ಪಾಂಡ್ಯ ಮತ್ತು ಕೆ.ಎಲ್. ರಾಹುಲ್ ಅವರಿಂದ ಉಂಟಾದ ವಿವಾದದ ಬಳಿಕ ನಾನು ಯಾವುದೇ ಕ್ರಿಕೆಟಿಗರನ್ನು ಶೋಗೆ ಬನ್ನಿ ಎಂದು ಆಹ್ವಾನಿಸುತ್ತಿಲ್ಲ' ಎಂದರು.

2019ರಲ್ಲಿ ಪಾಂಡ್ಯ ಮತ್ತು ರಾಹುಲ್ ಅವರು ಮಹಿಳೆಯರ ಕುರಿತು ನೀಡಿದ್ದ ಅನುಚಿತ ಹೇಳಿಕೆಗಳು ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದ್ದವು. ಮಾತ್ರವಲ್ಲ, ಇಬ್ಬರೂ ತಾರಾ ಆಟಗಾರರು ತೀವ್ರ ಟೀಕೆಗೆ ಗುರಿಯಾಗಿದ್ದರು. ಈ ಹೇಳಿಕೆಯ ಬಳಿಕ ಈ ಕ್ರಿಕೆಟಿಗರನ್ನು ಬಿಸಿಸಿಐ ಕೆಲವು ಪಂದ್ಯಗಳಿಂದ ಅಮಾನತುಗೊಳಿಸಿತ್ತು.

'ರಿವಾಲ್ವರ್ ರೀಟಾ' ಬಿಡುಗಡೆ ದಿನಾಂಕ ಘೋಷಣೆ



ನಟಿ ಕೀರ್ತಿ ಸುರೇಶ್ ನಟನೆಯ 'ರಿವಾಲ್ವರ್ ರೀಟಾ' ಚಿತ್ರವು ನವೆಂಬರ್ 28ರಂದು ವಿಶ್ವದಾದ್ಯಂತ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ಮಾಹಿತಿ ನೀಡಿದೆ.

ಜೆ.ಕೆ. ಚಂದ್ರು ಅವರು ಚಿತ್ರಕಥೆ, ನಿರ್ದೇಶನ ಮಾಡಿದ್ದಾರೆ. ಫ್ಯಾಷನ್ ಸ್ಟುಡಿಯೋಸ್ ಮತ್ತು ದಿ ರೂಟ್ ಬ್ಯಾನರ್ ಅಡಿಯಲ್ಲಿ ಸುಧನ್ ಸುಂದರಂ ಮತ್ತು ಜಗದೀಶ್ ಪಳನಿಸ್ವಾಮಿ ಅವರು ಚಿತ್ರವನ್ನು ನಿರ್ಮಿಸಿದ್ದಾರೆ.

ಇತ್ತೀಚೆಗೆ 'ಉಪ್ಪು ಕಪ್ಪುರಂಬು' ಚಿತ್ರದಲ್ಲಿ ಕಾಣಿಸಿಕೊಂಡಿದ್ದ ನಟಿ ಕೀರ್ತಿ ಅವರು, ಇದೀಗ 'ರಿವಾಲ್ವರ್ ರೀಟಾ' ಸಿನಿಮಾ ಬಿಡುಗಡೆ ಕುರಿತ ಪೋಸ್ಟರ್ ಅನ್ನು ಸಾಮಾಜಿಕ ಮಾಧ್ಯಮವಾದ ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದಾರೆ.

ರಾಧಿಕಾ ಶರತ್‌ಕುಮಾರ್, ರೆಡಿನ್ ಕಿಂಗ್ಸ್‌ಲಿ, ಮೈಮ್ ಗೋಪಿ, ಸೆಂಡ್ರಾಯನ್ ಮತ್ತು ಸೂಪರ್ ಸುಬ್ಬರಾಯನ್ ಈ ಚಿತ್ರದಲ್ಲಿ ನಟಿಸಿದ್ದಾರೆ.

ಕಳೆದ ವರ್ಷ ವರುಣ್ ಧವನ್ ಮತ್ತು ವಾಮಿಕಾ ಗಬ್ಬಿ ಅಭಿನಯದ 'ಬೇಬಿ ಜಾನ್' ಚಿತ್ರದ ಮೂಲಕ ನಟಿ ಕೀರ್ತಿ ಸುರೇಶ್ ಅವರು ಹಿಂದಿ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದ್ದರು.

ಇದು 'ಗನ್ ಮಂದಾಕಿನಿ' ಪ್ರಿಯಾಂಕಾ ಚೋಪ್ರಾ



'ಮಂದಾಕಿನಿಯೇ ನೀ ಸಿಡಿಲಿನ ಕಿಡಿಯೇ' ಎಂಬೊಂದು ಕನ್ನಡ ಚಿತ್ರಗೀತೆ ಇದೆ. ಅದನ್ನೀಗ ನಟಿ ಪ್ರಿಯಾಂಕಾ ಚೋಪ್ರಾ ಅವರಿಗೆ ಅನ್ವಯಿಸಿ ಹೇಳಬಹುದು. ಯಾಕೆಂದರೆ, ಬರೋಬ್ಬರಿ ಆರು ವರ್ಷಗಳ ನಂತರ ಪ್ರಿಯಾಂಕಾ ಚೋಪ್ರಾ ಜೋನಾಸ್ ಭಾರತದ ಚಿತ್ರರಂಗಕ್ಕೆ ಮರಳುತ್ತಿದ್ದಾರೆ. ಸಣ್ಣಪಟ್ಟಣದ ಹುಡುಗಿಯಾಗಿ ಸೌಂದರ್ಯ ಸ್ಪರ್ಧೆಯಲ್ಲಿ ವಿಜೇತರಾಗಿ ವಿಶ್ವದ ಗಮನಸೆಳೆದಿದ್ದ ಪ್ರಿಯಾಂಕಾ, ಬಾಲ್ಯದಲ್ಲಿ ತಮ್ಮ ಕಪ್ಪುಬಣ್ಣದ ಕಾರಣಕ್ಕೆ ಮೂದಲಿಕೆಗೆ ಈಡಾಗಿದ್ದವರು. ಆಮೇಲೆ ಅವರು ನಟಿಯಾಗಿಯೂ ತಮ್ಮ ಕೌಶಲವನ್ನು ಸಾಣೆಗೊಡ್ಡಿಕೊಂಡು ಬೆರಗು ಮೂಡಿಸುವಂತೆ ಬೆಳೆದರು. ಐಶ್ವರ್ಯಾ ರೈ ನಂತರ ಸೌಂದರ್ಯದ ಜತೆಗೆ ಅಭಿನಯ ಸಾಮರ್ಥ್ಯವನ್ನೂ ತೋರಿದ ಅಪರೂಪದವರಲ್ಲಿ ಅವರೂ ಒಬ್ಬರೆನ್ನಬಹುದು.

ರಾಜಮೌಳಿ ನಿರ್ದೇಶನದ 'ಎಸ್‌ಎಸ್‌ಎಂಬಿ29' ಎಂಬ ತಾತ್ಕಾಲಿಕ ಶೀರ್ಷಿಕೆಯ ಸಿನಿಮಾದಲ್ಲಿ ಮಂದಾಕಿನಿ ಎಂಬ ಪಾತ್ರದಲ್ಲಿ ಪ್ರಿಯಾಂಕಾ ಅಭಿನಯಿಸಲಿದ್ದಾರೆ. ಇದನ್ನು ಮೊದಲಿಗೆ ರಾಜಮೌಳಿ ಅವರೇ ಸಾಮಾಜಿಕ ಮಾಧ್ಯಮದ ಮೂಲಕ ಘೋಷಿಸಿದರು. ಆಮೇಲೆ ಅದಕ್ಕೆ ಸಂಬಂಧಿಸಿದಂತೆ 'ಎಕ್ಸ್'ನಲ್ಲಿ ಪ್ರಶ್ನಾವಳಿಗಳಿಗೆ ಈ ನಟಿ ತೆರೆದುಕೊಂಡರು.

ಈ ಸಿನಿಮಾ ಮೂಲಕ ಮತ್ತೆ ಭಾರತೀಯ ಚಿತ್ರರಂಗದಲ್ಲಿ ಪ್ರಿಯಾಂಕಾ ಯುಗ ಪ್ರಾರಂಭವಾಗುವುದೇ ಎಂಬ ಪ್ರಶ್ನೆಯೊಂದು ಅವರಿಗೆ ಎದುರಾಯಿತು. 'ಮತ್ತೆ ನನ್ನ ಚಿತ್ರರಂಗವನ್ನು ಪ್ರವೇಶಿಸುತ್ತಿದ್ದೇನೆ. ಈ ಮೂಲಕ ನನ್ನ ಅಭಿನಯದ ಹೊಸ ಶಕೆ ಆರಂಭವಾದೀತೆಂಬ ನಿರೀಕ್ಷೆಯೂ ಇದೆ' ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

ಮಹೇಶ್‌ಬಾಬು ನಾಯಕನಟನಾಗಿರುವ ಈ ಚಿತ್ರದಲ್ಲಿ ಮಲಯಾಳ ನಟ ಪೃಥ್ವಿರಾಜ್ ಸುಕುಮಾರನ್ ಪ್ರತಿನಾಯಕನ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಹಳದಿ ಸೀರೆಯುಟ್ಟ ಪ್ರಿಯಾಂಕಾ ಕೈಯಲ್ಲಿ ಗನ್ ಹಿಡಿದ ಪೋಸ್ಟರ್ ಮೂಲಕ ಅವರನ್ನು ಪರಿಚಯಿಸಲಾಗಿದ್ದು, ಹೊಸ ಚಿತ್ರದಲ್ಲಿ ಅವರ ಪಾತ್ರ ಹೇಗಿರಬಹುದು ಎಂಬ ಕುತೂಹಲ ಮೂಡಿಸಿದೆ.

'ದಿ ಮ್ಯಾಟ್ರಿಕ್ಸ್ ರಿಸರೆಕ್ಷನ್ಸ್' ಹಾಗೂ 'ಲವ್ ಅಗೇನ್' ಎಂಬ ಹಾಲಿವುಡ್ ಚಿತ್ರಗಳಲ್ಲಿ ಅಭಿನಯಿಸಿದ್ದ ಪ್ರಿಯಾಂಕಾ, 'ಸಿಟಾಡೆಲ್' ಸರಣಿಯಲ್ಲಿಯೂ ನಟಿಸಿದ್ದರು. 2019ರಲ್ಲಿ ತೆರೆಕಂಡ 'ದಿ ಸ್ಕೈ ಈಸ್ ಪಿಂಕ್' ಅವರು ಅಭಿನಯಿಸಿದ್ದ ಕೊನೆಯ ಹಿಂದಿ ಚಿತ್ರ. ಅದರಲ್ಲಿ ಫರ್ಹಾನ್ ಅಖ್ತರ್ ಅವರೊಟ್ಟಿಗೆ ಪ್ರಿಯಾಂಕಾ ತೆರೆ ಹಂಚಿಕೊಂಡಿದ್ದರು. ಆನಂತರ ಅವರು ಭಾರತದ ಚಿತ್ರಗಳಲ್ಲಿ ಕಾಣಿಸಿಕೊಂಡಿರಲಿಲ್ಲ.

ನವೆಂಬರ್ 15ರಂದು ರಾಮೋಜಿ ಫಿಲ್ಮ್ ಸಿಟಿಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ರಾಜಮೌಳಿ ನಿರ್ದೇಶನದ ಹೊಸ ಸಿನಿಮಾದ ಶೀರ್ಷಿಕೆ ಪ್ರಕಟಿಸಲಾಗುತ್ತದೆ.

'ಗುಸ್ತಾಖ್ ಇಷ್ಕ್' 28ರಂದು ತೆರೆಗೆ



ವಿಜಯ್ ವರ್ಮಾ ಮತ್ತು ಫಾತಿಮಾ ಸನಾ ಶೇಖ್ ಅಭಿನಯಿಸಿರುವ 'ಗುಸ್ತಾಖ್ ಇಷ್ಕ್' ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ಈ ಕುರಿತು ಚಿತ್ರತಂಡ ಮಾಹಿತಿ ನೀಡಿದೆ.

ಫ್ಯಾಷನ್ ಡಿಸೈನರ್ ಮನೀಶ್ ಮಲ್ಹೋತ್ರಾ ಅವರ ನಿರ್ಮಾಣದ 'ಗುಸ್ತಾಖ್ ಇಷ್ಕ್' ಚಿತ್ರವನ್ನು ಪಂಜಾಬ್, ದೆಹಲಿಯ ಪ್ರಮುಖ ಕೋಟೆಗಳಲ್ಲಿ ಚಿತ್ರೀಕರಿಸಲಾಗಿದೆ. ಒಬ್ಬ ಯುವಕನು ಸಾಹಿತಿಯಿಂದ ಸಾಹಿತ್ಯವನ್ನು ಕಲಿತು ಕೊನೆಗೆ ಕವಿಯ ಮಗಳನ್ನು ಕವನ, ಕಾವ್ಯದ ಮೂಲಕ ಒಲಿಸಿಕೊಳ್ಳುವ ಚಿತ್ರ ಇದಾಗಿದೆ.

ನವೆಂಬರ್ 28ರಂದು ಸಿನಿಮಾ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ಮಾಹಿತಿ ನೀಡಿದೆ. ಚಿತ್ರದಲ್ಲಿ ನಾಸಿರುದ್ದೀನ್ ಶಾ ಮತ್ತು ಶರೀಬ್ ಹಶ್ಮಿ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.

ವಿಭು ಪುರಿ ಅವರು ಈ ಚಿತ್ರವನ್ನು ನಿರ್ದೇಶಿಸಿದ್ದು, ಭಾರದ್ವಾಜ್ ಸಂಗೀತ ಸಂಯೋಜಿಸಿದ್ದಾರೆ. ಗುಲ್ಜಾರ್ ಅವರ ಚಿತ್ರಕಥೆ, ಮನುಷ್ ನಂದನ್ ಛಾಯಾಗ್ರಹಣ ಚಿತ್ರದಲ್ಲಿದೆ.

ರೂಪೇಶ್ ಶೆಟ್ಟಿ ಚಿತ್ರಕ್ಕೆ ಕೆ. ಎಲ್. ರಾಹುಲ್ ಶುಭ ಹಾರೈಕೆ

ರೂಪೇಶ್ ಶೆಟ್ಟಿ ನಿರ್ದೇಶಿಸಿ, ನಟಿಸಿರುವ 'ಜೈ' ಚಿತ್ರ ಕುರಿತು ಕ್ರಿಕೆಟಿಗ ಕೆ.ಎಲ್. ರಾಹುಲ್ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ.

ಈ ಚಿತ್ರ ಕುರಿತು ಮಾತನಾಡಿರುವ ರಾಹುಲ್, 'ನಮಸ್ಕಾರ, 'ಜೈ' ಸಿನಿಮಾದ ಟ್ರೇಲರ್ ಅನ್ನು ನಾನು ವೀಕ್ಷಿಸಿದೆ. ಚಿತ್ರಕಥೆ ತುಂಬಾ ಚೆನ್ನಾಗಿದೆ. ಎಲ್ಲರೂ ದಯಮಾಡಿ ಈ ಚಿತ್ರವನ್ನು ನೋಡಿ ನಮ್ಮ ಊರಿನ ಕಲಾವಿದರನ್ನು ಪ್ರೋತ್ಸಾಹಿಸಿ. ರೂಪೇಶ್ ಹಾಗೂ ಅವರ ತಂಡಕ್ಕೆ ಶುಭ ಹಾರೈಸುತ್ತೇನೆ' ಎಂದಿದ್ದಾರೆ.

ಇನ್ನೂ ವಿಶೇಷ ಅಂದರೆ, ಈ ಚಿತ್ರದ ಪಾತ್ರ ಒಂದರಲ್ಲಿ ರಾಹುಲ್ ಮಾವ ಸುನೀಲ್ ಶೆಟ್ಟಿ ಕೂಡ ನಟಿಸಿದ್ದಾರೆ. ಕೆಲ ದಿನಗಳ ಹಿಂದೆ ಈ ಚಿತ್ರದ ಟ್ರೇಲರ್ ಅನ್ನು ಬೆಂಗಳೂರಿನ ಮಾಲ್ ಒಂದರಲ್ಲಿ ಸುನೀಲ್ ಶೆಟ್ಟಿ ಬಿಡುಗಡೆ ಮಾಡಿದ್ದರು. ಟ್ರೇಲರ್ ಬಿಡುಗಡೆ ಬಳಿಕ 'ಪಿಲಿನಲಿಕೆ' ವಾದ್ಯಕ್ಕೆ ಇವರು ಹೆಜ್ಜೆ ಹಾಕಿದ್ದರು. ನವೆಂಬರ್ 14ರಂದು ಚಿತ್ರ ಬಿಡುಗಡೆಯಾಗಲಿದೆ.

ರೂಪೇಶ್ ಶೆಟ್ಟಿ ಅವರಿಗೆ ನಾಯಕಿಯಾಗಿ ನಟಿ ಅದ್ವಿತಿ ಶೆಟ್ಟಿ ನಟಿಸಿದ್ದಾರೆ.

ಈಗಾಗಲೇ ಬಿಡುಗಡೆಯಾಗಿರುವ ಈ ಚಿತ್ರದ 'ಲವ್ ಯು' ಹಾಡು ಪ್ರೇಕ್ಷಕರ ಗಮನ ಸೆಳೆದಿದೆ.

ಆರ್.ಎಸ್ ಸಿನಿಮಾಸ್, ಶೂಲಿನ್ ಫಿಲಂಸ್, ಮುಗೋಡಿ ಪ್ರೊಡಕ್ಷನ್ ಲಾಂಛನದಲ್ಲಿ ಅನಿಲ್ ಶೆಟ್ಟಿ, ಸುಧಾಕರ ಶೆಟ್ಟಿ ಮುಗೋಡಿ, ಮಂಜುನಾಥ ಅತ್ತಾವರ, ಹಾಗೂ ದೀಕ್ಷಿತ್ ಅವರು ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ ಎಂದು ಚಿತ್ರತಂಡ ಹೇಳಿದೆ.



ಮದುವೆಗೆ ಬೇಕೆ 'ಎಕ್ಸ್‌ಪೈರಿ ಡೇಟ್, ರಿನ್ಯೂವಲ್'?



'ಟೂ ಮಚ್ ವಿತ್ ಕಾಜೋಲ್ ಅಂಡ್ ಟ್ವಿಂಕಲ್' ಸಂವಾದ ಕಾರ್ಯಕ್ರಮವು ಅಮೆಜಾನ್ ಪ್ರೈಮ್ ಒಟಿಟಿಯಲ್ಲಿ ಪ್ರಸಾರವಾಗುತ್ತಿರುವುದು ಗೊತ್ತಿದೆಯಷ್ಟೆ. ಅದರಲ್ಲಿ ಪ್ರಶ್ನೆಯೊಂದನ್ನು ಕೇಳಲಾಗುತ್ತದೆ. ಅದಕ್ಕೆ 'ಹೌದು' ಎನ್ನುವವರು ಹಸಿರು ಬಣ್ಣದ ದೀಪ ಹೊತ್ತಿದ ಆವರಣದೊಳಗೆ ಹೋಗಬೇಕು. 'ಇಲ್ಲ' ಎನ್ನುವವರು ಕೆಂಪು ದೀಪದ ಆವರಣ ಹೊಕ್ಕಬೇಕು. ಮದುವೆಗೆ ಬೇಕೆ 'ಎಕ್ಸ್‌ಪೈರಿ ಡೇಟ್, ರಿನ್ಯೂವಲ್' ಎಂಬ ಪ್ರಶ್ನೆ ಕೇಳಿದ ಕಾಜೋಲ್, 'ಹಸಿರು' ಆವರಣದೊಳಗೆ ನಿಂತರು. ಕಾರ್ಯಕ್ರಮದ ಇನ್ನೊಬ್ಬ ರೂವಾರಿ ಟ್ವಿಂಕಲ್ ಖನ್ನಾ ಹಾಗೂ ಅತಿಥಿಗಳಾಗಿ ಬಂದಿದ್ದ ಕೃತಿ ಸನೊನ್, ವಿಕ್ಕಿ ಕೌಶಲ್ ಕೆಂಪು ಆವರಣದೊಳಗೆ ನಿಂತರು.

'ಮದುವೆಯಾದವರನ್ನು ಯಾವ ಗ್ಯಾರಂಟಿಯ ಮೇಲೆ ಜೀವನಪೂರ್ತಿ ನಂಬಬೇಕು' ಎನ್ನುವ ಇನ್ನೊಂದು ಪ್ರಶ್ನೆಯನ್ನು ಕಾಜೋಲ್ ಹಾಕಿದರು. ಈ ಪ್ರಶ್ನೆಯು ಮುಖ್ಯವಾಗುವ ಕಾರಣಕ್ಕೇ ವಿವಾಹ ಬಂಧನಕ್ಕೊಂದು 'ಎಕ್ಸ್‌ಪೈರಿ ಡೇಟ್, ರಿನ್ಯೂವಲ್' ಬೇಕೆಂದು ವಾದಿಸಿದರು. ಅವರ ವಾದದಿಂದ ಕೃತಿ ತುಸು ಪ್ರಭಾವಿತರಾದಂತೆ ಕಂಡುಬಂದರಷ್ಟೆ. ಟ್ವಿಂಕಲ್ ಅದನ್ನು ಅಲ್ಲಗಳೆದರು.

ಹಿಂದಿ ಚಿತ್ರರಂಗದ ಎರಡು ಭಿನ್ನ ವ್ಯಕ್ತಿತ್ವ–ಮನಸ್ಸುಗಳನ್ನು ಒಂದೆಡೆ ಕರೆತಂದು, ಆತ್ಮೀಯ ಸಂವಾದ ನಡೆಸುವ ಸ್ವರೂಪದ ಈ ಕಾರ್ಯಕ್ರಮಕ್ಕೆ ಜನರಿಂದ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಚಿತ್ರರಂಗದ ಎಷ್ಟೋ ಹಳೆಯ ಆಸಕ್ತಿಕರ ಘಟನೆಗಳನ್ನು ಹಾಗೂ ನಟ–ನಟಿಯರು, ತಂತ್ರಜ್ಞರ ಏರು–ಪೇರುಗಳನ್ನು ಉಪಕಥೆಗಳೊಂದಿಗೆ ಮೆಲುಕುಹಾಕುವ ಅವಕಾಶವನ್ನೂ ಕಲ್ಪಿಸಿದೆ.

ಡಾನ್ಸ್ ಕರ್ನಾಟಕ ಡಾನ್ಸ್ ವೇದಿಕೆಯಲ್ಲಿ ಕಿರುತೆರೆ ಕಲಾವಿದರು

ಜೀ ಕನ್ನಡ ವಾಹಿನಿಯಲ್ಲಿ ಇದೇ 15ರಿಂದ 'ಡಾನ್ಸ್ ಕರ್ನಾಟಕ ಡಾನ್ಸ್' ಕಾರ್ಯಕ್ರಮಕ್ಕೆ ಚಾಲನೆ ಸಿಗಲಿದೆ. ಕಳೆದ ಸೀಸನ್‌ನಂತೆ ಈ ಬಾರಿಯೂ ಕೂಡ ಕಿರುತೆರೆಯ ಕಲಾವಿದರು ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ವೇದಿಕೆಗೆ ಎಂಟ್ರಿ ಕೊಟ್ಟಿದ್ದಾರೆ.

ಜೀ ಕನ್ನಡ ವಾಹಿನಿ ಹಂಚಿಕೊಂಡ ಪ್ರೊಮೊದಲ್ಲಿ ಲಕ್ಷ್ಮೀ ನಿವಾಸ, ಅಣ್ಣಯ್ಯ, ಶ್ರಾವಣಿ ಸುಬ್ರಹ್ಮಣ್ಯ, ಗಟ್ಟಿಮೇಳ, ಕರಿಮಣಿ, ಕರ್ಣ ಸೇರಿದಂತೆ ವಿವಿಧ ಧಾರಾವಾಹಿಗಳಲ್ಲಿ ನಟಿಸುತ್ತಿರುವ ಕಲಾವಿದರು ಡಾನ್ಸ್ ಕರ್ನಾಟಕ ಡಾನ್ಸ್ ವೇದಿಕೆಗೆ ಬಂದಿರುವುದನ್ನು ಕಾಣಬಹುದು.

ಈ ಬಾರಿಯ ಡಾನ್ಸ್ ಕರ್ನಾಟಕ ಡಾನ್ಸ್ ಶೋಗೆ ಶ್ರಾವಣಿ ಸುಬ್ರಹ್ಮಣ್ಯ ಖ್ಯಾತಿಯ ಅಮೋಘ್ ಆದಿತ್ಯ, ಕರಿಮಣಿ ಖ್ಯಾತಿಯ ಅಶ್ವಿನ್, ಬಿಗ್‌ಬಾಸ್ ಖ್ಯಾತಿಯ ನಂದಿನಿ, ಕರ್ಣದ ಭವ್ಯಾ ಗೌಡ, ಅಣ್ಣಯ್ಯ ಖ್ಯಾತಿಯ ಪ್ರತೀಕ್ಷಾ, ಬ್ರಹ್ಮಗಂಟು ಖ್ಯಾತಿಯ ಆರತಿ, ಲಕ್ಷ್ಮೀ ನಿವಾಸ ಖ್ಯಾತಿಯ ಧನಂಜಯ್, ಮಹಾನಟಿ ಖ್ಯಾತಿಯ ಪೂಜಾ ರಮೇಶ್, ಸ್ಮೈಲ್ ಗುರು ರಕ್ಷಿತ್, ಅನನ್ಯಾ ಅಮರ್, ಬಾಲ ಪ್ರತಿಭೆ ಅನೂಪ್, ಗಿಚ್ಚಿ ಗಿಲಿಗಿಲಿ ಖ್ಯಾತಿಯ ಜಗ್ಗಪ್ಪ ಎಂಟ್ರಿ ಕೊಟ್ಟಿದ್ದಾರೆ.

ಈ ಕಲಾವಿದರ ಜೊತೆಗೆ ನಾನಾ ಭಾಗಗಳಿಂದ ಆಯ್ಕೆ ಮಾಡಿದ ಪ್ರತಿಭೆಗಳನ್ನು ಜೋಡಿ ಮಾಡಲಾಗುತ್ತದೆ. ಈಗಾಗಲೇ ಸಾಮಾಜಿಕ ಮಾಧ್ಯಮದಲ್ಲಿ ಜೀ ಕನ್ನಡ ಹಂಚಿಕೊಂಡ ಪ್ರೊಮೊಗಳು ಸದ್ದು ಮಾಡುತ್ತಿದ್ದು, ಯಾವ ಸ್ಪರ್ಧಿ ತಮ್ಮ ಡಾನ್ಸ್ ಮೂಲಕ ತೀರ್ಪುಗಾರರ ಮನಸ್ಸು ಗೆಲ್ಲುತ್ತಾರೆ ಎಂದು ಕಾದು ನೋಡಬೇಕಿದೆ. ಡಾನ್ಸ್ ಕರ್ನಾಟಕ ಡಾನ್ಸ್ ಶೋನಲ್ಲಿ ಶಿವರಾಜ್ ಕುಮಾರ್, ವಿಜಯ ರಾಘವೇಂದ್ರ, ಅರ್ಜುನ್ ಜನ್ಯ ಅವರೊಂದಿಗೆ ರಚಿತಾ ರಾಮ್ ಕೂಡ ತೀರ್ಪುಗಾರರಾಗಿ ಇರಲಿದ್ದಾರೆ. ಇದೇ 15ರಿಂದ ಶನಿವಾರ ಹಾಗೂ ಭಾನುವಾರ ಸಂಜೆ 7.30ಕ್ಕೆ ಈ ಕಾರ್ಯಕ್ರಮ ಬಿತ್ತರಗೊಳ್ಳಲಿದೆ.

'ಡೆವಿಲ್' ಹೊಸ ಹಾಡುಗಳ ಬಿಡುಗಡೆಗೆ ಸಮಯ ನಿಗದಿ

ನಟ ದರ್ಶನ್ ಅಭಿಮಾನಿಗಳಿಗೆ 'ದಿ ಡೆವಿಲ್' ಚಿತ್ರತಂಡ ಒಂದಾದ ಮೇಲೆ ಒಂದರಂತೆ ಅಪ್‌ಡೇಟ್‌ಗಳನ್ನು ನೀಡುತ್ತಿದೆ. ಈಗ 'ದಿ ಡೆವಿಲ್' ಚಿತ್ರದ ಹೊಸ ಹಾಡಿಗೆ ಸಜ್ಜಾಗಿ ಎಂದು 'ಶ್ರೀ ಜೈಮಾತಾ ಕಂಬೈನ್ಸ್' ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿದೆ.

ಈ ಸಿನಿಮಾದ ಎರಡು ಹಾಡುಗಳು ಬಿಡುಗಡೆಯಾಗಿ ಸಾಮಾಜಿಕ ಜಾಲತಾಣದಲ್ಲಿ ಸದ್ದು ಮಾಡಿವೆ. ಈಗ ಡೆವಿಲ್ ಸಿನಿಮಾದ ಮೂರನೇ ಹಾಡಿಗೆ ದಿನಾಂಕ ನಿಗದಿಯಾಗಿದೆ.

'ದಿ ಡೆವಿಲ್' ಸಿನಿಮಾದ ಹಾಡು ಬಿಡುಗಡೆ ಬಗ್ಗೆ ನಟಿ ರಚಿತಾ ರಾಮ್ ಕೂಡ ಸಾಮಾಜಿಕ ಮಾಧ್ಯಮ ಎಕ್ಸ್ ಖಾತೆಯಲ್ಲಿ 'ನವೆಂಬರ್ 16ರಂದು ಮಧ್ಯಾಹ್ನ 12:30ಕ್ಕೆ ಮುಂದಿನ ಹಾಡಿಗೆ ಸಿದ್ಧರಾಗಿ' ಎಂದು ಬರೆದುಕೊಂಡಿದ್ದಾರೆ.

ನಿನ್ನೆ (ಬುಧವಾರ) ಶ್ರೀ ಜೈಮಾತಾ ಕಂಬೈನ್ಸ್ '2024 ಮಾರ್ಚ್ 22ರಂದು 'ದಿ ಡೆವಿಲ್' ಮೊದಲ ಹಂತದ ಚಿತ್ರೀಕರಣ ಸಂದರ್ಭ ಹೀಗೆ ಆರಂಭವಾಯಿತು ಎಂದು ಡೆವಿಲ್‌ನ ಪ್ರಯಾಣದ ಬಗ್ಗೆ ವಿಡಿಯೊ ಹಂಚಿಕೊಂಡಿತ್ತು. ಅದರಲ್ಲಿ ನಟ ದರ್ಶನ್ 'ಇದ್ರೆ ನೆಮ್ಮದಿಯಾಗಿ ಇರಬೇಕು' ಹಾಡಿನ ಚಿತ್ರೀಕರಣದಲ್ಲಿ ಭಾಗಿಯಾಗಿದ್ದರು. ಕೆಲವೊಂದು ಸಾಹಸ ದೃಶ್ಯಗಳಲ್ಲಿ ದರ್ಶನ್ ಕಾಣಿಸಿಕೊಂಡಿದ್ದರು.

ಸಿನಿಮಾ ಡಿಸೆಂಬರ್ 12ರಂದು ಬಿಡುಗಡೆಯಾಗಲಿದೆ. ಮಿಲನಾ ಪ್ರಕಾಶ್ ಅವರ ನಿರ್ದೇಶನದಲ್ಲಿ ಮೂಡಿ ಬರುತ್ತಿದೆ.

ದಾಂಪತ್ಯ ಜೀವನಕ್ಕೆ ಕಾಲಿಟ್ಟ ನಟಿ ರಜಿನಿ



ಕನ್ನಡ ಕಿರುತೆರೆಯ ಕಲಾವಿದೆ ರಜಿನಿ ಅವರು ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ. ಅಮೃತವರ್ಷಿಣಿ ಧಾರಾವಾಹಿ ಮೂಲಕ ಜನಪ್ರಿಯತೆ ಪಡೆದುಕೊಂಡಿದ್ದ ನಟಿ ರಜಿನಿ ಅವರು ಅರುಣ್ ವೆಂಕಟೇಶ್ ಎಂಬುವವರ ಜೊತೆಗೆ ಮದುವೆಯಾಗಿದ್ದಾರೆ.

'ಅಮೃತವರ್ಷಿಣಿ', 'ಹಿಟ್ಲರ್ ಕಲ್ಯಾಣ', 'ನೀ ಇರಲು ಜೊತೆಯಲಿ' ಸೇರಿದಂತೆ ಸಾಕಷ್ಟು ಧಾರಾವಾಹಿಗಳಲ್ಲಿ ರಜಿನಿ ನಟಿಸಿದ್ದಾರೆ. ಮಾತ್ರವಲ್ಲದೆ ಡಾನ್ಸ್ ರಿಯಾಲಿಟಿ ಶೋ, 'ಮಜಾ ಟಾಕೀಸ್' ಕಾಮಿಡಿ ಶೋನಲ್ಲಿಯೂ ರಜಿನಿ ಭಾಗವಹಿಸಿದ್ದರು.

ಬೆಂಗಳೂರಿನಲ್ಲಿ ನಡೆದ ವಿವಾಹದಲ್ಲಿ ಕಿರುತೆರೆ ನಟ ಹಾಗೂ ನಟಿಯರು ಬಂದು ನವಜೋಡಿಗೆ ಶುಭ ಹಾರೈಸಿದರು.

ರಜಿನಿ ಅವರನ್ನು ಮದುವೆಯಾದ ಅರುಣ್ ವೆಂಕಟೇಶ್ ಜಿಮ್ ತರಬೇತುದಾರ ಆಗಿದ್ದಾರೆ. ಬಾಡಿ ಬಿಲ್ಡರ್ ಆಗಿರುವ ಅರುಣ್ ಜೊತೆಗೆ ರಜಿನಿ ಸಾಮಾಜಿಕ ಮಾಧ್ಯಮದಲ್ಲಿ ರೀಲ್ಸ್ ಮಾಡುತ್ತ, ವಿಡಿಯೊಗಳನ್ನು ಹಂಚಿಕೊಳ್ಳುತ್ತಿದ್ದರು.

ಈ ಹಿಂದೆ ಖಾಸಗಿ ಸಂದರ್ಶನದಲ್ಲಿ 'ಅರುಣ್ ವೆಂಕಟೇಶ್ ವಿಡಿಯೊ ಪಾರ್ಟ್ನರ್, ನನ್ನ ಒಳ್ಳೆಯ ಸ್ನೇಹಿತ ಅಷ್ಟೇ. ಗೆಳೆಯನೇ ಸಂಗಾತಿ ಆಗ್ತಾರಾ ಅಂತ ನನಗೆ ಗೊತ್ತಿಲ್ಲ. ಸ್ನೇಹಿತರಾಗಿದ್ದವರು ಮದುವೆ ಆದರೆ ತಪ್ಪಿಲ್ಲ. ಅದೆಲ್ಲ ಅವರವರಿಗೆ ಬಿಟ್ಟಿದ್ದು' ಎಂದು ಹೇಳಿದ್ದರು. ಈಗ ಅರುಣ್ ವೆಂಕಟೇಶ್ ಅವರನ್ನೇ ರಜಿನಿ ಮದುವೆಯಾಗಿದ್ದಾರೆ.

ಪುರುಷರಲ್ಲಿ ಸ್ತನ ಕ್ಯಾನ್ಸರ್ ಇದೆ ಸೂಕ್ತ ಚಿಕಿತ್ಸೆ



ಪುರುಷರಲ್ಲಿ ಸ್ತನ ಕ್ಯಾನ್ಸರ್ ಪ್ರಮಾಣ ಹೆಚ್ಚಾಗುತ್ತಿದೆ ಎಂಬ ಆತಂಕಕಾರಿ ವಿಷಯವನ್ನು ವಿದೇಶದಲ್ಲಿ ನಡೆದಿರುವ ಇತ್ತೀಚಿನ ಅಧ್ಯಯನ ವರದಿಯೊಂದು ಬಹಿರಂಗಪಡಿಸಿದೆ.

ಸ್ತನ ಕ್ಯಾನ್ಸರ್‌ಗೆ ಸಂಬಂಧಿಸಿದ ಸುಮಾರು 2,500ಕ್ಕೂ ಹೆಚ್ಚು ಪ್ರಕರಣಗಳ ಬಗ್ಗೆ ಅಧ್ಯಯನ ನಡೆಸಿರುವ ಟೆಕ್ಸಾಸ್ ಎಂ.ಡಿ ಆ್ಯಂಡರ್‌ಸನ್ ಕ್ಯಾನ್ಸರ್ ಕೇಂದ್ರದ ಸಂಶೋಧಕರು ಈ ವಿಷಯ ತಿಳಿಸಿದ್ದಾರೆ.

25 ವರ್ಷಗಳ ಹಿಂದೆ ಪ್ರತಿ ಒಂದು ಕೋಟಿ ಪುರುಷರಲ್ಲಿ 86 ಜನರಿಗೆ ಸ್ತನ ಕ್ಯಾನ್ಸರ್ ಬರುತ್ತಿತ್ತು. ಈಗ ಈ ಪ್ರಮಾಣ 108ಕ್ಕೆ ಏರಿಕೆಯಾಗಿದೆ.

ಪುರುಷರಿಗೆ ಹೋಲಿಸಿದಲ್ಲಿ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್‌ನ ಅಧಿಕ ಪ್ರಕರಣಗಳು ಪತ್ತೆಯಾಗಿವೆ. ಈ ರೋಗದ ಬಗ್ಗೆ ಪುರುಷರು ಈಗ ಹೆಚ್ಚು ಜಾಗೃತರಾಗಿದ್ದಾರೆ ಎಂದು ಸಂಶೋಧಕರು ವಿವರಿಸಿದ್ದಾರೆ.

ಪುರುಷರ ಸ್ತನ ಕ್ಯಾನ್ಸರ್‌ನ ಲಕ್ಷಣಗಳು

ಗಂಟು ಅಥವಾ ಊತ: ಸ್ತನದಲ್ಲಿ ಅಥವಾ ಎದೆಯ ಮೇಲೆ ನೋವುರಹಿತ ಗಂಟು ಕಂಡುಬರುವುದು ಮೊದಲ ಹಾಗೂ ಪ್ರಮುಖ ಲಕ್ಷಣವಾಗಿದೆ. ಇದು ಸಾಮಾನ್ಯವಾಗಿ ಪುರುಷರ ಎದೆ ತೊಟ್ಟಿನ ಹಿಂಬದಿಯಲ್ಲಿ ಕಾಣಿಸುವಂಥದ್ದು.

ತೊಟ್ಟಿನಲ್ಲಿ ಬದಲಾವಣೆ: ಮೊಲೆತೊಟ್ಟು ಒಳಕ್ಕೆ ಹೋಗುವುದು, ಕೆಂಪು ಬಣ್ಣವಾಗುವುದು ಅಥವಾ ಚರ್ಮ ಸುಲಿದಂತೆ ಆಗುವುದು.

ಸ್ರವಿಸುವಿಕೆ: ಮೊಲೆತೊಟ್ಟಿನಿಂದ ರಕ್ತ ಅಥವಾ ಇತರ ದ್ರವ ಸೋರುವುದು.

ಚರ್ಮದ ಬದಲಾವಣೆ: ಸ್ತನದ ಚರ್ಮದಲ್ಲಿ ಗುಳ್ಳೆ, ಸುಕ್ಕು ಉಂಟಾಗುವುದು.

ಅಪಾಯಕಾರಿ ಅಂಶಗಳು ಮತ್ತು ಪರಿಹಾರ

ಅಪಾಯಕಾರಿ ಅಂಶಗಳು: ವಂಶಾವಳಿಯ ಇತಿಹಾಸ, ವಯಸ್ಸು, ಹಾರ್ಮೋನ್ ಅಸಮತೋಲನ, ಅಧಿಕ ತೂಕ, ಮದ್ಯಪಾನ ಮತ್ತು ವಿಕಿರಣಕ್ಕೆ ಒಡ್ಡಿಕೊಳ್ಳುವಿಕೆಯಂತಹ ಅಂಶಗಳು ಅಪಾಯವನ್ನು ಹೆಚ್ಚಿಸುತ್ತವೆ.

ಪುರುಷರಲ್ಲಿ ಸ್ತನ ಕ್ಯಾನ್ಸರ್ ಅಪರೂಪವಾದರೂ ಅದನ್ನು ಗಂಭೀರವಾಗಿ ಪರಿಗಣಿಸಬೇಕು. ತಕ್ಷಣ ಪತ್ತೆ ಹಚ್ಚಿದರೆ ರೋಗನಿರ್ಣಯ ಮತ್ತು ಸೂಕ್ತ ಚಿಕಿತ್ಸೆಯಿಂದ ಗುಣಮುಖರಾಗುವ ಸಾಧ್ಯತೆ ಹೆಚ್ಚು.

ಲೇಖಕಿ: ಡಾ. ಸಿ.ಯು. ಪೂವಮ್ಮ, ಮುಖ್ಯಸ್ಥೆ, ಸ್ತನ ಕ್ಯಾನ್ಸರ್ ಮತ್ತು ಆಂಕೋಪ್ಲಾಸ್ಟಿ, ಆಸ್ಟರ್ ಸಿಎಂಐ ಆಸ್ಪತ್ರೆ, ಬೆಂಗಳೂರು

ಪರಿಹಾರ ಮಾರ್ಗ

ಆರೋಗ್ಯಕರ ತೂಕವನ್ನು ಕಾಯ್ದುಕೊಳ್ಳುವುದು, ನಿಯಮಿತ ವ್ಯಾಯಾಮ, ಮದ್ಯಪಾನ ತ್ಯಜಿಸುವುದು ಹಾಗೂ ಸಮತೋಲಿತ ಆಹಾರ ಸೇವಿಸುವುದು ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತವೆ. ವಂಶಾವಳಿಯಲ್ಲಿ ಕ್ಯಾನ್ಸರ್ ಇತಿಹಾಸವಿದ್ದರೆ ಆನುವಂಶಿಕ ಪರೀಕ್ಷೆ ಮಾಡಿಸಿಕೊಳ್ಳುವುದು ಮುಖ್ಯ.

ಚಿಕಿತ್ಸೆ: ವೈದ್ಯಕೀಯ ಪರೀಕ್ಷೆ, ಮ್ಯಾಮೊಗ್ರಫಿ, ಅಲ್ಟ್ರಾಸೌಂಡ್, ಎಂಆರ್‌ಐ ಮತ್ತು ಬಯಾಪ್ಸಿ ಮೂಲಕ ರೋಗನಿರ್ಣಯ ಮಾಡಲಾಗುತ್ತದೆ. ಬಯಾಪ್ಸಿಯಲ್ಲಿ ಅಂಗಾಂಶದ ಮಾದರಿಯನ್ನು ತೆಗೆದು ಪರೀಕ್ಷಿಸಲಾಗುತ್ತದೆ.

ಚಿಕಿತ್ಸಾ ವಿಧಾನಗಳು: ಕ್ಯಾನ್ಸರ್‌ನ ಹಂತ ಮತ್ತು ಪ್ರಕಾರವನ್ನು ಅವಲಂಬಿಸಿ ಚಿಕಿತ್ಸೆಯ ಪ್ರಕಾರವನ್ನು ನಿರ್ಧರಿಸಲಾಗುತ್ತದೆ.

ಶಸ್ತ್ರಚಿಕಿತ್ಸೆ: ಗೆಡ್ಡೆಯನ್ನು ಅಥವಾ ಸಂಪೂರ್ಣ ಸ್ತನ ಅಂಗಾಂಶವನ್ನು ತೆಗೆದುಹಾಕುವುದು.

ವಿಕಿರಣ ಚಿಕಿತ್ಸೆ: ಕ್ಯಾನ್ಸರ್ ಕೋಶಗಳನ್ನು ನಾಶ ಮಾಡಲು ಹೆಚ್ಚಿನ ಶಕ್ತಿಯ ಕಿರಣಗಳನ್ನು ಬಳಸಲಾಗುತ್ತದೆ.

ಕಿಮೊಥೆರಪಿ: ಔಷಧಿಗಳ ಮೂಲಕ ಕ್ಯಾನ್ಸರ್ ಕೋಶಗಳನ್ನು ಕೊಲ್ಲಲಾಗುತ್ತದೆ.

ಹಾರ್ಮೋನ್ ಚಿಕಿತ್ಸೆ: ಹಾರ್ಮೋನ್ ರಿಸೆಪ್ಟರ್ ಪಾಸಿಟಿವ್ ಕ್ಯಾನ್ಸರ್‌ಗೆ ಈ ಚಿಕಿತ್ಸೆ ನೀಡಬಹುದು.

ಕ್ಯಾನ್ಸರ್ ಕೋಶಕ್ಕೆ ಚಿಕಿತ್ಸೆ: ನಿರ್ದಿಷ್ಟ ಕ್ಯಾನ್ಸರ್ ಕೋಶಗಳನ್ನು ಗುರಿಯಾಗಿಸಿ ದಾಳಿ ಮಾಡುವ ಆಧುನಿಕ ಔಷಧಿಗಳು.